## FINANCIAL BUSINESS

### Discussions and Voting on Demands for grants

DEMAND NO.-29 Housing(Excluding Government Residential Building)

SRI A. LAKSHMISAGAR (Minister for Law & Parliamentary Affairs, Housing and Public Grievances).—Sri, on the recommendation of the Governor, I beg to move :

> "That a sum not exceeding Rs. 18,25,90,000 on Revenue Account and Rs.5,60,00,000 on Capital Account be granted to the Government to defray the charges which will come in course of payment during the financial year ending 31st day of March, 1985 in respect of Housing (Excluding Goverment Residential Building)."

DEMAND NO.-34 State Legislature

> "That a sum not exceeding Rs. 2,65,40,000 on Revenue Account be granted to the Government to defray the charges which will come in course of payment during the financial year ending 31st day of March,1985 in respect of State Legislature."

DEMAND NO.-35 Administration of Justice

> "That a sum not exceeding Rs. 13,86,10,000 on Revenue Account inclusive of the Administration of Justice be granted to the Government to defray the charges which will come in course of payment during financial year ending 31st day of March, 1985 in respect of Administration of Justice."

DEMAND NO.-52 Wakfs

> "That a sum not exceeding Rs. 39,00,000 on Revenue Account be granted to the Government to defray the charges which will come incourse of payment during the financial year ending 31 day of March 1985 in respect of Wakfs,"

DEMAND NO.-59 Labour and Employment

> "That a sum not exceeding Rs. 22,12,57,000 on Revenue Account and Rs. 7,00,000 on Capital Account be granted to the Government to defray the charges which will come in course of payment during the financial year ending 31st day of March 1985 in respect of Labour and Employment."

*The Question was proposed*

ಶ್ರೀ ಎಂ. ಎಸ್. ಕೃಷ್ಣನ್ (ರಾಜಾಜಿನಗರ).—ಒಂದು ಸಮಸ್ಯೆ ಇದೆ. ಮಂಊವ್ ಮಾಡುವುದು ಮಾಡಲಿ, ಇವೊತ್ತಿನದಿವಸ ಅತಿ ಮುಖ್ಯವಾದಂಥ ಕೇಳಿಕೆಗಳಿವೆ. ಲೇಬರ್ ಡಿಮ್ಯಾಂಡ್ ಇದೆ. ವಕ್ಫ್ ಇದೆ ವಂತ್ರೆ ಹೌಸಿಂಗ್ ಎಲ್ಲಾ ಇದೆ, ನಮಗೆ ರಿಪೋರ್ಟ್ಸ್ ಯಾವಾಗ ಕೊಟ್ಟರು ಎಂದರೆ ಇವತ್ತು ಇಲ್ಲಿಗೆ ಬಂದಮೇಲೆ ೭-೮ ರಿಪೋರ್ಟ್‌ಗಳನ್ನು ಕೊಟ್ಟರು. ಈ ರಿಪೋರ್ಟ್‌ಗಳನ್ನು ಓದದೆ ಮಾತನಾಡಲಿಕ್ಕೆ ಆಗುವುದಿಲ್ಲ. ಲೇಬರ್ ಬಗ್ಗೆ ಪರ್‌ಫಾರ್ಮೆನ್ಸ್ ಬಡ್ಜೆಟ್ ಇದೆ. ಬಾಯ್ಲರ್, ಟ್ರೈನಿಂಗ್ ಸ್ಕೀಮ್ಸ್ ಇ.ಎಸ್.ಐ. ರಿಪೋರ್ಟ್, ಪರ್‌ಫಾರ್ಮನ್ಸ್ ಬಡ್ಜೆಟ್ ಇದೆಲ್ಲಾ ಇವೊತ್ತು ಕೊಟ್ಟರೆ ಸರ್ಕಾರದವರು ಏನು ಯೋಚನೆ ಮಾಡಿದ್ದಾರೆ. What does the Government think ? Have they taken us for granted ? Government seems to treat the members with scant respect. I don't know whether the Law and Parlamentary Affairs Minister must be held responsible for this or whoever might be, they must be held responsible. ನಾವು ಇದನ್ನು ಓದಿಕೊಂಡು ಬರುವುದು ಹೇಗೆ. ರೂಲ್ಸ್ ಪ್ರಕಾರ ಒಂದು ದಿವಸವಾದರೂ ಮುಂಚೆ ಕೊಡಬೇಕು ಎಂದು ಇಲ್ಲ, ನಮಗೆ ಗೊತ್ತು. ಆದರೆ ಅನೇಕ ವರ್ಷಗಳ ಸಂಪ್ರದಾಯವಿದೆ ಒಂದು ದಿವಸ ಮುಂಚೆ ಕೊಟ್ಟಕೊಂಡು ಬಂದಿದ್ದಾರೆ. ಶ್ರೀಮಾನ್ ದೇವರಾಜ ಅರಸರ ಕಾಲದಲ್ಲಿ ಎರಡು ದಿವಸ ಮುಂಚೆ ಕೊಟ್ಟರು. ಇವೊತ್ತು ಬೆಳಿಗ್ಗೆ ಟೇಬಲ್ ಮೇಲೆ ಇದನ್ನು ಇಟ್ಟಿದ್ದಾರೆ. They are showing scant respect for democratic values and democratic procedures.

ಶ್ರೀ ಎಸ್. ಸೂರ್ಯನಾರಾಯಣರಾವ್.—ಮಾನ್ಯ ಕಾರ್ಮಿಕ ಸಚಿವರಿಲ್ಲ, ಒಂದು ತಿಂಗಳಿಂದ ಕಾರ್ಮಿಕ ಇಲಾಖೆ ಇದೆಯೋ ಇಲ್ಲವೋ ಗೊತ್ತಿಲ್ಲ.

ಶ್ರೀ ಎಂ. ಎಸ್. ಕೃಷ್ಣನ್.—ಕಾರ್ಮಿಕ ಸಚಿವರಿಗೆ ಹೋದಸಾರಿಯೂ ಖಾಯಿಲೆ ಬಂದಿತ್ತು, ಈಗಲೂ ಖಾಯಿಲೆ ಬಂದಿದೆ, ಮುಂದಿನ ಸಾರಿ ಖಾಯಿಲೆ ಬರುತ್ತದೋ ಗೊತ್ತಿಲ್ಲ. ಈ ರಿಪೋರ್ಟ್‌ಗಳನ್ನು ಸರಿಯಾಗಿ ಏಕೆ ಕೊಡುವುದಿಲ್ಲ ?

ಶ್ರೀ ಪಂಪಾಪತಿ.—ಮಾನ್ಯ ಕಾನೂನು ಸಚಿವರು, ಯಾವಾಗಲೂ ನೋಡುತ್ತೇವೆ, ಯೋಚನೆ ಮಾಡುತ್ತೇವೆ, ಪರಿಶೀಲನೆ ಮಾಡುತ್ತೇವೆ ಎಂದು ಹೇಳುತ್ತಾ ಹೋದರೆ ಹೇಗೆ, ರಾಜ್ಯದಲ್ಲಿ ೨೬ ಸಾವಿರ ಕೈಗಾರಿಕೆಗಳಿವೆ.

ಶ್ರೀ ಎಂ. ಎಸ್. ಕೃಷ್ಣನ್.—ರಿಪೋರ್ಟ್‌ಗಳನ್ನು ಕಾಲಕ್ಕೆ ಸರಿಯಾಗಿ ಏಕೆ ಕೊಡುವುದಿಲ್ಲ. ಸರ್ಕಾರಕ್ಕೆ ಇರತಕ್ಕಂಥ ತೊಂದರೆ ಏನು, ಸೆಕ್ರೆಟರಿಗಳಿಲ್ಲವೇ, ಅಸಿಸ್ಟೆಂಟ್ ಸೆಕ್ರೆಟರಿಗಳಿಲ್ಲವೆ, ಸ್ಟೆನೋಸ್ ಇಲ್ಲವೆ, ಪ್ರೆಸ್ ಇಲ್ಲವೆ, ಕಾಗದ ಇಲ್ಲವೆ, ದುಡ್ಡು ಇಲ್ಲವೆ ?

ಶ್ರೀ ವಿ. ಧನಂಜಯ ಕುಮಾರ್.—ನಾವು ಯಾವುದೇ ಪ್ರಶ್ನೆ ಎತ್ತಿದರೂ ಮಾನ್ಯ ಸಂಕಷ್ಟ ಪರಿಹಾರ ಮಂತ್ರಿಗಳು ನೋಡುತ್ತೇವೆ, ಮಾಡುತ್ತೇವೆ ಎಂದು ಹೇಳುತ್ತಾರೆ. ಇವತ್ತಿನ ದಿವಸ ತಮ್ಮ ಇಲಾಖೆಯ ಡಿಮ್ಯಾಂಡ್ ಜೊತೆಗೆ ಕಾರ್ಮಿಕ ಇಲಾಖೆಯ ಮಂತ್ರಿಗಳ ಜವಾಬ್ದಾರಿಯನ್ನೂ ಕೂಡ ವಹಿಸಿಕೊಂಡಿದ್ದಾರೆ. ನಮಗೆ ಗೊತ್ತಿದ್ದ ಹಾಗೆ ಕಳೆದ ವರ್ಷ ಕೂಡ ಮಾನ್ಯ ಕಾರ್ಮಿಕ ಸಚಿವರು ಸದನದಲ್ಲಿ ಹಾಜರು ಇರಲಿಲ್ಲ. ಈ ವರ್ಷ ಸುಮಾರು ೨೨ ಕೋಟಿ ೨೦ ಲಕ್ಷದಷ್ಟು ಹಣದ ಜವಾಬ್ದಾರಿಯನ್ನು ನಿರ್ವಹಿಸಲಿಕ್ಕೆ ಕಾನೂನು ಸಚಿವರಿಗೆ ಅಧಿಕಾರವನ್ನು ಕೊಡುತ್ತಾ ಇದ್ದೇವೆ. ಈ ರೀತಿ ಅವರು ಜವಾಬ್ದಾರಿಯಿಲ್ಲದ ಗೈರುಹಾಜರಾಗುವುದು ಸದನದ ಗೌರವಕ್ಕೆ ತಕ್ಕದಲ್ಲ.

ಉಪಾಧ್ಯಕ್ಷರು.—ಅವರಿಗೆ ಮೈಗೆ ಹುಷಾರಿಲ್ಲ ಎಂದು ಲೆಟರ್ ಕೊಟ್ಟಿದ್ದಾರೆ.

ಶ್ರೀ ಎಸ್. ಸೂರ್ಯನಾರಾಯಣರಾವ್.—ಅವರಿಗೆ ಮೈಗೆ ಹುಷಾರಿಲ್ಲದೇ ಹೋದರೆ ಆಕ್ಟಿಂಗ್-ಲೇಬರ್ ಮಿನಿಸ್ಟರ್ ಯಾರು ಎಂದು ಗೊತ್ತಾಗಬೇಕು ಲೇಬರ್ ಇಲಾಖೆಯ ಕೆಲಸ ಸ್ಥಗಿತವಾಗಿದೆಯೆ ?

ಶ್ರೀ ವಿ. ಧನಂಜಯ ಕುಮಾರ್.—ಮೈಗೆ ಹುಷಾರಿಲ್ಲ ಎಂದರೆ ಹೇಗೆ, ಅವರು ತಮ್ಮ ಅಪ್ಪಣೆಯನ್ನು ಪಡೆದುಕೊಂಡಿದ್ದಾರೆಯೇ.

ಉಪಾಧ್ಯಕ್ಷರು .—ಅವರು ಕಾಗದ ಕೊಟ್ಟಿದ್ದಾರೆ.

ಶ್ರೀ ವಿ. ಧನಂಜಯ ಕುಮಾರ್.— ಸದನದ ನಿಯಮಾವಳಿ ಪ್ರಕಾರ ತಮ್ಮ ಅನುಮತಿ ಪಡೆದು-ಕೊಳ್ಳಬೇಕು ಎಂದು ಸ್ಪಷ್ಟವಾಗಿದೆ. ಅದನ್ನು ಸದನದ ಗಮನಕ್ಕೆ ತರಬೇಕು.

ಶ್ರೀ ಎಸ್. ಸೂರ್ಯನಾರಾಯಣರಾವ್ .—ಈ ರೀತಿ ಶಾಯಿಲೆ ಇದೆ ಅವರ ಪರವಾಗಿ ಮಾನ್ಯ ಕಾನೂನು ಸಚಿವರು ಕೆಲಸ ಮಾಡುತ್ತಾರೆ ಎಂದು ಮುಂಚೆ ಹೇಳಬೇಕಾಗಿತ್ತು.

ಶ್ರೀ ವಿ. ಧನಂಜಯಕುಮಾರ್.—ಅವರಿಗೆ ಮೈಗೆ ಹುಷಾರಿಲ್ಲ ಎಂದು ಹೇಳಿದಿರಿ. ಮೈಗೆ ಹುಷಾರಿಲ್ಲದೇ ಹೋದರೆ ಬರಲಿಕ್ಕೆ ಸಾಧ್ಯವಿಲ್ಲ. ಹೋದತಿಂಗಳು ೯ ರಂದು ಅವರು ಮಾತನಾಡಿ-ದಂಥ ವಿಷಯ ಪತ್ರಿಕೆಯಲ್ಲಿ ಬಂದಿದೆ. ಸನ್ಮಾನ್ಯ ಸಚಿವರ ಫೋಟೋ ಬಂದಿದೆ. ಅವರು ತಮ್ಮ ಇಲಾಖೆಯನ್ನು ನಿರ್ವಹಣೆ ಮಾಡಲಿಕ್ಕೆ ಸಾಧ್ಯವಿರುವ ಸ್ಥಿತಿಯಲ್ಲಿರುವಾಗ ಕೇವಲ ಸದನಕ್ಕೆ ಬರಲ್ಲಿಲ್ಲ. ಎಂದರೆ ಅದು ಬೇಜವಾಬ್ದಾರಿತನವಾಗುತ್ತದೆ ಎನ್ನುವ ಮಾತನ್ನು ಈ ಸಂದರ್ಭದಲ್ಲಿ ಹೇಳಬೇಕಾಗು-ತ್ತದೆ. ಇಷ್ಟು ದೊಡ್ಡ ಇಲಾಖೆಯಲ್ಲಿ ಸುಮಾರು ೨೩ ಕೋಟಿ ರೂಪಾಯಿಗಳ ವ್ಯವಹಾರ ಇದೆ, ಹಲವಾರು ಸಂಸ್ಥೆಗಳಿವೆ. ಇದೇ ರೀತಿ ಅವರು ತಮ್ಮ ಅಧಿಕಾರವನ್ನು ಮುಂದುವರಿಸಿಕೊಂಡು ಹೋಗಬೇಕು ಎಂದು ಇದ್ದ ಹಾಗೆ ಕಾಣುತ್ತದೆ. ಈ ರೀತಿ ಆದರೆ ಬಹಳ ಕಷ್ಟವಾಗುತ್ತದೆ.

ಉಪಾಧ್ಯಕ್ಷರು.— ತಾವು ೪ ಸಲ ಹೇಳಿದ್ದನ್ನೇ ರಿಪೀಟ್ ಮಾಡಿದ್ದೀರಿ,

ಶ್ರೀ ವಿ. ಧನಂಜಯ ಕುಮಾರ್.—ನಾವು ಬೇಡಿಕೆ ಮೇಲೆ ಸಲಹೆ ಮಾಡಬೇಕಾಗುತ್ತದೆ, ಆಗ ಸಂಬಂಧಪಟ್ಟ ಮಂತ್ರಿಗಳಲ್ಲದೆ, ಬೇರೆ ಮಂತ್ರಿಗಳು ನನಗೆ ಗೊತ್ತಿಲ್ಲ ಎಂದು ಹೇಳಿದರೆ ಕಷ್ಟವಾಗುತ್ತದೆ, ಸಂಕಷ್ಟ ಪರಿಹಾರ ಮಂತ್ರಿಗಳಿಗೆ ಕಷ್ಟವಾಗುತ್ತದೆ.

ಶ್ರೀ ಎಂ. ವೀರಪ್ಪ ಮೊಯಿಲಿ.—ಮಾನ್ಯ ಕಾರ್ಮಿಕ ಮಂತ್ರಿಗಳಿಗೆ ಆರೋಗ್ಯ ಸರಿಯಿಲ್ಲ ಎನ್ನುವುದನ್ನು ನಾನು ಒಪ್ಪುತ್ತೇನೆ. ಆ ವಿಚಾರದಲ್ಲಿ ಆಕ್ಷೇಪಣೆ ಮಾಡಲಿಕ್ಕೆ ಬರುವುದಿಲ್ಲ, ಪರಿಸ್ಥಿತಿ ನಮಗೂ ಅರ್ಥವಾಗುತ್ತದೆ. ಅವರಿಗೆ ಆಪರೇಷನ್ ಕೂಡ ಆಗಿದೆ, ಬಾಂಬೆಯಲ್ಲಿ ಆಪರೇಷನ್ ಆಗಿದೆ, ಬೆಳಗಾಂನಿಂದ ಜೊತೆಯಲ್ಲಿ ಬಂದಾಗ ಅವರಿಗೆ ಎರಡು ಕಡೆ ಮೇಜರ್ ಆಪರೇಷನ್ ಆಗಿದೆಯೆಂದು ತಿಳಿಯಿತು, ಅವರಿಗೆ ಬರಲಿಕ್ಕೆ ಅಸಾಧ್ಯ ಇರಬಹುದು, ಆ ಪ್ರಶ್ನೆ ಪ್ರತ್ಯೇಕ. ಆದರೆ ಕೆಲವು ಮೂಲ-ಭೂತ ಪ್ರಶ್ನೆಗಳಿವೆ. ಜನವರಿ ೧೬ ರಿಂದ ಈ ಸದನದಲ್ಲಿ ನಡೆಯತಕ್ಕ ಕ್ರಮ ನೋಡಿದರೆ ಅದರ ಬಗ್ಗೆ ವಿಷಾದಪಟ್ಟುಕೊಳ್ಳಬೇಕು ಮಾನ್ಯ ಲೋಕೋಪಯೋಗಿ ಇಲಾಖೆಯ ಸಚಿವರು ನನಗೆ ಆರೋಗ್ಯ ಚೆನ್ನಾಗಿಲ್ಲ ಎಂದು ಹೇಳಿದರು We all agreed that demand should be placed first. ಅವಸರವಸರವಾಗಿ ಅಷ್ಟು ದೊಡ್ಡ ಡಿಮ್ಯಾಂಡನ್ನು ಒಂದೇ ದಿವಸದಲ್ಲಿ ಮುಗಿಸಿಕೊಟ್ಟಿದ್ದೇವೆ. ಮಾನ್ಯ ಕಾರ್ಮಿಕ ಸಚಿವರು ಇವತ್ತಿನ ಡಿಮ್ಯಾಂಡ್‌ವುಟ್ಟಿಗೆ ಮಾನ್ಯ ಲಕ್ಷ್ಮೀಸಾಗರ್‌ರವರು ಹ್ಯಾಂಡ್ಲ್ ಮಾಡು-ತ್ತಾರೆ ಎಂದು ಲೆಟರ್ ಬರೆದಿದ್ದಾರೋ ಗೊತ್ತಿಲ್ಲ. There are some etiquettes. He has to be apprised because that will be a fundamental thing. ಕಳೆದ ಸಾರಿ ಪ್ರಶ್ನೆಗೆ ಉತ್ತರ ಕೊಡಬೇಕಾದರೆ ಆಥರೈಸೇಷನ್ ಇರಬೇಕಾಗುತ್ತದೆ ಎಂದು ಹೇಳಿದ್ದೇವೆ. ಆದರೆ ಡಿಮ್ಯಾಂಡ್ ಪ್ರಶ್ನೆ ಎತ್ತಿದಾಗ There should be a letter from the Hon' ble Labour Minister to the Speaker saying that my demand will be handled by such a Minister. ಅದು ಇಲ್ಲದೇ ಹೋದರೆ, ಅವರ ಬೇಡಿಕೆಗಳನ್ನು ತೆಗೆದುಕೊಳ್ಳುವುದಕ್ಕೆ ಕಷ್ಟವಾಗುತ್ತದೆ. ದಯಮಾಡಿ ಆ ಕಾಗದವನ್ನು ಓದಿ ಹೇಳಬೇಕಾಗುತ್ತದೆ. ಇಲ್ಲದೇಹೋದರೆ ಕಷ್ಟವಾಗುತ್ತದೆ. ದಯಮಾಡಿ ಸದನಕ್ಕೆ ತಿಳಿಸಬೇಕು, ಇಲ್ಲದೇಹೋದರೆ ಆ ಡಿಮ್ಯಾಂಡನ್ನು ಮುಂದೆ ಹಾಕಬೇಕಾಗುತ್ತದೆ. ಮಾನ್ಯ ಮುಖ್ಯ ಮಂತ್ರಿಯವರಾದರೂ ಇಲ್ಲಿ ಇರಬೇಕು. ಈಗ ಸದನವನ್ನು ನಾವು ಗಂಭೀರವಾಗಿ ಪರಿಗಣಿಸ-ಬೇಕಾಗುತ್ತದೆ, ಸಚಿವರೂ ಪರಿಗಣಿಸಬೇಕು, ಸದಸ್ಯರೂ ಪರಿಗಣಿಸಬೇಕು. ಈಗ ಕೌನ್ಸಿಲ್ ಕೂಡ ಇಲ್ಲ. ಇಲ್ಲಿ ಎಷ್ಟು ಜನ ಸಚಿವರಿದ್ದಾರೆ. ಇಲ್ಲ, ನಾನು ಒಬ್ಬನೇ ಕೇಳುತ್ತೇನೆ ಎಂದರೆ ಸದನಕ್ಕೆ ಭೂಷಣವಾ ದಂಥ ಮಾತು ಕೂಡ ಅಲ್ಲ. ಮಾನ್ಯ ಮುಖ್ಯ ಮಂತ್ರಿಗಳು, ಸಚಿವರು, ಎಲ್ಲಾ ಟೂರ್ ಮಾಡಿಕೊಂಡು ಹೋಗುತ್ತಾರೆ. ಸದನ ಇರುವಂಥ ಸಮಯದಲ್ಲಿ ಮುಖ್ಯ ಸಚಿವರು ಮತ್ತು ಸಚಿವರು ಕರ್ನಾಟಕ ಎಲ್ಲಾ ತಿರುಗಾಡುವಂಥ, ಸುತ್ತಾಡುವಂಥ ಪರಿಸ್ಥಿತಿ ಇದ್ದರೆ ಕಷ್ಟವಾಗುತ್ತದೆ. ಇದು ಪ್ರಮುಖವಾದ

ವಿಚಾರ. ದಿನಬೆಳಗಾದರೆ ಈ ವಿಚಾರ ಎತ್ತುವುದಿಲ್ಲ, ಸದನದಲ್ಲಿ ಘನತೆ ಗೌರವ, ಶಿಷ್ಟಾಚಾರವನ್ನು ಪರಿಪಾಲಿಸತಕ್ಕ ಕರ್ತವ್ಯ ಎಲ್ಲರಿಗೂ ಇದೆ. ಹೀಗಿರತಕ್ಕ ಸಂದರ್ಭದಲ್ಲಿ ಸಚಿವರು, ಮುಖ್ಯ ಮಂತ್ರಿಗಳು ಪ್ರವಾಸ ಮಾಡಿಕೊಂಡು ಹೋದರೆ ಆಯಾ ಕ್ಷೇತ್ರದ, ಜಿಲ್ಲೆಯ ಶಾಸಕರೂ ಕೂಡ ಹೋಗಬೇಕಾಗುತ್ತದೆ. ಆಗ ಸದನದಲ್ಲಿ ಭಾಗವಹಿಸತಕ್ಕ ಹಕ್ಕು ಚ್ಯುತಿಯಾಗುತ್ತದೆ. ಅದೂ ಅಲ್ಲದೆ ಡಿಮ್ಯಾಂಡ್ ಬಗ್ಗೆ ಚರ್ಚೆಯಾಗತಕ್ಕ ಸಂದರ್ಭದಲ್ಲಿ ಸಚಿವರು ದೂರಕ್ಕೆ ಪ್ರವಾಸ ಮಾಡಿಕೊಂಡು ಹೋಗಿಬಿಟ್ಟರೆ ಸದನವನ್ನು ನಿರ್ಲಕ್ಷ್ಯ ಮಾಡಿದಹಾಗೆ ಆಗುತ್ತದೆ.

ಮುಖ್ಯಮಂತ್ರಿಗಳಿಗೆ ಮತ್ತು ಇತರೇ ಮಂತ್ರಿಗಳಿಗೆ ಆಸಕ್ತಿ ಇಲ್ಲದಿದ್ದರೆ ನಾವು ಇಲ್ಲಿ ಏತಕ್ಕೆ ಕೂರಬೇಕು ಮತ್ತು ಇವರಿಗೆ ಏತಕ್ಕೆ ಸಹಕಾರ ಕೊಡಬೇಕು ? ಸಹಕಾರ ಕೊಡುವುದು ನಮಗೆ ಮಾತ್ರ ಬಿಟ್ಟಿದೆಯೋ ಹೇಗೆ ? ಅವರು ನಮಗೆ ಸಹಕಾರ ಕೊಡುವುದು ಬೇಡವೇ ! ಆ ಕಡೆಯಲ್ಲಿ ಹೆಚ್ಚಿನ ಸದಸ್ಯರಾಗಲೀ ಮಂತ್ರಿಗಳಾಗಲೀ ಹಾಜರಿಲ್ಲ. ಈ ಸದನವನ್ನು ಆ ಕಡೆಯವರು ಇಷ್ಟೊಂದು ನಿರ್ಲಕ್ಷ್ಯ ಮಾಡುವುದಾದರೆ ಈ ಸದನದ ಗೌರವ, ಪರಂಪರೆ ಹಾಗೂ ಶಿಷ್ಟಾಚಾರ ಏನಾಗಬೇಕು ? ಅವರಿಗೆ ಕಿವಿ ಎಂಬುದು ಏನಾದರು ಇದ್ದರೆ, ತಾವು ಅವರ ಕಿವಿಯನ್ನು ಹಿಂಡಬೇಕಾಗುತ್ತದೆ. ಈ ಸಭೆಯ ಸತ್ ಸಂಪ್ರದಾಯವನ್ನು ಯಾವ ರೀತಿ ಪರಿಪಾಲನೆ ಮಾಡಬೇಕೆಂಬುದು ಅವರಿಗೆ ಗೊತ್ತಿಲ್ಲದಿದ್ದರೆ ನಾವು ಗೊತ್ತು ಮಾಡಬೇಕಾಗಿದೆ. ಇದರ ಬಗ್ಗೆ ತಾವು ಅವರಿಗೆ ಖಾರವಾಗಿ ಹೇಳದಿದ್ದರೆ ಇಲ್ಲಿ ನಾವು ಕೆಲಸ ಮಾಡುವುದು ಕಷ್ಟವಾಗುತ್ತದೆ. ಅವರು ಏನು ಪತ್ರ ಬರೆದಿದ್ದಾರೆಂಬುದನ್ನು ತಾವು ಓದಬೇಕಾಗುತ್ತದೆ ಇಡೀ ಕಾರ್ಮಿಕ ಜನಾಂಗಕ್ಕೆ ಸಂಬಂಧಪಟ್ಟ ವಿಚಾರದ ಬಗ್ಗೆ ಮುಖ್ಯಮಂತ್ರಿಗಳೇ ಬಂದು ಉತ್ತರ ಕೊಡಲಿ. ದಯಮಾಡಿ ತಾವು ಈ ರೀತಿ ಸಡಿಲ ಬಿಡಬಾರದು. ಸಡಿಲ ಬಿಟ್ಟರೆ ......

(ಗೊಂದಲ)

ಶ್ರೀ ಪಂಪಾಪತಿ :—ಕಾರ್ಮಿಕ ಇಲಾಖೆ ಬೇಡಿಕೆಗಳನ್ನು ಮುಂದಕ್ಕೆ ಹಾಕುವುದು ಒಳ್ಳೆಯದು.

ಶ್ರೀ ಎಂ. ಎಸ್. ಕೃಷ್ಣನ್.—ಕಾರ್ಮಿಕರ ಬಗ್ಗೆ ಕಳಕಳಿ ಇಲ್ಲವೆಂದು ಕಾರ್ಮಿಕ ಮಂತ್ರಿಗಳೇ ಹೇಳಿದ್ದಾರೆ.

ಶ್ರೀ ಎಂ. ವೀರಪ್ಪಮೊಯ್ಲಿ.—ಕಾರ್ಮಿಕರನ್ನು ಗುಂಡಿಟ್ಟು ಕೊಲ್ಲಿ ಎಂದು ಹೇಳಿದ್ದಾರೆ, ಮುಂದೆ ನಮ್ಮನ್ನು ಸಹ ಕೊಲ್ಲಬಹುದು. ಇದರೆ ಈ ಸದನದ ಪರಂಪರೆ ಹಾಗೂ ಸಂಪ್ರದಾಯ ಮಾತ್ರ ಶಾಶ್ವತವಾಗಿ ಉಳಿಯಬೇಕಾಗಿದೆ. ಆದ್ದರಿಂದ ಇದನ್ನು ತಾವು ಅಷ್ಟು ಹಗುರವಾಗಿ ತೆಗೆದುಕೊಳ್ಳುವುದು ಸರಿಯಲ್ಲ.

ಉಪಾಧ್ಯಕ್ಷರು.—ನಿಮ್ಮ ರಕ್ಷಣೆಗೆ ನಾನು ಬರಬೇಕು ಅಲ್ಲವೇ ?

ಶ್ರೀ ಎಂ. ವೀರಪ್ಪಮೊಯ್ಲಿ.—ಹೌದು. ಇವರಿಗೆ ಸರಿಯಾದ ಪಾಠ ಕಲಿಸದಿದ್ದರೆ ನಮ್ಮ ಒಂದು ಶಿಷ್ಟಾಚಾರಕ್ಕೇ ಪೆಟ್ಟು ಬೀಳುತ್ತದೆ, ನಿನ್ನೆ ೬ ಗಂಟೆಯ ನಂತರ ಶ್ರೀ ಲಕ್ಷ್ಮೀಸಾಗರ್ ಅವರನ್ನು ಬಿಟ್ಟರೆ ಬೇರೆ ಯಾವ ಸಚಿವರೂ ಸಹ ಇಲ್ಲಿರಲಿಲ್ಲ. ಅವರಿಗೆ ಹಿಂದೆ ಮುಂದೆ ಇಲ್ಲ, ಅದಕ್ಕೇ ಇಲ್ಲಿ ಇದ್ದರೆಂದು ಕಾಣುತ್ತದೆ. ಬೇರೆ ಸಚಿವರಿಗೆ ೬ ಗಂಟೆಯ ನಂತರ ಏನು ಕೆಲಸವಿರುತ್ತದೆ ? ಎಲ್ಲಿಗೆ ಹೋಗುತ್ತಾರೆ ? ಅವರ ಚಟುವಟಿಕೆ ಹಾಗೂ ಚಲನವಲನವನ್ನು ಗಮನಿಸಲು ತಾವು ಒಂದು ವಿಶೇಷ ಗೂಢಾಚಾರ ದಳವನ್ನು ನೇಮಕ ಮಾಡಬೇಕು. ಕರ್ನಾಟಕ ರಾಜ್ಯದ ಜನರ ಹಿತಾಶಕ್ತಿಗಾಗಿ ತಾವು ಈ ಕೆಲಸ ಮಾಡಬೇಕು. ಈ ಸರ್ಕಾರದಲ್ಲಿ ಜನರ ಸಂಕಷ್ಟಗಳನ್ನು ನೋಡಿಕೊಳ್ಳಲು ಒಬ್ಬರು ಸಚಿವರಿದ್ದಾರೆ. ಈ ಸಚಿವರು ಬೇರೆ ಸಚಿವರ ಸಂಕಷ್ಟಗಳನ್ನು ನೋಡಿಕೊಳ್ಳುವಂತಿಲ್ಲವೆಂದು ಕಾಣುತ್ತದೆ. ಇವರ ಕೈಯಲ್ಲಿ ನೋಡಿಕೊಳ್ಳಲು ಸಾಧ್ಯವಿಲ್ಲ. ಅದಕ್ಕೇ ಅವರು ಹೋಗುತ್ತಿದ್ದಾರೆಂದು ಕಾಣುತ್ತದೆ.

ಉಪಾಧ್ಯಕ್ಷರು.—ಅವರಿಂದ ಬಂದಿರುವ ಪತ್ರವನ್ನು ಓದುತ್ತೇನೆ.

ಶ್ರೀ ಆರ್. ಎ. ನಾಯಕ್.—ತಾವು ಓದುವುದಕ್ಕಿಂತ ಅವರೇ ಬಂದು ಹೇಳಲಿ. ಇಲ್ಲದಿದ್ದರೆ ಹಿರಿಯಕ್ಕನ ಚಾಳಿ ಮನೆಮಂದಿಗೆಲ್ಲಾ ಎಂಬಂತೆ ಆಗುತ್ತದೆ.

ಶ್ರೀ ಎಸ್. ಸೂರ್ಯನಾರಾಯಣರಾವ್.—ಅವರು ಬರೆದಿರುವ ಪತ್ರವನ್ನು ದಯಮಾಡಿ ಓದಿ.

MR. DEPUTY SPEAKER : This is the letter dated 28-2-1984. It reads :

My dear Shri Chandre Gowdaji,

I understand that the demands of my portfolios are scheduled to come up for discussion in the Assembly on the 2nd March 1984. Even though I have returned from Bombay yesterday after the ear and nose operation, I am not fully fit to resume duty. Doctors have advised to me complete rest for a further period of 8 to 10 days. This morning I met the Hon'ble Chief Minister and discussed with him. I am requesting Shri Lakshmisagar, Hon'ble Minister for Law, Parlimentary Affairs and Housing to reply to the demands of the Department as well as to other Legislative matters in the current session for another 10 to 15 days till I recoup my health.

With warn regards,

Yours sincerely,
Azeez Sait,

ಶ್ರೀ ಕೆ. ಹೆಚ್. ರಂಗನಾಥ್.—ಈ ಇಲಾಖಾ ವಾರ್ಷಿಕ ವರದಿ ಪುಸ್ತಕಗಳು ನಮಗೆ ರಾತ್ರಿ ೧೧ ಗಂಟೆಯ ನಂತರ ಮಲಗುವ ಸಮಯದಲ್ಲಿ ಬರುತ್ತವೆ.

ಉಪಾಧ್ಯಕ್ಷರು.—ಕನಸಿನಲ್ಲಿ ಬರುತ್ತವೆಯೋ ?

ಶ್ರೀ ಕೆ. ಎಚ್. ರಂಗನಾಥ್.—ಕನಸಿನಲ್ಲಿ ಬಂದರೂ ಬರಬಹುದು. ಇದಕ್ಕೆ ತಾವು ಏನಾದರೂ ವ್ಯವಸ್ಥೆ ಮಾಡಬೇಕು. ಮತ್ತೆ ಇದರಲ್ಲಿರುವ ಅಕ್ಷರಗಳನ್ನು ನಾವು ಲೆನ್ಸ್ ಹಾಕಿಕೊಂಡು ಓದಬೇಕಾಗಿದೆ ಅಷ್ಟು ಸಣ್ಣ ಅಕ್ಷರಗಳು.

ಶ್ರೀ ಎಂ. ಎಸ್. ಕೃಷ್ಣನ್.—ದುರ್ಬೀನು ಹಾಕಿಕೊಂಡು ನೋಡಬೇಕಾಗಿದೆ.

ಶ್ರೀ ಕೆ. ಎಚ್. ರಂಗನಾಥ್.—ಸರ್ಕಾರ ಇಷ್ಟೊಂದು ದರಿದ್ರಸ್ಥಿತಿಗೆ ಬಂದಿದೆಯೋ? ಇನ್ನೂ ದಪ್ಪ ಅಕ್ಷರಗಳಲ್ಲಿ ಪ್ರಿಂಟ್ ಮಾಡಿಸಿ ಒಂದೆರಡು ದಿನಗಳ ಮೊದಲೇ ಏತಕ್ಕೆ ನಮಗೆ ಕಳುಹಿಸಿಕೊಡಬಾರದು ? ಈ ರೀತಿ ಮಾಡುವುದಾದರೆ ನಾವು ಇಲ್ಲಿ ಮಾತನಾಡುವುದೇ ಇಲ್ಲ ? ಆಗ ನೋಡೋಣ ಏನಾಗುತ್ತದೆ? ಓದುವ ಆಸಕ್ತಿ ಇರುವವರಿಗೆ ತಾವು ಮೊದಲೇ ಏತಕ್ಕೆ ಈ ಪುಸ್ತಕಗಳನ್ನು ಕಳುಹಿಸಿಕೊಡಬಾರದು ? ಏನೋ ಒಂದು ದಿವಸ ಈ ರೀತಿ ಆದರೆ ಪರವಾಗಿಲ್ಲ. ಆದರೆ ದಿನವೂ ಇದೇ ರೋಗವಾದರೆ ಏನು ಮಾಡಬೇಕು.

ಶ್ರೀ ಎ. ಲಕ್ಷ್ಮೀಸಾಗರ್.—ಮಾನ್ಯ ಅಧ್ಯಕ್ಷರೇ, ಪ್ರೆಸ್‌ನಲ್ಲಿ ಇದನ್ನು ಮುದ್ರಣ ಮಾಡಿ ತರಿಸಲು ತೊಂದರೆ ಇದ್ದ ಕಾರಣದಿಂದ ಫೋಟೋ—ಸ್ಟ್ಯಾಟ್ ಕಾಪಿಸ್ ಮಾಡಿಸಿ ಕೊಟ್ಟಿದ್ದೇವೆ. ಇದರಲ್ಲಿ ಅಕ್ಷರಗಳು ಸಣ್ಣದಾಗಿವೆ ಎಂಬುದನ್ನು ನಾನು ಒಪ್ಪಿಕೊಳ್ಳುತ್ತೇನೆ.

ಶ್ರೀ ಕೆ. ಎಚ್. ರಂಗನಾಥ್.—ಒಂದೆರಡು ದಿವಸಗಳ ಮೊದಲೇ ನಮಗೆ ಕಳುಹಿಸಿಕೊಟ್ಟರೆ ಅಭ್ಯಾಸ ಮಾಡಲು ಅನುಕೂಲವಾಗುತ್ತದೆ. ಇಲ್ಲದಿದ್ದರೆ ಇದರಿಂದ ಏನು ಪ್ರಯೋಜನವಾಗುತ್ತದೆ ? ನಾನು ಕೇವಲ ತಮ್ಮ ಇಲಾಖೆಗೆ ಸಂಬಂಧಪಟ್ಟಂತೆ ಹೇಳುತ್ತಿಲ್ಲ. ಎಲ್ಲಾ ಇಲಾಖೆಗಳ ಬಗ್ಗೆಯೂ ಹೇಳುತ್ತಿದ್ದೇನೆ, ಎಲ್ಲವೂ ನಮಗೆ ಸಕಾಲದಲ್ಲಿ ಬರಬೇಕು.

ಶ್ರೀ ಎ. ಲಕ್ಷ್ಮೀಸಾಗರ್.—ಅದಕ್ಕೋಸ್ಕರ ಮುದ್ರಣದಲ್ಲಿ ದೋಷ ಇದೆ, ಅದನ್ನು ಫೋಟೋ ಸ್ಟ್ಯಾಟ್ ಕಾಪಿ ಮಾಡಿಕೊಡುವುದಕ್ಕೆ ಪ್ರಯತ್ನ ನಡೆದಿದೆ. ಕೃಷ್ಣನ್‌ರವರು ವರದಿ ತಡವಾಗಿ ಇವತ್ತು ಬಂದಿದೆ ಎಂದು ಹೇಳಿದ್ದಾರೆ, ನಿಜ. ಇದಕ್ಕೆ ಸ್ವಲ್ಪ ಸಹಕಾರ ಕೊಡಬೇಕೆಂಬ ಮಾತನ್ನು ಮಾತ್ರ ಉತ್ತರವಾಗಿ ಹೇಳುವುದಕ್ಕೆ ಇಷ್ಟಪಡುತ್ತೇನೆ. ಹಿಂದಿನ ವರ್ಷಗಳಲ್ಲಿ ಒಂದೊಂದು ಸಾರಿ ತಡವಾಗಿ ಕೊಟ್ಟಿದ್ದೂ ಉಂಟು. ಅದೂ ಒಂದು ಕಾರಣವೆಂದು ಹೇಳುತ್ತಿಲ್ಲ.

ಶ್ರೀ ಎಂ. ಎಸ್. ಕೃಷ್ಣನ್.—ನನ್ನ ಅನುಭವದ ಪ್ರಕಾರ ಯಾವಾಗಲೂ ಸಹ ಒಂದು ದಿವಸ ಮುಂಚಿತವಾಗಿಯೇ ರಿಪೋರ್ಟ್‌ಗಳನ್ನು ಕೊಡುತ್ತಿದ್ದರು. ಇದು ಮೊದಲನೆಯ ಸಾರಿ ಈ ರೀತಿ ತಡವಾಗಿ ಕೊಡುತ್ತಿರುವುದು.

ಉಪಾಧ್ಯಕ್ಷರು.—ಆ ಬಗ್ಗೆ ಕ್ರಮ ತೆಗೆದುಕೊಳ್ಳೋಣ,

ಶ್ರೀ ಎಂ. ಎಸ್. ಕೃಷ್ಣನ್.—ಅದು ಯಾರ ತಪ್ಪೇ ಆಗಲಿ, ಅವರು ಕ್ಷಮಾಪಣೆ ಕೇಳಬೇಕು,

ಉಪಾಧ್ಯಕ್ಷರು.—ಆ ವಿಚಾರವನ್ನು ಬಿಡಿ. ಇಂದಿನ ಕಾರ್ಯಕ್ರಮದ ಪಟ್ಟಿಯಲ್ಲಿರತಕ್ಕ ಎಲ್ಲಾ ಬೇಡಿಕೆಗಳು ಸಭೆಯ ಮುಂದೆ ಚರ್ಚೆಗೆ ಇವೆ. ಇಂದೇ ಅವುಗಳ ಬಗ್ಗೆ ಚರ್ಚೆ ಮತ್ತು ಉತ್ತರ ಮುಗಿಯಬೇಕು. ಈಗ ಶ್ರೀ ವೈ. ರಾಮಕೃಷ್ಣ ಅವರು ಚರ್ಚೆಯನ್ನು ಪ್ರಾರಂಭಿಸುವುದು.

(ಶ್ರೀ ಪಿ. ರಾಮ್‌ದೇವ್ ಅವರು ಅಧ್ಯಕ್ಷ ಪೀಠವನ್ನಲಂಕರಿಸಿದರು)

† ಶ್ರೀ ವೈ. ರಾಮಕೃಷ್ಣ (ಆನೇಕಲ್) —ಸನ್ಮಾನ್ಯ ಸಭಾಧ್ಯಕ್ಷರೆ, ಈ ದಿವಸ ಕಾನೂನು ಮತ್ತು ಸಂಸದೀಯ ಹಾಗೂ ಗೃಹ ನಿರ್ಮಾಣ ಇಲಾಖೆಯ ಬೇಡಿಕೆಗಳನ್ನು ಸಂಬಂಧಪಟ್ಟ ಮಂತ್ರಿಗಳೇನೊ ಈ ಸಭೆಯ ಮುಂದೆ ಮಂಡಿಸಿದ್ದಾರೆ ಅವುಗಳ ಪೈಕಿ ಮೊದಲಿಗೆ ಸಂಸದೀಯ ಖಾತೆಗೆ ಸಂಬಂಧಪಟ್ಟ ಹಾಗೆ ಕೆಲವಾರು ಸಲಹೆಗಳನ್ನು ಮಾಡಬಯಸುತ್ತೇನೆ. ಅರ್ಧಗಂಟೆಯಿಂದ ಒಂದೇ ಸಮನೆ ಇಲ್ಲಿ ರೋಧನ ನಡೆದದ್ದು ಕೇಳಿದರೆ, ಕರ್ನಾಟಕದಲ್ಲಿ ಸಂಸದೀಯ ವ್ಯವಹಾರ ಯಾವ ಮಟ್ಟದಲ್ಲಿ ನಡೆಯುತ್ತಿದೆ, ಇದು ಈ ಸಭೆಗಾಗಲೀ, ಮಂತ್ರಿಗಳಿಗಾಗಲೀ ತಕ್ಕದ್ದೇ ಎಂದು ನಾನು ಕೇಳುತ್ತೇನೆ. ಕ್ಷಮಾಪಣೆ ಕೇಳುವುದು ಸುಲಭ. ಈಗ ನನ್ನ ಕೈಯಲ್ಲಿರತಕ್ಕ ವರದಿ ನನಗೆ ರಾತ್ರಿ ೧೧ ಗಂಟೆಗೆ ಬಂತು. ಆಂದಮೇಲೆ ನಾವು ಯಾವಾಗ ಇದನ್ನು ಓದಬೇಕು ? ನಮಗೆ ಒಂದಲ್ಲ ಹತ್ತು ಮಂದಿ ಆಪ್ತ ಸಹಾಯಕರನ್ನು ಇಟ್ಟುಕೊಂಡರೂ ಇದರಲ್ಲಿರತಕ್ಕ ಅಂಕಿ ಅಂಶಗಳನ್ನು ನೋಡುವುದಕ್ಕಾಗುವುದಿಲ್ಲ. ಮಂತ್ರಿಗಳೇನು ಮೂಢರೋ ಅಥವಾ ದಕ್ಷತೆ ಸಾಲದೆ ಅಥವಾ ಅವರ ಕೈಕೆಳಗೆ ಕೆಲಸ ಮಾಡತಕ್ಕ ಸಿಬ್ಬಂದಿ ವರ್ಗವನ್ನು ಹುರಿದುಂಬಿಸಿ ಕೆಲಸ ಮಾಡಿಸತಕ್ಕ ಶಕ್ತಿ ಇವರಿಗೆ ಇಲ್ಲವೆ ? ಇಲ್ಲಿ ಕೊಟ್ಟಿರತಕ್ಕ ವರದಿಯನ್ನು ದುರ್ಬೀನು ಹಾಕಿಕೊಂಡು ನೋಡಿದರೂ ಸರಿಯಾಗಿ ಅಂಕಿಅಂಶಗಳು ಗೊತ್ತಾಗುವುದಿಲ್ಲ. ಇದಕ್ಕೆ ಕಾರಣವೇನು ? ನಮ್ಮ ರಾಜ್ಯ ಉತ್ತಮ ರೀತಿಯಲ್ಲಿ ಮುದ್ರಣ ಮಾಡದಷ್ಟು ಹಿಂದೆ ಬಿದ್ದಿದೆಯೇ? ಅದಕ್ಕೆ ನಾನು ಹೋದ ಸಾರಿ ಒಂದು ಸಲಹೆ ಕೊಟ್ಟೆ, ಶಾಸಕಾಂಗದ ವಿಭಾಗಕ್ಕೆ ಒಂದು ಮುದ್ರಣಾಲಯವನ್ನು ಕೊಡಿ ಎಂದು. ನಾವು ಕಳೆದ ವರ್ಷ ಮಾತನಾಡಿದ್ದು (ವರದಿ) ಇವೊತ್ತಿನವರೆಗೆ, ಮುದ್ರಣವಾಗಿಲ್ಲ, ಅದಕ್ಕೋಸ್ಕರ ಅದನ್ನು ಹಾಗೆಯೇ ತಂದಿದ್ದೇನೆ. ಹೋದಸಾರಿಯೂ ನಾನು ಇದೇ ರೀತಿ ತಂದು ಇದೇ ಪ್ರಶ್ನೆಯನ್ನು ಎತ್ತಿದ್ದೆ. ಆಗ ಮುದ್ರಣಾಲಯದಲ್ಲಿ ಯಂತ್ರ ಕೆಟ್ಟು ಹೋಗಿದೆ, ಮುಂದಿನ ಸಾರಿ ಸರಿ ಮಾಡುತ್ತೇವೆಂದು ಹೇಳಿದ್ದರು. ಅದು ವರ್ಷೇವರ್ಷೇ ಕೆಡುತ್ತದೆಯೆ ? ಅಥವಾ ಇವರೇ ಕೆಡಿಸುತ್ತಾರೆಯೆ ? ಇದರಿಂದ ನಮಗೆ ಬಹಳ ಸಂಕಟವಾಗುತ್ತದೆ. ನಾವು ಮಾತನಾಡುವುದಕ್ಕೆ ಬರತಕ್ಕವರು, ನಮಗೆ ಮಾತನಾಡುವುದಕ್ಕೆ ವಿಷಯಗಳು ಬೇಕು. ಅದನ್ನೇ ನೀವು ಒದಗಿಸದಿದ್ದರೆ ಯಾವ ರೀತಿ ಕೆಲಸ ಮಾಡುತ್ತೀರಿ ? ಇದು ಬಹಳ ದುಃಖದ ವಿಚಾರ. ಬೆಳಿಗ್ಗೆ ನಾನು ಇಲ್ಲಿಗೆ ಬಂದಮೇಲೆ ಬಾಯ್ಲರ್ಸ್ ರಿಪೋರ್ಟ್ ಬಂತು, ಇ.ಎಸ್.ಐ. ರಿಪೋರ್ಟ್ ಬಂತು. ಇವೆಲ್ಲ ಟೈಪ್ಡ್ ರಿಪೋರ್ಟ್‌ಗಳೇ. ಇದನ್ನೆಲ್ಲಾ ನೋಡಿದರೆ ನೀವು ಈ ಮನೆಗೆ ಎಷ್ಟು ಗೌರವ ತೋರಿಸುತ್ತೀರೆಂಬುದು ಗೊತ್ತಾಗುತ್ತದೆ. ನಾವು ಈ ಮನೆಗೆ ಅಷ್ಟು ಗೌರವ ಕೊಡುವುದಕ್ಕೆ ತಯಾರಾಗಿಲ್ಲವೆಂದಾದರೂ ಹೇಳಿ. ನಿಮಗೆ ಕೆಲಸ ಮಾಡುವುದಕ್ಕೆ ದಕ್ಷತೆ ಇಲ್ಲದಿದ್ದರೆ ಬಿಡಿ. ಅದನ್ನೂ ನೀವು

---

† ಈ ಚಿಹ್ನೆ ಸಂಬಂಧಪಟ್ಟ ಸದಸ್ಯರು ಟಿಪ್ಪಣಿ ಅಥವಾ ಭಾಷಣವನ್ನು ಪರಿಷ್ಕರಿಸಿಲ್ಲ ಎಂದು ಸೂಚಿಸುತ್ತದೆ.

ಒಪ್ಪುವುದಿಲ್ಲ. ನಿಮಗೆ ಏನೂ ಕೆಲಸ ಮಾಡುವುದಕ್ಕೆ ಆಗಲಿಲ್ಲ. ಹೋದ ಸಾರಿ ದೊಡ್ಡ ಭಾಷಣ ಮಾಡಿ ಏನೇನು ಹೇಳಿದಿರಿ ಅದರಲ್ಲಿ ಒಂದನ್ನಾದರೂ ನಿರ್ವಹಿಸಿದ್ದರೆ ನಾನು ಅಭಿನಂದಿಸುತ್ತಿದ್ದೆ. ಆದರೆ ಏನನ್ನೂ ಮಾಡಿಲ್ಲ ನೀವು ನುಡಿದ ಹಾಗೆ ನಡೆಯಲಿಲ್ಲ. ನುಡಿದದ್ದು ಒಂದು ರೀತಿ, ನಡೆದದ್ದು ಮತ್ತೊಂದು ರೀತಿ. ಇದು ಏನು ತೋರಿಸುತ್ತದೆಂದರೆ. ಏನೋ ರಾಜಕೀಯದಿಂದ ಬಂದಿದ್ದೀರಿ, ಮಂತ್ರಿಗಳು ಆಗಿದ್ದೀರಿ, ದಿನ ಕಳೆದರೆ ಸಾಕು, ಸಂಸದೀಯ ವ್ಯವಹಾರವನ್ನು ಕಟ್ಟಿಕೊಂಡು ಏನಾಗಬೇಕು, ಬಿಡಬೇಕು ಎಂಬ ಧೋರಣೆ ನಿಮ್ಮಲ್ಲಿ ಮೂಡಿದೆ. ಇದರಿಂದ ನಮಗೆ ಎಷ್ಟು ತೊಂದರೆ ಆಗಿದೆ ಎಂಬುದನ್ನು ಹೇಳಬಯಸುತ್ತೇನೆ. ನಾವು ರಂಗನಾಥ್‌ರವರು ಅಧ್ಯಕ್ಷರಾಗಿದ್ದಾಗ ವಿಧಾನ ಸಭೆಯನ್ನು ಲೋಕಸಭಾ ನಮೂನೆಯಲ್ಲಿ ನಡೆಸಬೇಕೆಂದು ನಿಯಮಾವಳಿಗಳನ್ನು ಬದಲಾವಣೆ ಮಾಡಿದೆವು. ಕಾರಣವೇನೆಂದರೆ, ಹಿಂದಿದ್ದ ನಿಯಮಾವಳಿಗಳಲ್ಲಿ ಬಹಳ ತೊಡಕುಗಳು ಇವೆ, ಹೊಸ ನಿಯಮಾವಳಿಗಳನ್ನು ತಂದರೆ ಅನುಕೂಲವಾಗುತ್ತದೆಂದು ಮಾಡಿದೆವು. ಇವೊತ್ತಿನ ದಿವಸ, ಮಂತ್ರಿಗಳಾಗಿ ಏನು ಕಲಿತಿದ್ದೀರಿ, ನೀವೆಲ್ಲ ವಿರೋಧ ಪಕ್ಷದಲ್ಲಿದ್ದಾಗ, ನಾವು-ನೀವು ಸೇರಿ ಒಮ್ಮತ ದಿಂದ ಈ ಒಂದು ಬದಲಾವಣೆಯ ನಿಲುವನ್ನು ತೆಗೆದುಕೊಂಡೆವು ಆ ಪ್ರಕಾರ ನಾವು ಚರ್ಚೆ ಮಾಡುವ ವೇಳೆಯನ್ನು ಬೆಳಿಗ್ಗೆ ೧೧ ರಿಂದ ಸಂಜೆ ೫ರವರೆಗೆ ಮಾಡಬೇಕೆಂದು ಮಾಡಿದೆವು. ಆದರೆ ನೀವು ಇವೊತ್ತಿನ ದಿವಸ ಬೆಳಿಗ್ಗೆ ೯ ರಿಂದ ರಾತ್ರಿ ೧೦ರವರೆಗೆ ಸಭೆಯನ್ನು ನಡೆಸುತ್ತಿದ್ದೀರಿ. ಇದು ಒಳ್ಳೆಯ ಪದ್ಧತಿ ಅಲ್ಲ. ಎಲ್ಲರೂ ಇನ್ನೂ ಹುಡುಗರಾಗಿಲ್ಲ. ಬೆಳಿಗ್ಗೆ ೯ ರಿಂದ ರಾತ್ರಿ ೧೧ರವರೆಗೆ ಕೂಡುವುದು ಎಂದರೆ ಕಷ್ಟ. ಈ ರೀತಿ ಎಲ್ಲಿಯಾದರೂ ನಡೆಯುತ್ತಿದೆಯೇ ? ಊಟಕ್ಕೆ, ತಿಂಡಿಗೆ, ಕಾಫಿಗೆ ಹೋಗುವ ಹಾಗೆ ಇಲ್ಲ. ಇಂಥ ಪದ್ಧತಿಯನ್ನು ಕೂಡಲೇ ತಾವು ಕೈಬಿಡಬೇಕು. ಇವನ್ನು ಇಲ್ಲಿಗೆ ಕೊನೆಗೊಳಿಸಬೇಕು. ಕಾರ್ಯಕಲಾಪಗಳ ಸಲಹಾ ಸಮಿತಿಯಲ್ಲಿ ತೀರ್ಮಾನ ತೆಗೆದುಕೊಳ್ಳಬಹುದು. ಆದರೆ ತಾವು ಹಳಬರು, ತಮಗೆ ಗೊತ್ತಿದೆ. ಯಾವ ಕಾಲದಲ್ಲಿ, ಯಾವ ವರ್ಷದಲ್ಲಿ ಬೇಡಿಕೆಗಳಿಗೆ ೧೨ ದಿನಗಳನ್ನು ಮಾತ್ರ ಮೀಸಲಾಗಿಡಲಾಗಿತ್ತು ? ಕೇವಲ ೧೨ ದಿನಗಳಲ್ಲಿ ೧೩೦ ಕೋಟಿ ರೂಪಾಯಿಗಳ ಬೇಡಿಕೆಗೆ ಒಪ್ಪಿಗೆ ಕೊಡುವುದು ಎಂದರೆ ಬಹಳ ಕಷ್ಟ. ಪ್ರತಿಯೊಂದನ್ನೂ ಕೂಲಂಕಷವಾಗಿ ಚರ್ಚೆ ಮಾಡುತಕ್ಕ ಜವಾಬ್ದಾರಿ ನಮ್ಮ ತಲೆಯ ಮೇಲೆ ಬಿದ್ದಿದೆ. ಕೇವಲ ೧೨ ದಿನಗಳ ಅವಧಿಯಲ್ಲಿ ನಮಗೆ ಮಾತನಾಡಲಿಕ್ಕೆ ಮತ್ತು ಮಂತ್ರಿಗಳಿಗೆ ಉತ್ತರಿಸಲಿಕ್ಕೆ ಅವಕಾಶ ಕೊಟ್ಟರೆ ಹೇಗೆ ಆಗುತ್ತದೆ ? ಹೋದ ವರ್ಷ ೩೨ ದಿನಗಳ ಕಾಲ ಕುಳಿತು ಬೇಡಿಕೆಗಳ ಬಗ್ಗೆ ಚರ್ಚೆ ಮಾಡಿದ್ದೇವೆ. ಮಾನ್ಯ ಲಕ್ಷ್ಮೀಸಾಗರ್‌ರವರು ಈ ಒಂದು ಸ್ಥಾನದಿಂದ ಮಾಡಿದಂತಹ ಭಾಷಣದ ಪ್ರತಿ ಇದೆ. ಬಹುಶಃ ಅವರು ಇದನ್ನು ಜ್ಞಾಪಿಸಿಕೊಳ್ಳುತ್ತಾರೆಂದು ಕಾಣುತ್ತದೆ. ಅವರು ಏನು ಹೇಳಿದ್ದಾರೆಂದರೆ,

> "ಪ್ರಜಾಪ್ರಭುತ್ವ ಉಳಿಯಬೇಕಾದರೆ ಬೇಡಿಕೆಗಳ ಮೇಲೆ ಸುದೀರ್ಘವಾಗಿ ಚರ್ಚೆ ಆಗಬೇಕು. ಪ್ರತಿಯೊಬ್ಬ ಸದಸ್ಯರೂ ಕೂಡ ಸಕ್ರಿಯವಾಗಿ ಭಾಗವಹಿಸಬೇಕು. ಇಷ್ಟಿರತಕ್ಕ ದಿನಗಳು ಸಾಲವು."

ಆದರೆ ಇವೊತ್ತು ಆ ಮಾತು ಏನಾಯಿತು ? ಆ ಸ್ಥಾನಕ್ಕೆ ಹೋದ ತಕ್ಷಣ ಏಕೆ ಬದಲಾವಣೆ ಆಯಿತು? ಇದಕ್ಕೆ ಕಾರಣವೇನು ? ಈ ರೀತಿ ನಡೆಯುವುದಾದರೆ ನಿಯಮಾವಳಿಯನ್ನು ಏತಕ್ಕೆ ಬದಲಾವಣೆ ಮಾಡಬೇಕಾಗಿತ್ತು ? ಲೋಕಸಭಾ ನಮೂನೆ ಏತಕ್ಕೆ ಬೇಕಾಗಿತ್ತು ? ಇದನ್ನು ನಾನು ಬಹಳ ದುಃಖದಿಂದ ಹೇಳಬೇಕಾಗಿದೆ. ಇದಕ್ಕೋಸ್ಕರ ಸಂಸದೀಯ ವ್ಯವಹಾರಗಳ ಮಂತ್ರಿಗಳಲ್ಲಿ ವಿನಂತಿಸಿ ಕೊಳ್ಳುತ್ತೇನೆ ನಾವು ಏನು ಸಂಪ್ರದಾಯಗಳನ್ನು ಹಾಕಿದ್ದೇವೆ ಅವನ್ನು ರಾಜಕೀಯ ಕಾರಣ ಗಳಿಗೋಸ್ಕರ ಮುರಿಯಬೇಡಿ. ನನಗೆ ಜ್ಞಾಪಕ ಇರುವ ಹಾಗೆ ಮುಖ್ಯ ಮಂತ್ರಿಗಳು ಈ ಮನೆಯಲ್ಲಿ 'ಹರಿಯಾಣ ರಾಜ್ಯದಲ್ಲಿ ೩ ದಿನಕ್ಕೆ ಆಯವ್ಯಯವನ್ನು ಪಾಸ್ ಮಾಡಿಕೊಳ್ಳುತ್ತಾರೆ'. ಎಂದು ಹೇಳಿದರು, ಇವೊತ್ತಿನ ದಿವಸ ನಾನು ನೋಡಿದ ಹಾಗೆ ಉತ್ತರ ಇಂಡಿಯಾದಲ್ಲಿ ಯಾವ ರೀತಿ ನಡೆಯುತ್ತದೆ ಆ ರೀತಿ ನಡೆಸುವುದಕ್ಕೆ ಬಿಟ್ಟರೆ ಏನೋ ಮಾಡಿದ್ದೀರಿ ಎಂದು ನನಗೆ ಅನ್ನಿಸುತ್ತದೆ. ನಾವು ಕೇಳುವುದನ್ನೆಲ್ಲ ನೀವು ಕೊಡುವುದಿಲ್ಲ ಆದರೂ ನಾವು ಹೇಳುವುದನ್ನಾದರೂ ಕೇಳುವುದಕ್ಕೆ ಸಹನೆ ಇಲ್ಲವೆಂದರೆ ಹೇಗೆ ? ನಾವು ೨೨೪ ಜನ ಸದಸ್ಯರು ಆಯ್ಕೆಯಾಗಿ ಬಂದಿದ್ದೇವೆ, ನಮಗೆ ಕಷ್ಟಗಳು ಇವೆ. ನಮ್ಮನ್ನು ನಿಷ್ಪಕ್ಷಪಾತವಾಗಿ ಜನರು ಏನು ಓಟು ಕೊಟ್ಟು ಆರಿಸಿ ಕಳುಹಿಸಿದ್ದಾರೆ ಅವರು ಅನೇಕ ಸಮಸ್ಯೆಗಳನ್ನು ನಮ್ಮ ಮುಂದಿಟ್ಟಿದ್ದಾರೆ. ಅವುಗಳನ್ನೆಲ್ಲಾ ಬಗೆಹರಿಸುವುದಕ್ಕೆ ಆಗದೆ ಇರಬಹುದು, ಕೊನೆಯ ಪಕ್ಷ, ಅವುಗಳನ್ನು ಸಭೆಯ ಮುಂದಾದರೂ ನಿವೇದಿಸಿಕೊಳ್ಳುವುದಕ್ಕೆ ಅವಕಾಶ

ಸಿಗದಿದ್ದರೆ ಏನು ಮಾಡಬೇಕು ? ಇದು ಬಹಳ ಮುಖ್ಯವಾದ ವಿಚಾರ. ಮಾನ್ಯ ಸದಸ್ಯರು ಅನೇಕರು ಈ ಮನೆಯಲ್ಲಿ ಪ್ರಶ್ನೆ ಕೇಳಬೇಕು, ಅದು ಕೇಳಬೇಕು, ಇದು ಕೇಳಬೇಕೆಂದು ಪರಿತಪಿಸುತ್ತಿದ್ದಾರೆ. ಆದರೆ ನಿಮ್ಮ ಕಾರ್ಯಕಲಾಪಗಳು ಮದ್ರಾಸ್ ಮೆಯಿಲ್ ಓಡಿದಂತೆ ಓಡುತ್ತಿವೆ. ಇದು ಬಹಳ ಶೋಚನೀಯ. ಇದು ಸತ್ ಸಂಪ್ರದಾಯಕ್ಕೆ ವಿರುದ್ಧವಾದುದು. ನಿಜವಾಗಿ ಇಂಥ ಕೆಲಸ ಮಾಡಬಾರದೆಂದು ಎಚ್ಚರಿಕೆ ಕೊಡುತ್ತಿದ್ದೇನೆ. ಈ ಸರ್ಕಾರ ಅಸ್ತಿತ್ವಕ್ಕೆ ಬಂದಮೇಲೆ ಪರ್‌ಫಾರ್ಮೆನ್ಸ್ ಬಡ್ಜೆಟ್ಟನ್ನು ಬಿಳಿ ಹಾಳೆಯಲ್ಲಿ ಟೈಪ್ ಮಾಡಿ ಕೊಟ್ಟಿದ್ದಾರೆ.

ಇನ್ನು ಕಾರ್ಮಿಕ ಇಲಾಖೆ ಏನಿದೆ ಇದು ಕಾರ್ಮಿಕರಿಗೆ ಸಂಬಂಧಪಟ್ಟದ್ದು. ಅವರು ಉತ್ಪತ್ತಿ ಮಾಡತಕ್ಕವರು ಅಲ್ಲ. ಅಂದಾಗ ಇವರ ದೃಷ್ಟಿಯಲ್ಲಿ ಅವರು ಬಡ ಕಾರ್ಮಿಕರು. ಸಾಮಾನ್ಯವಾಗಿ ಮನುಷ್ಯ ಅಂದರೆ ಖಾಯಿಲೆ ಬರುತ್ತದೆ, ಅದೇ ರೀತಿ ಕಾರ್ಮಿಕ ಮಂತ್ರಿಗಳಿಗೆ ಖಾಯಿಲೆ ಬಂದಿರಬಹುದು. ಅದಕ್ಕೆ ಬದಲಿ ವ್ಯವಸ್ಥೆ ಮಾಡಿ ಸಂಬಂಧಪಟ್ಟ ಕಡತಗಳನ್ನು ಇಟ್ಟುಕೊಂಡು ನಾವು ಹೇಳತಕ್ಕ ವಿಷಯಗಳನ್ನು ಗಮನಕ್ಕೆ ತೆಗೆದುಕೊಂಡು ಅಥವಾ ಬರೆದುಕೊಂಡು ಆ ಮಂತ್ರಿಗಳಿಗೆ ತಿಳಿಸಿ ಸಾಮರ್ಥ್ಯದಿಂದ ಉತ್ತರ ಕೊಡತಕ್ಕ ವ್ಯವಸ್ಥೆ ಮಾಡದಿದ್ದರೆ ಬಹಳ ಶೋಚನೀಯ.

೩–೩೦ ಪಿ. ಎಂ.

ಇನ್ನಾವುದಾದರೂ ಖಾತೆ ಆಗಿದ್ದರೆ ನಾನು ಇದನ್ನು ಹೇಳುತ್ತಿರಲಿಲ್ಲ. ಇದು ಕಾರ್ಮಿಕರಿಗೆ ಸಂಬಂಧಪಟ್ಟದ್ದು. ಅವರು ದೇಶದ ಉತ್ಪಾದಕರು. ಟ್ರೇಡ್ ಯೂನಿಯನ್‌ಗೆ ಸಂಬಂಧಪಟ್ಟ ವಿಷಯವನ್ನು ಇಷ್ಟು ಲಘುವಾಗಿ ತೆಗೆದುಕೊಂಡಿರುವುದು ವಿಷಾದನೀಯವಾದದ್ದು. ಈ ಕಾರ್ಮಿಕ ಇಲಾಖೆಗೆ ಸಂಬಂಧಪಟ್ಟದ್ದನ್ನೂ ಬೇರೆ ಇಲಾಖೆಯ ಬೇಡಿಕೆಯ ಜೊತೆಯಲ್ಲೇ ತೆಗೆದುಕೊಂಡಿರುವುದು ಸರಿಯಲ್ಲ. ಇಂಥದ್ದಕ್ಕೆ ಇನ್ನು ಮುಂದೆ ತಾವು ಅವಕಾಶ ಕೊಡುವುದಿಲ್ಲವೆಂದು ಭಾವಿಸುತ್ತೇನೆ. ಈ ಸಭೆಯ ಸದಸ್ಯರ ವಿಚಾರದಲ್ಲಿ ಎರಡು ಮಾತುಗಳನ್ನಾಡಬೇಕಾಗಿದೆ. ನಾವು ಯಾವ ಪಕ್ಷದಿಂದಲಾದರೂ ಗೆದ್ದು ಬಂದಿರಲಿ, ನಾವೆಲ್ಲಾ ಸಾಮಾನ್ಯವಾಗಿ ಜನರಿಂದ ಮತ ತೆಗೆದುಕೊಂಡು ಬಂದಿರುವವರು. ಇವೊತ್ತು ಅವರು ಆಳುವ ಪಕ್ಷದಲ್ಲಿರಬಹುದು, ನಾವು ವಿರೋಧಪಕ್ಷದಲ್ಲಿರಬಹುದು. ನಾಳೆ ಅವರು ವಿರೋಧಪಕ್ಷದಲ್ಲಿರಬಹುದು, ನಾವು ಆಳುವ ಪಕ್ಷದಲ್ಲಿರಬಹುದು. ಆದರೆ ಸದಸ್ಯರಿಗೆ ಸಲ್ಲಬೇಕಾದ ಸರಿಸಮಾನವಾದ ಗೌರವ ಮುಖ್ಯವಾದುದು. ಇದಕ್ಕೆ ಚ್ಯುತಿ ಬರಬಾರದು. ಇದಕ್ಕೆ ಚ್ಯುತಿ ಬಂದರೆ ಪ್ರಜಾಪ್ರಭುತ್ವಕ್ಕೆ ಧಕ್ಕೆಯಾಗುತ್ತದೆ. ಮಾನ್ಯ ದೇವೇಗೌಡರು ಒಂದು ವಿಚಾರ ಹೇಳಿದರು. ನಮ್ಮ ಸ್ನೇಹಿತರಾದ ನಂಜನಗೂಡು ಶಾಸಕರಾದ ಮಹದೇವ್ ಅವರು ಅವರ ಕ್ಷೇತ್ರದಲ್ಲಿ ಒಂದು ಕಾರ್ಯಕ್ರಮದಲ್ಲಿ ಅಧ್ಯಕ್ಷತೆ ವಹಿಸಬೇಕೆಂದು ಹಠ ಹಿಡಿದರು ಎಂಬ ಕಾರಣಕ್ಕಾಗಿ ಅವರ ಹೆಸರನ್ನೇ ಕಲ್ಲಿನಲ್ಲಿ ಹಾಕಬೇಡ ಎಂದು ಅಧಿಕಾರಿಗಳಿಗೆ ಹೇಳಿದ ಎಂದು ಅವರು ಹೇಳಿದರು. ಇದು ಭೂಷಣವೆ ? ಏನು ತಿಳಿದುಕೊಂಡಿದ್ದೀರಿ ಸದಸ್ಯರು ಎಂದರೆ ? ಉತ್ತರಗಳನ್ನು ಕೊಡುವಾಗ ಗೌರವದಿಂದ ಕೊಡಬೇಕು. ಒಂದು ವೇಳೆ ಅಧಿಕಾರಿಗಳಿಗೆ ಇನ್‌ಸ್ಟ್ರಕ್ಷನ್ ಕೊಟ್ಟಿದ್ದರೂ ಈ ಸದನದಲ್ಲಿ ಬಹಿರಂಗವಾಗಿ " ಅಧಿಕಾರಿಗಳಿಗೆ ಹೆಸರು ಹಾಕಬೇಡ ಎಂದು ನಾನೇ ಹೇಳಿದೆ " ಎಂದು ಹೇಳಿದರೆ ಇದು ಪ್ರಜಾಪ್ರಭುತ್ವವೇ ಎಂದು ನಾವು ಕೇಳಬೇಕಾಗಿದೆ. ಸದಸ್ಯರಿಗೆ ಕೊಡಬೇಕಾದ ಗೌರವವನ್ನು ತಾವು ಕೊಡಲೇಬೇಕು.

ಶ್ರೀ ಎ. ಲಕ್ಷ್ಮೀಸಾಗರ್.—ಮಾನ್ಯ ದೇವೇಗೌಡರು ತಮ್ಮ ಬೇಡಿಕೆಗೆ ಉತ್ತರ ಕೊಡತಕ್ಕ ಕಾಲದಲ್ಲಿ ಮಾನ್ಯ ಮಹದೇವ್ ಅವರು ಇದನ್ನು ಕೇಳಿದ್ದಾರೆ. ಯಾರ ಮೇಲೆ ಅಪಾದನೆಯನ್ನು ದಿನ ಮಾಡುವುದಕ್ಕೆ ಮಾನ್ಯ ಸದಸ್ಯರಾದ ರಾಮಕೃಷ್ಣ ಅವರು ಪ್ರಯತ್ನ ಪಡುತ್ತಿದ್ದಾರೋ ಅವರಿಂದ ಉತ್ತರ ಪಡೆದುಕೊಂಡಿದ್ದಾರೆ. ಫ್ಯಾಕ್ಟ್ ಏನು ಎಂಬುದನ್ನು ಮೊದಲು ಹೇಳುತ್ತೇನೆ. ಸದಸ್ಯರಿಗೆ ಗೌರವ ಕೊಡಬೇಕು, ಮಂತ್ರಿಗಳು ಸದಸ್ಯರನ್ನು ತುಚ್ಛೀಕರಿಸಿದ್ದಾರೆ ಎಂಬ ವಿಚಾರ ಬೇರೆ. ಆದರೆ ಆ ವಿಷಯದಲ್ಲಿ ದೇವೇಗೌಡರು ಉತ್ತರ ಕೊಟ್ಟಿದ್ದಾರೆ ಎಂಬ ವಿಚಾರವನ್ನು ಮಾನ್ಯ ರಾಮಕೃಷ್ಣ ಅವರು ಆ ಸಮಯದಲ್ಲಿ ಇದ್ದರೋ ಇಲ್ಲವೋ ಎಂಬ ದೃಷ್ಟಿಯಿಂದ ಅವರ ಗಮನಕ್ಕೆ ತರುತ್ತಿದ್ದೇನೆ.

ಶ್ರೀ ವೈ. ರಾಮಕೃಷ್ಣ.—ನನಗೂ ಗೊತ್ತಿದೆ.

ಶ್ರೀ ಎಂ. ಎಸ್. ಕೃಷ್ಣನ್.—ಕಲ್ಲಿನಲ್ಲಿ ಅವರ ಹೆಸರು ಇಲ್ಲದೇ ಇರುವುದು ಒಳ್ಳೆಯದು. ಕಲ್ಲಿನಲ್ಲಿ ಹೆಸರು ಹಾಕಿ ಕೆಲಸ ಆಗದಿದ್ದರೆ ಮರ್ಯಾದೆ ಬರುವುದಿಲ್ಲ. ವಿಜಯನಗರ ಉಕ್ಕಿನ ಕಾರ್ಖಾನೆ ಹಾಗೇ ಉಳಿದಿದೆ. ಕಲ್ಲಿನಲ್ಲಿ ಇಂದಿರಾಗಾಂಧಿಯವರ ಹೆಸರು ಮಾತ್ರ ಇದೆ. ಹಾಗೆ ಆಗಕೂಡದು.

ಶ್ರೀ ವೈ. ರಾಮಕೃಷ್ಣ.—ಮಂತ್ರಿಗಳು ಟೂರ್ ಹೋಗುತ್ತಾರೆ. ಶಾಸಕರ ಕ್ಷೇತ್ರಗಳಿಗೆ ಹೋಗುತ್ತಾರೆ. ಆದರೆ ಅಲ್ಲಿರುವ ಚುನಾಯಿತ ಪ್ರತಿನಿಧಿಗಳಿಗೆ ವಿಷಯ ತಿಳಿಸದೆ, ಟೂರ್ ಪ್ರೋಗ್ರಾಂ ಇಷ್ಯೂ ಮಾಡದೆ ಎಷ್ಟು ಜನ ಮಂತ್ರಿಗಳು ಯಾರ ಯಾರ ಕ್ಷೇತ್ರಕ್ಕೆ ಹೋಗಿದ್ದಾರೆ. ಎಂಬುದನ್ನು ಆಲೋಚನೆ ಮಾಡಬೇಕು. ಈ ವಿಷಯ ಎಷ್ಟೋ ಸಾರಿ ಈ ಮನೆಯಲ್ಲಿ ಪ್ರಸ್ತಾಪವಾಗಿದೆ. ತಾವೂ (ಲಕ್ಷ್ಮೀಸಾಗರ್ ಅವರಿಗೆ) ಮಾಡಿದ್ದೀರಿ. You are also party to it. You have come to my Constituency. I have not received your tour programme. Are you afraid ? I would like to have a definite answer from you ನೀವು ಯಾವರೀತಿ ಚುನಾಯಿತರಾಗಿದ್ದೀರೋ ಅದೇರೀತಿ ನಾವೂ ಆಗಿದ್ದೇವೆ. ಮಾನ್ಯ ಚಂದ್ರಶೇಖರ್ ಅವರೂ ಎಷ್ಟೋ ಸಾರಿ ಬಂದಿದ್ದಾರೆ.

ಶ್ರೀ ಎಂ. ಚಂದ್ರಶೇಖರ್.—ನಾನು ಹೋಗೇ ಇಲ್ಲ.

ಶ್ರೀ ವೈ. ರಾಮಕೃಷ್ಣ.—ನೀವು ಮಂತ್ರಿಯಾದ ಮೇಲೆ ಹೋಗಿದ್ದೀರಿ. ಅದು ಪತ್ರಿಕೆಯಲ್ಲಿ ಬಂದಿತ್ತು.

ಶ್ರೀ ಎಂ. ಚಂದ್ರಶೇಖರ್.—ಹೋದ ಸಾರಿ ಫೆಬ್ರವರಿಯಲ್ಲಿ ಮೊದಲನೇಯ ಸಾರಿ ಹೋಗಿದ್ದೆ. ಮತ್ತೆ ಹೋಗಿಲ್ಲ. ನನ್ನ ಹೆಸರು ಹೇಳಿದ್ದರಿಂದ ನಾನು ಹೇಳುತ್ತಿದ್ದೇನೆ. ನಿಮ್ಮ ಪಕ್ಷದ ಸದಸ್ಯರನ್ನು ಕೇಳಿ. ನಾನು ಎಲ್ಲಿ ಹೋದರೂ ಆ ಪ್ರದೇಶದ ಶಾಸಕರ ಜೊತೆಯಲ್ಲಿ ಓಡಾಡಿ ಸಮಸ್ಯೆಗಳ ಬಗ್ಗೆ ಚರ್ಚೆ ಮಾಡಿದ್ದೇನೆ.

ಶ್ರೀ ವೈ. ರಾಮಕೃಷ್ಣ.—ನಾನು ಉದಾಹರಣೆ ಹೇಳಿದೆ. ಮಾನ್ಯ ಜೀವಿಜಯ ಅವರೂ ಹೋಗಿದ್ದರು. ನಾನು ಬೇಕಾದರೆ ಹೆಸರು ಹೇಳುವುದಕ್ಕೆ ತಯಾರಿದ್ದೇನೆ. ನಾನು ಹೋಗುವುದಕ್ಕೆ ಆಕ್ಷೇಪಣೆ ಮಾಡುತ್ತಿಲ್ಲ. ಆದರೆ ನೀವು ಅನುಸರಿಸುವ ರೀತಿ ನೀತಿಗಳ ಬಗ್ಗೆ ಹೇಳುತ್ತಿದ್ದೇನೆ. ಮಾನ್ಯ ಮಂತ್ರಿಗಳು ವಿಧಾನಸಭಾ ಸದಸ್ಯರಿಗೆ ಕೊಡಬೇಕಾದ ಗೌರವವನ್ನು ಕೊಡಬೇಕು. ಗೌರವ ಕೊಡುವುದಿರಲಿ, ಮಾಡಬೇಕಾದ ಕರ್ತವ್ಯದ ಕಡೆ ನಿರ್ಲಕ್ಷ್ಯಮಾಡಾಗ ನಾವು ಯಾರನ್ನು ಕೇಳಬೇಕು ? ನಾವೂ ನಿಮ್ಮ ಹಾಗೆ ಮನಸ್ಸಿಗೆ ತೆಗೆದು ಕೊಂಡರೆ ಪರಿಸ್ಥಿತಿ ಕಷ್ಟವಾಗುತ್ತದೆ. ನಮಗೂ ರಾಜಕೀಯ ಪಕ್ಷದಲ್ಲಿ ಬೇಕಾಗಿರತಕ್ಕವರು ಇರುತ್ತಾರೆ. ಅವರು ಮಂಕಾದಲಿಸುತ್ತಾರೆ. ಆಗ ನಮ್ಮ ಮನಸ್ಸು ಕೆಡುತ್ತದೆ. ಈ ವಿಷಯದಲ್ಲಿ ಫೈರಿಂಗ್ ಆಗಿ ವಿಚಾರಣೆ ನಡೆದಿರುವುದೂ ಗೊತ್ತಿದೆ. ಇದರ ಬಗ್ಗೆ ಒಂದು ನೀತಿಯನ್ನು ತಾವು ಹಾಕಿಕೊಳ್ಳಬೇಕು. ಮೊದಲಿನಿಂದ ಬಂದಿರುವ ಪದ್ಧತಿಯನ್ನು ನೀವು ಉಲ್ಲಂಘನೆ ಮಾಡಿದ್ದೀರಿ. ಅದೇ ರೀತಿ ರೇವಣ್ಣನವರು ಬ್ಯಾಡಗಿಗೆಹೋಗಿದ್ದರಂತೆ. ನಮ್ಮ ಶಾಸಕರಾದ ಲಂಬಾಣಿಯವರಿಗೆ ಈ ವಿಷಯ ಗೊತ್ತೇ ಇಲ್ಲ. ನಮಗೂ ವಿಷಯ ತಿಳಿಸಿದರೆ ನೀವು ಬಂದಾಗ ಇಷ್ಟವಿದ್ದರೆ ನಾವೂ ಬರುತ್ತೇವೆ.

ಶ್ರೀ ರೇವಣ್ಣ (ಕೃಷಿ ರಾಜ್ಯ ಮಂತ್ರಿ).—ಬ್ಯಾಡಗಿ ಎಲ್ಲಿದೆ ಎಂದು ನಾನು ನೋಡೇ ಇಲ್ಲ.

ಶ್ರೀ ಹೇಗ್ಗಪ್ಪ ಲಂಬಾಣಿ.—ಬ್ಯಾಡಗಿ ತಾಲ್ಲೂಕಿನ ಮೋಟೆಬೆನ್ನೂರು ಹತ್ತಿರ ಹೋಗಿ ಇಂದಿರಾ ಗಾಂಧಿಯವರನ್ನು ಬೈದು ಬಂದರಲ್ಲ ಅದೇ.

ಶ್ರೀ ಮೈಕೇಲ್ ಫರ್ನಾಂಡಿಸ್.—ಮಾನ್ಯ ಸದಸ್ಯರು ಹೇಳುವಂಥದ್ದು ಸರಿ. ಮುಖ್ಯ ಮಂತ್ರಿಗಳಾಗಲೀ, ಮಂತ್ರಿಗಳಾಗಲೀ ಹೋಗುವಾಗ ಸಂಬಂಧಪಟ್ಟ ಶಾಸಕರಿಗೆ ಮೊದಲು ತಿಳುವಳಿಕೆ ಕೊಟ್ಟು ಹೋಗಬೇಕು ಎಂಬುದು ನ್ಯಾಯುವಾದುದು. ಆದರೆ ಅದು ಈಗ ಆಗುತ್ತಿಲ್ಲ ಎಂಬುದು ತಪ್ಪು. ಹಿಂದೆಯೂ ಆ ರೀತಿ ತಿಳುವಳಿಕೆ ಕೊಡದೆ ಸದಸ್ಯರಿಗೆ ತಿಳಿಸದೆ ಸಮಾರಂಭಗಳು ನಡೆಯುತ್ತಿತ್ತು. ಬೆಂಗಳೂರಿನಲ್ಲಿ ನನ್ನ ಕ್ಷೇತ್ರದಲ್ಲೇ ಅಂದಿನ ಮಾನ್ಯ ಮುಖ್ಯಮಂತ್ರಿಗಳು ಮತ್ತು ಅಂದಿನ ನಗರಸಭಾ ಮಂತ್ರಿಗಳಾದ ಧರ್ಮಸಿಂಗ್ ಅವರು ಒಂದು ಕಾರ್ಯಕ್ರಮಕ್ಕೆ ಹೋಗಿದ್ದರು. ಅದು ನನಗೆ ಗೊತ್ತೇ ಇರಲಿಲ್ಲ. ಅದು ಬಹಿರಂಗವಾದ ಸಭೆ.

ಶ್ರೀ ವೈ. ರಾಮಕೃಷ್ಣ.—ಒಂದು ವಿಷಯವನ್ನು ಸಭೆಯ ಗಮನಕ್ಕೆ ತುಂಬಾ ವಿಷಾದದಿಂದ ತರುತ್ತಿದ್ದೇನೆ. ನಮ್ಮ ತಾಲ್ಲೂಕಿಗೆ ಒಬ್ಬರು ತಹಸೀಲ್ದಾರರನ್ನು ಹಾಕಿದ್ದಾರೆ. ಅವರು ಮೊದಲ ಮಾನ್ಯ ಮುಖ್ಯಮಂತ್ರಿಗಳ ಕ್ಷೇತ್ರದಲ್ಲಿದ್ದರು. ಮಂತ್ರಿಗಳಾದ ಸಿಂಧ್ಯ ಅವರು ಅವರನ್ನು ಆನೇಕಲ್‌ನಲ್ಲಿ ಇಟ್ಟಿದ್ದಾರೆ. ಆ ತಹಸೀಲ್ದಾರರು ಆಗಸ್ಟ್ 15ನೇ ತಾರೀಖು ಸ್ವಾತಂತ್ರ್ಯ ದಿನಾಚರಣೆ ಸಂದರ್ಭದಲ್ಲಿ

ಬಾವುಟ ಹಾರಿಸುವುದಕ್ಕೆ ಬರಬೇಕು ಎಂದು ಹೇಳಿದ್ದರು. ನಾನು ಅದಕ್ಕೆ ಒಪ್ಪಿಕೊಂಡೆ ೯ ಗಂಟೆಗೆ ಅಲ್ಲಿ ಇರಬೇಕು ಎಂದು ಹೇಳಿದ್ದರು. ನಾನು ೯ ಗಂಟೆ ಒಂದು ನಿಮಿಷಕ್ಕೆ ಹೋಗಿ ಕಾರಿನಲ್ಲಿ ಇಳಿದೆ. ಅಷ್ಟರಲ್ಲಿ ತಹಸೀಲ್ದಾರ್ ಬಾವುಟ ಹಾರಿಸುತ್ತಿದ್ದರು. ಅವರು ಏತಕ್ಕೆ ಹೀಗೆ ಮಾಡುತ್ತಾರೆಂದರೆ ಅವರ ಹಿಂದೆ ಸಿಂಧ್ಯ ಅವರಿದ್ದಾರೆ. ಯಾರಿಗೇನು ಕೇರ್ ಮಾಡುವುದು ಎಂದು ಆ ರೀತಿ ಅವರು ಮಾಡುತ್ತಿದ್ದಾರೆ. ಇದು ನಿಮ್ಮ ಅಡ್ಮಿನಿಸ್ಟ್ರೇಷನ್ ವೈಯಕ್ತಿಕವಾಗಿ ನನಗೆ ಗೌರವ ಕೊಡದಿದ್ದರೆ ಹಾಳಾಗಿ ಹೋಗಲಿ. ಆದರೆ ಸದಸ್ಯರಿಗೆ ಕೊಡತಕ್ಕ ಗೌರವವನ್ನು ಕೊಡದೆ ಈ ರೀತಿ ಮಾಡಿದರೆ ಏನು ಮಾಡಬೇಕು ಎಂಬುದನ್ನು ಆಲೋಚನೆ ಮಾಡಿ. ೯ ಗಂಟೆ ಒಂದು ನಿಮಿಷಕ್ಕೆ ನಾನು ಹೋಗುವಷ್ಟರಲ್ಲಿ ಹೀಗೆ ಮಾಡಿದ್ದಾರೆ. ಮತ್ತೆ ಜನವರಿ ೨೬ನೇ ತಾರೀಖು ಬಂದು ಬಾವುಟ ಹಾರಿಸಬೇಕು ಎಂದರು. I asked him to get out. ಹೋಗು ಆಚೆ ಎಂದು ಹೇಳಿದೆ. ನಾನು ಇದನ್ನೆಲ್ಲಾ ಏತಕ್ಕೆ ಹೇಳಿದೆಯೆಂದರೆ.........

ಶ್ರೀ ಬಿ. ಸೋಮಶೇಖರ್.—Highest executive of the civil service flag hoist. ಮಾಡಬೇಕು ಎಂದು ಕೇಂದ್ರದ ಕಾನೂನಿದೆ. ಆದ್ದರಿಂದ ಶಾಸಕರು ಬಾವುಟ ಹಾರಿಸುವ ಪ್ರಶ್ನೆ ಬರುವುದಿಲ್ಲ.

ಶ್ರೀ ವೈ. ರಾಮಕೃಷ್ಣ.—ಹಾಗಾದರೆ ಮುಖ್ಯಮಂತ್ರಿಗಳು ಏತಕ್ಕೆ ಮಾಡಿದರು ?

ಶ್ರೀ ಬಿ. ಸೋಮಶೇಖರ್.—ಮಂತ್ರಿಗಳು ಮಾಡಬಹುದು. ಮಂತ್ರಿಯಾಗಿದ್ದಾಗ ನೀವು ನಿಮ್ಮ ಕ್ಷೇತ್ರಕ್ಕೆ ಹೋಗಿ ಬಾವುಟ ಹಾರಿಸಬಹುದು. ಆದರೆ ಶಾಸಕರಾಗಿ ಮಾಡುವುದಕ್ಕಾಗುವುದಿಲ್ಲ.

ಶ್ರೀ ವೈ. ರಾಮಕೃಷ್ಣ.—ಆ ರೀತಿ ಪ್ರೋಟೋಕಾಲ್ ಮಾಡಿ. ಸದಸ್ಯರಿಗೆ ಸರ್ಕ್ಯುಲರ್ ಮಾಡಿ ಹಂಚಿ. ತಹಸೀಲ್ದಾರರು ಬಾವುಟ ಹಾರಿಸುವಾಗ ಎಂ.ಎಲ್.ಎ.ಗಳು ಅವರ ಪಕ್ಕದಲ್ಲಿ ಹೋಗಿ ನಿಂತು ಕೊಳ್ಳುವುದಲ್ಲ.

ನಾವು ಹೇಳುವುದು, ಒಂದು ವೇಳೆ ಆ ರೀತಿ ಇದ್ದರೆ...

ಶ್ರೀ ಬಿ. ಸೋಮಶೇಖರ್.—ಆ ಬಗ್ಗೆ ದೆಹಲಿಯಿಂದಲೇ ಇಂತಿಂಥವರು ಧ್ವಜಾರೋಹಣ ಮಾಡಬೇಕೆಂದು ಒಂದು ಸರ್ಕ್ಯುಲರ್‌ನ್ನು ಇಷ್ಯೂ ಮಾಡಿಸಿ ಸ್ವಾಮಿ.

ಶ್ರೀ ಪಂಪಾಪತಿ.—ತಹಸೀಲ್ದಾರ್ ಅವರು, ಅಸಿಸ್ಟೆಂಟ್ ಕಮಿಷನರ್ ಅವರು ಬಾವುಟ ಹಾರಿಸತಕ್ಕದ್ದು ಆಗಿನ ಪದ್ಧತಿ ಅಲ್ಲ. ತಪ್ಪು ಸರ್ಕಾರ ಇದ್ದಾಗಲೂ ಕೂಡ ತಾಲ್ಲೂಕು ಮಟ್ಟದಲ್ಲಿ ಹಾಗೂ ನನಗೆ ಗೊತ್ತಿರುವ ಹಾಗೆ ದಾವಣಗೆರೆಯಲ್ಲಿ ಸುಮಾರು ೨೦ ವರ್ಷಗಳಿಂದ ಅಸಿಸ್ಟೆಂಟ್ ಕಮಿಷನರ್ ಅವರೇ ಧ್ವಜಾರೋಹಣ ಮಾಡುತ್ತಿದ್ದಾರೆ. ಇವೊತ್ತು ನಮ್ಮಲ್ಲಿ ಪ್ರಜಾಪ್ರತಿನಿಧಿ ಸರ್ಕಾರ ಇದೆ. ಇವೊತ್ತಿನ ದಿವಸ ಆಯಾ ಕ್ಷೇತ್ರಗಳಲ್ಲಿ ಪ್ರಜೆಗಳ ಪ್ರತಿನಿಧಿಗಳು ಇರುವಾಗ ಯಾರು ಅತಿಥಿಗಳಾಗಿ ಇರುತ್ತಾರೋ ಅವರು ಧ್ವಜಾರೋಹಣ ಮಾಡತಕ್ಕ ಪದ್ಧತಿ ಸರಿಯಿಲ್ಲವೆಂದು ನನ್ನ ಭಾವನೆ. ಆದ್ದರಿಂದ ಈ ಪದ್ಧತಿಯಲ್ಲಿ ಮಾರ್ಪಾಟು ಆಗಬೇಕೆಂದು ನಾನು ಹೇಳುತ್ತೇನೆ.

SRI Y. RAMAKRISHNA.—Not that I am anxious to unfurl the flag. Having come to me and having invited me to paricipate in the function and unfurl the flag, tahsildar did not wait for one minuts. He only has unfurled the flag. ಈ ಬಗ್ಗೆ ಸದಸ್ಯರ ಮನಸ್ಸಿನಲ್ಲಿ ಏನು ಪರಿಣಾಮ ಆಗುತ್ತದೆ ಎಂಬುದರ ಬಗ್ಗೆ ತಾವು ಗಮನಹರಿಸಬೇಕಾಗುತ್ತದೆ. ಈ ಒಂದು ಸಭೆಯ ದುಂಬಾಂತರ ಕೆಲವು ಸಮಿತಿಗಳನ್ನು ಮಾಡಿದ್ದು ಅದರಲ್ಲಿ ಎಸ್.ಸಿ/ಎಸ್.ಟಿ ವೆಲ್ಫೇರ್ ಸಮಿತಿಯೂ ಒಂದಾಗಿದೆ. ನನಗೆ ಈ ಸಮಿತಿಯಲ್ಲಿ ಸದಸ್ಯರನ್ನಾಗಿ ಹಾಕಿದ್ದಾರೆ. ಕಳೆದ ಸಾರಿ ಈ ಸಮಿತಿಯಲ್ಲಿ ಏನು ಆಯಿತು ಎಂಬ ಬಗ್ಗೆ ಮಾನ್ಯ ಮಂತ್ರಿಗಳು ಹೇಳಬೇಕು. ಹಾಗೂ ಆ ವಿಷಯದ ಬಗ್ಗೆ ಏನು ಆಕ್ಷನ್ ತೆಗೆದುಕೊಂಡಿದ್ದಾರೆಂದು ಹೇಳಲಿ. ಇತ್ತೀಚೆಗೆ ಒಂದು ಪ್ರಸಂಗ ನಡೆಯಿತು. ನಾನು ಈ ಸಮಿತಿಯಲ್ಲಿ ಇಲ್ಲದಿದ್ದರೆ ಇದು ನನ್ನ ಗಮನಕ್ಕೆ ಬರುತ್ತಾ ಇರಲಿಲ್ಲ. ಈ ಸಮಿತಿ ಸರ್ಕಾರ ನಾಬೂರು ಕಾರ್ಖಾನೆಯಲ್ಲಿ ಅನುಸೂಚಿತ ಜಾತಿ ಹಾಗೂ ಪಂಗಡದವರಿಗೆ ಮೀಸಲಾತಿ ಸರಿಯಾಗಿ ಇಡಲಾಗಿದೆಯೋ ಎಂದು ನೋಡುವ ಬಗ್ಗೆ ಭೇಟಿ ಕೊಟ್ಟಿತು. ಹಾಗೂ ೧ ವರ್ಷದ ಹಿಂದೆ ಮಾನ್ಯ ಅರ್ಸ್ಯಾಗಂ ಅವರ

ನೇತೃತ್ವದ ಈ ಸಮಿತಿ ಸಹಾ ಈ ಬಗ್ಗೆ ಭೇಟಿ ನೀಡಿತ್ತು. ಈ ಸಮಿತಿ ಮುಂದೆ ಆ ಕಾರ್ಖಾನೆಯಲ್ಲಿ ಕೆಲಸ ಮಾಡುವ ಈ ಜನ ತಮ್ಮ ಅವಹಾಲನ್ನು ಹೇಳಿಕೊಳ್ಳುವುದಕ್ಕೆ ಅವಕಾಶ ಇದೆ. ಆ ಪ್ರಕಾರ ಆ ಕಾರ್ಖಾನೆಯ ಸುಮಾರು ಐದಾರು ಜನ ಆರ್ಮುಗಂ ಅವರ ಕಮಿಟಿ ಮುಂದೆ ತಮ್ಮ ಕಷ್ಟ ಸುಖಗಳನ್ನು ಹೇಳಿಕೊಂಡಿದ್ದಾರೆ. ಅವರು ಕಮಿಟಿ ಮುಂದೆ ತಮ್ಮ ಕಷ್ಟ ಸುಖಗಳನ್ನು ಹೇಳಿಕೊಂಡಿದ್ದಕ್ಕೇ ಆ ಕಾರ್ಖಾನೆಯ ಅಧಿಕಾರಿಗಳು ಅವರಿಗೆ ಷೋಕಾಸ್ ನೋಟೀಸ್‌ಗಳನ್ನು ಇಶ್ಯೂ ಮಾಡಿದ್ದಾರೆ. ಇದಾದ ಮೇಲೆ ೧ ವರ್ಷದ ಮೇಲೆ ನಮ್ಮ ಸಮಿತಿ ಅಲ್ಲಿಗೆ ಭೇಟಿ ಕೊಟ್ಟಾಗ ಅದೇ ಜನ ನಮ್ಮ ಹತ್ತಿರ ಬಂದು ತಮ್ಮ ಕಷ್ಟ ಸುಖ ಹೇಳಿಕೊಂಡು ಹೋದ ಸಾರಿ ನಮಗೆ ಷೋಕಾಸ್ ನೋಟೀಸ್ ಕೊಟ್ಟರು ಈ ಸಾರಿ ನಿಮ್ಮ ಜೊತೆ ಮಾತನಾಡಿದ್ದಕ್ಕೆ ನಮ್ಮನ್ನು ಡಿಸ್‌ಮಿಸ್ ಮಾಡಬಹುದು ಎಂದು ನಮಗೆ ಹೇಳಿದರು. ಮೇನೇಜ್‌ಮೆಂಟ್‌ನವರು ನಮ್ಮ ಮುಂದು ಕುಳಿತಿದ್ದಾಗಲೇ ಅವರು ತಮ್ಮ ಕಷ್ಟಗಳನ್ನು ಹೇಳಿಕೊಂಡರು. ಅವರಿಗೆ ಯಾವ ರೀತಿ ವಿಶ್ರಾಂತಿ ಸೌಲಭ್ಯ ಇದೆ ಅದನ್ನು ಕೊಡಿ ಎಂದೂ ಅವರು ಹೇಳಿದ್ದಾರೆ. ಇವೊತ್ತಿನ ದಿವಸ ನಿಮ್ಮ ಮುಂದೆ ನಾವು ಮಾತನಾಡಿದ್ದಕ್ಕೆ ನಮಗೆ ಡಿಸ್‌ಮಿಸ್ ಮಾಡಬಹುದೆಂದು ಅವರೇ ಹೇಳಿದರು. ಹಾಗಾದರೆ ಅವರು ಹೇಳುವುದು ನಿಜವೇ ಎಂದು ನಾವು ಅಲ್ಲಿನ ಮೇನೇಜ್‌ಮೆಂಟಿನವರಿಗೆ ಕೇಳಿದ್ದಕ್ಕೆ ಅವರು, ಅಯ್ಯೋ ನಾವು ಯಾಕೆ ಮಾಡೋಣ ಎಂದು ಅವರು ಹೇಳಿದರು. ನಮ್ಮ ಎದುರುಗಡೆ ಇಷ್ಟು ನಡೆಯಿತು.

ಶ್ರೀ ಎಂ. ಚಂದ್ರಶೇಖರ್.—ಕೋದಗಾರಿ ಆರ್ಮುಗಂ ಅವರ ಕಮಿಟಿ ಹೋಗಿದ್ದಾಗ ಯಾವ ಸರ್ಕಾರ ಇತ್ತು, ಹಾಗೂ ನೀವು ಹೋದಾಗ ಯಾವ ಸರ್ಕಾರ ಇತ್ತು, ಹಾಗೂ ಅಲ್ಲಿ ಆಗ ಇದ್ದ ಅಧಿಕಾರಿಗಳು ಎಂತಹವರು ಹಾಗೂ ಈಗ ಇರುವ ಅಧಿಕಾರಿಗಳು ಎಂತಹವರು ಎಂಬುದು ನಿಮಗೇ ಗೊತ್ತಾಯಿತಲ್ಲವೆ ? ನಮ್ಮ ಸರ್ಕಾರದಲ್ಲಿನ ಅಧಿಕಾರಿಗಳ ಭಾವನೆ ಎಂತಹುದು ಎಂಬುದು ನಿಮಗೆ ಗೊತ್ತಾಯಿತೇ ?

ಶ್ರೀ ವೈ. ರಾಮಕೃಷ್ಣ.—ನಾನು ಮುಂದೆ ಹೇಳುವುದನ್ನು ತಾವು ಸ್ವಲ್ಪ ತಾಳ್ಮೆಯಿಂದ ಕೇಳಿ ಸ್ವಾಮಿ. ಕಾಂಗ್ರೆಸ್ ಸರ್ಕಾರದಲ್ಲಿ ಯಾವ ಅಧಿಕಾರಿಗಳು ಇದ್ದರೋ ಅದೇ ಅಧಿಕಾರಿಗಳು ಈಗಲೂ ಇದ್ದಾರೆ. ಮುಂದೆ ಯಾವ ಸರ್ಕಾರ ಬಂದರೂ ಅವರೇ ಅಲ್ಲಿ ಇರುತ್ತಾರೆ. ಅವರು ಬದಲಾವಣೆ ಆಗುವುದಿಲ್ಲ. ಮುಂದೆ ಅಲ್ಲಿ ಏನಾಗಿದೆ ಗೊತ್ತೆ, ಯಾರಿಗೆ ಮೊದಲು ಬಾರಿ ಷೋಕಾಸ್ ನೋಟೀಸ್ ಕೊಟ್ಟಿದ್ದರೋ ಅವರಿಗೆ ಈಗ ಡಿಸ್‌ಮಿಸ್ ಮಾಡಿದ್ದಾರೆ. ಅವರ ಹೆಸರುಗಳು ಈ ರೀತಿ ಇವೆ. ವೆಂಕಟರಾಮು, ಚಿನ್ನಗಿರಿ, ಪ್ರಧವನ್, ದೇವನಾರಾಯಣ, ಪರಮೇಶ್ವರನ್—ಇವರನ್ನೆಲ್ಲಾ ವಜಾ ಮಾಡಿದ್ದಾರೆ. ಇವರೆಲ್ಲಾ ಪರಿಶಿಷ್ಟ ಜಾತಿಯವರು ಆಗಿರುವುದರಿಂದ ನಿಮಗೆಲ್ಲಾ ಸಂತೋಷವಾಗಿರಬಹುದಲ್ಲವೇ ?

ಶ್ರೀ ಎಂ. ವೀರಪ್ಪ ಮೊಯ್ಲಿ.—ಆರ್ಮುಗಂ ಕಮಿಟಿ ಹೋದಾಗ ಷೋಕಾಸ್ ನೋಟೀಸ್ ಕೊಟ್ಟಿದ್ದಾರೆ. ಮಾನ್ಯ ಹೆಗಡೆಯವರ ಕಮಿಟಿ ಹೋದಾಗ ಡಿಸ್‌ಮಿಸ್ ಮಾಡಿದ್ದಾರೆ.

ಶ್ರೀ ಎಂ. ಎಸ್. ಕೃಷ್ಣನ್.—ಅವರನ್ನು ಡಿಸ್‌ಮಿಸ್ ಮಾಡಿರುವುದು ನಿಜ. ಆ ಬಗ್ಗೆ ಭಿನ್ನಾಭಿಪ್ರಾಯವಿಲ್ಲ. ಅಲ್ಲಿನ ಆಡಳಿತದವರು ಕಾರ್ಮಿಕ ವಿರೋಧಿ ನೀತಿಯನ್ನು ತಳೆದಿದ್ದಾರೆ. ಅದನ್ನು ನಾವು ಪ್ರತಿಭಟಿಸುತ್ತಿದ್ದೇವೆ.

ಶ್ರೀ ಎಂ. ಚಂದ್ರಶೇಖರ್.—ಮಾನ್ಯ ಹೆಗಡೆ ಅವರ ಸಮಿತಿ ಮುಂದೆ ಅವರು ಹೇಳಿಕೆ ಕೊಟ್ಟರು ಎನ್ನುವ ಕಾರಣದಿಂದ ಅವರನ್ನು ಡಿಸ್‌ಮಿಸ್ ಮಾಡಿಸುವುದಕ್ಕೆ ಸಾಧ್ಯವಿಲ್ಲ. ಅವರ ಡಿಸ್‌ಮಿಸಲ್‌ಗೆ ಬೇರೆ ಕಾರಣಗಳು ಇರಬಹುದು.

ಶ್ರೀ ವೈ. ರಾಮಕೃಷ್ಣ.—ನಾನು ಇನ್ನೊಂದು ವಿಷಯವನ್ನು ಹೇಳುತ್ತೇನೆ. ಅಲ್ಲಿ ಕೆಂಪಯ್ಯ ಎನ್ನುವವರು ೧೯೬೦ರಿಂದ [illegible] ಕೆಲಸ ಮಾಡುತ್ತಿದ್ದಾರೆ. ಇವರು ಪರಿಶಿಷ್ಟ ಜನಾಂಗಕ್ಕೆ ಸೇರಿದವರಾಗಿದ್ದು ಎಂ. ಎ. ಪದವೀಧರರೂ ಆಗಿದ್ದಾರೆ. ಹಾಗೂ ಅವರು ಈಗ ನಾಲ್ಕನೇ ದರ್ಜೆಯ ನೌಕರರಾಗಿ ಕೆಲಸ ಮಾಡುತ್ತಿದ್ದಾರೆ. [illegible] ಸೆಕ್ಷನ್‌ಗೆ, ಪರ್ಸನಲ್ ಆಫೀಸರ್ ಹುದ್ದೆಗೆ ಇಸ್ಸು ಮುಂತಾದ ಬೇರೆ ಹುದ್ದೆಗಳಿಗೆ ಪ್ರಮೋಷನ್ ಕೊಡಿ ಎಂದು ಕೇಳಿಕೊಂಡಿದ್ದಾರೆ. ಕಾರಣ ಅವರಲ್ಲಿ ಸರಿಯಾದಂತಹ ವಿದ್ಯಾರ್ಹತೆಗಳು ಇವೆ. ಆದರೆ ಅವರಿಗೆ ಇದುವರೆವಿಗೂ ಪ್ರಮೋಷನ್ ಕೊಟ್ಟಿಲ್ಲ. ಅದಕ್ಕೆ ಕಾರಣ, ಅವರು ಸೇರಿದಾಗ ಎಸ್.ಎಸ್.ಎಲ್.ಸಿ. ವಿದ್ಯಾರ್ಹತೆ ಇತ್ತು,

ಮತ್ತು ಅವರ ಸರ್ವೀಸ್ ರಿಜಿಸ್ಟರ್‌ನಲ್ಲಿ ಎಸ್‌ಎಸ್‌ಎಲ್‌ಸಿ ಎಂದು ದಾಖಲು ಆಗಿರುವುದರಿಂದ ಅವರಿಗೆ ಪ್ರಮೋಷನ್ ಕೊಡುವುದಕ್ಕೆ ಆಗುವುದಿಲ್ಲವೆಂದು ಕಾರಣ ಕೊಟ್ಟಿದ್ದಾರೆ. ಇದು ಸರಿಯೇ ? ಅವರು ಇತ್ತೀಚೆಗೆ ಎಂಬ ಮಾಡಿರುವುದನ್ನು ಮೇನೇಜ್‌ಮೆಂಟ್ ಅವರು ಲೆಕ್ಕಕ್ಕೆ ತೆಗೆದುಕೊಂಡಿಲ್ಲ.

ಶ್ರೀ ಎ. ಲಕ್ಷ್ಮೀಸಾಗರ್.—ಅವರ ಅಭಿಮಾನದ ವಿಚಾರದಲ್ಲಿ ನನಗೆ ಸಂಪೂರ್ಣ ಗೌರವ ಇದೆ. ಅಭಿಮಾನ ಇದೆ. ಅದನ್ನು ಅವರು ಹೇಳತಕ್ಕದ್ದು ನ್ಯಾಯ ಇದೆ. ಆದರೆ ಒಂದು ಮಾತನ್ನು ಅವರಿಗೆ ಹೇಳುವುದಕ್ಕೆ ಇಷ್ಟಪಡುತ್ತೇನೆ. ಮಾನ್ಯ ಸದಸ್ಯರು ಈಗ ಏನು ಹೇಳುತ್ತಿದ್ದಾರೆ ಅದಕ್ಕೂ ಹಾಗೂ ನನ್ನ ಇಲಾಖೆಗೂ ಏನು ಸಂಬಂಧ ?

ಶ್ರೀ ವೈ. ರಾಮಕೃಷ್ಣ.—ನಾನು ಆ ವಿಷಯಕ್ಕೇ ಬರುತ್ತಿದ್ದೇನೆ. ನಾನು ಶಾಸಕಾಂಗದ ಸ್ವಾಯತ್ತತೆಯ ಬಗ್ಗೆ ಹೇಳುವುದಕ್ಕೋಸ್ಕರ ಇದನ್ನೆಲ್ಲಾ ಹೇಳಬೇಕಾಯಿತು. ಇವೊತ್ತಿನ ದಿವಸ ಶಾಸಕಾಂಗದ ಸಮಿತಿಯವರು ನೇರವಾಗಿ ಕೋಪ್ ಫ್ಯಾಕ್ಟರಿಯವರಿಗೆ ನೋಟೀಸ್ ಕೊಡುವುದಕ್ಕೆ ಆಗುವುದಿಲ್ಲ. ಅದನ್ನು ಸರ್ಕಾರದ ಮೂಲಕ ಕೊಡಬೇಕಾಗುತ್ತದೆ. ಆದರೆ ಶಾಸಕಾಂಗ ಪ್ರತ್ಯೇಕವಾಗಿ ಇದ್ದಿದ್ದರೆ ಅವರ ಮೇಲೆ ನಾವು ಕ್ರಮ ಕೈಗೊಳ್ಳಬಹುದಿತ್ತು. ನಾವು ಈ ಬಗ್ಗೆ ಸರ್ಕಾರಕ್ಕೆ ಕಾಗದವನ್ನು ನಮ್ಮ ವಿಧಾನಮಂಡಲದ ಕಾರ್ಯದರ್ಶಿಗಳ ಮೂಲಕ ಬರೆದಿದ್ದರೂ ಇದುವರೆವಿಗೂ ಸರ್ಕಾರ ಅವರಿಗೆ ನೋಟೀಸ್ ಕೊಟ್ಟಿಲ್ಲ. ಮಾನ್ಯ ಮಂತ್ರಿಗಳು ವಿಧಾನಮಂಡಲವನ್ನು ಪ್ರತ್ಯೇಕ ಮಾಡುವ ಬಗ್ಗೆ ಏನು ಭರವಸೆಯನ್ನು ಸದನದಲ್ಲಿ ಕೊಟ್ಟಿದ್ದಾರೆ ಎಂಬ ಬಗ್ಗೆ ನನ್ನಲ್ಲಿ ವರದಿ ಇದೆ. ಅದನ್ನು ನಾನು ಓದುತ್ತೇನೆ. ಇದರಲ್ಲಿ ೧೧ ಸಾರಿ ಅದನ್ನು ರಿಪೀಟ್ ಮಾಡಿದ್ದಾರೆ. ಇವರು ಹೇಳುವುದು ಒಂದು, ಮಾಡುವುದು ಒಂದು. ಈ ಪ್ರೊಸೀಡಿಂಗ್ಸ್ ಓದಿದರೆ ತಾವು ತಲೆ ತಗ್ಗಿಸಬೇಕಾಗುತ್ತದೆ.

ಶ್ರೀ ಎಂ. ವೀರಪ್ಪ ಮೊಯಿಲಿ.—ಅದಕ್ಕೆ ಅವರು ತಲೆ ಬೋಳಿಸಿಕೊಂಡಿದ್ದಾರೆ.

ಶ್ರೀ ವೈ. ರಾಮಕೃಷ್ಣ.—ನಾನು ಈಗ ದಿನಾಂಕ ೩೧-೮-೧೯೮೩ರ ಈ ಸಭೆಯ ನಡವಳಿಕೆಗಳನ್ನು ಓದಿ ತಿಳಿಸಲಿಕ್ಕೆ ಇಷ್ಟಪಡುತ್ತೇನೆ.

"ಶ್ರೀ ಎ. ಲಕ್ಷ್ಮೀಸಾಗರ್.—ನಮ್ಮ ಶಾಸಕಾಂಗವು ಕಾರ್ಯಾಂಗದಿಂದ ಪ್ರತ್ಯೇಕ ಆಗಬೇಕೆಂದು ಬಹಳ ದಿವಸಗಳಿಂದ ಒತ್ತಾಯ ಬರುತ್ತಿದೆ. ಆದರೆ ಈ ವಿಷಯವನ್ನು ಈ ಮನೆಯಲ್ಲಿ ಬಹಿರಂಗವಾಗಿ ಪ್ರಸ್ತಾಪ ಮಾಡುವುದು ಬೇಡವೆಂದು ಹಿಂದೆ ತೀರ್ಮಾನವಾಗಿತ್ತು. ಮಾಜಿ ಕಾನೂನು ಮಂತ್ರಿಗಳಿಬ್ಬರೂ ಇಲ್ಲೇ ಇದ್ದಾರೆ. ಇದನ್ನು ಲೆಕ್ಕಕ್ಕೆ ತೆಗೆದುಕೊಂಡು ಈ ವರ್ಷ ಮೇ ತಿಂಗಳಿನಲ್ಲಿ ಇದು ಪ್ರತ್ಯೇಕವಾಗಬೇಕೆಂದು ನಾವು ಕ್ಯಾಬಿನೆಟ್ ತೀರ್ಮಾನವನ್ನು ತೆಗೆದುಕೊಂಡಿದ್ದೇವೆ. ಆದುದರಿಂದ, ಈ ವಿಚಾರದಲ್ಲಿ ನಾವು ಹಿಂದಕ್ಕೆ ಹೋಗತಕ್ಕ ಪ್ರಶ್ನೆಯೇ ಇಲ್ಲ. ಹಾಗಾದರೆ ನೀವು ಅಧಿಕಾರಕ್ಕೆ ಬಂದು ೬ ತಿಂಗಳಾದರೂ ಇನ್ನೂ ಏಕೆ ಸುಮ್ಮನಿದ್ದೀರೆಂದು ಕೇಳುವುದಿಲ್ಲ. ಎವಿಡೆನ್ಸ್ ಆಕ್ಟ್ ರೂಲ್ ೧೧೨ರ ಪ್ರಕಾರ ಒಂದು ಮಗ ಹುಟ್ಟಬೇಕಾದರೂ ೨೮೦ ದಿನಗಳು ಬೇಕು."

ಶ್ರೀ ಕೆ. ಹೆಚ್. ರಂಗನಾಥ್.—ಏನು ಸ್ವಾಮಿ. ಇದು, ಮಕ್ಕಳೆಲ್ಲಾ ಎವಿಡೆನ್ಸ್ ಆಕ್ಟ್ ಪ್ರಕಾರ ಹುಟ್ಟುತ್ತಾ ಹೋದರೆ ನಮ್ಮ ನಿಮ್ಮ ಪ್ರಶ್ನೆ ಎಲ್ಲಿದೆ

ಶ್ರೀ ವೈ. ರಾಮಕೃಷ್ಣ.—ಹಾಗೆ ಮುಂದೆ ಏನು ಹೇಳಿದ್ದಾರೆ ಅಂದರೆ,

"ಈ ಬಗ್ಗೆ ೩೫ ವರ್ಷಗಳಿಂದ ಆಗದೇ ಇದ್ದುದನ್ನು ನಾವು ಇದೇ ಮೇ ತಿಂಗಳಲ್ಲಿ ತೀರ್ಮಾನವನ್ನು ತೆಗೆದುಕೊಂಡಿದ್ದೇವೆ."

ಎಂದು ಹೇಳಿದ್ದಾರೆ. ಇದು ಯಾವ ತಿಂಗಳು ಸ್ವಾಮಿ. ಮಾರ್ಚಿ ತಿಂಗಳು ಆಗಿದೆ. ನಿಮ್ಮನ್ನು ಏನೆಂದು ಕರೆಯಬೇಕು ನೀವೇ ಹೇಳಿ ? ಇನ್ನು ಎರಡು ತಿಂಗಳು ಕಳೆದರೆ ಒಂದು ವರ್ಷವಾಗುತ್ತದೆ. ನೀವು ಹೇಳುವುದು ಏನು, ಮಾಡುವುದು ಏನು ! ಪ್ರೊಸೀಡಿಂಗ್ಸ್‌ನಲ್ಲಿ ಮಾನ್ಯ ಲಕ್ಷ್ಮೀಸಾಗರ್ ಅವರು ಏನು ಹೇಳಿದ್ದಾರೆ ಎಂದರೆ ;

"ಇನ್ನು ಈ ವಿಧಾನ ಮಂಡಲಕ್ಕೆ ೨೦ ಕೋಟಿ ರೂಪಾಯಿಗಳನ್ನು ಖರ್ಚುಮಾಡುತ್ತಿದ್ದೀರಿ ಎಂದು ಮಾನ್ಯ ಸದಸ್ಯರಾದ ರಂಗನಾಥ್‌ರವರು ಹೇಳಿದರು. ಎಂದು ಹೇಳಿದ್ದಾರೆ,

ಶ್ರೀ ಕೆ. ಹೆಚ್. ರಂಗನಾಥ್.—ನೀವು ಹೇಳಿದ್ದೀರಿ ಎಂದು ನಾನು ಹೇಳಲಿಲ್ಲ

ಶ್ರೀ ಎ. ಲಕ್ಷ್ಮೀಸಾಗರ್.—ಈ ಇಲಾಖೆಗೆ ಎಷ್ಟು ಹಣ ಬೇಕಾಗುತ್ತದೆ ಎಂಬ ಬಗ್ಗೆ ಒಂದು ಬೇಡಿಕೆ ಸಭೆಯ ಮುಂದೆ ಇದೆ. ಅದರ ಬಗ್ಗೆ ನಾನು ಈಗ ಮಾತನಾಡುವುದಿಲ್ಲ. ಅವರಿಗೆ ಸ್ವಾತಂತ್ರ್ಯ ಬೇಕು. ತಮ್ಮ ಚೌಕಟ್ಟಿನಲ್ಲಿ ಕೆಲಸ ಮಾಡುವುದಕ್ಕೆ ಅವರಿಗೆ ಸ್ವಾತಂತ್ರ್ಯ ಬೇಕೆಂದು ನಾವು ನಿರ್ಣಯವನ್ನು ತೆಗೆದುಕೊಂಡಿದ್ದೇವೆ. ಇದಕ್ಕೆ ಸಂಬಂಧಪಟ್ಟ ವಿವರಗಳನ್ನೆಲ್ಲಾ ಯೋಜನೆ ಮಾಡಿ ಇದನ್ನು ಪೂರ್ಣವಾಗಿ ಜಾರಿಗೆ ತರುವುದಕ್ಕೆ ಪ್ರಯತ್ನ ಮಾಡುತ್ತೇವೆ. ಅನಂತರ,

SRI K. H. RANGANATH.—It has appeared in the Press in a very big caption "Legislature Secretariat made independent." : Announcing this major decision taken up at the Cabinet meeting today, the Information Minister Mr. Raghupathy told newsmen that Legislature Secretariat should now come under a Board consisting of Speaker of the Assembly and Chairman of the Council and the Legislature Secretary. He said, the Secretariat would continue to get Rs. 20 crores annually for its adminstration." ೨೦ ಕೋಟಿ ರೂಪಾಯಿಗಳು ಏನಾಯಿತು? ಇಂಡಿಪೆಂಡೆಂಟ್ ಏನಾಯಿತು? ಪ್ರೊಸೀಡಿಂಗ್ಸ್ ಏನಾಯಿತು? ಇವೆಲ್ಲ ಕಟ್ಟು ಕತೆಗಳೆ?, ನಾವು ಗುಗ್ಗುಗಳೆ, ಇದನ್ನು ಪ್ರಿವಿಲೇಜ್‌ಗೆ ಏತಕ್ಕೆ ಹಾಕಬಾರದು? ಅಷ್ಟೊಂದು ಸುಳ್ಳು ಹೇಳಿದ್ದೇನೆಂದು ತಲೆ ಅಲ್ಲಾಡಿಸುತ್ತಿದ್ದೀರಿ. you are enjoying. This is very bad. ಸ್ವಾಮಿ, ನಾನು ಇವೊತ್ತಿನ ದಿವಸ ಸ್ಪೆಸಿಫಿಕ್ ಆಗಿ ಕೇಳುತ್ತಿದ್ದೇನೆ. ಶಾಸಕಾಂಗದ ಕಾರ್ಯಾಲಯಗಳನ್ನು ಸ್ವತಂತ್ರವಾಗಿ ಮಾಡತಕ್ಕದ್ದಕ್ಕೆ ಸರ್ಕಾರಕ್ಕೆ ಇಚ್ಛೆ ಇದೆಯೇ? ಕ್ಯಾಬಿನೆಟ್ ಡಿಸಿಷನ್ ತೆಗೆದುಕೊಂಡಿದ್ದೇವೆಂದು ಹೇಳಿದ್ದೀರಿ, ಡಿಸಿಷನ್ ತೆಗೆದುಕೊಂಡು ೧೦ ತಿಂಗಳಾದರೂ ಕೂಡ ಇದರ ಬಗ್ಗೆ ಮೌನವಾಗಿದ್ದೀರಲ್ಲ ಏತಕ್ಕೆ? ಸುಮಾರು ಒಂದು ವಾರದ ಹಿಂದೆ ತಮಗೂ ಮತ್ತು ಮೇಲ್ಮನೆಯ ಸಭಾಪತಿಗಳಿಗೂ ನಡೆದಂಥ ವಾದ ವಿವಾದ ಪೇಪರ್‌ನಲ್ಲಿ ಬಂದಿದೆ. ಅದರ ಬಗ್ಗೆ Take the House into confidence. ಏನು ನಡೆದಿದೆ ಹೇಳಿ? We are also part and parcel. ನಮಗೂ ಆಸೆ ಇದೆ. ತಮಿಳುನಾಡಿನಲ್ಲಿ ಸೆಕ್ರೆಟರಿಯವರಿಗೆ ಈಗಾಗಲೇ ಡೆಸಿಗ್ನೇಷನ್ ಚೇಂಜ್ ಮಾಡಿ ಕಮಿಷನರ್ ಕಮ್ ಸೆಕ್ರೆಟರಿ, ತಮಿಳುನಾಡು ಅಸೆಂಬ್ಲಿ ಎಂದು ಫುಲ್ ಡೆಸಿಗ್ನೇಷನ್ ಕೊಟ್ಟಿದ್ದಾರೆ. ವೇತನವನ್ನು ಅದೇ ಶ್ರೇಣಿಗೆ ಏರಿಸಿದ್ದಾರೆ ಅಧಿಕಾರ ಕೊಟ್ಟಿದ್ದಾರೆ. They made it independent. ನಮ್ಮಲ್ಲಿ ಏನಾಗಿದೆ? ನಾನು ಇದ್ದಾಗ ಸರಿ ಇತ್ತು ಎಂದು ಅಲ್ಲ. ಅಡ್ಡಿ ಅಡಚಣೆಗಳು ನನ್ನ ಕಾಲದಲ್ಲಿ ಏನು ಇತ್ತು, ಅದೇ ಅಡ್ಡಿ ಅಡಚಣೆಗಳು ನಿಮ್ಮ ಕಾಲದಲ್ಲಿಯೂ ಮುಂದುವರಿಯುತ್ತಿವೆ.

ಶ್ರೀ ಕೆ. ಜಿ. ಮಹೇಶ್ವರಪ್ಪ.—ಮಾನ್ಯ ಸ್ಪೀಕರ್ ಜೊತೆ ಸಮಾಲೋಚನೆ ಮಾಡಿ ಮಾಡುತ್ತಿದ್ದಾರೆ.

ಶ್ರೀ ಎ. ಲಕ್ಷ್ಮೀಸಾಗರ್.—ರೂಲ್ಸ್ ಮಾಡುತ್ತಿದ್ದೇವೆ.

ಶ್ರೀ ವೈ. ರಾಮಕೃಷ್ಣ.—ರೂಲ್ಸ್ ಮಾಡಲಿಕ್ಕೆ ಎಷ್ಟು ದಿವಸ ಬೇಕು? ಕ್ಯಾಬಿನೆಟ್ ಡಿಸಿಷನ್ ಆಗಿ ಎಷ್ಟು ದಿವಸ ಆಯಿತು? ಕೇರಳದಲ್ಲಿರತಕ್ಕ ಪ್ಯಾಟರನ್ ಮಾಡುತ್ತೀರಾ? ಮದ್ರಾಸ್‌ನಲ್ಲಿರತಕ್ಕ ಪ್ಯಾಟರನ್ ಮಾಡುತ್ತೀರಾ? ಇನ್ನು ಎಷ್ಟು ದಿವಸ ಬೇಕು ಇದಕ್ಕೆ ಬಜೆಟ್‌ನಲ್ಲಿ ಎಷ್ಟು ಹಣ ತೆಗೆದುಕೊಂಡಿದ್ದೀರಿ. ಮಾನ್ಯ ಮಂತ್ರಿಗಳು ಸ್ವಲ್ಪ ಜೋರಾಗಿ ಹೇಳಿದರು ರೆಕಾರ್ಡ್‌ಗೆ ಹೋಗಲಿ ತೊಂದರೆಗಳು ಇದ್ದರೆ ಹೇಳಿ, ಅಂತಹ ತೊಂದರೆಗಳೇನು ನನಗೆ ಕಾಣುತ್ತಿಲ್ಲ. ಕಾನ್‌ಸ್ಟಿಟ್ಯೂಷನ್ ಆರ್ಟಿಕಲ್ ೧೮೭ರ ಪ್ರಕಾರ ಹೇಳುವುದಾದರೆ...

ಶ್ರೀ ಅಬ್ದುಲ್ ನಜೀರ್ ಸಾಬ್.—ಅದು ಮೊದಲಿನಿಂದಲೂ ಹಾಗೆಯೇ ಇದೆ.

ಶ್ರೀ ಕೆ. ಎಚ್. ರಂಗನಾಥ್.—ಸ್ವಾಮಿ, ಕೆಲವು ವಿಷಯಗಳನ್ನು ಹೇಳುವುದು ಸರಿ ಆಗದೆ ಇದ್ದರೂ. ಇವೊತ್ತು ಸದಸ್ಯರಾಗಿ ವಿಚಾರ ಹೇಳಲಿಕ್ಕೆ ಸ್ವಲ್ಪ ಸ್ವತಂತ್ರ ಬರುತ್ತದೆ. ನಾನು ಹಿಂದೆ ಸ್ಪೀಕರ್ ಆಗಿದ್ದೆ ಈಗಿರತಕ್ಕ ಛೇರ್‌ಮನ್‌ರು ಆಗಿದ್ದ ಬೋರ್ಡ್‌ನಲ್ಲಿ ಛೇರಮನ್‌ರಾಗಿದ್ದರು. ಮದ್ರಾಸ್, ಕೇರಳದಷ್ಟು ನಾವು ಮುಂದೆ ಹೋಗದಿದ್ದರೂ, ಆ ರೀತಿ ಒಪ್ಪಿಗೆ ಮಾಡಿ ಸರ್ಕಾರಕ್ಕೆ

ಕಳುಹಿಸಿದ್ದು ಸರ್ಕಾರದ ಮುಂದೆ ಇದೆ. ಅದರಲ್ಲಿ ಒಂದೆರಡು ಮೂರು ಅಂಶಗಳು ಒಪ್ಪಿಗೆ ಆಗದಿದ್ದರೆ ಅವನ್ನು ಬಿಟ್ಟುಬಿಟ್ಟು ಮಾಡಿ. ಇದರ ಬಗ್ಗೆ ಬೋರ್ಡ್ ಡಿಸಿಷನ್ ತೆಗೆದುಕೊಂಡಿಲ್ಲವೇನು? ಅದು ಈಗ ಕ್ಯಾಬಿನೆಟ್ ಮುಂದೆ ಬಂದಿದೆ. ಗವರ್ನರ್‌ಗೆ ಕಳುಹಿಸಿದ್ದೀರೋ ಏನೋ ಗೊತ್ತಿಲ್ಲ. ನಾವು ಅದನ್ನು ಮಾಡುವಾಗ ಲಾ ಸೆಕ್ರೆಟರಿಯನ್ನು ಕರೆಯಿಸಿ ಮಾತನಾಡಿದ್ದೆವು. ತಾವು ಕೂಡ ಇಲ್ಲಿ ಅದು ಆಗಬೇಕೆಂದು ಭಾಷಣ ಮಾಡಿದ್ದೀರಿ. ಈಗ ಇಲ್ಲಿರತಕ್ಕ ಮಂತ್ರಿಗಳು ಹೆಚ್ಚು ಹೇಳಿದ್ದಾರೆ. ನನಗೆ ಇಲ್ಲೇ ಕುಳಿತು ನೀವು ಸಹಕಾರ ಮಾಡುವುದಿಲ್ಲ ಎಂದು ಹೇಳಿದ್ದಾರೆ. ಮಾನ್ಯ ರಘುಪತಿಯವರು ಮೇಲ್ಮನೆಯಲ್ಲಿ ಇವರು ಇರುವವರೆಗೂ ಆಗುವುದಿಲ್ಲ ಎಂದು ನನ್ನ ಮೇಲೆ ಅಪಾದನೆ ಮಾಡಿದರು. ನಾನು ಸ್ಪೀಕರ್ ಆಗಿದ್ದಾಗ We have taken a desision and we have submitted it to the Government. ನಾವು ಕಳುಹಿಸಿಕೊಟ್ಟೆವು. ಬದಲಾವಣೆ ಮಾಡುವುದಾದರೆ, ಬದಲಾವಣೆ ಮಾಡಿ, ಅದನ್ನಾದರೂ ಮಾಡಿ. ಸುಮ್ಮನೆ ಕಥೆ ಹೇಳುತ್ತಾ ಕುಳಿತರೆ ಆಗುತ್ತದೆಯೇ, ಮಾನ್ಯ ಮಹೇಶ್ವರಪ್ಪನವರಿಗೆ ಏನು ಗೊತ್ತು.

ಶ್ರೀ ಕೆ. ಜಿ. ಮಹೇಶ್ವರಪ್ಪ.—ಕಾನ್‌ಸ್ಟಿಟ್ಯೂಷನ್ ಓದಿ.

ಶ್ರೀ ಕೆ.ಹೆಚ್. ರಂಗನಾಥ್.—ನಾನು ಸ್ಪೀಕರ್ ಆಗಿದ್ದಾಗ ಕಾನ್‌ಸ್ಟಿಟ್ಯೂಷನ್ ಓದಿದೆ, ಲ್ಯಾಂಡ್ ರೆವಿನ್ಯೂ ಕೋಡ್ ಓದಿದ್ದೇನೆ ?

4–00 P.M.

ಶ್ರೀ ಕೆ. ಎಚ್. ರಂಗನಾಥ್.—ನೀವು ಮನಸ್ಸು ಮಾಡಬೇಕು ಅಷ್ಟೆ.

ಶ್ರೀ ಅಬ್ದುಲ್ ನಜೀರ್ ಸಾಬ್.—ಮಾಡಿದ್ದೇವೆ.

ಶ್ರೀ ಕೆ. ಎಚ್. ರಂಗನಾಥ್.—ಈ ರೀತಿಯಾಗಿ ತಾವು ಮಾಡಿಲ್ಲ. ಇವತ್ತಿನ ದಿವಸ ನಮ್ಮ ಲೆಜಿಸ್ಲೇಚರ್ ಸೆಕ್ರಟರಿಯೇಟ್‌ಗೆ ಏನು ಅಧಿಕಾರವಿದೆ? ಪೋಸ್ಟ್ ಕ್ರಿಯೇಟ್ ಮಾಡುವುದಕ್ಕೆ ಅಧಿಕಾರ ಇದೆಯೇ? ಯಾವುದೇ ದರ್ಜೆಯ ನೌಕರನನ್ನು ತೆಗೆದುಕೊಳ್ಳುವುದಕ್ಕೆ ಅಧಿಕಾರವಿದೆಯೇ? ಸಂಬಳವನ್ನು ಹೆಚ್ಚು ಮಾಡುವುದಕ್ಕೆ ಅಧಿಕಾರ ಏನಿದೆ? ಯಾವುದಾದರೂ ಕಮಿಟಿಯವರು ಟೂರ್ ಹೋಗಬೇಕಾಗಿದ್ದರೂ ಸಹ ಲಾ ಸೆಕ್ರಟರಿಯವರಿಗೆ ಹೋಗಿ ಒಪ್ಪಿಗೆಯಾಗಿ ಬಂದ ಮೇಲೆ ಸ್ಪೀಕರ್‌ರವರಿಗೆ ಸಹಿಗೆ ಬರುತ್ತದೆ.

ವೈಸ್ ಚೇರ್ಮನ್.—ಟೂರ್ ಹೋಗತಕ್ಕದ್ದಕ್ಕೆಲ್ಲಾ ಪವರ್ ಇದೆ.

ಶ್ರೀ ಕೆ. ಎಚ್. ರಂಗನಾಥ್.—ನೀವು ಬೇರೆ ರಾಜ್ಯಗಳಲ್ಲಿ ಮಾಡಿರುವಷ್ಟು ಮಾಡುವುದಕ್ಕೆ ಆಗದಿದ್ದರೂ ಸಹ ನಾವು ಹಿಂದೆ ಏನು ಮಾಡಿ ಇಟ್ಟಿದ್ದೇವೆ ಅಷ್ಟನ್ನಾದರೂ ತಕ್ಷಣವೇ ಮಾಡಿ, ಅಷ್ಟನ್ನು ಮಾಡುವುದಕ್ಕೆ ಎಷ್ಟು ದಿವಸ ಬೇಕು ಸ್ವಾಮಿ?

ಶ್ರೀ ವೈ. ರಾಮಕೃಷ್ಣ.—ನೀವು ಸಹ ಕಷ್ಟದಲ್ಲಿ ಇದ್ದೀರಿ ಇಲ್ಲವೆಂದು ಹೇಳುತ್ತಿಲ್ಲ. ನಾನು ಸಹ ಆ ಜಾಗದಲ್ಲಿ ಕುಳಿತುಕೊಂಡಿದ್ದಾಗ ತಲೆ ಕೆಡಿಸಿಕೊಂಡಿದ್ದೇವೆ. ಸಂವಿಧಾನದ ಆರ್ಟಿಕಲ್ ೧೮೭(೩)ರಲ್ಲಿ ಏನು ಹೇಳುತ್ತದೆ ಎಂದರೆ.

> "Until provision is made by the Legislature of the State under clause (2), the Governor may, after consuasation with the Speaker to the Legislative Assembly or the Chairman of the Legislative Council, as the case may be,——"

ಶ್ರೀ ಕೆ.ಎಚ್. ರಂಗನಾಥ್.—ಹೀಗಾದರೆ ನಾವು ನಾನ್ ಆಫಿಶಿಯಲ್ ಬಿಲ್‌ನ್ನು ಇಂಟ್ರಡ್ಯೂಸ್ ಮಾಡಬೇಕಾಗುತ್ತದೆ. ಅಲ್ಲಿಗೆ ಪರಿಸ್ಥಿತಿ ಬರುತ್ತದೆ. ಆಗ ಸರಿಹೋಗುತ್ತದೆ. ಎಲ್ಲರ ಬೇಳೆಕಾಳೂ ಬೇಯುತ್ತದೆ, ಬಣ್ಣನೂ ಈಚೆಗೆ ಬರುತ್ತದೆ.

ಶ್ರೀ ವೈ. ರಾಮಕೃಷ್ಣ.—ರೂಲ್ಸ್‌ನ್ನು ಫ್ರೇಮ್ ಮಾಡಿ? ಒಂದು ವೇಳೆ ರೂಲ್ಸ್‌ನ್ನು ಫ್ರೇಮ್ ಮಾಡುವುದಕ್ಕೆ ಆಗುವುದಿಲ್ಲವೆಂದರೆ, ಹೇಗೆ? ಸಂವಿಧಾನದಲ್ಲಿ ಹೇಳಿದಂತೆ,——

"—make rules regulating the recruitment, and the conditions of service of persons appointed to the Secretarial staff of the Assembly or the Council, and any rules so made shall have effect subject to the provisions of any law made under the said clause."

ನೀವು ರೂಲ್ಸ್ ಮಾಡಿಕೊಂಡು ಸದನದಲ್ಲಿ ತೆಗೆದುಕೊಂಡು ಬನ್ನಿ. ತಾವು ಮೇ ತಿಂಗಳಿನಲ್ಲಿಯೇ ಇದರ ಬಗ್ಗೆ ಡಿಸಿಷನ್ ತೆಗೆದುಕೊಂಡಿದ್ದೇವೆಂದು ಹೇಳಿದ್ದೀರಿ ಆದರೆ ಇಲ್ಲಿಯವರೆಗೂ ಅದರ ಬಗ್ಗೆ ಆರ್ಡರ್ ಹೊರಡಲಿಲ್ಲ ಏತಕ್ಕೆ ? ಒಂದು ವೇಳೆ ನಾವು ಇಲ್ಲಿ ಏನಾದರೂ ಸಲಹೆ ಕೊಟ್ಟರೆ ಅದನ್ನು ಏತಕ್ಕೆ ತೆಗೆದುಕೊಳ್ಳಬಾರದು ? ಲೋಕಸಭೆಯಲ್ಲಿ ಯಾವ ರೀತಿಯಾಗಿ ಕೆಲಸ ಮಾಡುತ್ತಿದ್ದಾರೆ ಎಂಬುದನ್ನು ನೋಡಿ ಅಲ್ಲಿ ಒಂದು ಕನ್‌ವೆನ್‌ಷನ್ ತರಹ ಮಾಡಿಕೊಂಡಿದ್ದಾರೆ. We are prepared to accept that convention provided you prepare three Financial Committees. The Central Legislature formulate its own budget proposals. ನೀವು ಆ ರೀತಿಯಾಗಿ ಇಲ್ಲಿ ಮಾಡದೇ ಇರುವುದರಿಂದ...... we are compelled to speak since such a Board has not been constituted here. ಈಗ ನನಗೆ ತಿಳಿದು ಬಂದ ವಿಷಯದ ಪ್ರಕಾರ ಇವರು ಏನು ಮಾಡುವುದಕ್ಕೆ ಹೊರಟಿದ್ದಾರೆ ಎಂದರೆ ನಾವು ಗಣೇಶನನ್ನು ಮಾಡಬೇಕೆಂದು ಹೇಳಿದರೆ, ಗಣೇಶನನ್ನು ಮಾಡುವುದಕ್ಕೆ ತಡವಾಗುತ್ತದೆ ಆದುದರಿಂದ ಅದರ ಬದಲು ಶಿವಲಿಂಗ ಮಾಡಿ ಬಿಡೋಣವೆಂದು ಮಾಡಿಬಿಟ್ಟ ಹಾಗೆ ಕಾಣುತ್ತದೆ. ಇಲ್ಲದೇ ಹೋಗಿದ್ದರೆ ಕೌನ್ಸಿಲ್‌ನ ಛೇರ್ಮನ್‌ರವರಿಗೂ ಮತ್ತು ಮಂತ್ರಿಗಳಿಗೂ ಒಂದು ರೀತಿಯ ವಾಗ್ಯುದ್ಧ ಆಗುವುದಕ್ಕೆ ಅವಕಾಶವಾಗುತ್ತಿರಲಿಲ್ಲ. ಅದನ್ನು ಅವಾಯ್ಡ್ ಮಾಡಬೇಕಾಗಿದೆ. ರಾಜ್ಯಾಂಗ ದತ್ತವಾಗಿರುವ ಪ್ರಕಾರ...Why do you want to violate the Constitutional Provision ? The words "after consultation" are most important. Why can't you consult before making rules; and before sending it to the Governor ?

ಶ್ರೀ ಕೆ.ಜಿ. ಮಹೇಶ್ವರಪ್ಪ.—ಅದನ್ನು ನಾವು ಮಾಡಿದ್ದೇವೆ.

ಶ್ರೀ ವೈ. ರಾಮಕೃಷ್ಣ.—ಸುಮ್ಮನೇ ಏತಕ್ಕೆ ನೀವು ಮಾತನಾಡುತ್ತೀರಿ ? ಇದು ಎಲ್ಲರಿಗೂ ಸಂಬಂಧಪಟ್ಟ ವಿಚಾರವಾಗಿದೆ. ಅದಕ್ಕೋಸ್ಕರವಾಗಿ ನಾನು ಹೇಳುತ್ತಿದ್ದೇನೆ. ಕಾನೂನು ಬದ್ಧವಾಗಿ ರಾಜ್ಯಾಂಗ ಬದ್ಧವಾಗಿ ಆರ್ಟಿಕಲ್ ೧೮೭ರಲ್ಲಿ ಏನು ಇದೆ ಅದರ ಪ್ರಕಾರವಾಗಿ ರೂಲ್ಸ್ ಮಾಡುತ್ತೇವೆಂದು ಕೆಟಗಾರಿಕಲ್ ಆಗಿ ರಿಪ್ಲೈ ಕೊಡುವಾಗ ಹೇಳಿ. ಇಲ್ಲದಿದ್ದರೆ ನಾವೇ ತರುತ್ತೇವೆ ಅದಕ್ಕೆ ತಾವು ಒಪ್ಪುತ್ತೀರಾ ? ನಿಮಗೆ ಆ ಶಕ್ತಿ ಸಾಮರ್ಥ್ಯವಿಲ್ಲದಿದ್ದರೆ ಹೇಳಿ ನಾವೇನೇ ಮುಂದಿನ ಅಧಿವೇಶನದಲ್ಲಿ ತೆಗೆದುಕೊಂಡು ಬರುತ್ತೇವೆ, ಅದಕ್ಕೆ ತಾವು ಒಪ್ಪಿಕೊಳ್ಳುವುದಕ್ಕೆ ತಯಾರಾಗಿದ್ದೀರಾ ?

ಶ್ರೀ ಎ. ಲಕ್ಷ್ಮೀಸಾಗರ್.—೩ ವರ್ಷ ನೀವು ಕಾನೂನು ಮಂತ್ರಿಯಾಗಿದ್ದೀರಿ ಆಗ ಮಾಡಲಿಲ್ಲ !

ಶ್ರೀ ವೈ. ರಾಮಕೃಷ್ಣ.—ನಾವು ಕ್ಯಾಬಿನೆಟ್‌ನಲ್ಲಿ ಈ ರೀತಿಯಾದ ಡಿಸಿಷನ್ ತೆಗೆದುಕೊಂಡು ಮಾಡುತ್ತೇವೆಂದು ಹೇಳಿರಲಿಲ್ಲ. ಪರಿಶೀಲಿಸಿ ಮಾಡುತ್ತೇವೆಂದು ಹೇಳಿದ್ದೇವೆಯೇ ಹೊರತು ನಿಮ್ಮ ಹಾಗೆ ಹೇಳಿರಲಿಲ್ಲ. ಬೇಕಾದರೆ ಪ್ರೊಸೀಡಿಂಗ್ಸ್ ತೆಗೆದು ನೋಡಿ ಗೊತ್ತಾಗುತ್ತದೆ. ಅದಕ್ಕೋಸ್ಕರ ನೀವು ನಿಮ್ಮ ಅದಕ್ಷತೆಯನ್ನು ಪ್ರದರ್ಶನ ಮಾಡುವುದಕ್ಕಿಂತ ಮುಂಚಿತವಾಗಿ ಇದನ್ನು ಕಾರ್ಯಗತ ಮಾಡಿ ಮುಗಿಸಿ ಎಂದು ಹೇಳುತ್ತೇನೆ.

ಶ್ರೀ ಎ. ಲಕ್ಷ್ಮೀಸಾಗರ್.—ಮಾನ್ಯ ಶ್ರೀ ರಂಗನಾಥ್‌ರವರು ಈ ಸಭೆಯ ಅಧ್ಯಕ್ಷರಾಗಿದ್ದಾಗ ನಾವು ಹಲವಾರು ಸಾರಿ ಈ ವಿಷಯವನ್ನು ಪ್ರಸ್ತಾಪ ಮಾಡುವುದಕ್ಕೆ ಪ್ರಯತ್ನ ಮಾಡಿದೆ. ಅದಕ್ಕೆ ಅವರು ಸಲಹೆ ಕೊಟ್ಟರು, ಈ ಲೆಜಿಸ್ಲೇಚರ್ ಸೆಕ್ರೆಟೆರಿಯೇಟ್‌ನ ವಿಚಾರದಲ್ಲಿ ಈ ಸಭೆಯಲ್ಲಿ ಚರ್ಚೆ ಮಾಡುವುದು ಅಷ್ಟು ಸೂಕ್ತವಲ್ಲವೆಂದು ನಾನು ಮೊದಲನೆಯ ಸಲ ಈ ರೀತಿ ಸದನದಲ್ಲಿ ಪ್ರಸ್ತಾಪ ಮಾಡಿ ತಪ್ಪು ಮಾಡಿದೆ ಎಂದು ತಿಳಿದುಕೊಂಡು ಅನಂತರದ ಸಮಯದಲ್ಲಿ ಎಲ್ಲಾ ಸುಮ್ಮನೇ ಅಷ್ಟು ವಿಷಯ

ಹೇಳಿ ಬಿಡತಕ್ಕ ಸಂಪ್ರದಾಯವನ್ನು ಹಾಕಿಕೊಂಡು ಬಂದೆ. ಆದರೆ ಈ ದಿನ ಅದರ ಬಗ್ಗೆ ವಿಪುಲವಾಗಿ ಚರ್ಚೆ ಮಾಡುತ್ತಿದ್ದಾರೆ. ಅನಂತರ ಶ್ರೀ ರಾಮಕೃಷ್ಣರವರು ಮಾತನಾಡುತ್ತಾ ಸುಳ್ಳು ಎನ್ನುವ ಪದವನ್ನು ಹೇಳಿದರು.

ಶ್ರೀ ವೈ. ರಾಮಕೃಷ್ಣ.—ಸುಳ್ಳು ಎಂದು ಹೇಳಲಿಲ್ಲ, ಹೇಳಿದ್ದರೆ ಅದು ಸತ್ಯಕ್ಕೆ ದೂರವಾದ ಮಾತು ಎಂದು ಮಾಡಿಕೊಳ್ಳಿ ಅಷ್ಟೆ.

ಶ್ರೀ ಎ. ಲಕ್ಷ್ಮೀಸಾಗರ್.—ಪದಗಳನ್ನು ಬಳಸತಕ್ಕ ಸಮಯದಲ್ಲಿ, ಭಾಷೆಯನ್ನು ಉಪಯೋಗ ಮಾಡತಕ್ಕ ಸಮಯದಲ್ಲಿ ಮತ್ತು ಇಲ್ಲಿ ಕೆಲವೊಂದು ವಿಷಯಗಳನ್ನು ಹೇಳುವಾಗ ಅದನ್ನು ಸಾಬೀತು ಮಾಡತಕ್ಕ ಸನ್ನಿವೇಶ ಇದ್ದಾಗ ಅದನ್ನು ಉಪಯೋಗಿಸಿದರೆ ಚೆನ್ನಾಗಿರುತ್ತದೆ. ಆದುದರಿಂದ ಅವರು ಅಧಿಕಾರವಾಣಿಯಿಂದ ಮಾತನಾಡುವಾಗ ಇದನ್ನು ತಿದ್ದಿಕೊಂಡು ಮಾತನಾಡಲಿಕ್ಕೆ ಅವರಿಗೆ ಅಪಾರವಾದ ಶಕ್ತಿ ಇದೆ.

ಶ್ರೀ ವೈ. ರಾಮಕೃಷ್ಣ.—ನಿಮ್ಮಷ್ಟು ಸರ್ವಜ್ಞ ನಾನಲ್ಲ. ನಿಮಗೆ ನಾವು ಸರ್ವಜ್ಞ ಎಂದೇ ಹೆಸರು ಕೊಟ್ಟಿದ್ದೇವೆ.

ಶ್ರೀ. ಎ. ಲಕ್ಷ್ಮೀಸಾಗರ್.—ಆದುದರಿಂದ ತಾವು ಇದರ ಬಗ್ಗೆ ವಿಫಲವಾಗಿ ಚರ್ಚೆ ಮಾಡಿದ್ದೀರಿ ಆ ಸಂಪ್ರದಾಯ ಎಲ್ಲಿಗೆ ಹೋಯಿತೋ ? ಇದರ ಬಗ್ಗೆ ತಾವೇ ಉತ್ತರ ಕೊಟ್ಟರೆ ಒಳ್ಳೆಯದೆಂದು ಮನವಿ ಮಾಡುತ್ತೇನೆ.

ಶ್ರೀ ಕೆ. ಎಚ್. ರಂಗನಾಥ್.—ನಾವು ಅಧ್ಯಕ್ಷನಾಗಿದ್ದಾಗ ಆ ಮಾತು ಹೇಳಿದ್ದೇನೆಂದು ಭಾವಿಸಿ ಕೊಂಡಿದ್ದೇನೆ. ದಿ. ವೈಕುಂಠ ಬಾಳಿಗಾರವರು ಇದ್ದಾಗ ಶ್ರೀ ಬಿ. ರಾಚಯ್ಯನವರು ಇಲ್ಲಿದ್ದರು, ಅವರು ನಮ್ಮೆಲ್ಲರಿಗಿಂತ ಹಿರಿಯ ಸದಸ್ಯರಾಗಿದ್ದಾಗ ಅವರಿಗೂ ಸಹ ನೆನಪು ಇರಬಹುದು. ಆಗ ಬಾಳಿಗಾರವರು "ಈ ಲೆಜಿಸ್ಲೇಚರ್ ಏನಿದೆ ಇದರ ಬಗ್ಗೆ ಸಭೆಯಲ್ಲಿ ಡಿಸ್ಕಷನ್ ಮಾಡುವುದು ಸರಿಯಲ್ಲ, ಏತಕ್ಕೆಂದರೆ ಅಧ್ಯಕ್ಷರನ್ನೇ ಟೀಕೆ ಮಾಡಿದ ಹಾಗಾಗುತ್ತದೆ, ಬೋರ್ಡ್‌ನ್ನೇ ಟೀಕೆ ಮಾಡಿದ ಹಾಗಾಗುತ್ತದೆಂದು ಹೇಳಿದ್ದರು" ಆ ದೃಷ್ಟಿಯಿಂದ ಮತ್ತು ಆ ಒಂದು ಸಂಪ್ರದಾಯವನ್ನು ಹಾಕಿಕೊಂಡು ಬಂದಿರುವುದರಿಂದ ಲೆಜಿಸ್ಲೇಚರ್ ಬಗ್ಗೆ ಮಾತನಾಡಬಾರದೆಂದು ಹೇಳಿದ್ದೆ. ಆದರೆ ಈಗ ಲೆಜಿಸ್ಲೇಚರ್ ಇಂಡಿಪೆಂಡೆನ್ಸ್ ಆಗಬೇಕು ಎನ್ನುವ ಬಗ್ಗೆ ೧೯೮೦ರಿಂದ ಈಚೆಗೆ ವಾದ ಮಾಡುತ್ತಲೇ ಬಂದಿದ್ದೇವೆ.

ಶ್ರೀ. ಎ. ಲಕ್ಷ್ಮೀಸಾಗರ್.—ಇಷ್ಟು ಕಾಲ ಇದು ಆಗದೇ ನಿಧಾನ ಹೇಗೆ ಆಯಿತು ಎನ್ನುವುದಕ್ಕೆ ನಂತರ ಉತ್ತರ ಕೊಡುತ್ತೇನೆ. ಸುಳ್ಳು ಎಂದು ಹೇಳಿದ್ದಾರೆ, ಆ ರೀತಿ ಮಾತನಾಡಿದರೆ, ಭಾಷೆಗೆ ಬೇಕಾದಷ್ಟು ಅರ್ಥವಿದೆ ಆದುದರಿಂದ ಇದರ ಬಗ್ಗೆ ಮಾನ್ಯ ಹಿರಿಯ ಸದಸ್ಯರಾದ ನನಗಿಂತ ಹೆಚ್ಚಿಗೆ ಅನುಭವವಿರತಕ್ಕ ಶ್ರೀ ರಾಮಕೃಷ್ಣರವರೇ ಹೇಳಬೇಕು.

ಶ್ರೀ ಕೆ. ಎಚ್. ರಂಗನಾಥ್.—೧೯೭೦ರಿಂದ ಈಚೆಗೆ ವಿಧಾನ ಮಂಡಲ ಸ್ವತಂತ್ರ್ಯವಾಗಬೇಕು ಎನ್ನತಕ್ಕ ಕೂಗು ಜಾಸ್ತಿಯಾಗಿದೆ. ಈ ನಮ್ಮ ವಿಧಾನ ಮಂಡಲದ ಕಾರ್ಯಾಲಯ ಸರ್ವ ಸ್ವತಂತ್ರವಾಗಿರಬೇಕು ಅದಕ್ಕೆ ಯಾವ ಅಡ್ಡಿ ಅಡಚಣೆಗಳು ಇರಬಾರದು ಎನ್ನತಕ್ಕದ್ದು ಎಲ್ಲಾ ಸದಸ್ಯರ ಅಭಿಪ್ರಾಯವಾಗಿದೆ. ಇದನ್ನು ಸರ್ಕಾರ ಗಮನದಲ್ಲಿಟ್ಟುಕೊಂಡು ಸೂಕ್ತವಾದ ಕ್ರಮವನ್ನು ತೆಗೆದುಕೊಂಡು ಜಾಗ್ರತೆಯಾಗಿ ಸಹಾಯ ಮಾಡಬೇಕು.

ಶ್ರೀ ವೈ. ರಾಮಕೃಷ್ಣ.—ಈಗ ನೀವು ಅಧಿಕಾರ ವಹಿಸಿಕೊಂಡ ಮೇಲೆ ಇಲ್ಲಿಯವರೆಗೆ ೧೫ ಸುಗ್ರೀವಾಜ್ಞೆಗಳನ್ನು ಹೊರಡಿಸಿದ್ದೀರಿ.

ಶ್ರೀ ಬಿ. ದೊಡ್ಡಬೋರೇಗೌಡ.—ಮಾನ್ಯ ಹಿರಿಯ ಶಾಸಕರಾದ ಶ್ರೀ ವೈ. ರಾಮಕೃಷ್ಣರವರು ಸಚಿವರಾಗಿದ್ದಾಗ ಒಂದೇ ದಿವಸದಲ್ಲಿ ೫೪ ಸುಗ್ರೀವಾಜ್ಞೆಗಳನ್ನು ಹೊರಟಿದ್ದವು ಅದರ ಬಗ್ಗೆ ಏನು ಹೇಳುತ್ತೀರಿ ?

ಶ್ರೀ ವೈ. ರಾಮಕೃಷ್ಣ.—ಒಂದೇ ದಿವಸದಲ್ಲಿ ೫೪ ಅಷ್ಟು ಸುಗ್ರೀವಾಜ್ಞೆಗಳು ಹೊರಡುವುದಕ್ಕೆ ಸಾಧ್ಯವೇ ಎನ್ನುವುದನ್ನು ಮೊದಲು ತಿಳಿದುಕೊಳ್ಳಿ.

ಶ್ರೀ ಕೆ. ಎಚ್. ರಂಗನಾಥ್.—ಒಂದೇ ದಿವಸ ೫೪ ಸುಗ್ರೀವಾಜ್ಞೆಗಳಿಗೆ ರುಜು ಹಾಕುವುದಕ್ಕೆ ಆಗುತ್ತದೆಯೇ ? ರಾಜ್ಯಪಾಲರು ಎಂದರೆ ಏನೆಂದು ತಿಳಿದುಕೊಂಡಿದ್ದೀರಿ ? ಶ್ರೀ ಮಹೇಶ್ವರಪ್ಪನವರು ನಿಮಗೆ ಏನಾದರೂ ಈ ರೀತಿ ಮಾತನಾಡಿ ಎಂದು ಹೇಳಿಕೊಟ್ಟಿದ್ದಾರೋ ?

ಶ್ರೀ ಬಿ. ದೊಡ್ಡಬೋರೇಗೌಡ.—ಶ್ರೀ ವೈ. ರಾಮಕೃಷ್ಣ ಮತ್ತು ಕೆ. ಎಚ್. ರಂಗನಾಥ್‌ರವರು ಸಾಕಷ್ಟು ಅಧ್ಯಯನ ಮಾಡಿರತಕ್ಕ ಹಿರಿಯ ಸದಸ್ಯರಾಗಿದ್ದಾರೆ. ಶಾಸನದ ರೂಪರೇಷೆಗಳನ್ನು ಚೆನ್ನಾಗಿ ಅರ್ಥ ಮಾಡಿಕೊಂಡು ತಿಳುವಳಿಸಿರತಕ್ಕವರು ಇವೊತ್ತು ಅನ್ಯಾಯವಾಗಿದೆಯೆಂದು ಹೇಳತಕ್ಕವರು ಕಳೆದ ೩೦ ವರ್ಷಗಳಿಂದ ಈ ಒಂದು ವರ್ಗಕ್ಕೆ ಏನು ಅನ್ಯಾಯವಾಗಿದೆ, ಅದರ ಕಷ್ಟಕಾರ್ಪಣ್ಯಗಳೇನು ಎನ್ನುವ ಬಗ್ಗೆ ಏತಕ್ಕೆ ಚಿಂತನೆ ಮಾಡಲಿಲ್ಲ ?

ಶ್ರೀ ವೈ. ರಾಮಕೃಷ್ಣ.—ಈಗ ನಾನು ಹೇಳಿದ್ದನ್ನು ಖಂಡತುಂಡವಾಗಿ ವಿರೋಧಿಸಿ ಮಂತ್ರಿಗಳು ಮಾತನಾಡಿದರು. ತಾವು ದೊಡ್ಡ ಬೋರೇಗೌಡರ ರೀತಿಯಲ್ಲಿ ಮಾತನಾಡಿದ್ದರೆ ಬಹಳ ಸಂತೋಷದಿಂದ ಕುಳಿತು ಕೇಳುತ್ತಿದ್ದೆ. ಈ ಸಭೆಯಲ್ಲಿ ಮಾತನಾಡತಕ್ಕಂಥದ್ದು, ಈ ಸ್ಥಳದಲ್ಲಿ ಕುಳಿತು ಮಾತನಾಡತಕ್ಕಂಥದ್ದು, ಸದನದ ಪರವಾಗಿ, ತಮ್ಮೆಲ್ಲರ ಪರವಾಗಿ ನಾನು ಮಾತನಾಡುತ್ತಿದ್ದೇನೆ. ತಾವು ಈ ಕಡೆ ಬಂದರೂ ಕೂಡ ಇಲ್ಲಿ ಅದು ತಮಗೂ ಅನ್ವಯಿಸುತ್ತದೆ. ನಾನು ಸಂಸದೀಯ ವಿಚಾರವಾಗಿ ಹೇಳುತ್ತಿದ್ದೇನೆ. ನಾನು ಪಾರ್ಟಿಯ ಬಗ್ಗೆ ಹೇಳುತ್ತಿಲ್ಲ. ಮಾನ್ಯ ಅಧ್ಯಕ್ಷರೇ, ಕರ್ನಾಟಕ ಕಾರ್ಪೊರೇಷನ್‌ಗಳ ಬಗ್ಗೆ, ಕರ್ನಾಟಕ ಮುನಿಸಿಪಾಲಿಟಿಗಳ ಬಗ್ಗೆ, ಕರ್ನಾಟಕ ಇನಾಮ್ ಅಬಾಲಿಷನ್ ಬಗ್ಗೆ ೧೯೮೬ರಲ್ಲಿ ೧೫ ಆರ್ಡಿನೆನ್ಸ್‌ಗಳನ್ನು ತಾವು ಹೊರಡಿಸಿದ್ದೀರಿ. ಅದು ಎಷ್ಟು ತಿಂಗಳಲ್ಲಿ ಎಂದರೆ ೬ ತಿಂಗಳಿಂದೀಚೆಗೆ ೧೫ ಆರ್ಡಿನೆನ್ಸ್‌ಗಳನ್ನು ಹೊರಡಿಸಿದ್ದೀರಿ. ಕಳೆದ ಜೂನ್ ಅಥವಾ ಸೆಪ್ಟೆಂಬರ್ ತಿಂಗಳಿಂದ ಜನವರಿವರೆಗೆ ಅಂದರೆ ನಾಲ್ಕು ತಿಂಗಳಲ್ಲಿ ೧೫ ಆರ್ಡಿನೆನ್ಸ್‌ಗಳನ್ನು ಹೊರಡಿಸಿದ್ದನ್ನು ನೋಡಿದರೆ ಯಾವ ಕಾಲದಲ್ಲಿಯೂ ಕೂಡ ಇಷ್ಟೊಂದು ಆರ್ಡಿನೆನ್ಸ್‌ಗಳನ್ನು ಹೊರಡಿಸಿರಲಿಲ್ಲ. ಮಾನ್ಯ ಪಾರ್ಲಿಮೆಂಟರಿ ಮಿನಿಸ್ಟರ್‌ರವರೇ ಹೇಳಲಿ. I am not questioning the right of the Government in promulgating ordinances. They have got a right. ಮಾನ್ಯ ದೊಡ್ಡ ಬೋರೇಗೌಡರು ಹೇಳಿದಂತೆ ಒಂದು ದಿವಸದಲ್ಲಿ ೫೦ ಆರ್ಡಿನೆನ್ಸ್ ಏತಕ್ಕೆ ೧೦೦ ಆರ್ಡಿನೆನ್ಸ್‌ಗಳನ್ನಾದರೂ ಹೊರಡಿಸಬಹುದು. ಸುಗ್ರೀವಾಜ್ಞೆಗಳನ್ನು ಹೊರಡಿಸಿದರೆ ಅದಕ್ಕೆ ಬೆಲೆ ಇರಬೇಕು. ಅದರ ಅವಶ್ಯಕತೆ ಇರಬೇಕು. ನಮ್ಮ ರಾಜ್ಯದಲ್ಲಿ, ಸಮಾಜದಲ್ಲಿ ಪರಿಣಾಮ [illegible] ಬಂದಿದೆ. ಆರ್ಡಿನೆನ್ಸನ್ನು ಯಾವಾಗ ಹೊರಡಿಸಬೇಕೆಂದರೆ ಎಷ್ಟೋ ಕೋಟಿ ಹಣ ನಮಗೆ ಬರಬೇಕಾದ್ದು ಹೊರಟು ಹೋಗುತ್ತದೆ ಎನ್ನುವ ಸಂದರ್ಭದಲ್ಲಿ ಆರ್ಡಿನೆನ್ಸನ್ನು ಹೊರಡಿಸಬೇಕು. ಮೆಡಿಕಲ್ ಸೀಟ್ ಹಂಚಿಕೆಯ ಬಗ್ಗೆ, ನಮ್ಮ ಮಕ್ಕಳಿಗೆ ವಿದ್ಯಾಭ್ಯಾಸಕ್ಕೆ ತೊಂದರೆಯಾಗುತ್ತದೆ ಎನ್ನುವ ಸಂದರ್ಭವಿದ್ದರೆ ಅದಕ್ಕೆ ಆರ್ಡಿನೆನ್ಸನ್ನು ಹೊರಡಿಸಬೇಕು. ಈ ರೀತಿಯಾಗಿ ಆರ್ಡಿನೆನ್ಸನ್ನು ಹೊರಡಿಸಲು ನಿಮಗೆ ಯಾರು ಅಡ್ವೈಸ್ ಕೊಟ್ಟರೋ ಗೊತ್ತಿಲ್ಲ. ಒಂದು ಮಾತನ್ನು ಸ್ಪಷ್ಟವಾಗಿ ಹೇಳುತ್ತಿದ್ದೇನೆ. ನಮಗೆ ಒಂದು ಸಂಪ್ರದಾಯ ಬೆಳೆದು ಬಂದಿದೆ. ಲಾ ಅಂಡ್ ಪಾರ್ಲಿಮೆಂಟರಿ ಅಫೇರ್ಸ್ ಖಾತೆ ಕೂಡ ಜೊತೆ ಜೊತೆಯಾಗಿ ಬಂದುಬಿಟ್ಟಿರುತ್ತದೆ. ಪಾರ್ಲಿಮೆಂಟರಿಗೆ [illegible] ಮಿನಿಸ್ಟರು, [illegible] ಮತ್ತೊಬ್ಬರು ಮಿನಿಸ್ಟರು [illegible] ಆಗ ಇದು [illegible] If it is separated, you will take your own decision as the Minister for Parliamentary affairs. [illegible] ಕೆಲಸ ಮೇಲೋಗರವಾಗಿ ಬಿಟ್ಟಿದೆ. ಕಾಲಾವಕಾಶ [illegible] ಈ ಸಭೆಯನ್ನು ತರಬೇಕಾದ್ದು ಬಹಳ ಅವಶ್ಯಕತೆ ಇದೆ. ನಾವು ಇಲ್ಲಿ ಇಷ್ಟೊಂದು [illegible] ಎಷ್ಟೆಷ್ಟು ಕೋಟಿ ರೂಪಾಯಿಗಳು ನಷ್ಟವಾಗುತ್ತದೆ! ಆರ್ಡಿನೆನ್ಸ್ [illegible] ಎಷ್ಟೆಷ್ಟು ಕೋಟಿ ರೂಪಾಯಿಗಳು ನಷ್ಟವಾಗುತ್ತದೆ? ಕರ್ನಾಟಕ ಇನಾಮ್ [illegible] ಅಮೆಂಡ್‌ಮೆಂಟ್ ಆರ್ಡಿನೆನ್ಸ್ ೧೯೮೬ ಎಂದು ಈ ಶಾಸನ ಸಭೆಯಲ್ಲಿ ಏನು ಬರುತ್ತಿದೆ [illegible] ಇದನ್ನು ಶಾಸನ ಸಭೆಯಲ್ಲಿ ತಂದು ಸದಸ್ಯರ ಚರ್ಚೆಯನ್ನು, ಸದಸ್ಯರ ಅಭಿಪ್ರಾಯವನ್ನು [illegible] ಮಾಡಿದ್ದರೆ ಪ್ರಪಂಚ ಮುಳುಗಿ ಹೋಗುತ್ತಿತ್ತೆ? It is only extension of time [illegible] notifications. ನಾವು ಹೇಳತಕ್ಕಂಥ ಈ ಸಂಪ್ರದಾಯದ ವಿಷಯದಲ್ಲಿ [illegible] ಬಂದಿದೆ. ಆರ್ಡಿನೆನ್ಸ್ ಮೂಲಕ ಸರ್ಕಾರ ನಡೆಸುವುದನ್ನು ನಿಲ್ಲಿಸಿ ಎಂದು ಅನೇಕರು ಹೇಳುತ್ತಿದ್ದಾರೆ. ಪ್ರಜಾ

ಪ್ರಭುತ್ವದಲ್ಲಿ ಅವಶ್ಯಕವಿದ್ದಾಗ ಮಾತ್ರ ಸುಗ್ರೀವಾಜ್ಞೆಯನ್ನು ತರಬೇಕು. ನಾವು ಸುಗ್ರೀವಾಜ್ಞೆಯಿಂದಲೇ ಆಡಳಿತವನ್ನು ನಡೆಸುತ್ತೇವೆಂದು ಹೇಳಿ ಸುಗ್ರೀವಾಜ್ಞೆಗಳನ್ನು ತಂದೂ ಕೂಡ ಅದರ ಮೇಲೆ ಚರ್ಚೆ ಮಾಡುವುದಕ್ಕೆ ಇಲ್ಲಿ ಅವಕಾಶವನ್ನು ಕೊಡದೆ ಸರ್ಕಾರದಲ್ಲಿ ನಮಗೆ ಬಹುಮತ ಇದೆ ಎಂದು ಹೇಳಿಕೊಂಡು ಈ ರೀತಿಯಾಗಿ ಆರ್ಡಿನೆನ್ಸ್ ತರುತ್ತೇವೆಂದು ಹೇಳುವುದಾದರೆ ಇದು ಒಳ್ಳೆಯ ಸಂಪ್ರದಾಯವಾಗುವುದಿಲ್ಲ. ನಮ್ಮ ಇಷ್ಟ ನಾವು ಮಾಡುತ್ತೇವೆಂದು ಹೇಳಿದರೆ ನಾವು ಏನು ಮಾಡುವುದಕ್ಕೆ ಆಗುವುದಿಲ್ಲ. ವಿರೋಧಪಕ್ಷದಲ್ಲಿ ನಾವು ಇದ್ದೇವೆಂದು ತಾವು ಆರ್ಡಿನೆನ್ಸನ್ನು ತಂದು ಬಿಟ್ಟರೆ ನಾವು ಏನು ಹೇಳುವುದಕ್ಕೂ ಅವಕಾಶ ಆಗುವುದಿಲ್ಲ. Is it not our right to speak on the subject? It is not my intention to criticise the Government but in a Parliamentary democracy how should the Government behave? I am only bringing to your notice the paramount importance of the people's representation in the democracy. ಅದಕ್ಕೆ ಧಕ್ಕೆ ಬರದಹಾಗೆ ಮುಂದೆ ಮಾಡುವಾಗ ದಯವಿಟ್ಟು ಆಲೋಚನೆ ಮಾಡಿ. ರಾಜ್ಯಕ್ಕೆ ಏನಾದರೂ ತೊಂದರೆಯಾಗುವುದಾದರೆ ಇದರ ಬಗ್ಗೆ ನಾವು ಅಡ್ಡಿ ಬರುವುದಿಲ್ಲ. ಇಷ್ಟು ಪಾರ್ಲಿಮೆಂಟ್‌ಗೆ ಸಂಬಂಧಪಟ್ಟ ವಿಚಾರಗಳನ್ನು ಸಭೆಯ ಮುಂದಿಟ್ಟಿದ್ದೇನೆ. ಇನ್ನೂ ಕೆಲವಾರು ಸಣ್ಣ ಸಣ್ಣ ವಿಚಾರಗಳನ್ನು ಹೇಳುತ್ತೇನೆ. ಅನೇಕ ಶಾಸನ ಸಭೆಗಳನ್ನು ನಾವು ನೋಡಿದ್ದೇವೆ. ಇಷ್ಟೊಂದು ಸುಂದರವಾದ, ಆಕರ್ಷಣೀಯವಾದ ಶಾಸನಸಭೆ ಬೇರೆ ಯಾವ ರಾಜ್ಯದಲ್ಲೂ ಇಲ್ಲ. ಇಲ್ಲಿ ಕೆಲಸ ಮಾಡತಕ್ಕಂಥವರಿಗೆ ಆಕರ್ಷಣೀಯವಾದ ಉಡುಪುಗಳನ್ನು ಕೊಡಬೇಕು. ಈ ರೀತಿಯಾದ ಸುಂದರವಾದ ಭವನ ಫಾರಿನ್‌ನಲ್ಲೂ ಕೂಡ ಇಲ್ಲ. ಇದನ್ನು ಮತ್ತಷ್ಟು ಸುಂದರವಾಗಿ ಇಡಬೇಕು. ಉತ್ತಮವಾದ ರತ್ನಕಂಬಳಿಗಳನ್ನು ಹಾಕಿಸಬೇಕು, ಉತ್ತಮವಾದ ಯೂನಿಫಾರಮ್‌ಗಳನ್ನು ಕೊಡತಕ್ಕಂಥ ಒಂದು ಸಂಪ್ರದಾಯವನ್ನು ಹಾಕಿಕೊಂಡು ಬೆಳಸಿಕೊಂಡು ಹೋಗಬೇಕೆಂದು ಹೇಳುತ್ತೇನೆ. ನಾನು ಕಳೆದ ಸಲ ೨೮ ಸಲಹೆಗಳನ್ನು ಕೊಟ್ಟಿದ್ದೇನೆ. ಅವುಗಳನ್ನು ಪುನಃ ಪುನಃ ಪರಿಶೀಲನೆ ಮಾಡಿ ಎಂದು ಹೇಳುತ್ತಾ ಹೋದರೆ ದೋಷಪೂರಿತವಾಗಬಹುದು. ಇಷ್ಟು ಹೇಳಿ ಲಾ ಡಿಪಾರ್ಟ್‌ಮೆಂಟ್ ಬಗ್ಗೆ ಹೇಳುವುದಾದರೆ, ಸ್ವಾಮಿ ಈ ಕಾನೂನು ಖಾತೆಯ ವಿಚಾರದಲ್ಲಿ ಈಗಾಗಲೇ ತಿಳಿಸಿದ್ದೀರಿ. ರಾತ್ರಿ ೧೦ ಗಂಟೆಯ ಸಮಯದಲ್ಲಿ ಇದರ ವರದಿಯನ್ನು ನಮ್ಮ ಕೈಗೆ ಕೊಟ್ಟಿರುತ್ತೀರಿ. ರಾತ್ರಿ ೧೦ ಗಂಟೆಗೆ ಇದನ್ನು ನಮ್ಮ ಕೈಗೆ ಕೊಟ್ಟರೆ ಇದನ್ನು ಓದಲಿಕ್ಕೆ ಸಾಧ್ಯವೇ? ಲೈಟು ಕೂಡ ಇಲ್ಲ. ಈ ಸರ್ಕಾರ ಅಧಿಕಾರಕ್ಕೆ ಬಂದಮೇಲೆ ಲೈಟಿಗಾಗಿ ಕಾಯಬೇಕಾದ ಪ್ರಸಂಗ ಬಂದಿರುತ್ತದೆ. ಬಹಳ ತೊಂದರೆಯಾಯಿತು. ಹೋಗಲಿ ಬೆಳಿಗ್ಗೆ ಎದ್ದು ಓದೋಣವೆಂದರೂ ಬೆಳಿಗ್ಗೆಯೂ ಕೂಡ ಲೈಟ್ ಇರುವುದಿಲ್ಲ. ಇದು ಯಾವ ರೀತಿಯಾಗಿದೆ ಎಂದರೆ ಮಕ್ಕಳು ಪರೀಕ್ಷೆಗೆ ಹೋಗುವಾಗ ತಯಾರಾಗುತ್ತಾರೆ. ಆ ರೀತಿಯಾದ ಒಂದು ಎಕ್ಸ್‌ಪೀರಿಯನ್ಸ್ ಆಯಿತು. ಎಸ್.ಎಸ್.ಎಲ್.ಸಿ., ಬಿ.ಎ. ಪರೀಕ್ಷೆಗೆ ಹೋಗತಕ್ಕಂಥ ವಿದ್ಯಾರ್ಥಿಗಳು ಕೊನೆ ಗಳಿಗೆಯಲ್ಲಿ ಕೈಗೆ ಸಿಕ್ಕಿದನ್ನೆಲ್ಲವನ್ನು ಸಿಕ್ಕಾಪಟ್ಟೆ ಓದಿಕೊಂಡು ಹೋಗುತ್ತಾರೆ. ಆ ರೀತಿ ಆಯಿತು.

ಶ್ರೀ ಕೆ.ಎಚ್. ರಂಗನಾಥ್.—ಪಾಪ ಮಾನ್ಯ ಸದಸ್ಯರು ರಟ್ಟಿನ ಮೇಲೆಲ್ಲ ಬರೆದುಕೊಂಡು ಬಂದಿದ್ದಾರೆ.

ಶ್ರೀ ಎಂ.ಎಸ್. ಕೃಷ್ಣನ್.—ಅವರು ಓದಲೇ ಬೇಕಾಗಿಲ್ಲ. ಎಲ್ಲೋ ಬಾತ್ ರೂಮ್‌ಗೆ ಅವರು ಹೋದಾಗ ಅಲ್ಲಿ ಇನ್‌ಸ್ಪಿರೇಷನ್ ಬಂದಿರಬಹುದು.

ಶ್ರೀ ವೈ. ರಾಮಕೃಷ್ಣ.—ಮೊನ್ನೆ ತಾನೆ ಲಾಯರ್ಸ್ ಕಾನ್‌ಫರೆನ್ಸ್ ಎಂದು ಮಾಡಿದ್ದಾರೆ. ತಾವು ಕೂಡ ಅದಕ್ಕೆ ಹೋಗಿದ್ದಿರಿ ಎಂದು ಕಾಣುತ್ತದೆ. ಅಲ್ಲಿ ಒಬ್ಬರು ಪ್ರಮುಖ ಭಾಷಣಕಾರರು ಒಂದು ಮಾತನ್ನು ಹೇಳಿದ್ದಾರೆ. "Instead of rendering legal service to the poor there has been poor legal service." ಅದನ್ನು ನಾನು ಹೇಳಿದ್ದಲ್ಲ. ಹೆಸರಾಂತ ಅಡ್ವೊಕೇಟ್, ಅವರು ಹೇಳಿದ್ದಾರೆ. ಅವರ ಹೆಸರನ್ನು ಮರೆತುಬಿಟ್ಟಿದ್ದೇನೆ. ಅವರು ಹೇಳುವಾಗ ಒಂದೊಂದು ವಿಷಯದ ಮೇಲೂ ಒಂದೊಂದು ಕಾರಣವನ್ನು ಕೊಟ್ಟುಕೊಂಡು ಹೇಳಿದ್ದಾರೆ. ತಾವು ಮಂತ್ರಿಗಳಾಗಿ ಈ ಒಂದು ವಿಚಾರವನ್ನು ಪ್ರಸ್ತಾಪ ಮಾಡಬೇಕು. ಕಳೆದ ಸಾರಿ, ಇದೇ ಬೇಡಿಕೆಯ ಮೇಲೆ ಮಾತನಾಡುತ್ತಾ ಕೋರ್ಟ್ ಫೀಸ್ ಅಬಾಲಿಷ್ ಆಗಬೇಕೆಂದು ಹೇಳಿ ತಾವು ಕೂಡ ಅದರ

ನಾಯಕತ್ವವನ್ನು ವಹಿಸಿದ್ದೀರಿ. ಕೋರ್ಟ್ ಫೀಸನ್ನು ಅಬಾಲಿಷ್ ಮಾಡತಕ್ಕಂಥದ್ದು ನ್ಯಾಯ. ಅವರು ನನಗೆ ಹೇಳಿದರು ದೇಶದಲ್ಲಿರತಕ್ಕಂಥ ಎಲ್ಲಾ ಕೋರ್ಟ್‌ಗಳು ಕೋರ್ಟ್ ಫೀಸಿಗೆ ಅಬಾಲಿಷನ್‌ಗೆ ಒಪ್ಪಿಕೊಂಡರೆ ನೀವು ಏತಕ್ಕೆ ಒಪ್ಪಿಕೊಳ್ಳಲಿಲ್ಲ ವೆಂದು

SRI A. LAKSHMISAGAR.— Let me set the records straight. The previous Government appointed a Committee to go into the question of abolition of court fee under the Chairmanship of Mr. Jagannath Koushal, now the present Union Law Minister. The Committee gave ununanimous report providing for abolition of court fee. The court fee is the State subject under the Constitution. Unless there is concurrence of the States it is not possible for the Central Government to abolish the total or any part towards court fee leviable by law. He called a meeting. As the then Minister for Law & Parliamentary Affairs. my friend Sri Ramakrisena attended the meeting. The information I had then was, he himself told me that was the only State i.e., Karnataka alone, that took initiative for non-abolition of court fee. This is the information I gave. I do not know the deliberations of the Conference. Secondly, Sir, the decision of the Conference of the Law Ministers then was that the steps may be taken to stremline the court fee leviable and rationalise the court fee leviable. This is the present situation we have not been able to go beyond this. Barring this I did not say any thing.

ಶ್ರೀ ವೈ. ರಾಮಕೃಷ್ಣ.— ಮಾನ್ಯ ಅಧ್ಯಕ್ಷರೇ, ಮಾನ್ಯ ಲಕ್ಷ್ಮೀಸಾಗರ್ ಅವರು ಕೋರ್ಟ್—ಫೀ ಅಬಾಲಿಷನ್ ವಿಚಾರದಲ್ಲಿ ಮಂತ್ರಿಯಾದ ಮೇಲೆ ತಮ್ಮ ಅಭಿಪ್ರಾಯವನ್ನು ಮಾಡಿಫೈ ಮಾಡಿಕೊಂಡಿದ್ದಾರೆ. ಅದು ಸ್ವಾನ ಬಲ. ಈ ಕಡೆ ಇದ್ದಾಗ ಅವರು ಏನು ಭಾಷಣ ಮಾಡಿದ್ದರು ಎಂಬುದು ರೆಕಾರ್ಡ್‌ನಲ್ಲಿದೆ. ಆದರೆ ಈಗ ಈ ರೀತಿ ಹೇಳುತ್ತಿದ್ದಾರೆ. ನಮ್ಮ ರಾಜ್ಯದ ರೆವಿನ್ಯೂ ೧೩೦೦ ಕೋಟಿ ರೂಪಾಯಿಗಳಾದರೆ ಕೋರ್ಟ್ ಫೀಯಿಂದ ಬರುವುದು ೫-೬ ಕೋಟಿ ರೂಪಾಯಿಗಳು ಮಾತ್ರ. ಇದನ್ನು ಲೀಗಲ್-ಏಡ್‌ಗೆ ಕೊಡಬಹುದು It is within your powers Why don't you set an example to the rest of the States by giving the entire court fee for legal aid so that the legal aid scheme will be a success ? ಆದ್ದರಿಂದ ದಯವಿಟ್ಟು ಇದರ ಕಡೆ ಆಲೋಚನೆ ಮಾಡುತ್ತೀರಾ ? ಮಾನ್ಯ ಅಧ್ಯಕ್ಷರೇ, ನಾನು ಲೀಗಲ್ ಏಡ್ ವಿಚಾರಕ್ಕೆ ಆಮೇಲೆ ಬರುತ್ತೇನೆ. ಈ ಸೋರ್ಸ್ ಬಹಳ ಕಡಿಮೆಯಾದರೂ ಮುಂದೆ ಮೈನ್ ಸೋರ್ಸ್ ಆಗಬಹುದು. It was my intention when I declared there in the Law Ministers Conference that it should not be abolished thinking that I could utilise this amount for legal aid.
ಆದ್ದರಿಂದ ಇದನ್ನು ದಯವಿಟ್ಟು ತಾವು ವಿಚಾರ ಮಾಡಬೇಕು. ಇವೊತ್ತು ನಾವು ಅಧಿಕಾರದಲ್ಲಿ ಇಲ್ಲದಿರಬಹುದು. ಆದರೆ ನನ್ನ ವಯಸ್ಸಿನ ಭಾವನೆಯನ್ನು ನಿಮ್ಮ ಮುಂದಿಟ್ಟಿದ್ದೇನೆ, ೧೩೦೦ ಕೋಟಿ ರೂಪಾಯಿಗಳಲ್ಲಿ ೫ ಕೋಟಿ ರೂಪಾಯಿಗಳೇನೂ ದೊಡ್ಡ ಮೊತ್ತವಲ್ಲ ಆದರೆ ಇದರಿಂದ ನೀವು ಗಳಿಸುವಂತಹ ಹೆಸರು ಎಷ್ಟಿರುತ್ತದೆಂದರೆ, You will be the Champion. ಅಷ್ಟೇ ಅಲ್ಲ, ನೀವು ಹೀರೋ ಕೂಡ ಆಗುತ್ತೀರಿ. ಈ ವಿಚಾರ ಶ್ರೀ ಭಗವತಿ ಅವರಿಗೆ ಗೊತ್ತಾದರೆ ಅವರು ನಿಮಗೆ ಒಳ್ಳೆಯ ಹೆಸರು ಕೊಡುತ್ತಾರೆ. Even the Supreme Court Judges will congratulate you. Mr. Justice Bhagavathi will come and embrace you saying

"Allright, you have set a very fine example." It is a marvellous proposition made from this side. Please think of it and become the leader.

ಇನ್ನು ಇದರಲ್ಲಿ ಬಹಳ ಮುಖ್ಯವಾದುದೆಂದರೆ, ಲಿಟಿಗೇಷನ್ ಮತ್ತು ಪ್ರಾಸಿಕ್ಯೂಷನ್. Litigation and Prosecution are the two branches. ಲಿಟಿಗೇಷನ್‌ನಲ್ಲಿ the biggest litigant is the Government. ಯಾವ ಕೋರ್ಟಿನಲ್ಲಿ ನೋಡಿದರೂ ಕೂಡ that is on be half the state. ಬಹುಶಃ ಮಾನ್ಯ ಲಕ್ಷ್ಮೀಸಾಗರ್ ಅವರು ಎಂದರೆ ಸರ್ಕಾರದವರು ನಡೆಸುವಂತಹ ಕೇಸ್‌ಗಳನ್ನು ಪ್ರಪಂಚದಲ್ಲಿ ಯಾರೂ ನಡೆಸುವುದಿಲ್ಲವೆಂದು ಕಾಣುತ್ತದೆ. ಮಾನ್ಯ ಮಂತ್ರಿಗಳಿಗೂ ಸಹ ಹೆಚ್ಚಿನ ಎಕ್ಸ್‌ಪೀರಿಯನ್ಸ್ ಇದೆ, ಇದೇ ಕಾರಣದಿಂದ ಅವರು ಈ ಕಡೆ ಇದ್ದಾಗ ಉತ್ತಮವಾದಂಥ ಭಾಷಣಗಳನ್ನು ಮಾಡಿ ಉತ್ತಮವಾದಂಥ ಸಲಹೆಗಳನ್ನು ಕೊಟ್ಟಿದ್ದರು. ಆದರೆ ಈಗ ತಾವು ಯಾರಿಗೆ ಜವಾಬ್ದಾರಿ ಕೊಟ್ಟಿದ್ದೀರಿ ? ಕೋಟ್ಯಾಂತರ ರೂಪಾಯಿಗಳಿಗೆ ಸಂಬಂಧಪಟ್ಟ ಕೇಸ್‌ಗಳನ್ನು ನೋಡಿಕೊಳ್ಳಲು ತಾವು ಯಾರ ಕೈಗೆ ಜವಾಬ್ದಾರಿ ಕೊಟ್ಟಿದ್ದೀರಿ ? ಈಗ ತಾವು ಯಾರಿಗೆ ಜವಾಬ್ದಾರಿ ಕೊಟ್ಟಿದ್ದೀರೋ, ಅವರಿಗೆ ಇರುವಂತಹ ವಿದ್ಯಾರ್ಹತೆಯನ್ನು ನಾನು ಪ್ರಶ್ನೆ ಮಾಡುವುದಿಲ್ಲ. ಅವರ ಹಾನೆಸ್ಟಿಯನ್ನು ನಾನು ಪ್ರಶ್ನೆ ಮಾಡುವುದಿಲ್ಲ. ಆದರೆ ಅವರ ಅನುಭವವನ್ನು ನಾನು ಪ್ರಶ್ನೆ ಮಾಡಬೇಕಾಗಿದೆ. ಅವರು ಇಲ್ಲಿಯವರೆಗೆ ಎಷ್ಟೆಷ್ಟು ಕೇಸ್‌ಗಳನ್ನು ನಡೆಸಿದರು, ಅವರ ಮೇಧಾಶಕ್ತಿ ಏನು ಎಂಬುದರ ಕಡೆಗೆ ಗಮನಹರಿಸುವುದು ಉತ್ತಮವೆಂದು ನಾನು ಭಾವಿಸುತ್ತೇನೆ. ಸರ್ಕಾರ ಏನಾದರೂ ಒಂದು ಕೇಸ್ ಕಳೆದುಕೊಂಡರೆ ಲಕ್ಷಾಂತರ ರೂಪಾಯಿಗಳಷ್ಟು ಹಣ ಸರ್ಕಾರಕ್ಕೆ ನಷ್ಟವಾಗುತ್ತದೆ. ನಾನೂ ಸಹ ಗೌರ್ನಮೆಂಟ್‌ಪ್ಲೀಡರ್ ಆಫೀಸ್‌ನಲ್ಲಿ ಕೆಲಸ ಮಾಡಿದ್ದೇನೆ. ಆದ್ದರಿಂದ ನನ್ನ ಒಂದು ಅನುಭವದಿಂದ ಹೇಳಬೇಕೆಂದರೆ, ಬೆಂಗಳೂರಿನ ಸುತ್ತಮುತ್ತ ಇರುವಂತಹ ಮುಜರಾಯಿ ಸಂಸ್ಥೆಗಳಿಗೆ ಸೇರಿದ ಎಷ್ಟೋ ಜಮೀನುಗಳು ಪರಭಾರೆಯಾಗಿವೆ. ಈ ಬಗ್ಗೆ ಕೋರ್ಟಿನಲ್ಲಿ ಏನಾದರೂ ಕೇಸ್ ಹಾಕಿದರೆ ಸಂಬಂಧಪಟ್ಟ ಅಧಿಕಾರಿಗಳು ಕೇಸ್‌ಗೆ ಸಂಬಂಧಪಟ್ಟ ಮಾಹಿತಿಗಳನ್ನು ಸಕಾಲದಲ್ಲಿ ಒದಗಿಸಿಕೊಡುವುದಿಲ್ಲ, ಇದರಿಂದ ಸಂಬಂಧಪಟ್ಟ ಅಧಿಕಾರಿಗಳು ಮತ್ತು ಪಾರ್ಟಿಗಳು ಶಾಮೀಲಾಗಿದ್ದಾರೆಂದು ಭಾವಿಸಬೇಕಾಗುತ್ತದೆ. ಕಾನೂನು ಇಲಾಖೆಯವರು ಚೆನ್ನಾಗಿ ಕೆಲಸ ಮಾಡುತ್ತಾರೆ. ಆದರೆ ಅವರಿಗೆ ಬೇಕಾದ ಮಾಹಿತಿಗಳನ್ನು ಸಂಬಂಧಪಟ್ಟ ಇಲಾಖೆಯವರು ಕಳುಹಿಸಿ ಕೊಡದಿದ್ದರೆ, ಅವರು ಯಾವ ರೀತಿ ಕೆಲಸ ಮಾಡಲು ಸಾಧ್ಯ ? ಗೌರ್ನಮೆಂಟ್ ಪ್ಲೀಡರ್ ಯಾವ ರೀತಿ ಕೆಲಸ ಮಾಡಲು ಸಾಧ್ಯ ? ಯಾವುದೇ ಸಿವಿಲ್ ಸೂಟ್ಸ್ ಸಂಬಂಧವಾಗಿ ಸಿ.ಪಿ.ಸಿ. ಸೆಕ್ಷನ್ ೮೦ ರ ಪ್ರಕಾರ ಮೊದಲ ನೋಟೀಸ್ ಬರುತ್ತದೆ. ಇದಕ್ಕೆ ಉತ್ತರ ಕೊಡಲು ೬ ತಿಂಗಳ ಕಾಲ ಸಮಯ ಇದ್ದರೂ ಸಹ, ಸಂಬಂಧಪಟ್ಟ ಇಲಾಖೆಯವರು ಬೇಕಾದಂಥ ಮಾಹಿತಿಗಳನ್ನು ಒದಗಿಸುವುದಿಲ್ಲ, ಆದಷ್ಟೂ ತಮ್ಮ ಜವಾಬ್ದಾರಿಯನ್ನು ತಪ್ಪಿಸಿಕೊಳ್ಳುವುದಕ್ಕೆ ನೋಡುತ್ತಾರೆ. ಇದಕ್ಕೆ ಮುಖ್ಯ ಕಾರಣವೆಂದರೆ, ಅಧಿಕಾರಿಗಳು ಮತ್ತು ಪಾರ್ಟಿಗಳು ಶಾಮೀಲಾಗಿರುವುದು. ಈ ಕಾರಣದಿಂದ ೬ ತಿಂಗಳ ಸಮಯವಿದ್ದರೂ ಬೇಕಾದ ರೆಕಾರ್ಡ್‌ಗಳನ್ನು ಒದಗಿಸುವುದಿಲ್ಲ. ಇದು ದುರ್ದೈವದ ಸಂಗತಿ. ಮಾನ್ಯ ಮಂತ್ರಿಗಳು ದಯವಿಟ್ಟು ಇದನ್ನು ಸರಿಪಡಿಸಬೇಕು. ಅಧಿಕಾರದಲ್ಲಿ ಯಾರೇ ಇದ್ದರೂ ಸಹ ಇದನ್ನು ಮಾತ್ರ ಸರಿಪಡಿಸಬೇಕು. ಕಾನೂನು ಇಲಾಖೆಯಲ್ಲಿರುವ ಸೆಕ್ರೆಟರಿ, ಡೆಪ್ಯೂಟಿ ಸೆಕ್ರೆಟರಿ ಹಾಗೂ ಅಂಡರ್—ಸೆಕ್ರೆಟರಿಗಳು ಚೆನ್ನಾಗಿ ಕೆಲಸ ಮಾಡುತ್ತಾರೆ. ಅದರಲ್ಲಿ ಅನುಮಾನವಿಲ್ಲ. ಆದರೆ ಸಂಬಂಧಪಟ್ಟ ಇಲಾಖೆಗಳ ಅಧಿಕಾರಿಗಳು ಒದಗಿಸುವಂತಹ ಮಾಹಿತಿಗಳು ಏನಿವೆ, ಅವುಗಳನ್ನು ಸಿ.ಒ.ಡಿ.ಗೆ ಒಪ್ಪಿಸಬೇಕಾಗುತ್ತದೆ. ಏಕೆಂದರೆ, ಇವರು ಒದಗಿಸುವಂತಹ ಮಾಹಿತಿಗಳ ಆಧಾರದ ಮೇಲೆ ಏನಾದರೂ ಕಾನೂನು ಇಲಾಖೆಯವರು ಮುಂದಿನ ಕ್ರಮ ತೆಗೆದುಕೊಂಡರೆ ಸರ್ಕಾರಕ್ಕೆ ಲಕ್ಷಾಂತರ ರೂಪಾಯಿಗಳಷ್ಟು ನಷ್ಟವಾಗುತ್ತದೆ. ಆದ್ದರಿಂದ ಅವರು ಕೊಡುವ ಮಾಹಿತಿಗಳ ಬಗ್ಗೆ ಎಚ್ಚರಿಕೆ ವಹಿಸಿ ನೋಡಬೇಕಾಗುತ್ತದೆ. ಅಷ್ಟೇ ಅಲ್ಲ, ಅವರ ಒಂದು ಪ್ರಾಮಾಣಿಕತೆಯನ್ನು ನೋಡಬೇಕಾಗಿದೆ.

ಇನ್ನು Government pleader, Asst. Pleader, Prosecutor, Asst. Prosecutor ಕಡೆಗೆ ಮಾನ್ಯ ಮಂತ್ರಿಗಳು ಸ್ವಲ್ಪ ಗಮನಹರಿಸಬೇಕಾಗಿದೆ. ಹಿಂದೆ ತಾವೂ ಸಹ ಇವರ ಬಗ್ಗೆ ಹೇಳಿದ್ದಿರಿ. ಆದ್ದರಿಂದ ಪ್ರೈಸ್ ಇಂಡೆಕ್ಸ್ ಆಧಾರದ ಮೇಲೆಯಾದರೂ ಇವರ

ಸಂಬಳದವನ್ನು ಹೆಚ್ಚು ಮಾಡುವುದು ಒಳ್ಳೆಯದು. ಈಗ ಇವರಿಗೆ ನೂರರಿಂದ ಮುನ್ನೂರು ರೂಪಾಯಿಗಳ ವರೆಗೆ ಮಾತ್ರ ಸಂಬಳ ಕೊಡಲಾಗುತ್ತಿದೆ. ಹೈಕೋರ್ಟಿನ ಗೌರ್ನ್‌ಮೆಂಟ್ ಪ್ಲೀಡರ್‌ಗೆ ಮಾತ್ರ ೬೦೦ ರೂಪಾಯಿಗಳನ್ನು ಕೊಡುತ್ತಾರೆ. ಅದರೆ ಬೇರೆಯವರಿಗೆ ತಿಂಗಳಿಗೆ ನೂರು ರೂಪಾಯಿಗಳನ್ನು ಮಾತ್ರ ಕೊಡಲಾಗುತ್ತಿದೆ.

ಛೇರ್‌ಮನ್.—ಇದರ ಜೊತೆಗೆ ಪ್ರತಿ ಕೇಸ್‌ಗೆ ಇಷ್ಟು ಎಂದು ಕೊಡುತ್ತಾರೆ ಅಲ್ಲವೇ ?

ಶ್ರೀ ವೈ. ರಾಮಕೃಷ್ಣ.—ಅದು Ad valorem ರೂಪದಲ್ಲಿ ಬರುತ್ತದೆ. ಇವರಿಗೆ ಕೊಡುವ ಸಂಬಳ ಬಹಳ ಕಡಿಮೆಯಾದರೂ ಸಹ ಬರಬೇಕಾದ ಬಾಕಿ ಬಹಳಷ್ಟಿದೆ. ಪೆಂಡಿಂಗ್ ಬಿಲ್ಸ್ ಬಹಳ ಇವೆ. ಕೆಲವು ಸಂದರ್ಭಗಳಲ್ಲಿ ಇವರಿಗೆ ಬರಬೇಕಾದ ಬಾಕಿಯನ್ನು, ಇವರು ಸತ್ತ ನಂತರ ಇವರ ಮಕ್ಕಳಿಗೆ ಕೊಟ್ಟಿರುವುದು ಉಂಟು. ಇದಕ್ಕೆ ಮುಖ್ಯ ಕಾರಣವೆಂದರೆ, ಸರ್ಟಿಫಿಕೇಟ್‌ಗಳನ್ನು ಮತ್ತು ಡಾಕ್ಯುಮೆಂಟ್ಸನ್ನು ಅಪ್ಲಿಕೇಟ್ ಕಾಲದಲ್ಲಿ ಕೊಡುವುದಿಲ್ಲ. ಪೆನ್‌ಷನ್ ಪಡೆಯುವವರಿಗೆ ಪೆನ್‌ಷನ್ ಪಡೆಯಲು ಎಷ್ಟು ಕಷ್ಟ ಇದೆಯೋ ಅಷ್ಟೇ ಕಷ್ಟ ಇವರಿಗೂ ಇದೆ. ಈ ಕಾರಣದಿಂದ ಈ ಕೆಲಸ ಮಾಡಲು ಯಾರೂ ಸಹ ಮುಂದೆ ಬರುವುದಿಲ್ಲ. ಇದರ ಜವಾಬ್ದಾರಿ ಜಾಸ್ತಿ, ಆದರೆ ಕೊಡತಕ್ಕಂಥ ಸಂಬಳ ಮಾತ್ರ ಬಹಳ ಕಡಿಮೆ.

೪-೩೦ ಪಿ. ಎಂ.

ಸ್ವಾಮಿ ತಾವು ಅಧಿಕಾರವನ್ನು ವಹಿಸಿಕೊಂಡ ಮೇಲೆ ಕೋರ್ಟ್‌ಗಳಲ್ಲಿ ಕೇಸುಗಳು ಬೇಗ ಬೇಗ ತೀರ್ಮಾನವಾಗುವ ಬಗ್ಗೆ ತಮ್ಮ ವರದಿಯಲ್ಲಿ ಕೆಲವಾರು ವಿಷಯಗಳನ್ನು ಸೂಚಿಸಿ ಮಾಡಿದ್ದೀರಿ. ಆದರೆ ಆ ವರದಿಯನ್ನು ನೋಡಿದ ಮೇಲೆ ನಿಜವಾಗಿಯೂ ಕೂಡ ನನಗೆ ಸ್ವಲ್ಪ ಮಟ್ಟಿಗೆ ಸಂತೋಷವಾಗಿದೆ. ಆದರೆ ನಾನು ಈ ಬಗ್ಗೆ ಒಂದು ಮಾತನ್ನು ಹೇಳಬಯಸುತ್ತೇನೆ. ಆದರೆ ಆ ಮಾತನ್ನು ನಾನು ಇಲ್ಲಿ ಹೇಳುವುದಕ್ಕೆ ಇದು ಸರಿಯಾದ ಫೋರಂ ಅಲ್ಲ. ಆದರೂ ಕೂಡ ನಾನು ಒಂದು ಮಾತನ್ನು ಈ ಸಂದರ್ಭದಲ್ಲಿ ಹೇಳಬೇಕಾಗುತ್ತದೆ. ಇವತ್ತು ನಮ್ಮ ರಾಜ್ಯದ ಹೈಕೋರ್ಟಿನಲ್ಲಿ ಸುಮಾರು ಒಂದೂಕಾಲು ಲಕ್ಷದಷ್ಟು ಕೇಸುಗಳು ಇವೆ. ಆದರೆ ಇದರಲ್ಲಿ ತಾವು ಕಳೆದ ೬ ತಿಂಗಳಿಂದ ಸುಮಾರು ೩೧ ಸಾವಿರ ಕೇಸುಗಳನ್ನು ತೀರ್ಮಾನ ಮಾಡಿದ್ದೀರಿ. ಸರಾಸರಿ ಒಂದು ತಿಂಗಳಲ್ಲಿ ಸುಮಾರು ೫೧೬೬ ಕೇಸುಗಳನ್ನು ತೀರ್ಮಾನ ಮಾಡಿದ್ದೀರಿ ಎಂದು ನಾನು ಈ ಸಂದರ್ಭದಲ್ಲಿ ಹೇಳಬೇಕಾಗುತ್ತದೆ. ಇಷ್ಟೊಂದು ದೊಡ್ಡ ಪ್ರಮಾಣದಲ್ಲಿ ನಮ್ಮ ಭಾರತ ದೇಶದ ಯಾವುದೇ ಒಂದು ಹೈಕೋರ್ಟಿನಲ್ಲಿ ಇಷ್ಟು ಬೇಗ ತೀರ್ಮಾನ ಮಾಡಿಲ್ಲ. ನಮ್ಮ ರಾಜ್ಯದ ಹೈಕೋರ್ಟಿನಲ್ಲಿ ಅಷ್ಟು ಕೇಸುಗಳು ತೀರ್ಮಾನವಾಗಿವೆ. ಆದ್ದರಿಂದ ನಾನು ತಮಗೆ ಸಂತೋಷವನ್ನು ವ್ಯಕ್ತಪಡಿಸುತ್ತೇನೆ. I am very happy they have taken keen interest in giving disposal. ಆದರೆ ನಾನು ಇದೇ ಸಂದರ್ಭದಲ್ಲಿ ಇನ್ನೊಂದು ಮಾತನ್ನು ಹೇಳಬೇಕಾಗುತ್ತದೆ. ಅದು ಏನೆಂದರೆ ತಮ್ಮ ಅಧೀನದಲ್ಲಿರುವ ಸಬಾರ್ಡಿನೇಟ್ ಕೋರ್ಟ್‌ಗಳಲ್ಲಿ ಇದೇ ರೀತಿಯಲ್ಲಿ ಚುರುಕಾಗಿ ಕೆಲಸ ಮಾಡುವಂತಹ ಒಂದು ವ್ಯವಸ್ಥೆಯನ್ನು ತಾವು ಮಾಡಿಸಬೇಕಾಗುತ್ತದೆ. ಆ ಒಂದು ಕೆಲಸವನ್ನು ತಾವು ಮಾಡಿಸಿದರೆ ನಿಜವಾಗಿಯೂ ಕೂಡ ಆಗ ನನಗೆ ಸಂತೋಷವಾಗುತ್ತದೆ. ಇಲ್ಲದಿದ್ದರೆ ನನಗೆ ಅಷ್ಟು ಸಂತೋಷವಾಗುವುದಿಲ್ಲ.

ಶ್ರೀ ಎ. ಲಕ್ಷ್ಮೀಸಾಗರ್.—ಸ್ವಾಮಿ ನಮ್ಮ ಸಂವಿಧಾನದ ಪ್ರಕಾರ ಯಾವುದೇ ಕೋರ್ಟ್‌ಗಳು ತಮ್ಮ ಅಧೀನದಲ್ಲಿ ಬರುವುದಿಲ್ಲ. ಮಾನ್ಯ ಸದಸ್ಯರು ನಿಮ್ಮ ಅಧೀನದಲ್ಲಿರುವ ಕೋರ್ಟ್‌ಗಳು ಎಂದು ಹೇಳಿದರೆ ಹೇಗೆ ?

ಶ್ರೀ ವೈ. ರಾಮಕೃಷ್ಣ.—ಸ್ವಾಮಿ ನಾನು ಹೇಳಿದ್ದು ನಿಮ್ಮ ಅಧೀನದಲ್ಲಿರತಕ್ಕಂಥ ಕೋರ್ಟ್‌ಗಳು ಎಂದರೆ ಹೈಕೋರ್ಟಿನ ಅಧೀನದಲ್ಲಿರತಕ್ಕಂಥ ಕೋರ್ಟ್‌ಗಳು ಎಂದು ಅರ್ಥ. ನಿಮ್ಮ ಕೈ ಕೆಳಗೆ ಇರತಕ್ಕಂಥ ಕೋರ್ಟ್‌ಗಳು ಎಂದು ನಾನು ಹೇಳಲಿಲ್ಲ. ಹೈಕೋರ್ಟಿನ ಅಧೀನದಲ್ಲಿರತಕ್ಕಂಥ ಕೆಳಗಿನ ಕೋರ್ಟ್‌ಗಳು ಸಹ ಚೆನ್ನಾಗಿ ಕೆಲಸ ಮಾಡಬೇಕೆಂದು ನಾನು ಹೇಳುತ್ತೇನೆ. ನಾನು ಆ ರೀತಿ ಹೇಳಿದರೆ ತಾವು ಈ ರೀತಿ ತಪ್ಪು ತಿಳಿದುಕೊಂಡರೆ ನಾನು ಏನು ಮಾಡುವುದು ?

ಶ್ರೀ ಎನ್. ಚಿಕ್ಕೇಗೌಡ.—ಸ್ವಾಮಿ ಅದು ಅಭ್ಯಾಸ ಬಲ.

ಶ್ರೀ ವೈ. ರಾಮಕೃಷ್ಣ.— ಸ್ವಾಮಿ ಇನ್ನು ನಾನು ಆಡಳಿತದ ಬಗ್ಗೆ ಪ್ರಸ್ತಾಪ ಮಾಡುವುದಾದರೆ ತಾವು ಅಧಿಕಾರಕ್ಕೆ ಬಂದ ಮೇಲೆ ಎಷ್ಟು ಜನ ಹರಿಜನ ಮತ್ತು ಗಿರಿಜನರಿಗೆ ಅವರಿಗೆ ಸಿಗಬೇಕಾದಂಥ ಸೌಕರ್ಯವನ್ನು ಮತ್ತು ಅವರಿಗೆ ಸಿಗಬೇಕಾದಂಥ ಸೌಲತ್ತುಗಳನ್ನು ಒದಗಿಸಿಕೊಟ್ಟಿದ್ದೀರಿ ? ತಾವು ಎಷ್ಟು ಜನ ಹರಿಜನ ಮತ್ತು ಗಿರಿಜನರಿಗೆ ಗೌರ್ನ್ಮೆಂಟ್ ಪ್ಲೀಡರ್ ಆಗಿ ನೇಮಕ ಮಾಡಿದ್ದೀರಿ ? ಎಷ್ಟು ಜನ ಪಬ್ಲಿಕ್ ಪ್ರಾಸಿಕ್ಯೂಟರ್‌ರವರನ್ನು ನೇಮಕ ಮಾಡಿದ್ದೀರಿ ? ಎಷ್ಟು ಜನ ಅಸಿಸ್ಟೆಂಟ್ ಪಬ್ಲಿಕ್ ಪ್ರಾಸಿಕ್ಯೂಟರ್ಸ್‌ನ್ನು ನೇಮಕ ಮಾಡಿದ್ದೀರಿ ? ಮತ್ತು ಯಾರಿಗೆ ಯಾವ ಜಾಗಗಳಲ್ಲಿ ರಿಜರ್ವೇಷನ್ ಕೊಟ್ಟಿದ್ದೀರಿ ಎಂಬುದನ್ನು ತಿಳಿಸಬೇಕು. ಏಕೆಂದರೆ They have established a good precedent. They deserve our congratulations. ಯಾವ್ಯಾವ ವರ್ಗಕ್ಕೆ ಏನೇನು ಸೌಲಭ್ಯಗಳನ್ನು ಕೊಟ್ಟಿದ್ದೀರಿ ? You have forgotten that this is the Asembly hall. ಏಕೆಂದರೆ ತಾವು ಯಾವಾಗಲೂ ಒಂದು ಪಾಲಿಸಿಯನ್ನು ಪಾಲಿಸಿಕೊಂಡು ಹೋಗುವವರು. ಆದ್ದರಿಂದ ತಾವು ಎಲ್ಲಾ ವಿಷಯವನ್ನು ಸಹ ಸಮರ್ಪಕವಾಗಿ ಕಾನೂನು ಬದ್ಧವಾಗಿ ಪಾಲಿಸಿಕೊಂಡು ಹೋಗಬೇಕಾಗುತ್ತದೆ. ಇಲ್ಲದಿದ್ದರೆ ಬಹಳ ಕಷ್ಟವಾಗುತ್ತದೆ. ಮಾನ್ಯ ಮಂತ್ರಿಗಳು ನನಗೆ ಒಳ್ಳೆಯ ಸ್ನೇಹಿತರು. ಆದ್ದರಿಂದ ನಾನು ತಮ್ಮಲ್ಲಿ ಕೇಳಿಕೊಳ್ಳುವುದೇನೆಂದರೆ please give me the list sothat I should be satisfied that you have followed the policy of reservation. ಇನ್ನು ನಾನು ಸಿವಿಲ್ ಕೇಸುಗಳ ಬಗ್ಗೆ ಪ್ರಸ್ತಾಪ ಮಾಡುವುದಾದರೆ ದಿನಾಂಕ ೩೧-೧೨-೮೩ರ ವೇಳೆಗೆ ಸುಮಾರು ೬, ೫೪, ೧೦೮ ಕೇಸುಗಳು ಇದ್ದವು. ಆದರೆ ತಾವು ಅಧಿಕಾರಕ್ಕೆ ಬಂದ ನಂತರ ಈ ಸಿವಿಲ್ ಕೇಸುಗಳು ಎಷ್ಟು ಇವೆ ಏನು ಆಗಿದೆ ಎಂಬುದರ ಬಗ್ಗೆ ನಾನು ಪ್ರಸ್ತಾಪ ಮಾಡುವುದಕ್ಕೆ ಹೋಗುವುದಿಲ್ಲ. I never touch civil cases. because I am convinced: ಮತ್ತೆ ಕ್ರಿಮಿನಲ್ ಕೇಸುಗಳ ಬಗ್ಗೆ ಪ್ರಸ್ತಾಪ ಮಾಡುವುದಾದರೆ ದಿನಾಂಕ ೩೦-೦೨-೮೩ಕ್ಕೆ ೩, ೨೬, ೨೯೯ ಕೇಸುಗಳು ಇದ್ದವು. ನೀವು ಅಧಿಕಾರಕ್ಕೆ ಬಂದ ಮೇಲೆ ೫೮, ೮೦, ೯೪೦ ಕೇಸುಗಳು ಆಗಿವೆ. ಅಂದರೆ ೫೦ ರಷ್ಟು ಕೇಸುಗಳು ಜಾಸ್ತಿಯಾಗಿವೆ. Is it not the subject-matter about which the entire house should take note of ? ಇವು ಕ್ರಿಮಿನಲ್ ಕೇಸುಗಳು ಅವು.

ಶ್ರೀ ವೈ. ಕೆ. ರಾಮಯ್ಯ.—ಸ್ವಾಮಿ ತಮ್ಮ ಕಾಲದಲ್ಲಿ ಚಾರ್ಜ್‌ಷೀಟ್ ಹಾಕುತ್ತಿರಲಿಲ್ಲ.

ಶ್ರೀ ವೈ. ರಾಮಕೃಷ್ಣ.—ಸ್ವಾಮಿ ೧೦೦ ಕೇಸುಗಳು ಜಾಸ್ತಿಯಾಗಿಲ್ಲ. ೨೦೦ ಕೇಸುಗಳು ಜಾಸ್ತಿ ಯಾಗಿಲ್ಲ. ಸಾವಿರಾರು ಕೇಸುಗಳು ಜಾಸ್ತಿಯಾಗಿವೆ. ಈ ರೀತಿ ಕ್ರಿಮಿನಲ್ ಕೇಸುಗಳು ಜಾಸ್ತಿ ಯಾಗುತ್ತಿರುವುದಕ್ಕೆ ಕಾರಣವಾದರೂ ಏನು ಪೋಲೀಸಿನವರು ಸರಿಯಾಗಿ ಕರ್ತವ್ಯ ನಿರ್ವಹಿಸುತ್ತಿಲ್ಲವೇ ? ಅಥವಾ ಪ್ರಾಸಿಕ್ಯೂಷನ್ ಇಲಾಖೆಯವರು ಸರಿಯಾಗಿ ಕರ್ತವ್ಯ ನಿರ್ವಹಿಸುತ್ತಿಲ್ಲವೇ ? ತಾವು ಯಾವಾಗಲೂ ಒಳ್ಳೆಯ ಆಡಳಿತವನ್ನು ಜನತೆಗೆ ಕೊಡುತ್ತೇವೆಂದು ಹೇಳಿ ಕೊಳ್ಳುತ್ತೀರಿ. ಆದರೆ ಈ ರೀತಿ ಕ್ರಿಮಿನಲ್ ಕೇಸುಗಳು ಜಾಸ್ತಿಯಾಗುತ್ತಿರುವುದನ್ನು ನೋಡಿದರೆ ತಾವು ಒಳ್ಳೆಯ ಆಡಳಿತವನ್ನು ಕೊಡುವುದರಲ್ಲಿ ವಿಫಲರಾಗಿದ್ದೀರಿ ಎಂದು ಗೊತ್ತಾಗುತ್ತದೆ.

We have to streamline the Criminal administration. Immediately we have to find where exactly the mistake lies? They must render good legal advice to the police Department while investigating cases, while recording evidence under 161. ಸ್ವಾಮಿ ಇದನ್ನು ನೋಡಿದರೆ ನನಗನ್ನಿಸುತ್ತದೆ. ಪ್ರಾಸಿಕ್ಯೂಷನ್ ಡಿಪಾರ್ಟ್‌ಮೆಂಟಿನವರು ಹೇಳಿದಂತೆ ಪೋಲೀಸಿನವರು ಕೇಳುತ್ತಿದ್ದಾರೆಯೋ ಅಥವಾ ಪೋಲೀಸಿನವರು ಹೇಳಿದಂತೆ ಪ್ರಾಸಿಕ್ಯೂಷನ್ ಡಿಪಾರ್ಟ್‌ಮೆಂಟಿನವರು ಕೇಳುತ್ತಿದ್ದಾರೆಯೋ ಏನೋ ಎಂದು. ಒಂದೇ ಸಾರಿ ಈ ರೀತಿ ವಿರುಪೇರಿನಲ್ಲಿ ಕೇಸುಗಳು ಬಂದರೆ ನಾವು ಏನು ತಿಳಿದುಕೊಳ್ಳಬೇಕು ? ನನಗೆ ಇವರಿಬ್ಬರಲ್ಲಿ ಯಾರ ಮೇಲೆ ಅನುಮಾನ ಪಡಬೇಕು ಎಂಬುದು ಗೊತ್ತಾಗುತ್ತಿಲ್ಲ. ಶೇಕಡ ೧೦ ರಿಂದ ೧೫ ಪರ್ಸೆಂಟ್ ಆದರೂ ಕೇಸುಗಳನ್ನು ತೀರ್ಮಾನ ಮಾಡಲೇ ಬೇಕಾಗುತ್ತದೆ. ಆದರೆ ಆ ಕೆಲಸ ಮಾಡುತ್ತಿಲ್ಲ. ನಮ್ಮ ಮಾನ್ಯ ಮಂತ್ರಿಗಳು ಒಂದು ಸಾರಿ ಸಮಾಜವನ್ನು ಶುದ್ಧಿ ಮಾಡಬೇಕೆಂದು ಹೇಳಿದರು. ಯಾರು ಸಾಕ್ಷಿ ಹೇಳುವುದಕ್ಕೆ ಬರುತ್ತಾರೋ ಅವರು ಕೋರ್ಟಿನಲ್ಲಿ ಒಂದು ತರಹ ಸಾಕ್ಷಿ ಹೇಳುತ್ತಾರೆ ಪೋಲೀಸಿನವರ ಬಳಿ ಒಂದು ರೀತಿಯ ಸಾಕ್ಷಿಯನ್ನು ಹೇಳಿರುತ್ತಾರೆ. ಆಗ ಒಂದಕ್ಕೊಂದು

ತದ್ವಿರುದ್ಧವಾಗುತ್ತದೆ. ಆದ್ದರಿಂದ ತಾವು ಮೊದಲು ಸಮಾಜವನ್ನು ಶುದ್ಧಿ ಮಾಡಬೇಕೆಂದು ಹೇಳಿದರು. ಸ್ವಾಮಿ ಯಾರಾದರೂ ಸುಳ್ಳು ಸಾಕ್ಷಿಯನ್ನು ಹೇಳಿದ್ದರೆ ಅಂಥವರಿಗೆ ತಾವು ಶಿಕ್ಷೆಯನ್ನು ಕೊಡಿ. ನಾನು ಬೇಡವೆಂದು ಹೇಳುವುದಿಲ್ಲ. ನಾಲ್ಕೈದು ಜನರಿಗೆ ಆ ರೀತಿಯ ಶಿಕ್ಷೆಯನ್ನು ಕೊಟ್ಟರೆ ಆಗ ಸಮಾಜದಲ್ಲಿ ತನ್ನಷ್ಟಕ್ಕೆ ತಾನೇ ಶುದ್ಧಿಯಾಗುತ್ತದೆ. ಆಗ ಜನರಲ್ಲಿ ಒಂದು ಭಯ ಬರುತ್ತದೆ.

ಛೇರ್ಮನ್.—ಸ್ವಾಮಿ ತಾವು ಬಹಳ ಚೆನ್ನಾಗಿ ಮಾತನಾಡುತ್ತಿದ್ದೀರಿ. ಇದುವರೆಗೂ ತಾವು ಎರಡು ಮೂರು ವಿಷಯಗಳನ್ನು ಮಾತ್ರ ಪ್ರಸ್ತಾಪ ಮಾಡಿದ್ದೀರಿ. ತಾವು ಈಗಾಗಲೇ ೧-೩೦ ನಿಮಿಷಗಳನ್ನು ತೆಗೆದುಕೊಂಡಿದ್ದೀರಿ.

ಶ್ರೀ ವೈ. ರಾಮಕೃಷ್ಣ.—ಸ್ವಾಮಿ ನಾನು ಇನ್ನು ಬಹಳ ಮುಖ್ಯವಾದಂಥ ವಿಷಯಗಳ ಬಗ್ಗೆ ಪ್ರಸ್ತಾಪ ಮಾಡಿಲ್ಲ. ಸ್ವಾಮಿ ಸರ್ಕಾರದ ವರದಿಯಲ್ಲಿ ಪುಟ ೧೧ರಲ್ಲಿ ಮೋಟಾರ್ ವೆಹಿಕಲ್ ಕೇಸುಗಳಿಗೆ ಸಂಬಂಧ ಪಟ್ಟ ಹಾಗೆ ಸುಮಾರು ೧೧,೫೦೦ ಕೇಸುಗಳು ಪೆಂಡಿಂಗ್ ಇವೆ ಎಂದು ಹೇಳಿದ್ದಾರೆ. ಆದರೆ ಸರ್ಕಾರದವರು ಈ ಕಡೆ ಕೂಡ ಹೆಚ್ಚು ಗಮನವನ್ನು ಕೊಟ್ಟಿಲ್ಲ. ಇದರಲ್ಲಿ ಇನ್‌ಷೂರೆನ್ಸ್‌ಗೆ ಸಂಬಂಧಪಟ್ಟ ಹಾಗೆ ಕೇಸುಗಳು ಇರುತ್ತವೆ. ಮೋಟಾರು ವಾಹನಗಳ ಅಫಘಾತಗಳಿಗೆ ಸಂಬಂಧ ಪಟ್ಟ ಹಾಗೆ ಕೇಸುಗಳು ಇರುತ್ತವೆ. ಆದ್ದರಿಂದ ತಾವು ಈ ಬಗ್ಗೆ ಹೆಚ್ಚು ಗಮನ ಕೊಟ್ಟು ಬೇಗ ಪರಿಹಾರ ಮಾಡಿ ಅವರಿಗೆ ದೊರಕುವಂಥ ಪರಿಹಾರ ಹಣವನ್ನು ಕೊಡಿಸುವುದಕ್ಕೆ ಪ್ರಯತ್ನ ಮಾಡಿ ಎಂದು ನಾನು ಹೇಳುತ್ತೇನೆ.

ಪ್ರತಿಯೊಂದು ಕೋರ್ಟ್‌ನಲ್ಲೂ ಎಚ್.ಆರ್.ಸಿ. ಕೇಸಸ್‌ಗಳು ಪೆಂಡಿಂಗ್ ಇವೆ.

(ಶ್ರೀ ಎಚ್. ಎ. ಗೋವಿಂದೇಗೌಡ ಅವರು ಅಧ್ಯಕ್ಷ ಪೀಠವನ್ನು ಅಲಂಕರಿಸಿದರು)

ವರ್ಷಾನುಗಟ್ಟಲೆ ಎಚ್.ಆರ್.ಸಿ. ಕೇಸ್‌ಗಳನ್ನು ಮುಂದುವರಿಸಿಕೊಂಡು ಹೋಗುತ್ತಿದ್ದರೆ ಹೇಗೆ? ನಾನು ಬಹಳ ವಿಷಾದದಿಂದ ಹೇಳಬೇಕಾಗಿದೆ. ನೀವು ಏನಾದರೊಂದು ಕಟ್ಟುನಿಟ್ಟಾದ ನೀತಿಯನ್ನು ಹಾಕಿಕೊಳ್ಳಬೇಕು. ಅಪೀಲ್ ಹಿಯರ್ ಮಾಡುವುದನ್ನು ಕಟ್ಟುನಿಟ್ಟಾಗಿ ಮೂರು ತಿಂಗಳೊಳಗೆ ಮಾಡಬೇಕು. ಮನೆ ಬಾಡಿಗೆ ಮೂರು ಸಾವಿರ ರೂಪಾಯಿಗಳು ಇದ್ದು, ೫ ವರ್ಷಗಳ ಕಾಲ ಬಾಡಿಗೆ ಕೊಡದಿದ್ದರೆ ಮನೆ ಮಾಲೀಕರು ಏನು ಮಾಡಬೇಕು ? ಬಾಡಿಗೆ ಕೇಳಲಿಕ್ಕೆ ಹೋದರೆ ಸ್ಟೇ ತರುತ್ತಾರೆ. ಮನೆ ಅಲಾಟ್ ಆದ ಟೆನೆಂಟ್ ಸ್ಟೇ ತರುತ್ತಾರೆ. ಅಪೀಲ್ ಹಿಯರ್ ಮಾಡುವುದಿಲ್ಲ. ಮನೆಯನ್ನು ವರ್ಷಾನುಗಟ್ಟಲೆ ಖಾಲಿ ಇಟ್ಟುಕೊಂಡಿರುವುದಕ್ಕೆ ಆಗುತ್ತದೆಯೋ ? ಮನೆ ಮಾಲೀಕರಿಗೆ ಮನೆಯೂ ಇಲ್ಲ, ಹಣವೂ ಇಲ್ಲ. ಕೋರ್ಟಿಗೆ ಹೋದರೆ ವರ್ಷಾನುಗಟ್ಟಲೆಯಾಗುತ್ತದೆ, ಆದ್ದರಿಂದ ಎಚ್.ಆರ್.ಸಿ. ಯವರು ಇಷ್ಟ ಬಂದವರಿಗೆ ಕೊಟ್ಟುಕೊಳ್ಳಲಿಯೆಂದು ಮನೆಮಾಲೀಕರು ಸುಮ್ಮನೆ ಇರುತ್ತಾರೆ. ಬೆಂಗಳೂರು ಈ ರೀತಿಯಾದರೆ ಮನೆಯ ಮಾಲೀಕರು ನಾವು ಹಾಳಾಗುತ್ತೇವೆಂದು ನಗರದಲ್ಲಿ ಹಣ ಇರುವವರು ಬೇಜಾರಿನಿಂದ ಮನೆಯನ್ನು ಕಟ್ಟಿಸುವುದಿಲ್ಲ, ಮನೆಗಳನ್ನು ಯಾವಾಗ ಕಟ್ಟುವುದಿಲ್ಲವೋ, ಆಗ ಮನೆಗಳ ಪ್ರಾಬ್ಲಮ್ಸ್ ಜಾಸ್ತಿಯಾಗುತ್ತದೆ, ಮನೆ ಕಟ್ಟಬೇಕೆಂದು ಇರತಕ್ಕ ಆಸೆಯೂ ಕೂಡ ಹೊರಟುಹೋಗುತ್ತದೆ. ಎಚ್.ಆರ್.ಸಿ. ಕೇಸುಗಳು ಇರುವ ಹಾಗೆ ಕ್ರಿಮಿನಲ್ ಕೇಸುಗಳು ಸಹ ಬಹಳ ಇವೆ. ಕೇಸುಗಳು ಜಾಸ್ತಿಯಾಗುತ್ತಾ ಹೋದರೆ ನೀವು ಏನು ಮಾಡುವುದಕ್ಕೆ ಆಗುವುದಿಲ್ಲ. ನೀವು ಅಡಿಷನಲ್ ಜಡ್ಜ್ ಅಪಾಯಿಂಟ್ ಮಾಡಿಕೊಳ್ಳಿ. You please request the High Court to depute only cases entrusted to sessions Judge to certain other judges. ಕ್ರಿಮಿನಲ್ ಕೇಸಸ್‌ನಲ್ಲಿ ಇನ್ನಾಲ್ವ್ ಆಗಿರತಕ್ಕವರು ಎಷ್ಟು ದಿವಸ ಜೈಲಿನಲ್ಲಿ ಕೊಳೆಯಬೇಕು ? ಕೆಲವರು ವೈಕುಂಠಕ್ಕೆ ಹೋಗುವವರು ಇರುತ್ತಾರೆ. ಜೈಲಿನಲ್ಲಿರುವವರು ಜೀವನ ಏಡೀ ಜೈಲಿನಲ್ಲಿಯೇ ಉಳಿಯಬೇಕಾಗುತ್ತದೆ. ನೀವು ಕೇಸಸ್‌ಗಳನ್ನು ವರ್ಷಾನುಗಟ್ಟಲೆ ಮುಂದುವರಿಸಿಕೊಂಡು ಹೋದರೆ ಅದರಿಂದ ಅವರಿಗೆ ನ್ಯಾಯ ಸಿಕ್ಕುವುದಿಲ್ಲ. ಇದಲ್ಲದೆ ಲ್ಯಾಂಡ್ ಅಕ್ವಿಜಿಷನ್ ಕೇಸಸ್‌ಗಳು ಇವೆ. ಸಿವಿಲ್ ಜಡ್ಜಸ್ ಕೋರ್ಟ್‌ನಲ್ಲಿ ಎಷ್ಟು ಕೇಸುಗಳಿವೆ! ಇದೇ ರೀತಿ ಕೇಸುಗಳು ರಿಪೀಟ್ ಆಗುತ್ತಾ ಹೋಗುತ್ತವೆ. ಲ್ಯಾಂಡ್ ಅಕ್ವಿಜಿಷನ್ ಕೇಸಸ್‌ಗಳಲ್ಲಿ ಶೇಕಡ ೫, ಶೇಕಡ ೬ ರಂತೆ ಕೋಟ್ಯಾಂತರ ರೂಪಾಯಿಗಳ ಬಡ್ಡಿ ಕೊಡಬೇಕಾಗುತ್ತದೆ. ಕೇಸುಗಳು ಎಷ್ಟು ವರ್ಷಗಳಿಂದ ಪೆಂಡಿಂಗ್ ಇವೆ ? ಲ್ಯಾಂಡ್ ಅಕ್ವಿಜಿಷನ್‌ಗೋಸ್ಕರ ೫ ಕೋರ್ಟ್‌ಗಳನ್ನು ಪ್ರಾರಂಭ ಮಾಡಿ. ಇದರಿಂದ ಜಮೀನು ಕಳೆದುಕೊಂಡವರಿಗೆ ಪರಿಹಾರ ಬೇಗ ಸಿಗುತ್ತದೆ. ಲ್ಯಾಂಡ್ ಅಕ್ವಿಜಿಷನ್ ಮಾಡಿಕೊಳ್ಳುವುದು

ಬಡವರಿಗೆ ಮನೆ ನಿವೇಶನ ಕೊಡಲಿಕ್ಕೆ, ನೀರಾವರಿ ಪ್ರದೇಶಗಳಲ್ಲಿ ಕಾಲುವೆ ಮಾಡಲಿಕ್ಕೆ ಭೂಮಿಯನ್ನು ಅಕ್ವಿಜಿಷನ್ ಮಾಡಿದ ಮೇಲೆ ನೀವು ಪರಿಹಾರ ಕೊಡದಿದ್ದರೆ ಹೇಗೆ ? ಇರತಕ್ಕ ೨೫ ಸಾವಿರ ಲ್ಯಾಂಡ್ ಅಕ್ವಿಜಿಷನ್ ಕೇಸಸ್‌ಗಳನ್ನು ಆದಷ್ಟು ಶೀಘ್ರವಾಗಿ ಇತ್ಯರ್ಥ ಮಾಡುವುದಕ್ಕೆ ಅವಕಾಶ ಮಾಡಿಕೊಳ್ಳಬೇಕು. ಇದು ಕೂಡ ಒಂದು ದೊಡ್ಡ ಕೆಲಸವೆಂದು ನಾನು ಭಾವಿಸಿಕೊಂಡಿದ್ದೇನೆ. ಕೆ.ಎ.ಡಿ ಆರ್. ಕೇಸಸ್‌ಗಳು ೨ ಲಕ್ಷದ ೬೨ ಸಾವಿರದ ೯೭೨ ಕೇಸುಗಳನ್ನು ಒಂದೇ ಸಾರಿ ಡಿಸ್‌ಪೋಸಲ್ ಕೊಡಬೇಕು. ಇರತಕ್ಕ ಆಕ್ಟನ್ನು ರಿಪೀಲ್ ಮಾಡಿ, ನಾನು ವಿರೋಧ ಪಕ್ಷದಲ್ಲಿದ್ದುಕೊಂಡು ಈ ಸಲಹೆ ಮಾಡುತ್ತಿದ್ದೇನೆ. ಮೂರು ಲಕ್ಷ ಕೇಸಸ್‌ಗಳು ಏನಿವೆ ಅವುಗಳಿಗೆ ನಿಮ್ಮಲ್ಲಿ ರಿಕಾರ್ಡ್ ಸಿಗುತ್ತದೆಯೇ? ಕೇಸುಗಳು ಯಾವ ಕೋರ್ಟಿನಲ್ಲಿವೆ? ಕರ್ನಾಟಕ ಡೆಟ್ ರಿಲೀಫ್ ಆಕ್ಟ್ ಜಾರಿಗೆ ಬಂದಿದೆ. It has not ? significance because they have covered under this. Hon. Minister can amerd the act. Give them power. ಒಂದು ವೇಳೆ ಕವರ್ ಆಗದಿದ್ದರೆ, ಆಕ್ಟನ್ನು ಅಮೆಂಡ್ ಮಾಡಿ. ಮೂರು ಲಕ್ಷ ಕೇಸುಗಳು ಏನಿವೆ ಅವುಗಳನ್ನು ಡಿಸ್‌ಪೋಸಲ್ ಮಾಡುವುದಕ್ಕೆ ಕೂಡಲೇ ತಿದ್ದುಪಡಿ ವಿಧೇಯಕ ತೆಗೆದುಕೊಂಡು ಬನ್ನಿ ಎಂದು ನಾನು ಸಲಹೆ ಕೊಡುತ್ತಿದ್ದೇನೆ.

ಇನ್ನು ಅತಿಮುಖ್ಯವಾದ ವಿಚಾರವೇನೆಂದರೆ ಇತ್ತೀಚೆಗೆ ನೀವು ಅಧಿಕಾರ ವಹಿಸಿಕೊಂಡ ಮೇಲೆ ಸರ್ಕಾರಿ ಕೆಲಸ ನೋಡಿಕೊಳ್ಳಲಿಕ್ಕೆ ಶ್ರೀಮಾನ್ ನರಸಿಂಹಮೂರ್ತಿಯವರನ್ನು ಅಡ್ವೋಕೇಟ್ ಜನರಲ್ ಆಗಿ ನೇಮಕ ಮಾಡಿದರು. ಅವರು ಒಂದು ವರ್ಷಕಾಲ ಕೆಲಸ ಮಾಡಿದರು. ಅವರು ತಮ್ಮ ಹುದ್ದೆಗೆ ರಾಜೀನಾಮೆಯನ್ನು ಕೊಟ್ಟರು ಎಂದು ನಾನು ಪತ್ರಿಕೆಯಲ್ಲಿ ಓದಿದ್ದೇನೆ. ಅವರು ಯಾವ ಕಾರಣಕ್ಕೋಸ್ಕರ ರಾಜೀನಾಮೆಯನ್ನು ಕೊಟ್ಟರೋ ನನಗೆ ಗೊತ್ತಿಲ್ಲ. ಅಡ್ವೋಕೇಟ್ ಜನರಲ್ ಹುದ್ದೆ ಬಹಳ ಪ್ರಮುಖವಾದ ಹುದ್ದೆ. ಅವರು ಈ ಸದನದ ಪದನಿಮಿತ್ತ ಸದಸ್ಯರು ಆಗಿರುತ್ತಾರೆ. ಇದು ತಮಗೆ ಗೊತ್ತಿದೆ ಅವರು ಏತಕ್ಕೋಸ್ಕರ ರಾಜೀನಾಮೆಯನ್ನು ಕೊಟ್ಟರು ? ನೀವು ಅವರ ಮೇಲೆ ನಿಮ್ಮ ಅಭಿಪ್ರಾಯವನ್ನು ಬಲವಂತವಾಗಿ ಹೇರುತ್ತೀರಿ ಎಂದು ಕಾಣುತ್ತದೆ. ಕೆಲವಾರು ಡಿಸ್‌ಪ್ಯೂಟ್‌ಗಳಲ್ಲಿ ವಾಟರ್ ಡಿಸ್‌ಪ್ಯೂಟ್, ಮತ್ತೊಂದು ಮಗದೊಂದು ಯಾವುದೇ ಕಾರಣವಿರಬಹುದು. ಸತ್ಯ ಹೊರಗೆ ಬರಲಿ. ಅವರು ರಾಜೀನಾಮೆಯನ್ನು ಕೊಡತಕ್ಕಂತಹ ಪರಿಸ್ಥಿತಿಗೆ ಹೋಗಬೇಕಾದರೆ ಮಹತ್ತರವಾದ ಕಾರಣಗಳು ಇರಬಹುದು. ಆ ರೀತಿ ಇಲ್ಲದಿದ್ದರೆ ಅವರು ರಾಜೀನಾಮೆ ಕೊಡುತ್ತಿರಲಿಲ್ಲ. ನಮಗೆ ಅದು ಗೊತ್ತಾಗಬೇಕು. ಅವರು ಏತಕ್ಕೋಸ್ಕರ ರಾಜೀನಾಮೆಯನ್ನು ಕೊಟ್ಟರು ? ಯಾವ ಕಾರಣಕ್ಕೋಸ್ಕರ ಕೊಟ್ಟರು ನೀವು ಇದರ ಬಗ್ಗೆ ಯಾವುದೋ ಒಂದು ಕಾರಣ ಹೇಳಬಹುದು, ವೈಯಕ್ತಿಕಗಳಿಂದ, ಅನಾರೋಗ್ಯದ ನಿಮಿತ್ತ ಎಂದು ಹೇಳಬಹುದು. ಅವರು ಆರೋಗ್ಯವಾಗಿರಲಿ ಬಹಳ ಕಾರಣ ಸಂತೋಷ. ಅಡ್ವೋಕೇಟ್ ಜನರಲ್‌ರವರು ರಾಜೀನಾಮೆ ಕೊಟ್ಟಿರುವುದರಿಂದ ನಮ್ಮ ಮನಸ್ಸಿಗೆ ಏನೇನೋ ಭಾಸವಾಗುತ್ತಿದೆ. ಅವರನ್ನು ನೀವು ಕೇಳದೆ ಗೌರ್ನಮೆಂಟ್ ಪ್ಲೀಡರ್ ಮತ್ತು ಪಬ್ಲಿಕ್ ಪ್ರಾಸಿಕ್ಯೂಟರ್‌ಗಳನ್ನು ನೇಮಕ ಮಾಡಿದ್ದೀರಾ ? ಏತಕ್ಕೋಸ್ಕರ ಅವರು ರಾಜೀನಾಮೆಯನ್ನು ಕೊಟ್ಟರು ಎಂಬುದನ್ನು ತಾವು ಉತ್ತರ ಕೊಡುವಾಗ ತಿಳಿಸಬೇಕು. ಅವರು ರಾಜೀನಾಮೆಯನ್ನು ಕೊಟ್ಟಮೇಲೆ ಅದನ್ನು ತಾವು ಒಪ್ಪಿಕೊಂಡಮೇಲೆ ಬೇರೆಯವರನ್ನು ಅಡ್ವೋಕೇಟ್ ಜನರಲ್ ಆಗಿ ಅಪಾಯಿಂಟ್ ಮಾಡಿದ್ದೀರಿ. ನೀವು ಯಾವುದನ್ನೂ ಕೂಡ ಅನುಮಾನಾಸ್ಪದವಾಗಿ ನೋಡಬಾರದು. ಅಂತಹ ಹುದ್ದೆಗಳಿಗೆ ಅಭ್ಯರ್ಥಿಗಳನ್ನು ಆಯ್ಕೆ ಮಾಡುವಾಗ ಅವರು ಯಾವುದೇ ವಾದ ವಿವಾದಗಳ ಸುಳಿಯಲ್ಲಿ ಸಿಕ್ಕಿರಬಾರದು. ಅದೊಂದು ಸತ್‌ಸಂಪ್ರದಾಯ. ಅವರು ಯಾವುದೇ ಪಕ್ಷದಲ್ಲಿರಬಾರದು ಅದು ಒಂದು ಸಂಪ್ರದಾಯ. ಈಗ ನೀವು ನೇಮಕ ಮಾಡಿರತಕ್ಕವರು because we belongs to a particular party which now sits in the opposition. ನಮಗೆ ಅನುಮಾನ ಬರುತ್ತಿದೆ. ನೀವು ಸರ್ಕಾರವನ್ನು ಉಳಿಸಿಕೊಳ್ಳುವುದಕ್ಕೋಸ್ಕರವಾಗಿ...

SRI M. S. KRISHNAN.—The new Advocate-General belongs to a party which sits in the opposition.

SRI Y. RAMAKRISHNA, —Because I belong to a party.

SRI A. LAKSHMISAGAR.—Tea party.

SRI Y. RAMA KRISHNA.—Bharatiya Janatha Party has become tea-party ಎಂದು ಲಕ್ಷ್ಮೀಸಾಗರ್‌ರವರು ಹೇಳುತ್ತಿದ್ದಾರೆ, ನಾನೇನು ಟೀ-ಪಾರ್ಟಿಯೆಂದು ಹೇಳಲಿಲ್ಲ. In order to continue that oxygen this is the gift you have given in appointing his son as the Advocate-General. ಇವರು ಅಧಿಕಾರದಲ್ಲಿ ಉಳಿಯಬೇಕೆನ್ನುವ ಹಂಬಲದಿಂದ, ಅಡ್ವೋಕೇಟ್ ಜನರಲ್ ಅವರ ತಂದೆ ಇವರಿಗೆ ಆಕ್ಸಿಜನ್ ಇದ್ದಹಾಗೆ ಆಕ್ಸಿಜನ್ ವಾಪಸ್ ತೆಗೆದುಕೊಳ್ಳುತ್ತೇವೆ ಎಂದರೆ ಇವರು ಕುಸಿದು ಬೀಳುತ್ತಾರೆ ಭಾರತೀಯ ಜನತಾ ಪಕ್ಷದ ಉಪಾಧ್ಯಕ್ಷರು ಶ್ರೀಮಾನ್ ಕೆ. ಎಸ್. ಹೆಗಡೆಯವರು. This is the charge I am making. ನಮಗಿರತಕ್ಕ ಅನುಮಾನವನ್ನು ಪರಿಹಾರ ಮಾಡತಕ್ಕದ್ದು ತಮಗೆ ಸೇರಿದ್ದು. ಅಡ್ವೋಕೇಟ್ ಜನರಲ್ ಅವರ ಯೋಗ್ಯತೆಯ ವಿಚಾರದಲ್ಲಿ ಅವರ ಅರ್ಹತೆಯ ವಿಚಾರದಲ್ಲಿ ನಾನು ವಾದ ಮಾಡುವುದಕ್ಕೆ ತಯಾರಾಗಿಲ್ಲ. ಆದರೆ ತಾವು ತುಲನೆಮಾಡಿ ನೋಡಿ. ಹಿಂದೆ ಸೋಮನಾಥ ಅಯ್ಯರ್, ಜಯರಾಜ ಯತಿರಾಜಲು ನಾಯ್ಡು, ಭೈರಾರೆಡ್ಡಿಯವರು ಹೆಸರಾಂತ ಅಡ್ವೋಕೇಟ್ಸ್‌ಗಳು, ಅಡ್ವೋಕೇಟ್ ಜನರಲ್ ಆಗಿದ್ದರು,

ಇವರ ಎಕ್ಸ್‌ಪೀರಿಯನ್ಸ್... ...... .. .

ಶ್ರೀ ಎ. ಲಕ್ಷ್ಮೀಸಾಗರ್.—ಭೈರಾರೆಡ್ಡಿಯವರು ಯಾವ ಪಾರ್ಟಿಯಲ್ಲಿ ಸೇರಿದ್ದರು.

ಶ್ರೀ ವೈ. ರಾಮಕೃಷ್ಣ.—ಅದನ್ನು ಆಮೇಲೆ ಕಲ್ಪನೆ ಮಾಡಿಕೊಳ್ಳಿ ನೀವು ಉತ್ತರದಲ್ಲಿ ಹೇಳಿ. ನನಗೆ ಏತಕ್ಕೆ ಇಂಟರಪ್ಟ್ ಮಾಡುತ್ತೀರಿ ? ನಿಮಗೆ ಬೇಕಾದ ಆಕ್ಸಿಜನ್ ಉಳಿಸಿಕೊಳ್ಳುವುದಕ್ಕೆ ಅವರ ಮಕ್ಕಳಿಗೆ ಆ ಹುದ್ದೆ ಕೊಟ್ಟು ಫೇವರಿಟಿಸಂ ತೋರಿಸಿದ್ದೀರಿ. ಅದಕ್ಕಾಗಿ ಅವರನ್ನು ಅಡ್ವೋಕೇಟ್ ಜನರಲ್ ಮಾಡಿದ್ದೀರಿ ಎಂಬುದು ನನ್ನ ಆಪಾದನೆ. ಇದನ್ನು ಬಹಿರಂಗವಾಗಿ ಹೇಳುತ್ತಿದ್ದೇನೆ. ಇದನ್ನು ನೀವು ಬೇಕಾದರೆ ಯಾವರೀತಿ ಸಮರ್ಥಿಸಿಕೊಳ್ಳುತ್ತೀರೋ ಅದು ತಮಗೆ ಸೇರಿದ್ದು. ಇನ್ನೊಂದು ಗಹನವಾದ ವಿಚಾರವನ್ನು ನಾನು ಹೇಳಬೇಕಾಗಿದೆ. ಕಾನೂನು ಮಂತ್ರಿಗಳು ಇವರಲ್ಲಿ ಎಲ್ಲಿ ಎಡವಿದರು ಎಂಬುದು ನನಗೆ ಗೊತ್ತಾಗಲಿಲ್ಲ.

ಶ್ರೀ ಎ. ಲಕ್ಷ್ಮೀಸಾಗರ್.—ನಿಮ್ಮ ವಾದವನ್ನು ಎಲ್ಲಿಂದ ಎಲ್ಲಿಗೆ ಬೆಳೆಸುತ್ತೀರಿ ? ವಾದಕ್ಕೆ ತರ್ಕ ಇರಬೇಕು ಎಂದಿದೆ, ತರ್ಕದ ಚೌಕಟ್ಟಿನಲ್ಲಿ ಮಾತನಾಡಿದರೆ ವಾದಕ್ಕೆ ಒಂದು ಮುಂಚೂಣಿ ಇರುತ್ತದೆ. ಅರ್ಥ ಇರುತ್ತದೆ. ತಾತ್ಪರ್ಯ ಇರುತ್ತದೆ. ಆದರೆ ತರ್ಕ ಇಲ್ಲದೇ ಇರತಕ್ಕ ವಾದವನ್ನು ಮುಂದಿಟ್ಟು ಇದು ಇರಬಹುದು. ನೀವು ಬೇಕಾದರೆ ವಿನಾಯದರೂ ಉತ್ತರ ಹೇಳಿ ಎಂದು ಮೋಗು ಆಗಿ ಎಲ್ಲರ ಮುಖಕ್ಕೂ ಟಾರ್ ಬಳಿಯತಕ್ಕ ವಾದವನ್ನು ಇಟ್ಟರೆ ಅದು ಸಾಧುವಾದುದಲ್ಲ.

ಶ್ರೀ ವೈ. ರಾಮಕೃಷ್ಣ.—ಸತ್ಯಕ್ಕೆ ದೂರವಾದ ಮಾತನ್ನು ಒಂದೇನಾದರೂ ಹೇಳಿದ್ದರೆ ಹೇಳಿ. ನೀವು ಟಾರ್ ಬಳಸಿಕೊಳ್ಳುತ್ತಿದ್ದೀರಿ.

ಶ್ರೀ ಎಸ್. ಸೂರ್ಯನಾರಾಯಣರಾವ್.—ಸಂತೋಷ್ ಹೆಗಡೆಯವರು ಬಿ.ಜೆ.ಪಿ. ಉಪಾಧ್ಯಕ್ಷರಾದ ಕೆ. ಎಸ್. ಹೆಗಡೆಯವರ ಪುತ್ರರು ಎಂದು ಹೇಳುತ್ತಿದ್ದಾರೆ.

ಶ್ರೀ ಎ. ಲಕ್ಷ್ಮೀಸಾಗರ್.—ಅದು ನನಗೆ ಗೊತ್ತಿಲ್ಲವೆ ? ಈಗಿನ ಕಾಲದಲ್ಲಿ ತಂದೆ ಒಂದು ಪಾರ್ಟಿಯಾದರೆ ಮಗ ಯಾವ ಪಾರ್ಟಿಗೂ ಸೇರದೇ ಇರಬಹುದು. ಈಗಿನ ನೂತನ ಅಡ್ವೋಕೇಟ್ ಜನರಲ್ ಅವರು ಯಾವ ಪಾರ್ಟಿಗೂ ಸೇರಿಲ್ಲವೆಂಬುದನ್ನು ತಿಳಿದುಕೊಳ್ಳದೆ ಅಪ್ಪನ ಹೆಸರು ಹೇಳಿಕೊಂಡು ಮಗನೂ ಅದೇ ಜಾಡಿನಲ್ಲಿ ಇಳಿಯುತ್ತಾನೆಂದು ಹೇಳುವುದು ತುಂಬಾ ದುರದೃಷ್ಟಕರವಾದುದು.

SRI A. LAKSHMISAGAR.—He belongs to no party. I know him. I have been at the bar for the last 27 years. He came little later. I have known him completely. He doesn't belong to any party irrespective of politics of his father. He has no party. Let him understand like this. Therefore, there is no point in drawing conclusions which have no basis, which have no legs to stand. There must be modicum of responsibility and related inference...... ........

SRI Y. RAMAKRISHNA.—Please don't misquote. ನಾನು ಹೇಳಿದ್ದು ಅವರ ತಂದೆ ಪೊಲಿಟಿಕಲ್ ಪಾರ್ಟಿಗೆ ಸೇರಿದ್ದಾರೆ ಎಂದು. ಅಡ್ವೋಕೇಟ್ ಜನರಲ್ ಅವರು ಯಾವುದೇ ಪಕ್ಷಕ್ಕೆ ಸೇರಿದ್ದಾರೆಂದು ಹೇಳಿಲ್ಲ.

SRI A. LAKSHMISAGAR.—Mr. Chairman, the inference he sought to draw was that the father belongs to B J P and therefore in order to get the support of the B J P because SRI K. S. Hedge belongr B J P and also he is the Vice-President of that party, we have appointed him. It is a canard. This is point No. 1.

Point No. 2. He must know the facts before making allegations. We are not drawing oxygen. Janata Party is drawing oxygen from nature. As long as people repose confidence in us we will continue and we are continuing. There is no outside agency. We have taken the support of friendly parties. We are proud to have their support. We are entitled to have their support and they continue to extend their support so that you don't come to power. Sir, when their party took support of C P I there was no objection. What is the position that obtains in Kerala, in Harayana and in some other States. Let us look at those affairs. Let us not close our eyes and try to draw some inferences. There must be some limitations in making allegations against the persons who are not members of this House and who cannot defend themselves.

SRI Y. RAMAKRISHNA.—I need not learn any lesson.

SRI A. LAKSHMISAGAR.—He goes on learning............

ಶ್ರೀ ವೈ. ರಾಮಕೃಷ್ಣ.—ಅವರು ರಾಜಕೀಯ ಪಕ್ಷದ ಮುಖಂಡರು ಎಂದು ಹೇಳಿದೆ, Why do you attribute motives? Why do you presume like that? Why do you teach me? You can teach law students but not the Legislators. ನನಗೆ ನನ್ನ ಜವಾಬ್ದಾರಿ, ಗೊತ್ತಿದೆ ಅದನ್ನರಿತು ನಾನು ಮಾತನಾಡಿದ್ದೇನೆ. ವಿಷಯ ಎಲ್ಲಾ ಹೇಳಬೇಕು ಎಂದರೆ ಹೇಳುತ್ತೇನೆ.

ಶ್ರೀ ಎಂ. ಜಿ. ಸತ್ಯನಾರಾಯಣ.—ಆಕ್ಸಿಜನ್ ನಮ್ಮ ಕಡೆಯಿಂದ ತೆಗೆದುಕೊಳ್ಳುವುದಕ್ಕೆ ನೀವು ಪ್ರಯತ್ನ ಪಟ್ಟಿದ್ದೀರಿ. ಆದರೆ ಅದರಲ್ಲಿ ಫೈಲ್ ಆಗಿದ್ದೀರಿ, ಏತಕ್ಕೆ ಅದರ ಬಗ್ಗೆ ಈಗ ಮಾತನಾಡುತ್ತೀರಿ?

ಶ್ರೀ ವೈ. ರಾಮಕೃಷ್ಣ.—ಆಯಿತು ಕಲಿತುಕೊಳ್ಳಿ. ಮತ್ತೊಂದು ನನ್ನ ಮನಸ್ಸಿಗೆ ತುಂಬಾ ನೋವಾಗಿರುವ ವಿಚಾರ ಹೇಳಬೇಕಾಗಿದೆ. ಇದರ ಬಗ್ಗೆ ಆಂದೋಳನವನ್ನು ಮಾಡಬೇಕೋ ಏನೋ ಎಂಬ ಪ್ರಯತ್ನದಲ್ಲಿದ್ದೇನೆ. ಹಿಂದೆ ಸಬ್-ಆರ್ಡಿನೇಟ್ ಆಫೀಸರುಗಳನ್ನು ಹೈಕೋರ್ಟಿನವರು ನೇಮಕ ಮಾಡುವಾಗ ಹರಿಜನ ಗಿರಿಜನರಿಗೆ ಸರಿಯಾದ ಪ್ರಾತಿನಿಧ್ಯ ಸಿಗುತ್ತಿರಲಿಲ್ಲ. ಇದರ ಜೊತೆಗೆ ಹಿಂದುಳಿದ ವರ್ಗಗಳಿಗೆ, ಅಲ್ಪಸಂಖ್ಯಾತರಿಗೆ ಪ್ರಾತಿನಿಧ್ಯ ಸಿಗುತ್ತಿರಲಿಲ್ಲ. ಮೂರು ವರ್ಷ ನಾನು ಕಾನೂನು ಮಂತ್ರಿಯಾಗಿದ್ದಾಗ ಈ ಮನೆಯಲ್ಲಿ ಇದರ ಬಗ್ಗೆ ದೊಡ್ಡ ಚರ್ಚೆ ನಡೆಯಿತು. ನಾವು ಸೌಹಾರ್ದಯುತವಾಗಿ ಹೈಕೋರ್ಟಿನವರ ಜೊತೆ ಸಂಧಾನ ಮಾಡಿ ಅವರಿಗಿದ್ದ ಅಧಿಕಾರವನ್ನು ತೆಗೆದು ಲೋಕಸೇವಾ ಆಯೋಗಕ್ಕೆ ಕೊಡಿದೆವು ಇದಕ್ಕೆ ದೊಡ್ಡ ಹಿನ್ನೆಲೆ ಇದೆ. ದೊಡ್ಡ ಚಾರಿತ್ರ್ಯ ಇದೆ ಸಾರ್ವಜನಿಕ ನ್ಯಾಯ ಸಿಗಬೇಕು ಎಂಬ ದೃಷ್ಟಿಯಿಂದ ನಾವು ಅದನ್ನು ಮಾಡಿದ್ದೆವು. ಹರಿಜನರೇ ಮುಖ್ಯ ನ್ಯಾಯಾಧೀಶರಾಗಿದ್ದರೂ ಜ್ಯುಡಿಷಿಯಲ್ ಡಿಪಾರ್ಟ್‌ಮೆಂಟ್‌ನಲ್ಲಿ ಷೆಡ್ಯೂಲ್ಡ್ ಕ್ಯಾಸ್ಟ್‌ನವರನ್ನು

ಸೆಲೆಕ್ಟ್ ಮಾಡಲಿಲ್ಲ. ಏಕೆ ? ಇದನ್ನು ಮೊನಗಂಡೇ ಹೈಕೋರ್ಟಿನವರ ಜೊತೆ ಸಂಧಾನ ನಡೆಸಿ ಮಾತುಕತೆ ನಡೆಸಿ ಅವರಿಗಿದ್ದ ಅಧಿಕಾರವನ್ನು ತೆಗೆದು ಮುನ್ಸೀಫ್‌ಗಳನ್ನು ಮತ್ತು ಸಬಾರ್ಡಿನೇಟ್ ಅಧಿಕಾರಿಗಳ ಆಯ್ಕೆ ಮಾಡುವುದನ್ನು ಲೋಕಸೇವಾ ಆಯೋಗದವರಿಗೆ ಕೊಟ್ಟೆವು. ಆದರೆ ನೀವು ಪುನಃ ವೆಸ್ಟೆಡ್ ಇಂಟರೆಸ್ಟನ್ನು ಹುಟ್ಟಿ ಹಾಕಿದ್ದೀರಿ. ಮತ್ತೆ ಹೈಕೋರ್ಟಿಗೆ ಪವರ್ ಕೊಟ್ಟಿದ್ದೀರಿ. Again you have entrusted the powers to the High Court why I want to know. I would like to tell you how much pain I took for the last three years. ನಾವು ಅವರ ಮನವೊಲಿಸಿದ್ದೆವು ಅವರು ಸದನದಲ್ಲಿ ನಡೆದ ನಡವಳಿಕೆಗಳನ್ನು ನೋಡಿ ಪತ್ರಿಕೆಗಳಲ್ಲಿ ಬಂದಿರುವುದನ್ನು ಓದಿ ತಮಗೆ ಇದ್ದ ಅಧಿಕಾರವನ್ನು ಲೋಕಸೇವಾ ಆಯೋಗಕ್ಕೆ ಕೊಟ್ಟರು. ಆದರೆ ತಾವು ಬಂದ ತಕ್ಷಣ ಆ ಅಧಿಕಾರವನ್ನು ಪುನಃ ಹೈಕೋರ್ಟಿಗೆ ವಾಪಸ್ ಕೊಟ್ಟಿದ್ದೀರಿ. ಇದು ತಪ್ಪಲ್ಲವೆ ಎಂದು ಕೇಳುತ್ತಿದ್ದೇನೆ, ಇಂಜಿನಿಯರುಗಳನ್ನು, ಡಾಕ್ಟರುಗಳನ್ನು ಬೋರ್ಡ್ ಮಾಡಿಕೊಂಡು ಆಯ್ಕೆ ಮಾಡುವುದಕ್ಕೆ ಅವಕಾಶ ಇದೆ ಮುನ್ಸೀಫರನ್ನು ಹೈಕೋರ್ಟಿನವರು ನೇಮಕ ಮಾಡುತ್ತಾರೆ ಹಾಗಾದರೆ ಲೋಕಸೇವಾ ಆಯೋಗದವರಿಗೆ ಏನು ಕೆಲಸ ? ಎರಡನೆಯದಾಗಿ ಲೋಕಸೇವಾ ಆಯೋಗದವರು ಆಯ್ಕೆ ಮಾಡಿದರೆ ಅವರ ಆಯ್ಕೆ ಸರಿಯಾಗಿಲ್ಲದಿದ್ದರೆ ಹೈಕೋರ್ಟಿನಲ್ಲಿ ರಿಟ್ ಹಾಕಬಹುದು. ಆದರೆ ಹೈಕೋರ್ಟಿನವರೇ ಆಯ್ಕೆ ಮಾಡಿದಾಗ ಎಲ್ಲಿಗೆ ಹೋಗಬೇಕು ? ಸುಪ್ರೀಂ ಕೋರ್ಟಿಗೆ ಹೋಗಬೇಕಾಗುತ್ತದೆ. Don't you think it affects the natural justice. ನಾವು ಇದನ್ನೆಲ್ಲಾ ಪರಿಗಣಿಸಿಯೇ ಪಬ್ಲಿಕ್ ಸರ್ವೀಸ್ ಕಮಿಷನ್‌ವರಿಗೆ ಈ ಅಧಿಕಾರವನ್ನು ಕೊಟ್ಟಿದ್ದೆವು. ನಾವು ಪಬ್ಲಿಕ್ ಸರ್ವೀಸ್ ಕಮಿಷನ್‌ಗೆ ಅಧಿಕಾರ ಕೊಟ್ಟಮೇಲೆ ಚರಿತ್ರೆಯಲ್ಲೇ ಮೊದಲ ಬಾರಿಗೆ ೬ ಜನ ಅಧಿಕಾರಿಗಳು ಒಂದೇ ಸಾರಿ ನೇಮಕವಾದರು ಎಂದು ಹೇಳುವುದಕ್ಕೆ ನಾನು ಸಂತೋಷಪಡುತ್ತೇನೆ. ತಾವು ಈ ರೀತಿ ಹೈಕೋರ್ಟಿಗೆ ಅಧಿಕಾರವನ್ನು ವಾಪಸ್ ಕೊಡುವುದಕ್ಕೆ ಕಾರಣ ಏನು ಎಂಬುದು ನಮಗೆ ಗೊತ್ತಾಗಬೇಕು. ನಾನು ಇದ್ದಾಗ ಯಾವ ಅಧಿಕಾರಿಗಳು ಅಡ್ವೈಸ್ ಮಾಡಿದ್ದರೋ ಅದೇ ಅಧಿಕಾರಿಗಳು ನಿಮಗೂ ಅಡ್ವೈಸ್ ಮಾಡಿರುತ್ತಾರೆ. ಆದರೆ ನಾವಿದ್ದಾಗ ಒಂದು ರೀತಿ ಅಡ್ವೈಸ್ ಮಾಡುವುದು, ನೀವಿದ್ದಾಗ ಒಂದು ರೀತಿ ಅಡ್ವೈಸ್ ಮಾಡಿದರೆ ಹೇಗೆ ? ಇದರಿಂದ ಸಾಮಾಜಿಕ ನ್ಯಾಯ ಯಾವ ರೀತಿ ಸಿಗುತ್ತದೆ ಎಂಬುದನ್ನು ಯೋಚನೆ ಮಾಡಬೇಕು.

(ಉಪಾಧ್ಯಕ್ಷರು ಶ್ರೀ ವೀರಣ್ಣ. ಪೀಠದಲ್ಲಿದ್ದರು.)

೫-೦೦ ಪಿ.ಎಂ.

How are you going to comply with this ? How are you going to comply with this constitutional provisions of Article 15(3) 15(4), ಇದರ ಬಗ್ಗೆ ಆಲೋಚನೆ ಮಾಡಿದ್ದೀರಾ ? ಇಲ್ಲ, ಆಲೋಚನೆ ಮಾಡಲಿಲ್ಲ ಎಂದು ನನಗೆ ಅನ್ನಿಸುತ್ತದೆ, ಅವರು ಎಕ್ಸಾಮಿನೇಷನ್ ಕಂಡಕ್ಟ್ ಮಾಡುತ್ತಾರೆ. ಆದರೆ ನನಗೆ ಅನ್ನಿಸುತ್ತದೆ. ಇಂಟರ್‌ವ್ಯೂನಲ್ಲಿ ನಮ್ಮವರು ಯಾರು ಬರುವುದಿಲ್ಲ, ಈ ಬಗ್ಗೆ ನಾವು ಎಲ್ಲಿ ಪ್ರಶ್ನೆ ಮಾಡಬೇಕು ? ನ್ಯಾಯಾಂಗದಲ್ಲಂತು, ನಮ್ಮ ಜನರಿಗೆ ಸಿಕ್ಕಿರುವುದು ಜೀರೊ. ಇದು ನನಗೆ ಜನತಾ ಸರ್ಕಾರ ಕೊಟ್ಟಿರತಕ್ಕ ಒಂದು ದೊಡ್ಡ ಕೊಡುಗೆ. ಆರ್ಟಿಕಲ್ ೧೫(೩), ೧೫(೪) ರಲ್ಲಿ ಸಲಹೆ ಮಾಡಿರತಕ್ಕಂಥಾದ್ದನ್ನು ನಾನು ಹೇಳುತ್ತಿದ್ದೇನೆ. ಪ್ರಪ್ರಥಮ ಬಾರಿಗೆ ಮಹಿಳೆಯರು ಮುನ್ಸೀಫ್ ಆಗಿದ್ದಾರೆ. ಇನ್ನು ತಾವು ತಿದ್ದುಪಡಿ ತಂದು ಏನು ಮಾಡಿದ್ದೀರಿ ? ರೂಲ್ಸ್ ಮಾಡಿದ್ದೀರಲ್ಲ ಇದರಿಂದ ಏನಾಗುತ್ತದೆ ಎಂಬುದನ್ನು ನಾನು ಇಲ್ಲಿ ಹೇಳಬೇಕಾದರೆ, This is the lack of administrative forethought ಆಗುತ್ತದೆ. ಇವರು ಹೇಗೆ ಅಡ್ಮಿನಿಸ್ಟ್ರೇಶನ್ ಮಾಡುತ್ತಾರೆ ಎನ್ನುವುದು ಗೊತ್ತಾಗುತ್ತದೆ. ಸ್ವಾಮಿ ಹಿಂದೆ ನಡೆದಂತಹ ವಿಚಾರದಲ್ಲಿ ನಾವು ಸ್ವಲ್ಪ ಯೋಚನೆ ಮಾಡಬೇಕಾಗುತ್ತದೆ.

ಶ್ರೀ ಎಸ್.ಆರ್. ಲಕ್ಷ್ಮಯ್ಯ.—ಹಿಂದಿನ ಇತಿಹಾಸದ ಬಗ್ಗೆ ಹೇಳಿದರೆ ಹೇಗೆ ಸ್ವಾಮಿ?

ಶ್ರೀ ವೈ. ರಾಮಕೃಷ್ಣ.—ನೀವು ಕುಳಿತುಕೊಳ್ಳಿ ಸ್ವಾಮಿ, Mr. Chairman Sir, I take serious objection to this. I am fighting for the rights guaranteed

un 'er this Constitution. He cannot take it so lightly. I consider to-day it as black day for the Scheduled caste and scheduled tribes. and backward classes ಈ ಮಾತನ್ನು ನಾನು ಬಹಳ ದುಃಖದಿಂದ ಹೇಳುತ್ತಿದ್ದೇನೆ, ನನ್ನ ನೋವು ನನಗೆ ಗೊತ್ತಿದೆ ; ಎಲ್ಲಿ ಅಪಾಯಿಂಟ್‌ಮೆಂಟ್ ಕೊಡುತ್ತಿದ್ದೀರಿ ? How can they come up on par with others when they interviewed by the High Court Judges ನಾನು ಹೇಳುವುದೇನೆಂದರೆ, ಈ ಬಗ್ಗೆ ಗೇಲಿ ಮಾಡುವುದರಲ್ಲಿ ಅರ್ಥವಿಲ್ಲ. ಈ ಬಗ್ಗೆ ಗೇಲಿ ಮಾಡಿ ಮಾತನಾಡುವುದು ಸರಿಯಲ್ಲ. There is a limit to that.

ಶ್ರೀ ಎಸ್. ಆರ್. ಲಕ್ಷ್ಮಯ್ಯ.—ನಮ್ಮ ಕ್ಷೇತ್ರದಲ್ಲಿ ಹರಿಜನರಿಗೆ ೪೦ ಮನೆಗಳನ್ನು ಕಟ್ಟಿಸಿ ಕೊಟ್ಟಿದ್ದಾರೆ. ಅಲ್ಲಿ ಕುಡಿಯುವುದಕ್ಕೆ ನೀರು ಸಿಗುತ್ತಾ ಇಲ್ಲ, ಮತ್ತು ಜನತಾ ಮನೆಗಳನ್ನು ಅಲ್ಲಿ ಕಟ್ಟಿಸಿ ಕೊಟ್ಟಿರುವುದಿಲ್ಲ. ನಮ್ಮ ಕ್ಷೇತ್ರದಲ್ಲೂ ಬಹಳ ಕಷ್ಟಗಳು ಇವೆ ಸ್ವಾಮಿ.

ಶ್ರೀ ವೈ. ರಾಮಕೃಷ್ಣ.—ಈಗ ಅಧಿಕಾರದಲ್ಲಿರುವ ನಿಮ್ಮ ಪಕ್ಷದ ಮಂತ್ರಿಗಳಿಗೆ ಹೇಳಿ ಪರಿಹಾರ ಪಡೆದುಕೊಳ್ಳಿ ಸ್ವಾಮಿ, ನಾನು ನಮ್ಮ ಕ್ಷೇತ್ರದ ಬಗ್ಗೆ ಹೌಸಿಂಗ್ ವಿಷಯ ಬಂದಾಗ ಅಲ್ಲಿ ಹೇಳುತ್ತೇನೆ. I have covered judiciary, I have covered Legislature, Now I want to cover the Executive. The performance of this Government. I have figures and I will show by facts. ಇನ್ನು ಪ್ಲಾನಿಂಗ್ ರಿಪೋರ್ಟ್ ಪಬ್ಲಿಷ್ ಮಾಡಿದ್ದಾರೆ, ಪಬ್ಲಿಕ್ ಸರ್ವಿಸ್ ಕಮಿಷನ್ ರಿಪೋರ್ಟ್ ಓದಿದ್ದೇನೆ. ಮಾನ್ಯ ಲಕ್ಷ್ಮೀಸಾಗರ್‌ರವರು ಇದರ ಬಗ್ಗೆ ತಿಳಿದುಕೊಳ್ಳಬೇಕಾಗಿದೆ. Youhave to respect the sentiments expressed in this house. ಈ ಸಭೆಯು ಮಾನ್ಯ ಸದಸ್ಯರ ಮಾತನ್ನು ಕೇಳಿ, ಅಡ್ವೈಸ್ ತೆಗೆದುಕೊಂಡು ಅದನ್ನು ಸಭೆಯ ಮುಂದೆ ಇಟ್ಟಿದ್ದಾರೆಯೇ ಹೊರತು, ಇದು ರಾಜಕೀಯ ಡಿಸಿಷನ್ನೇ ? ಇದು ರಾಜಕೀಯ ಡಿಸಿಷನ್ ಎಂದರೆ ನಾನು ಒಪ್ಪಿಕೊಳ್ಳುತ್ತೇನೆ. ಆದರೆ ಇದು ರಾಜಕೀಯ ಡಿಸಿಷನ್ ಅಲ್ಲ. Vested interest decision just to deprive the Scheduled caste people, backward classes and the minorities. You have also taken decisions to deprive the benefits available to women. ಇದು ಬಹಳವರ್ಷ ಇರುವುದಿಲ್ಲವೆಂದು ನಾವು ಬಹಳ ನಮ್ರತೆಯಿಂದ ಹೇಳುತ್ತೇವೆ.

ಶ್ರೀ ಎ. ಲಕ್ಷ್ಮೀಸಾಗರ್.—ಇದು ಶಾಪವೇ ?.........

ಶ್ರೀ ವೈ. ರಾಮಕೃಷ್ಣ.—ಇದು ಶಾಪ ಅಲ್ಲ, ಅಧ್ಯಕ್ಷರೇ ಹೌಸಿಂಗ್ ವಿಷಯದಲ್ಲಿ ಒಂದೊಂದು ಸಾವಿರ ಮನೆಗಳನ್ನು ಕೊಡಬೇಕೆಂದು ತೀರ್ಮಾನ ಮಾಡಿದ್ದೆವು, ಈ ಬಗ್ಗೆ ಸರ್ಕಾರಿ ಆದೇಶ ಕೂಡಾ ಹೊರಡಿಸಿದ್ದೆವು. ಈ ವಿಚಾರದಲ್ಲಿ ಫಿಗರ್ಸ್ ಸಹ ಇದೆ ಇದನ್ನು ಈ ಸಭೆಯ ಮುಂದೆ ಬೇಕಾದರೂ ಓದುತ್ತೇನೆ. ನಾವು ಎಷ್ಟು ಕೋಟಿ ಖರ್ಚು ಮಾಡಿದ್ದೇವೆಂಬುದು ಇದರಿಂದ ಗೊತ್ತಾಗುತ್ತದೆ. ಪ್ರತಿಯೊಂದು ತಾಲ್ಲೂಕಿನಲ್ಲೂ ಮನೆಗಳನ್ನು ಕಟ್ಟಬೇಕೆಂದು ಮಾಡಿದ್ದೆವು. ಆದರೆ ಹಣ ಸಿಗದಿದ್ದರಿಂದ ನಾವು ಮಾಡಲಾಗಲಿಲ್ಲ. ಆದರೆ ಇವರು ಏನು ಮಾಡಿದರು ? ನಾನು ಒಂದು ಫಿಗರ್ ಓದುತ್ತೇನೆ. ತಾವು ನೋಡಿ ಸ್ವಾಮಿ,

> "ಒಟ್ಟು ೫೮ ಸಾವಿರ ಮನೆಗಳು ಏನು ಇವೆ, ಅವುಗಳನ್ನು ಕಟ್ಟುವುದಕ್ಕೆ ಹಣವನ್ನು ೧೯ ಜಿಲ್ಲೆಗಳಲ್ಲಿ ೩೮೭ ಲಕ್ಷ ರೂಪಾಯಿಗಳನ್ನು ವಿತರಣೆ ಮಾಡಿದ್ದೇವೆಂದು ಈ ಸದನದಲ್ಲಿ ಹೇಳುವುದಕ್ಕೆ ಇಚ್ಛೆಪಡುತ್ತೇನೆ, ಬೆಂಗಳೂರು ಜಿಲ್ಲೆಗೆ ೯ ಲಕ್ಷ ರೂಪಾಯಿ ಕೊಟ್ಟಿದ್ದಾರೆ. ೧೯೮೧ನೇ ಇಸವಿಯ ಸೆನ್ಸಸ್ ಪ್ರಕಾರ ೫೦ ಲಕ್ಷ ಜನಸಂಖ್ಯೆ ಇಲ್ಲಿ ಇದೆ.

ಐವತ್ತು ಲಕ್ಷ ಜನಸಂಖ್ಯೆಗೆ ಕೊಟ್ಟಿರತಕ್ಕಂಥಾದ್ದು ೯ ಲಕ್ಷ ರೂಪಾಯಿಗಳು. ಇದು ಹಡ್ಕೋ ಸ್ಕೀಮ್‌ನಲ್ಲಿರುವುದೇ ?

ಉಪಾಧ್ಯಕ್ಷರು.—ಈ ವಿಷಯ ಅರ್ಬನ್ ಖಾತೆಯಲ್ಲಿ ಬರುತ್ತದೆ.

ಶ್ರೀ ವೈ. ರಾಮಕೃಷ್ಣ.—ನನಗೆ ಗೊತ್ತಿದೆ ಸ್ವಾಮಿ, ಈ ಮನೆಗಳಲ್ಲಿ ಒಟ್ಟು ನಾಲ್ಕು ಭಾಗ ಇವೆ, ೧) ಜನತಾ ೨) ಹಡ್ಕೋ ೩) ನಾನ್ ಹಡ್ಕೋ ೪) ಬ್ಯಾಂಕ್ ಅಸಿಸ್ಟೆಂಟ್.

ಶ್ರೀ ಹೆಚ್. ಎಲ್. ಶಿವೆಗೌಡ.— ಬೆಂಗಳೂರಿನಲ್ಲಿ ಜನತಾ ಮನೆಗಳನ್ನು ಕಟ್ಟುವುದಕ್ಕೆ ಆಗುತ್ತದೆಯೋ ?

ಶ್ರೀ ವೈ. ರಾಮಕೃಷ್ಣ.—ಬೆಂಗಳೂರು ಸಿಟಿಯನ್ನು ಬೈಪಾಸ್ ಮಾಡಿದರೂ, ಬೇರೆ ಕಡೆ ಕೊಡ ಬೇಕಲ್ಲ ? ಇವೊತ್ತು ಆ ನಾಲ್ಕು ವಿಭಾಗಗಳಲ್ಲಿ ಯಾವುದಾದರೂ ಒಂದು ಬೆಂಗಳೂರಿಗೆ ಅನ್ವಯ ವಾಗುತ್ತದೆಯೋ ? ಈ ನಾಲ್ಕರಲ್ಲಿ ಯಾವುದಾದರೂ ಒಂದು ಬೆಂಗಳೂರಿಗೆ ಬರಬೇಕಲ್ಲ. ತಾವು ಬಸವನಗುಡಿ ಕ್ಷೇತ್ರಕ್ಕೆ ಪ್ರತಿನಿಧಿಸುತ್ತೀರಿ, ನಿಮ್ಮ ಪಕ್ಕದಲ್ಲಿ ಇರುವ ಶ್ರೀ ಫರ್ನಾಂಡಿಸ್‌ರವರು ಕುಳಿತಿರುತ್ತಾರೆ. ಅವರು ಪ್ರತಿನಿಧಿಸತಕ್ಕ ಕ್ಷೇತ್ರವಾದ ಭಾರತೀ ನಗರದಲ್ಲಿ ಎಷ್ಟು ಮನೆಗಳನ್ನು ಕೊಟ್ಟಿದ್ದಾರೆ ಸ್ವಾಮಿ ? ನಾನು ೨೦ ಅಂಶಗಳ ಕಾರ್ಯಕ್ರಮಗಳ ಛೇರ್‌ಮನ್, ನಾನು ಸತ್ಯಕ್ಕೆ ದೂರವಾದ ಮಾತು ಹೇಳುವುದಕ್ಕಾಗುವುದಿಲ್ಲ, ನಮ್ಮಲ್ಲಿ ಕಂಪ್ಲೀಟ್ ಆಗಿರತಕ್ಕಂಥಾದ್ದು ೪೦ ಮಾತ್ರ?

ಶ್ರೀ ಎಸ್.ಆರ್. ಲಕ್ಷ್ಮಯ್ಯ.—೪೦೦ ಮನೆಗಳು ಆಗಿವೆ.

ಶ್ರೀ ವೈ. ರಾಮಕೃಷ್ಣ.—ತಾವು ಕಾಲಿನಲ್ಲಿ ಒದೆಯುವಂಥ ಮನೆಗಳನ್ನಾದರೂ ಕಟ್ಟಿಸಿಕೊಡಿ ಸ್ವಾಮಿ ? ೩೮೭ ಲಕ್ಷ ರೂಪಾಯಿಗಳನ್ನು ಕೊಟ್ಟಿದ್ದಾರಲ್ಲಾ, ಈ ಬಗ್ಗೆ ನಿನ್ನೆಯ ದಿವಸ ಒಂದು ಮಾತನ್ನು ನಾನು ಮಾನ್ಯ ಲಕ್ಷ್ಮೀಸಾಗರ್‌ರವರಿಗೆ ಕೇಳಿದೆ, ಏನು ಸ್ವಾಮಿ ಇವೊತ್ತು ಟೋಪಿ ಇಟ್ಟು ಕೊಂಡು ಬಂದಿದ್ದೀರಲ್ಲಾ ಎಂದು, ಅದಕ್ಕೆ ಅವರು ''ನನಗೆ ತಲೆ ಇದೆ ಅದಕ್ಕೋಸ್ಕರ ಟೋಪಿ ಹಾಕಿ ಕೊಂಡು ಬಂದಿದ್ದೇನೆ'' ಎಂದು ಹೇಳಿದರು. ಇವೊತ್ತು ನಾನು ಕೇಳುತ್ತೇನೆ, ನಿಮ್ಮ ತಲೆ ಎಲ್ಲಿ ಹೋಯಿತು ? ಟೋಪಿ ಇಲ್ಲವಲ್ಲ ಎಲ್ಲಿ ಹೋಗಿದೆ ? ಆ ತಲೆಯಿಂದಲೇ ಎಲ್ಲಾ ನಾಶನ ಮಾಡಿ ಬಿಟ್ಟಿದ್ದಾರೆ, ಇವೊತ್ತು ನಮ್ಮ ತಾಲ್ಲೂಕಿನಲ್ಲಿ ೩೦೦ ಬಾವಿಗಳನ್ನು ಕಟ್ಟಿಸಿದ್ದೇವೆಂದು ಹೇಳಿದ್ದಾರೆ. ಸ್ವಾಮಿ ದಯಮಾಡಿಟ್ಟು ಬಡವರು ಬದುಕುವುದಕ್ಕೋಸ್ಕರ ಕನಿಷ್ಟ ಪಕ್ಷ ೩೦೦ ಮನೆಗಳನ್ನಾದರೂ ಕಟ್ಟಿಸಿ ಕೊಡಿ ಎಂದು ಆ ಮಂತ್ರಿಗಳ ಹತ್ತಿರ ಹೋಗಿ ಕೇಳಿದೆ, ಅದಕ್ಕೆ ಅವರು ಕಾಗದ ಬರೆದು ಕೊಡಿ ಎಂದು ಕೇಳಿದರು. ಆ ಪ್ರಕಾರ ನಾನು ಪತ್ರ ಬರೆದು ಕೊಟ್ಟರೆ ೩೦೦ ಮನೆಯನ್ನು ಕೊಟ್ಟಿಲ್ಲ. ೨೦೦ ಮನೆಯನ್ನೂ ಕೊಟ್ಟಿಲ್ಲ. ನಾನು ೨೦ ಅಂಶಗಳ ಕಾರ್ಯಕ್ರಮದ ಛೇರ್‌ಮನ್ ಆಗಿ ನಾನೂ ನೋಡಿದ್ದೇನೆ. ನಮ್ಮಲ್ಲಿ ಪೂರ್ಣವಾಗಿರತಕ್ಕ ಮನೆಗಳು ಯಾವ ರೀತಿ ಇವೆ ಎಂದು ನೋಡಿದ್ದೇನೆ. ಅವುಗಳಲ್ಲಿ ಕೆಲವು ಬಿದ್ದಿವೆ, ಕೆಲವು ಕಿತ್ತು ಬಂದಿವೆ. ಕೆಲವು ಮನೆಗಳ ಗೋಡೆಗಳಂತೂ ಬಿದ್ದು ಹೋಗಿವೆ.

ಸ್ವಾಮಿ, ಇವೊತ್ತು ನನ್ನ ತಾಲ್ಲೂಕಿನಲ್ಲಿ ಕೊಟ್ಟಿರತಕ್ಕಂಥ ಮನೆಗಳನ್ನು ನೋಡಿದರೆ ನನಗೆ ಕಣ್ಣೀರು ಬರುತ್ತದೆ, ಅವರು ಕೊಟ್ಟಿರತಕ್ಕಂಥಾದ್ದು ಹೇಗಿದೆಯೆಂದರೆ ಯಾವ ಮನುಷ್ಯರೂ ಕೂಡಾ ಅಂಥ ಮನೆಯಲ್ಲಿ ವಾಸ ಮಾಡುವುದಕ್ಕೆ ಸಾಧ್ಯವಿಲ್ಲ. ನಾನು ಮುಖ್ಯಮಂತ್ರಿಗಳಿಗೆ ಪತ್ರಬರೆದಿದ್ದೆ, ಅದಕ್ಕೆ ಅವರು ೨,೧೩೧ ಮನೆಗಳನ್ನು ಕೊಡಬೇಕೆಂದು ಲೆಕ್ಕ ಹಾಕಿಕೊಂಡಿದ್ದರು ಕೂಡಾ ನೀವು ಈ ವರ್ಷದಲ್ಲಿ ಕೇವಲ ೪೦ ಮನೆಗಳನ್ನು ಕೊಟ್ಟಿದ್ದೀರಿ. ಈ ಬಗ್ಗೆ ನಿಮಗೆ ಸ್ಯಾಟಿಸ್‌ಫೈ ಆಗಿದೆಯಾ ? ನಿಮಗೆ ಬಡವರ ಕಷ್ಟದ ಬಗ್ಗೆ ಗೇಲಿ ಮಾಡುವುದು ಸರಿಯಲ್ಲ. ಬಡವರ ಕಷ್ಟ ನಿಮಗೆಲ್ಲಿ ಗೊತ್ತಾಗ ಬೇಕು, ಅವರ ಕಷ್ಟ ನಿಮಗೆ ಗೊತ್ತಾಗುವುದಿಲ್ಲ ?

ಶ್ರೀ ಎಸ್. ಆರ್. ಲಕ್ಷ್ಮಯ್ಯ.—ಬಡವರ ಕಷ್ಟ ನಮಗೆ ಗೊತ್ತಿದೆ, ನಿಮಗಿಂತ ಹೆಚ್ಚಿನ ಕಾಳಜಿ ನಮಗೆ ಇದೆ. ಆ ಬಗ್ಗೆ ಹೇಳುವುದಕ್ಕೆ ಹೋಗಬೇಡಿ.

ಶ್ರೀ ವೈ. ರಾಮಕೃಷ್ಣ.—ಬಡವರ ಕಷ್ಟದ ಬಗ್ಗೆ ನಿಮಗೆ ಎಂಥ ಮನಸ್ಸು ಇದೆ ಎನ್ನುವುದು ನಮಗೆ ಗೊತ್ತಿದೆ.

ಉಪಾಧ್ಯಕ್ಷರು.—ಸದಸ್ಯರು ಮಧ್ಯೆ ಯಾರು ಮಾತನಾಡಬಾರದು, ನಿಮಗೆ ಮಾನ್ಯ ರಾಮಕೃಷ್ಣ ರವರು ಹೇಳಿದ್ದು ಸರಿಯಾದುದಲ್ಲ ಎಂದು ಗೊತ್ತಾದರೆ ಅದನ್ನು ಗುರುತು ಹಾಕಿಕೊಳ್ಳಿ, ನೀವು ಮಾತನಾಡಲಿಕ್ಕೆ ಅವಕಾಶ ಕೊಡುತ್ತೇನೆ, ಆಗ ನೀವು ಹೇಳುವುದನ್ನು ಹೇಳಿ.

ಶ್ರೀ ಎಂ. ವೀರಪ್ಪಮೊಯ್ಲಿ. ಮಾನ್ಯ ರಾಮಕೃಷ್ಣ ಅವರು ಅನ್ಯಾಯವಾಗಿ ಮಾಡಿದರೆ ತಪ್ಪು ಆದರೆ ಮಾನ್ಯ ಲಕ್ಷ್ಮೀಸಾಗರ್ ಅವರಿಗೆ ತಲೆ ಇಲ್ಲ ಎಂದು ಹೇಳಿದರು. ಅವರಿಗೆ ಡಿಫೆಂಡ್ ಮಾಡುವ ಪಕ್ಕೆ ತಲೆ ಇಲ್ಲ, ಡಿಫೆಂಡ್ ಮಾಡುವುದಕ್ಕೆ ಮಾನ್ಯ ಲಕ್ಷ್ಮಯ್ಯನವರು ಆ ಪಾತ್ರವನ್ನು ವಹಿಸುತ್ತಿದ್ದಾರೆ

ಶ್ರೀ ವೈ. ರಾಮಕೃಷ್ಣ.—ಮಾನ್ಯ ಉಪಾಧ್ಯಕ್ಷರೇ. ಪ್ರತಿ ತಿಂಗಳು ನಾನು ೩ನೇ ತಾರೀಖು ನನ್ನ ಕ್ಷೇತ್ರಕ್ಕೆ ಭೇಟಿ ಕೊಡುತ್ತೇನೆ. ಅಲ್ಲಿಗೆ ಹೋದಾಗ ಸಾರ್ವಜನಿಕರು ಮತ್ತು ಪಾರ್ಟಿಯ ವರ್ಕರ್ಸ್‌ನ್ನು ಭೇಟಿ ಮಾಡುತ್ತೇನೆ. ಅಲ್ಲಿಯ ಜನರು ನೂರಾರು ಅರ್ಜಿಗಳನ್ನು ನನಗೆ ಕೊಟ್ಟಿದ್ದಾರೆ. ಆ ಅರ್ಜಿಗಳ ನನ್ನ ಹತ್ತಿರ ಇವೆ. ಇಬ್ಬರೂ ಹೆಂಗಸರು ಕೊಟ್ಟಂತೆ ಅರ್ಜಿಗಳನ್ನು ನಾನು ಇಟ್ಟುಕೊಂಡಿದ್ದೇನೆ. ಅಲ್ಲಿರತಕ್ಕ ಜನರು ತುಂಬಾ ಬಡವರು ಬಹಳ ವಿನಯದಿಂದ ನನ್ನನ್ನು ಕೇಳಿಕೊಂಡರು. ೩೦೦ ಮನೆಗಳಿಗೆ ಮಂಜೂರಾತಿ ಕೊಡಬೇಕೆಂದು ಕೇಳಿಕೊಂಡರು. ಮನೆಗಳನ್ನು ಕಟ್ಟಲಿಕ್ಕೆ ಅವರು ಗೋಡೆಗಳನ್ನು ಹಾಕಿಕೊಂಡಿದ್ದಾರೆ. ಹಾಕಿಕೊಂಡ ಗೋಡೆಗಳು ಕೂಡ ಇವತ್ತು ಬಿದ್ದು ನಾಶವಾಗುತ್ತಿವೆ. ಮಾನ್ಯ ಮಂತ್ರಿಗಳನ್ನು ನಾನು ಮೊಗಸಾಲೆಯಲ್ಲಿ ಭೇಟಿ ಮಾಡಿ ಅವರ ಬಗ್ಗೆ ಒಂದು ಕಾಗದವನ್ನು ಕೂಡ ಕೊಟ್ಟಿದ್ದೇನೆ. ಇದುವರೆಗೆ ಒಬ್ಬ ಅಧಿಕಾರಿಯೂ ಕೂಡ ಆ ಸ್ಥಳಕ್ಕೆ ಹೋಗಲಿಲ್ಲ. ಮಳೆಗಾಲದಲ್ಲಿ ಮಳೆ ಜಾಸ್ತಿ ಬಂದು ೨೦೦ ಮನೆಗಳ ಗೋಡೆಗಳು ಕೂಡ ಕಂಪ್ಲೀಟ್ ಆಗಿ ಬಿದ್ದು ಹೋಗಿವೆ. ಬಡಜನರು ಸುಟ್ಟ ಇಟ್ಟಿಗೆ ಎಲ್ಲಿ ತರುತ್ತಾರೆ? ಅವರು ಮಣ್ಣಿನ ಗೋಡೆಗಳನ್ನು ಹಾಕಿಕೊಂಡಿದ್ದರು, ತಾವು ಅಂದರಲ್ಲಾ ಅದಕ್ಕೆ ಹೇಳುತ್ತಿದ್ದೇನೆ, ಅವರು ನನಗೆ ಅರ್ಜಿಯನ್ನು ಕೊಟ್ಟು ಹೇಳಿದರು ಈಗಲೂ ಕೂಡ ಅವರು ನನ್ನನ್ನು ಮಂತ್ರಿಯೆಂದು ತಿಳಿದುಕೊಂಡಿದ್ದಾರೆ. ಪಾಪ ದಡ್ಡ ಜನ ಅವರಿಗೆ ಗೊತ್ತಿಲ್ಲ. ನಿಮ್ಮ ಮನೆ ಹೀಗಾಗಿದ್ದರೆ ಸುಮ್ಮನೆ ಇರುತ್ತಾ ಇದ್ದೀರಾ ಎಂದು ನನ್ನನ್ನು ಕೇಳಿದರು. ಆಗ ನಾನು ಹೇಳಿದೆ, ಮಾನ್ಯ ಲಕ್ಷ್ಮೀಸಾಗರ್ ಅವರು ಈ ಖಾತೆಯನ್ನು ವಹಿಸಿಕೊಂಡಿದ್ದಾರೆ ಎಂದು ತಿಳಿಸಿದೆ. ಅದಕ್ಕೆ ಅವರು ಕೇಳಿದರು ಅವರಿಗೆ ಮನೆ ಇಲ್ಲವೇ ಎಂದು ಕೇಳಿದರು. ಇಲ್ಲ ಎಂದೆ, ಅವರಿಗೆ ಹೆಂಡತಿ ಮಕ್ಕಳು ಇಲ್ಲವೇ ಎಂದು ಕೇಳಿದರು. ಅವರೂ ಕೂಡ ಇಲ್ಲವೆಂದು ಹೇಳಿದೆ, ಅಲ್ಲಿ ನಡೆದಂಥ ವಿಚಾರವನ್ನು ಹೇಳುತ್ತಿದ್ದೇನೆ. ಮುಂದೆ ಎಷ್ಟು ಸ್ವಾರಸ್ಯವಾಗಿದೆ ಎಂದು ಹೇಳುತ್ತೇನೆ ಕೇಳಿ. ಅವರನ್ನು ಒಂದು ಸಲ ಕರೆದುಕೊಂಡು ಬನ್ನಿ, ಅವರಿಗೆ ಮಾನಮರ್ಯಾದೆ ಇದ್ದರೆ ಮನೆಗಳನ್ನು ಸ್ಯಾಂಕ್ಷನ್ ಮಾಡುತ್ತಾರೆ ಎಂದು ಕೇಳಿದರು. ಅದಕ್ಕೆ ನಾನು ಅದೂ ಕೂಡ ಇಲ್ಲವೆಂದು ಹೇಳಿದೆ. ಹಾಗಾದರೆ ಏನು ಇಲ್ಲವೇ ಸ್ವಾಮಿ ಕೇಳಿದರು. ಏನೂ ಇಲ್ಲವೆಂದು ಹೇಳಿದೆ. ಅದಕ್ಕೆ ಅವರು ಹಾಗಾದರೆ ಅವರು ಮಂತ್ರಿಗಳು ಹೇಗಾದರು ಎಂದು ಕೇಳಿದರು. ಅದೇ ಅವರ ಕ್ವಾಲಿಫಿಕೇಷನ್ ಎಂದು ಹೇಳಿದೆ ಮಹಾತ್ಮಾ ಗಾಂಧೀಜಿಯವರು ಒಂದು ಮಾತನ್ನು ಹೇಳಿದ್ದಾರೆ. The curse of the poor will destroy the nation and the blessings of the poor will strengthen the nation as well as democracy.

SRI MICHAEL B. FERNANDEZ.—We are completing the houses which were promised by the previous Government. This is the position.

ಶ್ರೀ ವೈ. ರಾಮಕೃಷ್ಣ.—ನಾವು ಮಾಡಿರುವ ಕೆಲಸದ ಹೆಸರನ್ನು ಹೇಳುವುದಕ್ಕೆ ನಿಮಗೆ ಶಕ್ತಿ ಇಲ್ಲ ಬಡತನದ ಶಾಪ ದೇಶದ ಮೇಲೆ ಬಿದ್ದರೆ ದೇಶ ಹುರಿದು ಹೋಗುತ್ತದೆ. ಅವರ ಆಶೀರ್ವಾದ ದೇಶದ ಮೇಲೆ ಬಿದ್ದರೆ ದೇಶ ಉದ್ಧಾರವಾಗುತ್ತದೆ. Otherwise, democracy will not survive ಮನೆ ಕಟ್ಟಿಸುವ ಕಾರ್ಯಕ್ರಮವನ್ನು ಕೈಬಿಟ್ಟಿದ್ದೇವೆಂದು ಹೇಳಿದ್ದರೆ ನಾವು ಸಂತೋಷಪಡಬಹುದಾಗಿತ್ತು. ಮನೆ ಕಟ್ಟತಕ್ಕ ಕಾರ್ಯಕ್ರಮ ಇಟ್ಟುಕೊಂಡಿದ್ದೀರಿ, ೨೦ ಅಂಶಗಳ ಕಾರ್ಯಕ್ರಮ ಹಾಕಿಕೊಂಡಿದ್ದೀರಿ. ಕಾರ್ಯಕ್ರಮಗಳನ್ನು ಇಟ್ಟುಕೊಂಡು ಏತಕ್ಕಾಗಿ ಈ ರೀತಿಯ ನಾಟಕ ಆಡುತ್ತಿದ್ದೀರಿ ನಿಮ್ಮ ಆರ್ಡರ್ ಪ್ರಕಾರ ಪ್ರತಿ ತಾಲ್ಲೂಕಿಗೆ ೫೦–೬೦ ಮನೆಗಳನ್ನು ಕಟ್ಟುತ್ತೇವೆಂದು ಹೇಳಿದ್ದೀರಿ. ಮನೆ ಕಟ್ಟಲಿಕ್ಕೆ ಲಕ್ಷಾಂತರ ರೂಪಾಯಿಗಳನ್ನು ಕೊಡುತ್ತೇವೆಂದು ಹೇಳಿ ಸೆಪ್ಟೆಂಬರ್ ತಿಂಗಳಲ್ಲಿ ಬೇರೆ ಆರ್ಡರ್ ಕಳುಹಿಸಿಕೊಡುತ್ತೇವೆಂದು ಹೇಳಿದ್ದೀರಿ, ಮತ್ತೆ ೫೦ ಲಕ್ಷ ರೂಪಾಯಿಗಳನ್ನು ಒಂದು ಡಿಸ್ಟ್ರಿಕ್ಟ್‌ಗೆ ಕೊಟ್ಟಿದ್ದೀರಿ. ಮತ್ತೊಂದು ಜಿಲ್ಲೆಗೆ ೩೩ ಲಕ್ಷ ಕೊಡುತ್ತೇವೆಂದು ಹೇಳಿದ್ದೀರಿ,

ಶ್ರೀ ಸಿ. ಬೈರೇಗೌಡ.——ಮಾನ್ಯ ರಾಮಕೃಷ್ಣರವರು ಹೇಳಿದರು ಕಟ್ಟಿರುವ ಮನೆಗಳು ೪೦, ಬಿದ್ದು ಹೋಗಿರುವ ಮನೆಗಳು ೨೦೦ ಎಂದು ಹೇಳುತ್ತಿದ್ದಾರೆ. ೨೦೦ ಮನೆಗಳು ಎಲ್ಲಿಂದ ಬಂದವು?

ಶ್ರೀ ವೈ. ರಾಮಕೃಷ್ಣ.——ನಿಮಗೆ ಇದೆಲ್ಲಾ ಗೊತ್ತಾಗುವುದಿಲ್ಲ, ತಾವು ಸುಮ್ಮನೆ ಕುಳಿತುಕೊಳ್ಳಿ. ನಾನು ಏತಕ್ಕೆ ಹೇಳುತ್ತೇನೆಂದರೆ ಸರ್ಕಾರಕ್ಕೆ ಹಣಕಾಸು ತೊಂದರೆ ಇದೆ ಒಪ್ಪುತ್ತೇನೆ. ಸಂಪನ್ಮೂಲದ

ಕೊರತೆ ಇದೆ. ಹಣ ಇಲ್ಲದಿದ್ದರೆ ಯೂನಿಫಾರಂ ಆಗಿ ಹಣವನ್ನು ತೆಗೆದಿಡಿ. ಒಂದು ಜಿಲ್ಲೆಗೆ ೩೦ ಲಕ್ಷ ಕೊಟ್ಟಿದ್ದೀರಿ ಒಂದು ಜಿಲ್ಲೆಗೆ ೫೦ ಲಕ್ಷ ರೂಪಾಯಿಗಳು ಕೆಲವು ಡಿಸ್ಟ್ರಿಕ್ಟ್‌ಗಳಿಗೆ ೧೫–೨೦ ಲಕ್ಷ. ಬೆಂಗಳೂರು ಜಿಲ್ಲೆಗೆ ಮಾತ್ರ ಬರೀ ೯ ಲಕ್ಷ ಕಾರಣ ಏನು? ನಾನು ಇದನ್ನು ಏತಕ್ಕೆ ಹೇಳುತ್ತೇನೆಂದರೆ, ಜನಸಂಖ್ಯೆಗೆ ಅನುಗುಣವಾಗಿ ಒಂದು ಜಿಲ್ಲೆಯಲ್ಲಿರತಕ್ಕ ಜನಸಂಖ್ಯೆಗೆ ಅನುಗುಣವಾಗಿ ಮನೆಗಳನ್ನು ಕಟ್ಟಿ ಬಡತನ ರೇಖೆಯಿಂದ ಕೆಳಗೆ ಇರತಕ್ಕವರನ್ನು ಮೇಲೆ ತರುವುದಕ್ಕೆ ಪ್ರಯತ್ನ ಮಾಡಿ. You adopt some sci entific basis for distributing Houses. ಇವತ್ತು ಬೆಂಗಳೂರು ಜಿಲ್ಲೆಯಲ್ಲಿ ೫ ರಿಸರ್ವ್ ಸೀಟು ಇವೆ. ಗ್ರಾಮಾಂತರ ಪ್ರದೇಶಗಳಲ್ಲಿ ೪ ರಿಸರ್ವ್ ಸೀಟ್ ಇವೆ. ಅಂದಮೇಲೆ ಜನಸಂಖ್ಯೆ ಜಾಸ್ತಿ ಇದೆ ಎಂದು ಗೊತ್ತಾದ ಮೇಲೂ ಕೂಡ ಗ್ರಾಮಾಂತರ ಜಿಲ್ಲೆಯಲ್ಲಿರತಕ್ಕ ಜನರಿಗೆ ನೀವು ಕೊಟ್ಟಿರತಕ್ಕದ್ದು ಕೇವಲ ೯ ಲಕ್ಷ ರೂಪಾಯಿಗಳು ಇದರ ಏನು ತೋರಿಸುತ್ತದೆಂದರೆ, ತಮಗೆ ಬುದ್ಧಿ ಸಾಲದು ಎಂದು ಹೇಳುತ್ತೇನೆ. ಆಡಳಿತ ನಿರ್ವಹಣೆ ಮಾಡುವಾಗ ಮಂತ್ರಿಗಳು ಎಲ್ಲರನ್ನು ತಮ್ಮ ಮಕ್ಕಳಂತೆ ತಿಳಿದುಕೊಳ್ಳಬೇಕು. ಅವರು ಕೊಡತಕ್ಕಂಥಾ ಅನುದಾನ ಗ್ರಾಂಟ್ ಪ್ರತಿಯೊಂದು ವರ್ಗಕ್ಕೂ ಸೇರಬೇಕು. ಅದು ನ್ಯಾಯ ಸಮ್ಮತವಾಗಿ ವಿತರಣೆಯಾಗಬೇಕು. ಇಲ್ಲದಿದ್ದರೆ ಅದು ಒಂದು ಪಾರ್ಟಿಯ ಸರ್ಕಾರವೆಂದು ಹೇಳುತ್ತಾರೆ. ರಾಜ್ಯ ಸರ್ಕಾರವೆಂದು ಯಾರೂ ಹೇಳುವುದಿಲ್ಲ. ಹೌಸಿಂಗ್ ವಿಚಾರದಲ್ಲಿ ಈಗ ನಾನು ಒಂದು ವಿಚಾರವನ್ನು ಭಾಷಣ ಮಾಡುವಾಗ ಹೇಳಿದೆ. ಅದೇನೆಂದರೆ ನಿಮ್ಮ ಹಾಗೆ ಬೇರೆ ಸರ್ಕಾರಗಳು ಇರುವ ರಾಜ್ಯಗಳಲ್ಲಿ ಯಾವ ರೀತಿಯ ಕೆಲಸ ಮಾಡಿವೆ ಎಂಬುದನ್ನು ಮುಂದೆ ಹೇಳುತ್ತೇನೆ. ಅದರಲ್ಲಿ ಹೌಸಿಂಗ್ ಮತ್ತು ಕೊಳಚೆ ನಿರ್ಮೂಲನಕ್ಕೆ ೪-೫ ದಿವಸಗಳ ಹಿಂದೆ ಪ್ಲಾನಿಂಗ್ ಕಮಿಷನ್ ಸದಸ್ಯರೊಬ್ಬರು ಒಂದು ಸ್ಟೇಟ್‌ಮೆಂಟ್ ಕೊಟ್ಟಿದ್ದಾರೆ. ಆ ಸ್ಟೇಟ್‌ಮೆಂಟಿನ ಪ್ರಕಾರ ಇವತ್ತು ಬೇರೆ ರಾಜ್ಯಗಳು ನಾನ್ ಕಾಂಗ್ರೆಸ್ ಸರ್ಕಾರ ಇರತಕ್ಕ ರಾಜ್ಯ ಸರ್ಕಾರಗಳು ಆಂಧ್ರಪ್ರದೇಶ ತಮಿಳುನಾಡು, ರಾಜಾಸ್ಥಾನ, ಹಿಮಾಚಲ ಪ್ರದೇಶ, ಮಹಾರಾಷ್ಟ್ರ ಈ ಯಾವುದೇ ರಾಜ್ಯಗಳನ್ನು ತೆಗೆದುಕೊಳ್ಳಿ. ಈ ಸರ್ಕಾರಗಳು ಹೌಸಿಂಗ್ ಸ್ಕೀಮ್‌ನಲ್ಲಿ ೧೦೦ ಪರ್ಸೆಂಟ್ ಸಾಧನೆ ಮಾಡಿ ೧೧೬ ಪರ್ಸೆಂಟ್‌ಗೆ ಹೋಗಿದ್ದಾರೆ. ಈ ಸರ್ಕಾರಕ್ಕೆ ಏನು ಬಂದಿದೆ? ಸ್ಲಮ್ ಕ್ಲಿಯರೆನ್ಸ್‌ನಲ್ಲೂ ಕೂಡ ಅವರು ೧೦೦ ಪರ್ಸೆಂಟ್ ಟಾರ್ಗೆಟ್ ರೀಚ್ ಮಾಡಿದ್ದಾರೆ.

ಶ್ರೀ ಎ. ಲಕ್ಷ್ಮೀಸಾಗರ್.—ಕೊಳಚೆ ಪ್ರದೇಶ ನಿರ್ಮೂಲನ ನನಗೆ ಬರುವುದಿಲ್ಲ.

ಶ್ರೀ ವೈ ರಾಮಕೃಷ್ಣ.—ಹೌಸಿಂಗ್ ಸ್ಕೀಮ್‌ನಲ್ಲಿ ಮನೆಕಟ್ಟಿದ್ದಾರೆ, ೧೦೦ ಪರ್ಸೆಂಟ್ ಅಲ್ಲ ೧೧೬, ೧೧೮, ೧೨೦ ಪರ್ಸೆಂಟ್ ಈ ತರಹ ಮನೆಗಳನ್ನು ಕಟ್ಟಿದ್ದಾರೆ. ನಾನು ಒಂದು ಮಾತು ಹೇಳುತ್ತೇನೆ, ನಮ್ಮ ಕಾಲದಲ್ಲಿ we stood first in the nation. ನಾವು ಅಧಿಕಾರ ನಡೆಸತಕ್ಕ ಕಾಲದಲ್ಲಿ ೨೦ ಅಂಶಗಳ ಕಾರ್ಯಕ್ರಮ ಜಾರಿಗೆ ಕೊಡುವುದರಲ್ಲಿ ಪ್ರಪ್ರಥಮ ಸ್ಥಾನ ಕರ್ನಾಟಕ ರಾಜ್ಯಕ್ಕೆ ಬಂದಿತ್ತು.

ಶ್ರೀ ಮೈಕೇಲ್ ಬಿ ಫರ್ನಾಂಡೀಸ್,—ಅದು ಪತ್ರಿಕೆಯಲ್ಲಿ ಮಾತ್ರ ಬಂದಿತ್ತು.

ಶ್ರೀ ವೈ. ರಾಮಕೃಷ್ಣ.—ನೀವು ಯಾವ ಸ್ಥಾನ ತೆಗೆದುಕೊಂಡಿದ್ದೀರಿ ? ಒಂದು ಲಕ್ಷದ ೫೮ ಸಾವಿರ ಮನೆಗಳನ್ನು ಈ ವರ್ಷದಲ್ಲಿ ಕಟ್ಟಿಸುತ್ತೇವೆಂದು ಮಾನ್ಯ ಮಂತ್ರಿಗಳ ಹೇಳಿಕೆ ಇಲ್ಲಿದೆ, ಅದನ್ನು ನಾನು ಒಪ್ಪುತ್ತೇನೆ.

ಅಧ್ಯಕ್ಷರೇ! ಇಂಥ ವಿಚಾರಗಳನ್ನು ಸಭೆಗೆ ನಾವು ತಿಳಿಸಬೇಕಾಗಿದೆ. ೫೮ ಸಾವಿರ ಮನೆಗಳನ್ನು ಕಟ್ಟಿಸಿದ್ದು, ಇಲ್ಲಿ ಕೊಟ್ಟಿರುವುದು.

ಶ್ರೀ ಅಬ್ದುಲ್ ನಜೀರ್ ಸಾಬ್.—೮೨-೮೩ನೇ ಇಸವಿಯಲ್ಲಿ ಒಂದು ಲಕ್ಷ, ಎರಡು ಸಾವಿರ ಮನೆಗಳನ್ನು ಕಟ್ಟಿಸುತ್ತೇವೆಂದು ಹೇಳಿದ್ದೇವೆ. ಆದರೆ ಹುಡ್ಕೋ ಸ್ಕೀಂನಲ್ಲಿ ಮಂಜೂರಾಗಿರತಕ್ಕದ್ದು ೪೦ ಸಾವಿರ ಮನೆಗಳು ಮಾತ್ರ.

ಶ್ರೀ ವೈ. ರಾಮಕೃಷ್ಣ.—ಇದರಲ್ಲಿ ನಾವು ೩೬ ಲಕ್ಷ ರೂಪಾಯಿಗಳನ್ನು ಖರ್ಚು ಮಾಡಿದ್ದೇವೆ.

ಶ್ರೀ. ಹೆಚ್. ಎಲ್. ತಿಮ್ಮೇಗೌಡ.—೮೨-೮೩ನೇ ಸಾಲು ಎಲೆಕ್ಷನ್ ವರ್ಷ. ಆದ್ದರಿಂದ ಒಂದು ಲಕ್ಷ ಮನೆಗಳನ್ನು ಕಟ್ಟಿಸುತ್ತೇವೆಂದು ಭಾಷಣದಲ್ಲಿ ಘೋಷಣೆ ಮಾಡಿದರು ಇಲ್ಲಿ ನಾವು ಅವರ ಯೋಜನೆಯನ್ನು ದೂಷಣೆ ಮಾಡುತ್ತಿಲ್ಲ. ಆದರೆ ದುಡ್ಡು ಇರಲಿಲ್ಲ. ಆಗ ತಾವು

ದುಡ್ಡನ್ನು ಪ್ರೊವೈಡ್ ಮಾಡಿರುವುದು ಒಂದು ಲಕ್ಷ ಮನೆಗಳಿಗೆ ಅಲ್ಲ. ಈ ಸರ್ಕಾರದವರು ಹೊಸದಾಗಿ ಮನೆಗಳನ್ನು ಸ್ಯಾಂಕ್ಷನ್ ಮಾಡದೆ, ಹಿಂದೆ ತಮ್ಮ ಕಮಿಟ್‌ಮೆಂಟನ್ನು ಪೂರೈಸುವುದಕ್ಕೋಸ್ಕರ ಹಣ ಖರ್ಚು ಮಾಡಬೇಕಾಯಿತು. ತಮ್ಮ ಸರ್ಕಾರದವರು ಎಲೆಕ್ಷನ್‌ನಲ್ಲಿ ಹೇಳಿದ್ದನ್ನು ಫುಲ್‌ಫಿಲ್ ಮಾಡುವುದಕ್ಕೋಸ್ಕರ ಈ ಸರ್ಕಾರದವರು ಹಣವನ್ನು ಖರ್ಚು ಮಾಡಬೇಕಾಯಿತು. ಇನ್ನು ಹೊಸದಾಗಿ ಮನೆಗಳನ್ನು ಕಟ್ಟುವುದಕ್ಕೆ ಯಾವರೀತಿ ಸಾಧ್ಯವಾಗುತ್ತದೆ ಎನ್ನುವುದನ್ನು ಇವರು ಹೇಳಬೇಕು. ಹೌಸಿಂಗ್ ವಿಚಾರದಲ್ಲಿ ಮಾನ್ಯ ಮೊಯ್ಲಿಯವರು ಈ ಸರ್ಕಾರದವರಿಗೆ ಬುದ್ಧಿ ಇಲ್ಲ ಎನ್ನುವ ಮಾತನ್ನು ಹೇಳಿದರು. ದಯವಿಟ್ಟು ಅವರು ಇದನ್ನು ತಿದ್ದುಕೊಳ್ಳಬೇಕು.

ಶ್ರೀ ಎಂ. ವೀರಪ್ಪ ಮೊಯ್ಲಿ.—ತಮಗೆ ಈ ವಿಚಾರದಲ್ಲಿ ಲೆಕ್ಕ ಬೇಕಾದರೆ ನಮ್ಮ ಹತ್ತಿರ ಇದೆ. ೧೯೭೩–೭೪ರಿಂದ ೭೯ರವರೆಗೆ ೧,೭೯,೨೬ ಸಾವಿರ ಮನೆಗಳನ್ನು ಕಟ್ಟುವುದಕ್ಕೆ ಸುಮಾರು ೨೧.೭೪ ಕೋಟಿ ರೂಪಾಯಿಗಳನ್ನು ಖರ್ಚು ಮಾಡಲಾಗಿದೆ. ನಮ್ಮ ಸರ್ಕಾರದ ಅಧಿಕಾರದ ಕೊನೆಯಲ್ಲಿ ೪ ಲಕ್ಷ ೨೮ ಸಾವಿರದ ೯೮೩ ಮನೆಗಳಿಗೆ ಒಟ್ಟು ಖರ್ಚು ಮಾಡಿರುವುದು ೮೦ ಕೋಟಿ ರೂಪಾಯಿಗಳು. ಮೂರು ವರ್ಷದಲ್ಲಿ ಇಷ್ಟು ಖರ್ಚಾಯಿತು. ನಿಮಗೆ ಬೇಕಾದರೆ ನಾವು ಪಟ್ಟಿ ಮಾಡಿ ಲೆಕ್ಕ ಕೊಡುವುದಕ್ಕೆ ಸಾಧ್ಯವಿದೆ. ನೀವು ಕೇಳುತ್ತೀರೆಂದು ನಾನು ಬಹಳ ಸೂಕ್ಷ್ಮವಾಗಿ, ಎಲ್ಲಾ ದಾಖಲಾತಿಗಳನ್ನು ಲೆಕ್ಕಹಾಕಿ ಇಟ್ಟಿದ್ದೇನೆ ಆರನೆಯ ಯೋಜನೆಯಲ್ಲಿ ಒಟ್ಟು ೫೫ ಕೋಟಿ ರೂಪಾಯಿಗಳನ್ನು ಖರ್ಚು ಮಾಡಬೇಕೆಂದು ಇತ್ತು. ೧೯೮೨ನೇ ಡಿಸೆಂಬರ್‌ನಲ್ಲಿ ಸುಮಾರು ೧೦ ಕೋಟಿ ರೂಪಾಯಿಗಳನ್ನು ಮಾತ್ರ ಖರ್ಚು ಮಾಡಲಿಕ್ಕೆ ಬಿಟ್ಟಿದ್ದೇವೆ. ಪ್ಲಾನ್ ಪರ್ಫಾರ್ಮೆನ್ಸ್‌ನಲ್ಲಿ We have practically fulfilled. It is more than 100% every year. We will have a very big debate and We will expose you. During 1982–83 it is not even 4 crores. ಇಷ್ಟು ಹಣವನ್ನು ನಾವು ಬಿಡುಗಡೆ ಮಾಡಿದ್ದೇವೆ ೮೦–೮೧ರಲ್ಲಿ ತಾವು ೫–೬ ಕೋಟಿ ರೂಪಾಯಿಗಳನ್ನು ಮಾತ್ರ ಇಟ್ಟಿದ್ದೀರಿ

ಶ್ರೀ ಅಬ್ದುಲ್ ನಜೀರ್ ಸಾಬ್.—೧೯೮೨–೮೩ರಲ್ಲಿ ಒಂದು ಲಕ್ಷದ ೨ ಸಾವಿರ ಮನೆಗಳು ತಾವು ಪ್ರಾರಂಭ ಮಾಡಿದ್ದೀರಿ. I will say a few sentences. ofcourse subject to correction. I will draw your attention to the fact that they had promised 1,02,000 Houses during 1982–83 and they propogated also. We took administration on 10 th Jan 1983. At that time, not even a penny was released. As a result of which we could not construct houses for two years.

ಶ್ರೀ ಎಂ. ವೀರಪ್ಪ ಮೊಯ್ಲಿ.—೧೯೮೨ರಲ್ಲಿ ಬೇರೆ ರೂರಲ್ ಹೌಸಿಂಗ್ ಸ್ಕೀಂನಲ್ಲಿ ಬಡ್ಜೆಟ್‌ನಲ್ಲಿ ೧೬.೧೩ ಕೋಟಿ ರೂಪಾಯಿಗಳನ್ನು ರಿಲೀಸ್ ಮಾಡಿದ್ದೀರಿ. This is apart from bank assistance. budget amount is Rs.13.83 crores. But, what you have released in only Rs. 5 to 6 crores.

SRI ABDUL NAZEER SAB.—Let us not confuse ourselves.

ಶ್ರೀ ಎಂ. ವೀರಪ್ಪ ಮೊಯ್ಲಿ.—ರೂರಲ್ ಹೌಸಿಂಗ್ ಸ್ಕೀಂನಲ್ಲಿ ೧೬.೧೩ ಕೋಟಿ ರೂಪಾಯಿಗಳನ್ನು ತಾವು ರಿಲೀಸ್ ಮಾಡಿದ್ದೀರಿ. what is the physical achievement and financial assistance, is a matter to be seen. Spill over in housing scheme is a common feature right from 1973–74 The target will have to be seen from the point of view of 6th five year plan. In the rural housing scheme, I think our state is the first in the country to fulfil the planned target. ಒಂದು ಲಕ್ಷ ಅಲ್ಲ, ಎರಡು ಲಕ್ಷ ಎಂದು ಭರವಸೆ ಕೊಡಬಹುದು. ಒಟ್ಟು ಮೂರು ವರ್ಷದಲ್ಲಿ ಎಷ್ಟು ಮನೆ ಕೊಟ್ಟಿದ್ದೇವೆ, ಎಷ್ಟು ಹಣ ಖರ್ಚು ಮಾಡಿದ್ದೇವೆ ಅದು ಮುಖ್ಯ.

SRI ABDUL NAZEER SAB.—That is not the question here. Why don't you hear me? He was the Finance Minister. The sanctioned houses are 1,02,000 houses, but what is the amount of money released upto January 1983?

ಶ್ರೀ ವೈ. ರಾಮಕೃಷ್ಣ.—ಪ್ರಾಸಂಗಿಕವಾಗಿ ನನಗೆ ಅವರು ಕೇಳಿದರು. ನನ್ನ ತಾಲ್ಲೂಕಿನಲ್ಲಿ ಏನಾಯಿತು ಎನ್ನುವುದನ್ನು ನಾನು ತಮ್ಮ ಗಮನಕ್ಕೆ ತರುತ್ತಿದ್ದೇನೆ. ಎಲ್ಲಾ ಜಿಲ್ಲಾಧಿಕಾರಿಗಳು ಒಂದು ಮನೆಗೆ ಮೂರೂವರೆ ಸಾವಿರ ರೂಪಾಯಿಗಳನ್ನು ಕೊಡುತ್ತಿದ್ದಾರೆ. ನಮ್ಮ ಬೆಂಗಳೂರು ಜಿಲ್ಲಾಧಿಕಾರಿಗಳು ಎರಡೂವರೆ ಸಾವಿರ ರೂಪಾಯಿಗಳನ್ನು ಕೊಡುತ್ತಾರೆ. ಏತಕ್ಕೆ, ಇದನ್ನು ಯೋಚಿಸಿ, ಮೂರೂವರೆ ಸಾವಿರ ಕೊಡಬೇಕೆಂದಿದ್ದರೂ, ಮಣ್ಣುಗೋಡೆ ಹಾಕಿದ್ದೀರೆಂದು ಜಿಲ್ಲಾಧಿಕಾರಿಗಳು ತಮ್ಮ ಡಿಸ್ಕ್ರಿಷನ್‌ನಿಂದ ಈ ರೀತಿ ಹಣವನ್ನು ಕೊಟ್ಟಿರುತ್ತಾರೆ ದಯಮಾಡಿ ಇದರ ಕಡೆ ತಾವು ಗಮನ ಕೊಡಬೇಕು.

ಅಧ್ಯಕ್ಷರೇ, ಮತ್ತೊಂದು ವಿಚಾರ, ಪ್ರಾಸಿಕ್ಯೂಷನ್‌ಗೆ ಸಂಬಂಧಪಟ್ಟಿದ್ದು. ಇತ್ತೀಚೆಗೆ ಒಂದು ಕನ್‌ವೆನ್ಷನ್‌ನ್ನು ಬಿಲ್ಡ್ ಅಪ್ ಮಾಡಿದ್ದಾರೆ. ಹರಿಜನರ ಮೇಲೆ ಅನ್ಯಾಯವಾದರೂ, ಅವರಿಗೆ ಅನ್ಯಾಯ ಮಾಡುವವರ ಮೇಲೆ ಆಕ್ಷನ್ ತೆಗೆದುಕೊಳ್ಳುವುದಿಲ್ಲ. ಏಕೆಂದರೆ ಇವರು ಎರಡು ಪಾರ್ಟಿಗಳನ್ನು ಈ ಕೇಸ್‌ನಲ್ಲಿ ಸೇರಿಸಿ ಬಿಡುತ್ತಾರೆ. Instead of invoking the provisions of untouchability Act, they invoke the provisions of I.P.C. after all the opinion lies with the law Minister. ಈಗ ಯಾವ ಉದ್ದೇಶ ನೆರವೇರುವುದಕ್ಕೋಸ್ಕರ ಸಿವಿಲ್ ರೈಟ್ಸ್ ಎನ್‌ಫೋರ್ಸ್‌ಮೆಂಟ್ ಸೆಲ್ ಮಾಡಿದ್ದೀರೋ ಅದು ಸರಿಯಾಗಿ ಕೆಲಸ ಮಾಡುವುದಕ್ಕಾಗುವುದಿಲ್ಲ. ಎಮರ್ಜೆನ್ಸಿ ಬರುತ್ತದೆ, ಸ್ಪೀಡಿ ಡಿಸ್ಪೋಸಲ್ ಮಾಡುತ್ತಾರೆ. ಪೋಲೀಸಿನವರು ಐ.ಪಿ.ಸಿ ಸೆಕ್ಷನ್ ಪ್ರಕಾರ, ಇಬ್ಬರನ್ನೂ ಪಾರ್ಟಿ ಮಾಡುತ್ತಾರೆ. ಇಬ್ಬರೂ ಕೋರ್ಟಿಗೆ ತಿರುಗಬೇಕಾಗುತ್ತದೆ. Other can withstand the strain, whereas these poor people cannot... ಮುಖ್ಯವಾಗಿ ಯಾವ ಉದ್ದೇಶಕ್ಕೋಸ್ಕರ ಕಾನೂನನ್ನು ಪಾಸ್ ಮಾಡಿದ್ದೀರೋ ಅದನ್ನು ಇವರು ಜಾರಿಗೆ ತರುತ್ತಿಲ್ಲ. ಪ್ರಾಸಿಕ್ಯೂಷನ್ ಡಿಪಾರ್ಟ್‌ಮೆಂಟಿಗೆ ಸ್ಟ್ರಿಕ್ಟ್ ಇನ್‌ಸ್ಟ್ರಕ್ಷನ್‌ನ್ನು ತಾವು ಕೊಡಬೇಕು. Wherever such cases occur they should book only under untouchability Act and not under I.P.C. Offence coming under untouchablity Act are booked under IPC and as a result of which IPC cases have increased by leaps and bounds. ಸ್ವಾಮಿ, ಇವೊತ್ತು ಒಂದು ಸಾವಿರ ಪೋಲೀಸ್‌ಸ್ಟೇಷನ್‌ಗಳು ಇವೆ, ಅವುಗಳಿಗೆ ಇದೇ ಕೆಲಸವಾಗಿದೆ. ಅದೇ ರೀತಿ 1002 ಪ್ರೊಸಿಡಿಂಗ್ಸ್ ಹಾಕಿದ್ದಾರೆ, ಹೊಟ್ಟೆಗೆ ಇಟ್ಟಿಲ್ಲದೆ ಇರುವಾಗ ಇವರನ್ನು 3-4 ವರ್ಷಗಳವರೆಗೆ ಕೋರ್ಟಿಗೆ ತಿರುಗಿಸಿದರೆ ಇವರನ್ನು ಉದ್ಧಾರಮಾಡಿದಂತಾಗುತ್ತದೆಯೇ? ಪ್ರಾಸಿಕ್ಯೂಷನ್ ಡಿಪಾರ್ಟ್‌ಮೆಂಟ್ ಇವನ್ನೆಲ್ಲಾ ತಡೆಹಿಡಿಯಬೇಕು. ಇದರ ಉದ್ದೇಶ ಏನು ಎನ್ನುವುದರ ಬಗ್ಗೆ ತಿಳುವಳಿಕೆ ಕೊಡಬೇಕು. ಸುಪ್ರೀಂ ಕೋರ್ಟ್ ಬೆಂಚ್ ಎಲ್ಲಾ ರಾಜ್ಯಗಳಲ್ಲಿ ಬಂದಿದೆ. ಅದೇ ರೀತಿ ನಮ್ಮ ದಕ್ಷಿಣ ಇಂಡಿಯಾದಲ್ಲಿ ನಮ್ಮ ಕರ್ನಾಟಕ ರಾಜ್ಯದಲ್ಲೂ ಇದು ಬರುವುದಕ್ಕೆ ಸಮಿತಿಯು ವರದಿಯನ್ನು ಕೊಟ್ಟಿದೆ. ಅದರ ಬಗ್ಗೆ ತಾವು ವಿವರವಾಗಿ ಹೇಳಬೇಕು. ಮತ್ತೊಂದು ವಿಚಾರ ಧಾರವಾಡದಲ್ಲಿ ಹೈಕೋರ್ಟ್ ಬೆಂಚನ್ನು ಸ್ಥಾಪನೆ ಮಾಡಬೇಕೆನ್ನುವುದು. ಅವರೂ ಸಹ ರೆಸಲ್ಯೂಷನ್ ಮಾಡಿದ್ದಾರೆ; ಇದು ಯಾವ ಸ್ಟೇಜಿನಲ್ಲಿದೆ? ಇನ್ಸ್‌ಪೆಕ್ಷನ್ ಸ್ಟಡಿ ಟೀಂ ಯಾವಾಗ ಬರುತ್ತದೆ ಎನ್ನುವುದನ್ನು ತಿಳಿಸಬೇಕು?

ಕಟ್ಟಕಡೆಯದಾಗಿ; ಬಹಳ ಮುಖ್ಯವಾದ ಸಲಹೆ. ನಮ್ಮ ದೇಶದಲ್ಲಿ ಅಡ್ಮಿನಿಸ್ಟ್ರೇಷನ್ ಸರಿಯಾಗಬೇಕಾದರೆ, cases come under torts should be encouraged

ಇದಕ್ಕೆ ಪ್ರೋತ್ಸಾಹ ಕೊಡಿ. ನಾವು ಯಾವಾಗ ಪ್ರೋತ್ಸಾಹ ಇದಕ್ಕೆ ಕೊಡುತ್ತೇವೆಯೋ ಆಗ ಅಧಿಕಾರಿಗಳು ಜವಾಬ್ದಾರಿ ಹೊತ್ತುಕೊಳ್ಳತಕ್ಕ ಪ್ರಸಂಗ ಬರುತ್ತದೆ. ತಾವುಗಳು ಕೋರ್ಟ್ ಫೀಯನ್ನು ಮನ್ನಾ ಮಾಡಬೇಕು.

೫-೩೦ ಪಿ. ಎಂ.

ಈಗ ಅವರು ಈ ಭಯ ಇಲ್ಲದೇ ಇರುವುದರಿಂದ ಯಾವ ಕೆಲಸವನ್ನೂ ಸಹ ಮಾಡುತ್ತಾ ಇಲ್ಲ. ಜವಾಬ್ದಾರಿಯಿಂದ ಸರಿಯಾಗಿ ಕೆಲಸ ಮಾಡುವುದಿಲ್ಲ. ಈಗ ಏನಾದರೂ ಕೇಳಿದರೆ ಕೋರ್ಟಿಗೆ ಹೋಗಿ ಆರ್ಡರ್ ತೆಗೆದುಕೊಂಡು ಬನ್ನಿ ಎಂದು ಹೇಳುತ್ತಾರೆ. ನಾನು ಈ ಬಗ್ಗೆ ಕಳೆದ ಸಾರಿಯೇ ಹೇಳಿದ್ದೇನೆ. ಈ ವಿಷಯ ಆಲ್ ಇಂಡಿಯಾ ಮಿನಿಸ್ಟರ್ಸ್ ಕಾನ್‌ಫರೆನ್ಸ್‌ನಲ್ಲಿ ತೆಗೆದುಕೊಂಡು ಅದರ ಬಗ್ಗೆ ಒಂದು ನಿರ್ಣಯವನ್ನು ಮಾಡಲಾಗಿದೆ. ಜೊತೆಗೆ ಇಂಟರ್‌ನ್ಯಾಷನಲ್ ಕಾನ್‌ಫರೆನ್ಸ್‌ನಲ್ಲೂ ಕೂಡ ಇದರ ಕಡೆಗೆ ಗಮನಕೊಡುತ್ತಿದ್ದಾರೆ. ಕಮ್ಯೂನಿಸ್ಟ್ ರಾಷ್ಟ್ರಗಳಲ್ಲಿ, ಸೋಷಲಿಸ್ಟ್ ರಾಷ್ಟ್ರಗಳಲ್ಲಿ ಹಾಗೂ ಪಾಶ್ಚಿಮಾತ್ಯ ದೇಶಗಳಲ್ಲಿ ಇದು ರೂಢಿಯಲ್ಲಿದೆ. Giving exemption to Court fees cases coming under torts and cases to be filed for recovery of damages, these are purely the State subjects. An opportunity must be given to the aggrieved parties to go to the courts.

Regarding Housing, I shall avail a separate opportunity to speak.

With these few words, I thank the Chair for having given me an opportunity to speak.

†ಶ್ರೀ ಎಸ್. ಸೂರ್ಯನಾರಾಯಣರಾವ್ (ವರ್ತೂರು).—ಮಾನ್ಯ ಅಧ್ಯಕ್ಷರೇ, ಇವೊತ್ತಿನ ದಿವಸ ಈ ಸಭೆಯ ಮುಂದೆ ಮಾನ್ಯ ಸಚಿವರುಗಳು ತಂದಿರತಕ್ಕಂಥ ಡಿಮ್ಯಾಂಡ್ಸ್‌ಗಳು ೨೯, ೩೪, ೩೫ ೫೨, ೫೯ ಏನು ಇವೆ ಇವುಗಳ ಮೇಲೆ ಕೆಲವು ವಿಷಯಗಳನ್ನು ಮಾತನಾಡುವುದಕ್ಕೆ ಇಷ್ಟಪಡುತ್ತೇನೆ.

ಈಗ ಮೊಟ್ಟ ಮೊದಲಾಗಿ, ನಾನು ಹೇಳಬೇಕಾದರೆ ಈ ಪಾರ್ಲಿಮೆಂಟರಿ ಅಫೇರ್ಸ್‌ಗೆ ಸಂಬಂಧಪಟ್ಟಂತೆ ಶ್ರೀ ವೈ. ರಾಮಕೃಷ್ಣರವರು ಬಹಳ ಸುದೀರ್ಘವಾಗಿ ಮಾತನಾಡಿದ್ದಾರೆ. ನಾನು ಹೆಚ್ಚಾಗಿ ಇದರ ಬಗ್ಗೆ ಹೇಳುವುದಕ್ಕೆ ಹೋಗುವುದಿಲ್ಲ. ನಾನು ಇದಕ್ಕೆ ಸಂಬಂಧಪಟ್ಟಂತೆ ಹೇಳುವುದು ಇಷ್ಟೆ. ಶ್ರೀ ವೈ. ರಾಮಕೃಷ್ಣರವರು ಈ ಲೆಜಿಸ್ಲೇಚರ್ ಇಂಡಿಪೆಂಡೆಂಟ್ ಆಗುವುದರ ಬಗ್ಗೆ ಸರ್ಕಾರದವರು ಇನ್ನೂ ಅದನ್ನು ಕಾರ್ಯಗತ ಮಾಡಿಲ್ಲ ಎಂದು ಹೇಳಿದ್ದಾರೆ. ಅದನ್ನು ಆದಷ್ಟು ಬೇಗ ಕಾರ್ಯಗತ ಮಾಡುತ್ತಾರೆಂದು ನಾನು ತಿಳಿದುಕೊಂಡಿದ್ದೇನೆ.

ಎರಡನೆಯದಾಗಿ ಬಹಳ ಮುಖ್ಯವಾದ ವಿಷಯ ಏನೆಂದರೆ ನಮ್ಮ ವಿಧಾನಮಂಡಲದ ಕಾರ್ಯಾಲಯದಲ್ಲಿ ಅಧಿಕೃತ ವರದಿಗಾರರು ಏನು ಇದ್ದಾರೆ ಅವರು ಸೇರಿದಾಗಲೂ ವರದಿಗಾರರು, ನಿವೃತ್ತರಾಗುವವರೆಗೂ ವರದಿಗಾರರೇ. ಇವರ ವಿಚಾರದಲ್ಲಿ ಹಿಂದೆ ಅನೇಕ ಸಲ ಈ ಸದನದಲ್ಲಿ ಪ್ರಸ್ತಾಪವಾಗಿದೆ. ಇವರು ಅನೇಕ ಮನವಿಗಳನ್ನೂ ಸಹ ಸರ್ಕಾರಕ್ಕೆ ಕಳುಹಿಸಿಕೊಟ್ಟಿದ್ದಾರೆ. ಅವರು ನಮಗೆ ಏನಾದರೂ ಒಂದು ಇಂಸೆಂಟೀವ್ ಕೊಡಬೇಕು ಎಂದು ಬಹಳ ದಿವಸದಿಂದಲೂ ಕೇಳಿಕೊಂಡು ಬಂದಿದ್ದಾರೆ. ಅವರ ಬಗ್ಗೆ ಈಗಲಾದರೂ ಕೂಡ ವಿಚಾರ ಮಾಡಿ ಒಂದು ತೀರ್ಮಾನವನ್ನು ತೆಗೆದುಕೊಳ್ಳಿ. ತಮಗೇ ಗೊತ್ತಿದೆ, ಶೀಘ್ರಲಿಪಿಗಾರರಿಗೆ ಮತ್ತು ಬೆರಳಚ್ಚುಗಾರರಿಗೆ ಸ್ವಲ್ಪ ಅಲೋಯೆನ್ಸ್ ಕೊಡುತ್ತಾ ಇರುವುದು. ಇವರು ನಿವೃತ್ತರಾಗುವವರೆಗೂ ಕೂಡ ವರದಿಗಾರರಾಗಿಯೇ ಕೆಲಸ ಮಾಡಬೇಕಾಗಿರುವುದರಿಂದ ಇವರಿಗೆ ಪ್ರೊಮೋಷನ್ ಮತ್ತು ಅಲೋಯೆನ್ಸ್ ಕೊಡಬೇಕೆಂದು ನಾನು ಕೇಳಿಕೊಳ್ಳುತ್ತೇನೆ. ಬೇರೆ ಇಲಾಖೆಗಳಲ್ಲಿ ನೋಡಿದರೆ ಶೀಘ್ರಲಿಪಿಗಾರರಿಗೆ ೭೫ ರೂಪಾಯಿಗಳ ಅಲೋಯೆನ್ಸ್ ಕೊಡುತ್ತಿದ್ದಾರೆ. ಇವರಿಗೆ ಯಾವುದೇ ತರಹದ ಅಲೋಯೆನ್ಸ್ ಅನ್ನು ಕೊಡುತ್ತಾ ಇಲ್ಲ. ತಾವು ಕೂಡಲೇ ಇವರಿಗೆ ಅಲೋಯೆನ್ಸ್ ಕೊಡುವ ವಿಚಾರದಲ್ಲಿ ಒಂದು ತೀರ್ಮಾನವನ್ನು ಕೈಗೊಳ್ಳಬೇಕು.

ಮೂರನೆಯದಾಗಿ, ಈ ವರದಿಗಾರರನ್ನು ಗ್ರೇಡ್ ಸಿ ಯಿಂದ ಗ್ರೇಡ್ ಬಿ ಗೆ ಅಪ್‌ಗ್ರೇಡ್ ಮಾಡಬೇಕೆಂಬ ಒಂದು ಬೇಡಿಕೆ ಬಹಳ ದಿವಸದಿಂದಲೂ ಇದೆ. ಅವರ ಈ ಬೇಡಿಕೆ ನ್ಯಾಯವಾದುದೇ. ಬೇರೆ ಇಲಾಖೆಗಳಲ್ಲಿ ಇರುವ ಹಾಗೆ ಇವರಿಗೆ ಯಾವುದೇ ವಿಧವಾದ ಪ್ರಮೋಷನಲ್ ಅವಿನ್ಯೂಸ್ ಇರುವುದಿಲ್ಲ, ಅಲ್ಲದೆ ಇವರಿಗೆ ವರ್ಕ್‌ಲೋಡೂ ಕೂಡ ಬಹಳ ಜಾಸ್ತಿಯಾಗಿದೆ. ತಮಗೆ ಹೇಳಬೇಕಾದರೆ ಪಾರ್ಲಿಮೆಂಟ್‌ನಲ್ಲಿ ಮತ್ತು ರಾಜ್ಯಸಭೆಯಲ್ಲಿ ಪ್ರತ್ಯೇಕ ವರದಿಗಾರರು ಇದ್ದಾರೆ. ಆದರೆ ಇಲ್ಲಿ

ಇರತಕ್ಕಂಥ ವರದಿಗಾರರು ಮೇಲ್ಮನೆಗೂ ಹೋಗಬೇಕಾಗುತ್ತದೆ. ಈ ಕೆಳಮನೆಗೂ ಬರಬೇಕಾಗುತ್ತದೆ. ಅವರು ನಾವು ಹೇಳಿದ್ದನ್ನು ತೆಗೆದುಕೊಂಡು ಅದನ್ನು ತರ್ಜುಮೆ ಮಾಡಬೇಕಾಗಿರುವುದರಿಂದ, ಅವರು ಎಫಿಷಿಯೆಂಟ್ ಆಗಿ ಕೆಲಸ ಮಾಡಬೇಕಾದರೆ ತಾವು ಇವರ ಬಗ್ಗೆ ಗಮನ ಕೊಟ್ಟು ಇವರ ಬಗ್ಗೆ ತೀರ್ಮಾನವನ್ನು ತೆಗೆದುಕೊಳ್ಳಬೇಕು ಎಂದು ಹೇಳುತ್ತೇನೆ. ಇನ್ನು ಈ ಲೆಜಿಸ್ಲೇಚರ್ ಇಂಡಿಪೆಂಡೆಂಟ್ ಮಾಡಬೇಕಾದರೆ ಮದ್ರಾಸ್ ತರಹ ಇಲ್ಲೂ ಮಾಡುವುದಕ್ಕೆ ಎಲ್ಲಾ ಕಾರ್ಯಕ್ರಮಗಳನ್ನೂ ಸಹ ತಾವು ತೆಗೆದುಕೊಳ್ಳಬೇಕು ಎಂದು ನಾನು ಕೇಳಿಕೊಳ್ಳುತ್ತೇನೆ.

ಕೋರ್ಟ್ ವಿಚಾರದ ಬಗ್ಗೆ ಹೇಳುವುದಾದರೆ ಯಾವುದಾದರೂ ಒಂದು ವಿವಾದ ಟ್ರಿಬ್ಯೂನಲ್‌ಗೆ ಬಂದರೆ ಅಲ್ಲಿ ಅವರು ಒಂದು ತೀರ್ಮಾನಕ್ಕೆ ಬಂದಾಗ ತಕ್ಷಣ ಹೈಕೋರ್ಟಿಗೆ ಹೋಗಿ ಸ್ಟೇ ತೆಗೆದು ಕೊಂಡು ಬರುತ್ತಾರೆ. ಇದರಿಂದ ಕಾರ್ಮಿಕ ವರ್ಗಕ್ಕೆ ಬಹಳ ತೊಂದರೆಯಾಗಿದೆ. ಅದೇ ರೀತಿ ಕೃಷಿ ಕಾರ್ಮಿಕರಿಗೂ, ಗೇಣಿದಾರರಿಗೂ ತೊಂದರೆಯಾಗಿದೆ. ಇವರ ಬಗ್ಗೆ ಒಂದು ಸರಿಯಾದ ವ್ಯವಸ್ಥೆ ಮಾಡಿ. ಈ ಬಗ್ಗೆ ನಾನು ಹೇಳುವುದೇನೆಂದರೆ ಹೈಕೋರ್ಟ್‌ನಲ್ಲಿ ಲೇಬರ್ ಬೆಂಚ್ ಎಂದು ಒಂದನ್ನು ಮಾಡಿದರೆ ಅನುಕೂಲವಾಗುತ್ತದೆ. ಉದಾಹರಣೆಗೆ ಹೇಳುವುದಾದರೆ ಮೈಕೋ ಯೂನಿಯನ್ ತೆಗೆದುಕೊಳ್ಳಿ. ಅವರು ಎಲೆಕ್ಷನ್ ಮಾಡಬೇಕು ಎಂದು ೫ ವರ್ಷದಿಂದಲೂ ಕೇಳುತ್ತಿದ್ದಾರೆ. ಈ ಡೆಮಾಕ್ರಸಿಯಲ್ಲಿ ಕಾರ್ಮಿಕರು ಸಂಘವನ್ನು ನಡೆಸಿಕೊಂಡು ಹೋಗತಕ್ಕಂಥ ಹಕ್ಕು ಇದ್ದರೂ ಸಹ ಕೋರ್ಟಿನಲ್ಲಿ ಏನು ಮಾಡಿದರು ಎಂದರೆ ಇದನ್ನು ಡಿವಿಷನಲ್ ಬೆಂಚ್‌ಗೆ ವರ್ಗಾಯಿಸಿದರು. ಇದನ್ನು ತೀರ್ಮಾನ ಮಾಡಬೇಕಾದರೆ ವರ್ಷಗಟ್ಟಲೆ ಸಮಯವನ್ನು ತೆಗೆದುಕೊಂಡರು. ಹೀಗಾದರೆ ಕಾರ್ಮಿಕ ವರ್ಗಕ್ಕೆ ಏನು ನ್ಯಾಯ ದೊರಕಿದಂತಾಗುತ್ತದೆ ಹೇಳಿ ? ಅದೇ ರೀತಿಯಾಗಿ ಐ.ಟಿ.ಸಿ. ನಲ್ಲೂ ಇದ್ದಂಥ ಒಂದು ಅವಾರ್ಡ್ ಅನ್ನು ಡಿವಿಷನಲ್ ಬೆಂಚ್‌ಗೆ ವರ್ಗಾಯಿಸಿದರು. ಅದರ ಜಡ್ಜ್‌ಮೆಂಟ್ ವರ್ಷ ಗಟ್ಟಲೆಯಾದರೂ ಬಂದಿಲ್ಲ. ಹೀಗಾದರೆ ಆ ಕಾರ್ಮಿಕರು ಜೀವನ ಮಾಡುವುದು ಹೇಗೆ ? ಇದೇರೀತಿ ರೈತರ ಭೂಮಿಯ ವಿಚಾರದಲ್ಲೂ ಇದೆ. ಆದಷ್ಟು ಜಾಗ್ರತೆಯಾಗಿ ಇಂತಹ ಸಮಸ್ಯೆಗಳನ್ನು ಬಗೆಹರಿಸು ವುದಕ್ಕೆ ಏನು ವ್ಯವಸ್ಥೆ ಮಾಡುತ್ತೀರಿ ಎನ್ನುವುದನ್ನು ತಾವು ಹೇಳಬೇಕು ಎಂದು ನಾನು ಕೇಳಿ ಕೊಳ್ಳುತ್ತೇನೆ.

ಇನ್ನು ಕ್ರಿಮಿನಲ್ ಕೋರ್ಟಿನಲ್ಲಿ ಯಾವುದಾದರೂ ಕೇಸುಗಳನ್ನು ಹಾಕಿದರೆ ಆ ಕಾರ್ಮಿಕ ಮುಖಂಡರ ಮೇಲೆ ಛಾರ್ಜ್‌ಷೀಟ್ ಹಾಕುವುದೇ ಇಲ್ಲ. ೨-೩ ವರ್ಷವಾದರೂ ಕೂಡ ಅದು ಹಾಗೆಯೇ ಇರುತ್ತದೆ. ಅವರು ಕೋರ್ಟಿಗೆ ಹೋಗಿ ಅಟೆಂಡೆನ್ಸ್ ಕೊಟ್ಟು ಬರಬೇಕು. ಅದನ್ನೆಲ್ಲಾ ತಾವು ಯಾವ ರೀತಿಯಾಗಿ ವ್ಯವಸ್ಥೆ ಮಾಡುತ್ತೀರಿ ಎನ್ನುವುದನ್ನು ಜನ ನೋಡುತ್ತಿದ್ದಾರೆ, ಇವೊತ್ತಿನ ದಿವಸ ಜ್ಯೂರಿಸ್‌ಪ್ರುಡೆನ್ಸ್ ಪ್ರಕಾರ ಜನಗಳಿಗೆ ಸರಿಯಾಗಿ ನ್ಯಾಯ ಸಿಕ್ಕುವುದೇ ಕಷ್ಟವಾಗಿದೆ. ಇದರ ಬಗ್ಗೆ ವಿಚಾರ ಮಾಡಿ ಆದಷ್ಟು ಜಾಗ್ರತೆಯಾಗಿ, ಅವರಿಗೆ ನ್ಯಾಯ ಸಿಗುವ ರೀತಿಯಲ್ಲಿ ಮಾಡಬೇಕೆಂದು ನಾನು ಕೇಳಿಕೊಳ್ಳುತ್ತೇನೆ.

ಕಾರ್ಮಿಕರ ವಿಚಾರಕ್ಕೆ ಬಂದರೆ ಈ ಬಗ್ಗೆ ಕಾರ್ಮಿಕ ಇಲಾಖೆ ಏನು ಇದೆ ಅದು ಒಂದು ತಿಂಗಳಿಂದಲೂ ಸಹ ಕೆಲಸ ಮಾಡುತ್ತಾ ಇಲ್ಲ. ಏತಕ್ಕೆಂದರೆ ಯಾವುದಾದರು ಒಂದು ವಿಚಾರದ ಕನ್ಸಿಲಿಯೇಷನ್‌ನಲ್ಲಿ ಫೈಲೂರ್ ಆಗಿ ಅದು ಸೆಕ್ರೆಟರಿಗೆ ಬಂದಾಗ ಲೇಬರ್ ಕಮೀಷನ್ನಿನವರು ಕಾನ್‌ಫಿಡೆನ್ಷಿಯಲ್ ರಿಪೋರ್ಟ್‌ನಲ್ಲಿ ಆ ಬಗ್ಗೆ ವಾದವನ್ನು ಬಗೆಹರಿಸುವುದಕ್ಕೆ ಕೋರ್ಟಿಗೆ ಹೋಗಬೇಕಾಗುತ್ತದೆ, ಇಲ್ಲದೇ ಹೋದರೆ ಆ ವಾದವನ್ನು ಬಗೆಹರಿಸುವುದಕ್ಕಾಗುವುದಿಲ್ಲ. ಕೆಲವು ಸಂದರ್ಭದಲ್ಲಿ ಇಂಥ ವಿಷಯಗಳನ್ನು ಸೆಕ್ರೆಟರಿಗೆ ಮಾಡುತ್ತಿದ್ದರು, ಈಗ ಅದು ಮಂತ್ರಿಗಳಿಗೆ ಹೋಗಿದೆ ಅವರಿಗೆ ರೆಫರ್ ಮಾಡಬೇಕಾಗಿದೆ. ಮಾನ್ಯ ಮಂತ್ರಿಗಳು ಒಂದು ತಿಂಗಳಿನಿಂದಲೂ ಇಲ್ಲ, ಅವರು ಅನಾರೋಗ್ಯದಿಂದ ಕಾರ್ಮಿಕ ಇಲಾಖೆ ಅನಾರೋಗ್ಯವಾಗಿದೆ. ಇದರ ಬಗ್ಗೆ ಸರಿಯಾದ ವ್ಯವಸ್ಥೆ ಮಾಡಿಲ್ಲ. ಕಾರ್ಮಿಕ ಇಲಾಖೆ ಎಂದರೆ ಅವರಲ್ಲಿ ಕಮೀಷನರ್ ಕೂಡ ಆಗಬಹುದು, ಮಂತ್ರಿಯಾದರೂ ಆಗಬಹುದು. ಇವೊತ್ತಿನ ದಿವಸ ಈ ಇಲಾಖೆಯಿಂದ ಕಾರ್ಮಿಕ ವರ್ಗಕ್ಕೆ ಸರಿಯಾದ ನ್ಯಾಯ ಸಿಕ್ಕುತ್ತಾ ಇಲ್ಲ. ದೇಶದಲ್ಲಿ ಕಾರ್ಮಿಕ ವರ್ಗ ಎಂದರೆ ಒಂದು ಕ್ರಾಂತಿಕಾರಕ ವರ್ಗ, ದೇಶದಲ್ಲಿ ಚೆನ್ನಾಗಿ ಕೆಲಸ ಮಾಡತಕ್ಕಂಥದ್ದು ಯಾವ ವರ್ಗ ಎಂದರೆ ಕಾರ್ಮಿಕ ವರ್ಗ ಎನ್ನತಕ್ಕಂಥಾದ್ದು ಎನ್ನುವ ಭಾವನೆ ಬರಬೇಕು. ಈಗ ನೋಡಿದರೆ ಇದರ ಬಗ್ಗೆ ಸರಿಯಾದ ವ್ಯವಸ್ಥೆ ಇಲ್ಲವೇ ಇಲ್ಲ. ಇವರಿಗೆ ಯಾವುದೂ

ಬೇಡ, ತಮಗೆ ಹೇಳಬೇಕಾದರೆ ಈ ಲೇಬರ್ ಡಿಪಾರ್ಟ್‌ಮೆಂಟಿನಲ್ಲಿ ಸರಿಯಾದಂಥ ಸಿಬ್ಬಂದಿ ಇಲ್ಲ, ಆ ಇಲಾಖೆಯಲ್ಲಿ ಸ್ಟೆನೋಗ್ರಾಫರ್ಸ್ ಇಲ್ಲ, ಗುಮಾಸ್ತರು ಇಲ್ಲ, ವರ್ಕ್‌ಲೋಡ್ ಬಹಳ ಜಾಸ್ತಿ ಇದೆ. ಅದಕ್ಕೆ ತಕ್ಕಂತೆ ಅಧಿಕಾರಿಗಳು ಇಲ್ಲ. ಇನ್ನು ಲೇಬರ್ ಕೋರ್ಟಿಗೆ ಹೋದರೆ ಜಡ್ಜ್‌ಗಳೇ ಇಲ್ಲ. ಜಡ್ಜ್ ಇದ್ದರೆ ಸ್ಟೆನೋಗ್ರಾಫರ್ಸ್ ಇಲ್ಲ, ಕೆಲವು ಕೇಸಸ್‌ಗಳ ಬಗ್ಗೆ ಜಡ್ಜ್‌ಮೆಂಟ್ ಆದರೂ ಕೂಡ ಅದು ಪಬ್ಲಿಷ್ ಆಗುವುದಿಲ್ಲ, ಗೌರ್ನ್‌ಮೆಂಟ್ ಪ್ರೆಸ್‌ನಲ್ಲಿ ಅದು ಪ್ರಿಂಟ್ ಆಗುವುದಿಲ್ಲ. ಇದರ ಒಂದು ಲೆಕ್ಕಾಚಾರ ಹೇಳಬೇಕಾದರೆ ೩ ಸಾವಿರ ಜಡ್ಜ್‌ಮೆಂಟ್‌ಗಳು ಇವೆ, ಅವು ಪ್ರಿಂಟ್ ಆಗಿಲ್ಲ. ಈ ಟ್ರಿಬ್ಯೂನಲ್ ಜಡ್ಜ್‌ಮೆಂಟ್ ಯಾವಾಗ ಬರುತ್ತದೋ ಎನ್ನುವುದನ್ನು ಈ ಕಾರ್ಮಿಕ ವರ್ಗ ಚಾತಕ ಪಕ್ಷಿಹಾಗೆ ನೋಡುತ್ತಾ ಇದ್ದಾರೆ. ಆ ಜಡ್ಜ್‌ಮೆಂಟುಗಳು ಇನ್ನೂ ಗೌರ್ನ್‌ಮೆಂಟ್ ಪ್ರೆಸ್‌ನಲ್ಲಿ ಪ್ರಿಂಟ್ ಆಗಿಲ್ಲ. ಇದರ ಬಗ್ಗೆ ತಾವು ಏನಾದರೂ ಒಂದು ವ್ಯವಸ್ಥೆ ಮಾಡಬೇಕು.

ಇವೊತ್ತಿನ ದಿವಸ ಈ ಲೇಬರ್ ಇಲಾಖೆಯ ಬಗ್ಗೆ ಹೇಳಬೇಕಾದರೆ ಇದರಲ್ಲಿ ಇಂಡಸ್ಟ್ರಿಯಲ್ ಡಿಸ್ಪ್ಯೂಟ್ ಆಕ್ಟ್ ಎಂಬ ಒಂದು ಸ್ಪೆಷಲ್ ಎನಾಕ್ಟ್‌ಮೆಂಟ್ ಇದೆ. ಇದು ಯಾವಾಗ ಆಯಿತು ಎಂದರೆ ಈ ದೇಶದಲ್ಲಿ ೧೯೪೮ ನೇ ಇಸವಿಯಲ್ಲಿ ಎರಡನೇ ಮಹಾಯುದ್ಧವಾದಾಗ ದೇಶದಲ್ಲಿರತಕ್ಕಂಥ ಬಂಡವಾಳಗಾರರೂ ಮತ್ತು ಕಾರ್ಮಿಕ ವರ್ಗದವರೂ ಸೇರಿ ಈ ಬಗ್ಗೆ ಹೋರಾಟ ಮಾಡಬೇಡಿ ಇದನ್ನು ಪಂಚಾಯಿತಿಯಲ್ಲಿ ತೀರ್ಮಾನ ಮಾಡುತ್ತೇವೆ ಎಂದು ಹೇಳಿದರು. ೧೯೪೮ ರಲ್ಲಿ ಇಂಡಸ್ಟ್ರಿಯಲ್ ಡಿಸ್ಪ್ಯೂಟ್ ಆಕ್ಟ್ ಅನ್ನು ಈ ಕಾರಣಕ್ಕಾಗಿ ಎನಾಕ್ಟ್‌ಮೆಂಟ್ ಮಾಡಿದರು. ಇದರಲ್ಲಿ ಬರತಕ್ಕ ವಾದಗಳನ್ನು ಎಕ್ಸ್‌ಪಿಡಿಯಸ್ ಆಗಿ ಮೂರು ತಿಂಗಳೊಳಗೆ ಬಗೆಹರಿಸಬೇಕು ಎನ್ನುವ ಒಂದು ಕಾನೂನನ್ನು ಇದರಲ್ಲಿ ಅಳವಡಿಸಿದ್ದಾರೆ. ಆದು ಇವೊತ್ತು ಏನಾಗಿದೆ ಎಂದರೆ, ಅದರಲ್ಲಿ ಸರಿಯಾಗಿ ಕೆಲಸ ಆಗುತ್ತಾ ಇಲ್ಲ ನಿಧಾನವಾಗಿದೆ. ಈ ಕಾರಣದಿಂದ ಇವೊತ್ತು ದೇಶದಲ್ಲಿ ಅನೇಕ ಕಾರ್ಖಾನೆಗಳು ಲಾಕ್ ಔಟ್ ಆಗುತ್ತಾ ಇವೆ ಕ್ಲೋಷರ್ ಆಗುತ್ತಾ ಇವೆ. ಅನೇಕ ಇಂಡಸ್ಟ್ರೀಸ್ ಸಿಕ್ ಆಗುತ್ತಾ ಇವೆ. ಇದರಿಂದ ಅನೇಕ ಕಾರ್ಮಿಕರು ಬೀದಿಪಾಲಾಗಿದ್ದಾರೆ.

ಇವೊತ್ತು ಇಂಡಸ್ಟ್ರಿಯಲ್ ಡಿಸ್ಪ್ಯೂಟ್ ಕಾನೂನು ಪ್ರಕಾರ, ಸರಕಾರದವರು ತಮಗೆ ಬೇಕಾದಾಗ ಹೋಗಿ ಮುಷ್ಕರಗಳನ್ನು ನಿಷೇಧ ಮಾಡುತ್ತಾರೆ. ಆದರೆ ಅದೇ ಸರಕಾರ ಬೇರೆ ಕಡೆ ಲಾಕೌಟ್ ಮಾಡಿದರೆ, ವರ್ಕ್ ಸಸ್ಪೆನ್‌ಷನ್ ಮಾಡಿದರೆ, ಅದರ ಬಗ್ಗೆ ಚಕಾರ ಎತ್ತುವುದಿಲ್ಲ. ಅದರ ಬಗ್ಗೆ ಕ್ರಮ ತೆಗೆದುಕೊಳ್ಳಲು ಅಧಿಕಾರಿಗಳಿಗೆ ಧೈರ್ಯ ಇದೆಯೋ, ಇಲ್ಲವೋ, ಅಥವಾ ಅವರು ಅಲ್ಲಿನ ಮಾಲಿಕ ವರ್ಗಗಳ, ಶ್ರೀಮಂತರ ಒಂದು ಆಶ್ರಯಕ್ಕೆ ಒಳಗಾಗಿದ್ದಾರೋ ಎಂಬುದನ್ನು ವಿಚಾರ ಮಾಡಬೇಕು. ಮಕ್ಕಳಿಗೆ ಬಿಸ್ಕತ್ ತಯಾರು ಮಾಡುವ ಕ್ವಾಲಿಟಿ ಬಿಸ್ಕತ್ ಫ್ಯಾಕ್ಟರಿಯಲ್ಲಿ ನವೆಂಬರ್ ೨೬ ರಿಂದ ವರ್ಕ್ ಸಸ್ಪೆಂಡ್ ಎಂದು ಇಟ್ಟಿದ್ದಾರೆ. ಒಬ್ಬ ಕಾರ್ಮಿಕನಿಗೂ ಚಾರ್ಜ್‌ಶೀಟ್ ಕೊಟ್ಟಿಲ್ಲ, ಲಾಕೌಟ್ ಎಂದು ಡಿಕ್ಲೇರ್ ಮಾಡಿಲ್ಲ, ಕೆಲಸ ಇಲ್ಲ, ಸಂಬಳ ಇಲ್ಲ. ಅದನ್ನು ಲಾಕೌಟ್ ಎಂದು ಪರಿಗಣನೆ ಮಾಡಿ ಕೋರ್ಟಿಗೆ ಕಳುಹಿಸುವುದಕ್ಕೆ ಮಂತ್ರಿಗಳಿಗೆ ಶಕ್ತಿ ಇಲ್ಲವೇ ? ನಮಗೆ ಇದು ಅರ್ಥ ಆಗಬೇಕಾಗಿದೆ. ಇದರ ಬಗ್ಗೆ ವ್ಯವಸ್ಥೆ ಮಾಡದಿರುವುದು ಜನತಾ ಸರಕಾರದ ಬೇಜವಾಬ್ದಾರಿತನ ಎಂದು ನಾವು ಹೇಳಬೇಕಾಗುತ್ತದೆ. ಮಂತ್ರಿಗಳಿಗೆ ಅನುಕೂಲ ಆದರೆ ವ್ಯವಸ್ಥೆ ಮಾಡುತ್ತಾರೆ, ಇಲ್ಲದೇ ಇದ್ದರೆ ಬೇರೆಯವರಿಗೆ ಜವಾಬ್ದಾರಿ ಕೊಟ್ಟು ಹೋಗುತ್ತಾರೆ. ಕಳೆದ ಸಲ ಲೇಬರ್ ಇಲಾಖೆಗೆ ಬಗ್ಗೆ ನಾವು ಚರ್ಚೆ ಮಾಡುವಾಗ ಮಾನ್ಯ ಕಾರ್ಮಿಕ ಸಚಿವರು ಹಾಜಿಗೆ ಹೋಗಿದ್ದರು. ಈ ಸಾರಿ ಚರ್ಚೆ ಮಾಡುವಾಗ ಅನಾರೋಗ್ಯ. ಹೋದಸಲ ಮಾನ್ಯ ರಘುಪತಿಯವರು ಬಂದು ಈ ಸಾರಿ ನಮ್ಮ ಮಾನ್ಯ ಲಕ್ಷ್ಮೀಸಾಗರ್‌ರವರು ಬಂದಿದ್ದಾರೆ. ಮುಂದಿನ ಸಲ ಇನ್ಯಾರು ಬರುತ್ತಾರೋ, ಏನೋ ? ಯಾರೂ ಸರಿಯಾದ ರೀತಿ ಉತ್ತರ ಕೊಡುವುದಿಲ್ಲ. ನಾವು ಕೋಪ ಮಾಡಿಕೊಳ್ಳುವುದಕ್ಕೆ ಆಗುವುದಿಲ್ಲ. ಅವರು ಈಗಿನ್ನೂ ಪೀಪ್ ಮಾಡಿರುತ್ತಾರೆ, ಏನು ಹೇಳುತ್ತಾರೋ ಕೇಳಿಕೋಬೇಕು, ಹೋಗಬೇಕು. ಲೇಬರ್ ಇಲಾಖೆಯಲ್ಲಿ ಕನ್‌ಸೀಲಿಯೇಷನ್ ಆಫೀಸರ್ಸ್ ಎಂದು ಇದ್ದಾರೆ, ಅವರು ಯಾವ ಕನ್‌ಸೀಲಿಯೇಷನ್ ಸಹ ಮಾಡುತ್ತಿಲ್ಲ. ಇವರೇ ಮುಂಚೆ ಹೋಗಿ ನೀವು ಕನ್ಸೀಲಿಯೇಷನ್ ಮಾಲೀಕರಿಗೆ ಮೀಟಿಂಗ್‌ಗೆ ಬರಬೇಡಿ ಎಂದು ಹೇಳಿಬಿಡುತ್ತಾರೆ. ಅವರ ಬರದೇ ಇದ್ದರೆ ನಾವು ಏನು ಮಾಡುವುದಕಾಗುತ್ತದೇ ಎಂದು ಕಾರ್ಮಿಕರಿಗೆ ಹೇಳುತ್ತಾರೆ. ಪಂಚಾಯತಿ ಮಾಡಿ ಸಮಸ್ಯೆಗಳನ್ನು ಬಗೆಹರಿಸಬೇಕೆಂದು ಕನ್ಸೀಲಿಯೇಷನ್ ಆಫೀಸರ್ಸ್ ಎಂದು ಮಾಡಿರುತ್ತೀರಿ. ಅಲ್ಲಿ ವಕೀಲರುಗಳು ಹೋಗಬಾರದು ಎಂದು ಕಾನೂನು ಮಾಡಿದ್ದೀರಿ. ವಕೀಲರುಗಳು ಹೋದರೆ ಪಂಚಾಯತಿ ಆಗುವುದಿಲ್ಲ ಎಂದು ಹೇಳುತ್ತೀರಿ.

ಆಮೇಲೆ ನೀವು ಫೈಲ್ಯೂರ್ ರಿಪೋರ್ಟ್ ಕಳಿಸಿದ್ದಾರೆಂದು ಹೇಳುತ್ತೀರಿ. ಸೋಷಿಯಲ್ ಔಟಲುಕ್‌ನಿಂದ ಸ್ಪೆಷಲ್ ಲೆಜಿಸ್ಲೇಷನ್ ಮಾಡಿ ಕಾರ್ಮಿಕರಿಗೆ ಅನುಕೂಲ ಮಾಡಿಕೊಡಬೇಕು. ಆದರೆ ಮಾಲೀಕವರ್ಗ, ಶ್ರೀಮಂತವರ್ಗ ಕಾರ್ಮಿಕರ ತಲೆಮೇಲೆ ಹೆಚ್ಚಿನ ವರ್ಕ್ ಲೋಡ್ ಹಾಕಿ ಚಿತ್ರಹಿಂಸೆ ಮಾಡುತ್ತಾರೆ ಇದು ನಮ್ಮ ಅನೇಕ ಲೇಬರ್ ಅಧಿಕಾರಿಗಳಿಗೆ ಕಾಣುವುದಿಲ್ಲ. ಕೆಲವರು ಇದ್ದರು, ಅವರು ರಿಟೈರ್ ಆಗಿಬಿಟ್ಟರು. ಈಗ ಬಂದವರು ಏನು ಮಾಡುತ್ತಾರೋ ಗೊತ್ತಿಲ್ಲ. ಕಾರ್ಮಿಕ ಇಲಾಖೆಗೆ ಹೋದರೆ ಏಕೆ ಬಂದೆವೋ ಎಂದು ವಾಪಸ್ ಬರಬೇಕಾಗುತ್ತದೆ. ೮ ಗಂಟೆ ಕೆಲಸ ಮಾಡಬೇಕೆಂದು ೧೯೪೮ರಲ್ಲೇ ಕಾನೂನು ಆಯಿತು. ಎಲ್ಲಿದೆ ಎಂಟು ಗಂಟೆ ಕೆಲಸ ? ಬೆಂಗಳೂರಿನಲ್ಲಿರತಕ್ಕ ಸಣ್ಣ ಸಣ್ಣ ಸಿಲ್ಕ್ ಫ್ಯಾಕ್ಟರಿಗಳಲ್ಲಿ, ಬೇರೆ ಸಣ್ಣ ಸಣ್ಣ ಕಾರ್ಖಾನೆಗಳಲ್ಲಿ ಎಂಟು ಗಂಟೆ ಕೆಲಸ ಇಲ್ಲ. ಎಂಟುಗಂಟೆ ಕೆಲಸ ಎಂದು ಮ್ಯಾಂಡೇಟರಿ ಪ್ರಾವಿಷನ್ಸ್ ಇದೆ. ಅದು ಏತಕ್ಕೆ ಆಗುವುದಿಲ್ಲ. ಅದೇ ರೀತಿ ಫ್ಯಾಕ್ಟರಿ ಇನ್‌ಸ್ಪೆಕ್ಟೊರೇಟ್ ಆಘಾತಗಳನ್ನು ಕಡಿಮೆ ಮಾಡಬೇಕು. ಅವರು ಯಾವಾಗ ಹೋಗಿ ಇನ್‌ಸ್ಪೆಕ್ಟ್ ಮಾಡುತ್ತಾರೋ ಗೊತ್ತಿಲ್ಲ, ಪೇಮೆಂಟ್ ಆಫ್ ವೇಜಸ್ ಆಕ್ಟ್ ಏತಕ್ಕೆ ಜಾರಿಯಾಗುವುದಿಲ್ಲ? ದೊಡ್ಡ ದೊಡ್ಡ ಕಾರ್ಖಾನೆಗಳಲ್ಲಿ ಏತಕ್ಕೆ ಇದು ಜಾರಿ ಆಗುತ್ತಿಲ್ಲ. ಅಮ್ಕೋ ಫ್ಯಾಕ್ಟರಿಯಲ್ಲಿ ಮುಷ್ಕರ ನಡೆಯಿತು. ಕಾರ್ಮಿಕ ಸಚಿವರಾದ ಮಾನ್ಯ ಅಜೀಜ್‌ಸೇಟ್‌ರವರು ಇದ್ದರೆ ನಾವು ಕೇಳಬಹುದಾಗಿತ್ತು. ಮದ್ರಾಸಿನಿಂದ ಕಾರ್ಮಿಕರು ಬಂದು ನಮಗೆ ಹೇಳಿದರು. ದುಡಿದ ಸಂಬಳ ಕೊಡಬೇಕಾದರೆ, ನಿಧಾನ ಮಾಡಿದರೆ ಒಂದೊಂದು ದಿವಸಕ್ಕೆ ಒಂದೊಂದು ರೂಪಾಯಿ ದಂಡ ಕೊಡಬೇಕೆಂದು ಇದೆ ಎಂದು ಕಾರ್ಮಿಕ ಸಚಿವರು ಯಾವ ಧೋರಣೆ ತೆಗೆದುಕೊಂಡರು ಎಂದರೆ, ಅಗ್ರಿಮೆಂಟ್ ಇರುವಾಗ ಮುಷ್ಕರ ಮಾಡಿದರೆ, ಪ್ರಾಸಿಕ್ಯೂಟ್ ಮಾಡುತ್ತೇನೆ ಎಂದು ಹೇಳಿದ್ದಾರೆ. ಈ ಮಾತನ್ನು ಮಾಲೀಕರು ಹೇಳಲಿಲ್ಲ, ಮಂತ್ರಿಗಳು ಹೇಳಿಬಿಟ್ಟರು. ಮೀಡಿಯಾದಲ್ಲಿ ಸ್ಟ್ರೈಕ್ ಬ್ಯಾನ್ ಮಾಡಿಬಿಟ್ಟರು. ಕೊನೆಗೆ ಶಾಸಕರು ಹೋಗಿ ಉಪವಾಸ ಮುಷ್ಕರ ಮಾಡಬೇಕಾಗಿ ಬಂದಿತು. ಮಾನ್ಯ ಮುಖ್ಯ ಮಂತ್ರಿಗಳು, ಇಂಡಸ್ಟ್ರೀಸ್ ಮಿನಿಸ್ಟರ್ ಇಂಟರ್‌ವೀನ್ ಆಗಿ ಬಗೆಹರಿಬೇಕಾಯಿತು. ಪ್ಲಾಂಟೇಷನ್ ವರ್ಕರ್ಸ್ ಮುಷ್ಕರ ಮಾಡಬೇಕೆಂದು ನೋಟೀಸ್ ಕೊಟ್ಟಾಗ ಸಚಿವರು ಸ್ಟ್ರೈಕ್ ಬ್ಯಾನ್ ಮಾಡಿ ಬಿಡುತ್ತೇವೆಂದು ಹೇಳಿ ಬಿಟ್ಟರು. ಕಾರ್ಮಿಕ ಇಲಾಖೆಯಲ್ಲಿ ಒಂದು ಕಡೆ ಹೇಳುತ್ತಾರೆ, ಕಾರ್ಮಿಕರಿಗೆ ಹಕ್ಕು ಇದೆ, ಶಾಂತಿಯುತವಾಗಿ ಹೋರಾಟ ಮಾಡತಕ್ಕಂಥ ಮೂಲಭೂತ ಹಕ್ಕು ಇದೆ ಎಂದು, ಆದರೆ ಸ್ಟ್ರೈಕ್ ಬ್ಯಾನ್ ಮಾಡುತ್ತೇವೆ ಎಂಬ ಧೋರಣೆ ಇವತ್ತು ಇದೆ. ಸರಕಾರ ಇದರ ಬಗ್ಗೆ ಯೋಚನೆ ಮಾಡಬೇಕು. ಇವತ್ತು ಎಂ.ಎಂ.ಸಿ. ಇದೆ. ಮಹೇಂದ್ರ ಅಂಡ್ ಮಹೇಂದ್ರ ಅವರ ಮೆಷಿನರಿ ಮ್ಯಾನುಫ್ಯಾಕ್ಚರಿಂಗ್ ಕಂಪೆನಿ, ಅಲ್ಲಿ ಬರೀ ಟ್ರೈನಿಂಗ್ ಎಂದು ಐ.ಟಿ.ಐ ಮಾಡಿದಂಥ ಹುಡುಗರು, ಅಪ್ರೆಂಟಿಸ್‌ಶಿಪ್ ಮಾಡಿದಂಥ ಹುಡುಗರು ಬೇರೆ ಬೇರೆ ಕಾರ್ಖಾನೆಗಳಲ್ಲಿ ದುಡಿದು, ೫–೬ ವರ್ಷ ದುಡಿದವರು, ಕೇವಲ ೩೦೦ ರೂಪಾಯಿಗಳಿಗೆ ದುಡಿಯುತ್ತಿದ್ದಾರೆ. ಟ್ರೈನಿಂಗ್ ಸ್ಕೀಮ್ ಎಂದು ಹೇಳಿ ದುಡಿಸಿಕೊಳ್ಳುತ್ತಿದ್ದಾರೆ. ಇದರ ಬಗ್ಗೆ ಸರಕಾರದ ನಿಲುವು ಏನು ? ಇದರ ಬಗ್ಗೆ ಇಲ್ಲಿ ಏನೂ ಇಲ್ಲ. ಅಲ್ಲಿ ಮೂರು ವರ್ಷ ಟ್ರೈನಿಂಗ್ ಪೀರಿಯಡ್ ಇದೆ. ಟ್ರೈನಿಂಗ್ ಏತಕ್ಕೆ ಎಂದರೆ, ಇಲ್ಲಿ ಬಹಳ ಸೊಫಿಸ್ಟಿಕೇಟೆಡ್ ಮೆಷಿನರಿ ತಯಾರಾಗಬೇಕಾದರೆ, ನೀವು ಪಡೆದಿರುವ ಅಪ್ರೆಂಟಿಸ್‌ಶಿಪ್ ಸಾಲದು, ಬೇರೆ ಕಾರ್ಖಾನೆ ಟ್ರೈನಿಂಗ್ ಸಾಲದು. ನಾವೇ ಟ್ರೈನಿಂಗ್ ಕೊಡುತ್ತೇವೆ ಎಂದು ಹೇಳುತ್ತಾರೆ. ಟ್ರೈನಿಂಗ್ ಪೀರಿಯಡ್ ಮುಗಿದಮೇಲೆ ಖಾಯಂ ಮಾಡಿ ಎಂದರೆ, ಆಗುವುದಿಲ್ಲ, ನೀನು ಯೂನಿಯನ್ ಲೀಡರ್ ಆಗಿದ್ದೀಯಾ, ನಾವು ಕೆಲಸ ಕೊಡಬೇಕಾದುದು ಇಲ್ಲ ಎಂದು ಹೇಳುತ್ತಾರೆ. ನೀನು ಸಂಘ ಮಾಡಿಕೊಂಡಿದ್ದೀಯಾ, ನೀನು ಡಿಸ್‌ಮಿಸ್ ಆಗಿದ್ದೀಯಾ ಎಂದು ಹೇಳುತ್ತಾರೆ. ಇದರ ಬಗ್ಗೆ ಹೋರಾಟ ಮಾಡಿದರೆ, ಮೈಸೂರಿನಲ್ಲಿ ಮಾನ್ಯ ಮಂತ್ರಿಗಳು ಮಾತನಾಡುತ್ತಾರೆ, ನಾನೇ ಸರ್ವಾಧಿಕಾರಿ ಆಗಿದ್ದರೆ, ಕಾರ್ಮಿಕರನ್ನು ಗುಂಡಿಟ್ಟು ಹೊಡೆಯುತ್ತಿದ್ದೆ ಎಂದು. ಇದು ಪ್ರಜಾಪ್ರಭುತ್ವ, ನಾನು ಏನೂ ಮಾಡುವುದಕ್ಕೆ ಆಗುವುದಿಲ್ಲ ಎಂದು ಹೇಳಿದ್ದಾರೆ. ಇದು ನವಧ್ವನಿ ಪೇಪರ್‌ನಲ್ಲಿ ಬಂದಿದೆ, ಈಗ ಅವರಿಲ್ಲ, ಇದುವರೆಗೂ ಈ ಮಾತನ್ನು ಅವರು ಕಂಟ್ರಾಡಿಕ್ಟ್ ಮಾಡಿಲ್ಲ. ನಾನು ಮುಖ್ಯಮಂತ್ರಿಗಳಿಗೆ ಕಾಗದ ಬರೆದಿದ್ದೇನೆ. ಇದರ ಬಗ್ಗೆ ಅವರು ಅಪಾಲಜಿ ಕೇಳದೇ ಇದ್ದರೆ ನಾನು ಇನ್‌ಡೆಫಿನೇಟ್ ಹಂಗರ್ ಸ್ಟ್ರೈಕ್ ಮಾಡಬೇಕಾಗಿ ಬರುತ್ತದೆ. ನಾನು ಸರ್ವಾಧಿಕಾರಿಯಾಗಿದ್ದರೆ ಗುಂಡಿಟ್ಟು ಹೊಡೆಯುತ್ತಿದ್ದೆ ಎಂದು ಹೇಳಿದ ಲೇಬರ್ ಮಿನಿಸ್ಟರನ್ನು ಮಂತ್ರಿಮಂಡಲದಲ್ಲಿ ಇಟ್ಟುಕೊಳ್ಳುವುದು ಸರಿಯಲ್ಲ ಎಂಬುದು ನನ್ನ ಅಭಿಪ್ರಾಯ. ನಾನು ಹಿಂದೆಯೂ

ಇದನ್ನು ಪ್ರಸ್ತಾಪ ಮಾಡಿದ್ದೇನೆ. ಅವರು ಬರಲಿ. ಅದೇ ರೀತಿ ನಾವು ವಿಚಾರ ಮಾಡೋಣ. ಬೆಂಗಳೂರಿನಲ್ಲಿ ತೆಗೆದುಕೊಂಡರೆ, ಹೆಣ್ಣುಮಕ್ಕಳು ಸ್ಟ್ರೈಕ್ ಮಾಡಿದಾಗ, ತಾವು ಏನು ಧೋರಣೆ ತೆಗೆದುಕೊಂಡಿರಿ? ಸಣ್ಣ ಸಣ್ಣ ಕಾರ್ಖಾನೆಗಳಲ್ಲಿ ಮುಷ್ಕರ ಮಾಡಿದರೂ ಮಾಲೀಕರು ಕನ್‌ಸೀಲಿಯೇಷನ್‌ಗೆ ಬರುವುದಿಲ್ಲ. ಇದರ ಬಗ್ಗೆ ತಿದ್ದುಪಡಿ ತರಬೇಕೆಂದು ಹೇಳುತ್ತಿದ್ದೀರಿ. ಮಾನ್ಯ ಮುಖ್ಯ ಮಂತ್ರಿಗಳು ಎ.ಐ.ಟಿ.ಯು.ಸಿ. ಸಮ್ಮೇಳನದಲ್ಲಿ ನಮಗೆಲ್ಲಾ ಸಂತೋಷವಾದ ಮಾತನ್ನು ಹೇಳಿದರು. ಯವುದೇ ಮಾಲೀಕ ಕನ್‌ಸೀಲಿಯೇಷನ್ ಬರದೇ ಇದ್ದರೆ, ಅವರಿಗೆ ಸರಕಾರದ ನೆರವು ಸಿಗುವುದಿಲ್ಲ ಎಂದು ಹೇಳಿದರು. ಅದು ಇದುವರೆಗೆ ಕಾರ್ಯಗತವಾಗಿಲ್ಲ. ಎನ್ನು ಎಂ.ಎಂ.ಸಿ. ವಿಚಾರದಲ್ಲಿ ಹೇಳುವುದಾದರೆ ನನ್ನ ಜೊತೆಯಲ್ಲಿ ಬಂದಾಗ, ಮಾನ್ಯ ಮುಖ್ಯಮಂತ್ರಿಗಳು ಅಲ್ಲಿಗೆ ಹೋದರು ಕಾರ್ಮಿಕರನ್ನು ಭೇಟಿ ಮಾಡಿದರು, ಮಾನ್ಯ ಇಂಡಸ್ಟ್ರೀಸ್ ಮಿನಿಸ್ಟರ್ ಬೊಮ್ಮಾಯಿಯವರೂ ಹೋಗಿದ್ದರು. ದಿವಸಕ್ಕೆ ೧೦ ರೂಪಾಯಿಗಳ ಕೂಲಿ ಕೊಟ್ಟು ಮೂರು ವರ್ಷದಿಂದ ದುಡಿಸಿಕೊಳ್ಳುತ್ತಿದ್ದಾರೆ ಎಂದು ಕಾರ್ಮಿಕರು ಹೇಳಿದರು. ನಮಗೆ ಬೇಕಾದ ಟೆಸ್ಟ್ ಕೊಡಲಿ ನಾವು ಮಾಡುತ್ತೇವೆ, ಫ್ಯಾಕ್ಟರಿಯೊಳಗೆ ಕೋಟಿಗಟ್ಟಲೆ ರೂಪಾಯಿಗಳ ಮಾಲು ತಯಾರಾಗಿದೆ ಪ್ರೊಡಕ್ಷನ್ ಕಡಿಮೆಯಾದರೆ ಇಷ್ಟೇ ಕೆಲಸ ಮಾಡಬೇಕೆಂದು ಚಾರ್ಜ್ ಮಾಡುತ್ತಾರೆ. ಆದರೆ ನಮಗೆ ಬರೀ ಹತ್ತು ರೂಪಾಯಿಗಳನ್ನು ಕೊಡುತ್ತಾರೆ ಎಂದು ಹೇಳಿದರು. ಏನು ಐ.ಟಿ.ಐ ಪಾಸು ಮಾಡಿದಂಥವರಿಗೆ ಹತ್ತೇ ರೂಪಾಯಿಗಳೇ, ಕರೆಯಿಸಿ ಬಗೆ ಹರಿಸುತ್ತೇವೆ ಎಂದು ಮಾನ್ಯ ಸಚಿವರು ಹೇಳಿದರು. ಈಗಾಗಲೇ ಒಂದು ತಿಂಗಳಾಯಿತು. ಇನ್ನೂ ಏನೂ ಮಾಡಿಲ್ಲ. ಇವತ್ತು ಏನಾಗಿದೆ ಎಂದರೆ, ನಮ್ಮ ಸಿ.ಐ.ಟಿ.ಯು. ಸ್ಟೇಟ್ ಕೌನ್ಸಿಲ್‌ನವರು ಸಭೆ ಸೇರಿ, ಈ ಲೇಬರ್ ಇಲಾಖೆಯಲ್ಲಿ ಇರತಕ್ಕ ನಿಧಾನಪ್ರವೃತ್ತಿ, ಲಂಚಕೋರತನ, ಮಾಲೀಕರ ಹತ್ತಿರ ಲಂಚ ಹೊಡೆದು ಕಾರ್ಮಿಕರಿಗೆ ಅನ್ಯಾಯ ಮಾಡುವುದು ಇದನ್ನು ಖಂಡಿಸಬೇಕೆಂದು ತೀರ್ಮಾನ ಮಾಡಿದ್ದೇವೆ. ಕೆಲವು ಅಧಿಕಾರಿಗಳು ಮಾಲೀಕರಿಗೆ ಕಾನೂನು ಹೇಳಿಕೊಡುತ್ತಾರೆ. ದಾಂಡೇಲಿ ಯಲ್ಲಿರತಕ್ಕ ಪ್ಲೈವುಡ್ ಫ್ಯಾಕ್ಟರಿಯೊಳಗೆ ೨೦ ದಿವಸಕ್ಕೆ ಒಂದು ದಿವಸ ರಜೆ ಕೊಡುತ್ತಿದ್ದರು. ೨೦ ದಿವಸಕ್ಕೆ ಒಂದು ದಿವಸ ಏತಕ್ಕೆ ಕೊಡುತ್ತೀರಿ ೨೪೦ ದಿವಸ ಕೆಲಸ ಮಾಡಿದರೆ ೨೦ ದಿವಸಕ್ಕೆ ಒಂದು ದಿವಸ ರಜೆ ಕೊಡಬೇಕೆಂದು ಕಾನೂನು ಇದೆ, ಬರೀ ೨೦ ದಿವಸಕ್ಕೆ ಒಂದು ದಿವಸ ರಜ ಏತಕ್ಕೆ ಕೊಡುತ್ತೀರಿ ಎಂದು ಅಧಿಕಾರಿಗಳು ಸಲಹೆ ಕೊಟ್ಟಿದ್ದಾರೆ. ಇವರನ್ನು ಚೆಕ್ ಮಾಡುವುದಕ್ಕೆ ಯಾರೂ ಇಲ್ಲ. ಈ ಎಲ್ಲಾ ವಿಚಾರಗಳನ್ನು ಬಗೆಹರಿಸದೇ ಇದ್ದರೆ ಕೈಗಾರಿಕೆಗಳಲ್ಲಿ ಇವತ್ತು ಬಿಕ್ಕಟ್ಟು ಉಂಟಾಗುತ್ತದೆ, ಕಾರ್ಮಿಕರಲ್ಲಿ ಅಶಾಂತಿ ಉಂಟಾಗುವುದಕ್ಕೆ ಕಾರಣವಾಗುತ್ತದೆ. ಕಾರ್ಖಾನೆಗಳಲ್ಲಿ ಇವತ್ತು ಮುಷ್ಕರ ಗಳು, ಲಾಕೌಟ್‌ಗಳು ಲೆಕ್ಕವೇ ಇಲ್ಲ. ಇವತ್ತು ಬೆಳಗ್ಗೆ ನೋಡಿದ್ದೇವೆ. ಇಂಟರ್‌ನ್ಯಾಶನಲ್ ಇನ್‌ಸ್ಟ್ರುಮೆಂಟ್ಸ್‌ನಲ್ಲಿ ಈ ರೀತಿ ಆಗಿದೆ, ಮೈಸೂರ್ ಪೈನ್ಸ್‌ನಲ್ಲಿ ಆಗಿದೆ. ಫೆದರ್‌ಲೈಟ್ ಕಾರ್ಪೊ ರೇಷನ್‌ನಲ್ಲಿ ಆಗಿದೆ. ಅಲ್ಲಿ ಈ ವ್ಯವಸ್ಥೆಯನ್ನು ಬದಲಾವಣೆ ಮಾಡಿ ಎಂದು ಹೇಳಿದಾಗ, ಫ್ಯಾಕ್ಟರಿಯಲ್ಲಿ ರೆಟ್ರೆಂಚ್‌ಮೆಂಟ್ ಬಂದಿದೆ.

ಉಪಾಧ್ಯಕ್ಷರು.—ತಾವು ಆರೂವರೆ ಗಂಟೆಗೆ ಮಧ್ಯದಲ್ಲಿರಬೇಕಾಗಿತ್ತಲ್ಲ.

ಕಾರ್ಮಿಕ ಇಲಾಖೆಯವರು ಕೊಟ್ಟಿರತಕ್ಕಂಥ ಅಂಕಿಅಂಶಗಳನ್ನು ನೋಡಿದರೆ ಎಷ್ಟು ಅನ್ಯಾಯ ವಾಗಿದೆಯೆನ್ನುವುದು ಗೊತ್ತಾಗುತ್ತದೆ. ಇವೊತ್ತು ಕಾರ್ಮಿಕರ ವಾದವಿವಾದಗಳು ಹೆಚ್ಚಾಗುತ್ತಿವೆ. ನ್ಯಾಯ ಮಂಡಲಿಗಳಲ್ಲಿ ಕಾಲಕ್ಕೆ ಸರಿಯಾಗಿ ಸಮಸ್ಯೆಗಳನ್ನು ಬಗೆಹರಿಸುತ್ತಿಲ್ಲ. ಮಾಲೀಕರನ್ನು ಪಂಚಾಯ್ತಿಗೆ ಕರೆದರೆ ಅವರು ಬರುವುದಿಲ್ಲ. ಕಾರ್ಮಿಕ ನ್ಯಾಯ ಮಂಡಲಿಗಳಲ್ಲಿ ಸರಿಯಾದ ಸಿಬ್ಬಂದಿ ಕೂಡ ಇಲ್ಲ, ಈ ವಿಚಾರದಲ್ಲಿ ಮಾನ್ಯ ಮಂತ್ರಿಯವರು ಸರಿಯಾದ ವ್ಯವಸ್ಥೆ ಮಾಡಬೇಕೆಂದು ಹೇಳುತ್ತೇನೆ. ಇವೊತ್ತು ದೇಶವನ್ನು ಬದಲಾವಣೆ ಮಾಡುವಂಥ ಶಕ್ತಿ ವರ್ಕಿಂಗ್ ಕ್ಲಾಸಸ್‌ಗೆ ಇದೆ ಎನ್ನುವುದನ್ನು ಯಾರು ಮರೆಯಬಾರದು. ಕಾರ್ಖಾನೆಗಳ ಮಾಲೀಕರು ಕಾರ್ಮಿಕರ ಸಂಘಟನೆಯನ್ನು ಛಿದ್ರ ಮಾಡುವುದಕ್ಕೆ ಪ್ರಯತ್ನ ಮಾಡುತ್ತಿದ್ದಾರೆ. ಸಂಘಟನೆ ಮಾಡುವಂಥ ನೌಕರರಿಗೆ ಇಲ್ಲಸಲ್ಲದ ಕಿರುಕುಳ ಕೊಡುತ್ತಿದ್ದಾರೆ. ಕೆಲವರನ್ನು ವಜಾ ಮಾಡುತ್ತಿದ್ದಾರೆ. ಇದರ ಬಗ್ಗೆ ಲೇಬರ್ ಇಲಾಖೆಗೆ ದೂರು ಕೊಟ್ಟರೂ ಯಾರೂ ಬಂದು ಕೇಳುವುದಿಲ್ಲ. ಕಾರ್ಮಿಕರು ಉಪವಾಸ ಇದ್ದರೆ ಅವರಿಗೆ ತೊಂದರೆ ಯಾಗುತ್ತದೆ ಎನ್ನುವ ಮನೋಭಾವನೆ ಹೆಚ್ಚಿನ ಅಧಿಕಾರಗಳಲ್ಲಿ ಕಾಣುತ್ತಿಲ್ಲ. ಕಾರ್ಮಿಕರು ಹೋಗಿ ಕೇಳಿದರೆ, ನಾವು ಏನು ಮಾಡೋಣ, ಜಾಯಿಂಟ್ ಮೀಟಿಂಗ್‌ಗೆ ಪ್ರಯತ್ನ ಮಾಡುತ್ತಿದ್ದೇವೆ. ಕನ್‌ಸಿಲೇಷನ್‌ಗೆ ಕರೆದಿದ್ದೇವೆ, ಅವರು ಬರುತ್ತಿಲ್ಲ ಫೆಲ್ಯೂರ್ ರಿಪೋರ್ಟ್ ಕೊಡುತ್ತೇವೆ.

ಕಾನ್‌ಫಿಡೆನ್ಷಿಯಲ್ ರಿಪೋರ್ಟ್ ಕೊಡುತ್ತೇವೆಂದು ಹೇಳುತ್ತಾರೆ. ಬಾಂಬೆನಲ್ಲಿ ಡಿಸ್‌ಮಿಸ್ ಮಾಡಿದರೆ ಕೋರ್ಟಿಗೆ ಹೋಗುವುದಕ್ಕೆ ಅವಕಾಶ ಇದೆ. ಇಲ್ಲಿ ನೇರವಾಗಿ ಕೋರ್ಟಿಗೆ ಹೋಗುವುದಕ್ಕೆ ಆಗುವುದಿಲ್ಲ. ಕೇರಳದಲ್ಲಿ ಕಾರ್ಮಿಕರನ್ನು ಸಸ್ಪೆಂಡ್ ಮಾಡಿದರೆ, ೬ ತಿಂಗಳ ಕಾಲ ಸಬ್‌ಸಿಸ್ಟೆನ್ಸ್ ಅಲೋಯನ್ಸ್ ಕೊಡುತ್ತಿದ್ದಾರೆ. ಇಲ್ಲಿ ಚಾರ್ಜ್‌ಷೀಟ್ ಕೊಡದೇ ವಜಾ ಮಾಡುತ್ತಾರೆ. ಮೈಕೋ ಫ್ಯಾಕ್ಟರಿಯಲ್ಲಿ ಕೆಲವು ಕಾರ್ಮಿಕರನ್ನು ಚಾರ್ಜ್‌ಷೀಟ್ ಇಲ್ಲದೇ ಟರ್ಮಿನೇಟ್ ಮಾಡಿದ್ದಾರೆ. ಕೆಲಸಗಾರರಿಗೆ ವಿನಾಕಾರಣ ತೊಂದರೆ ಕೊಡುತ್ತಿದ್ದಾರೆ. ಇದರ ಬಗ್ಗೆ ಅನುಕೂಲಾಗ್ರವಾಗಿ ವಿಚಾರಣೆ ಮಾಡಿ ಸೂಕ್ತ ಈ ಕಾನೂನಿಗೆ ತಿದ್ದುಪಡಿ ತರಬೇಕೆಂದು ಹೇಳುತ್ತೇನೆ. ಡಿಸ್‌ಮಿಸ್ ಮಾಡಿದರೆ ಕನಿಷ್ಠ ೬ ತಿಂಗಳ ಕಾಲ ಅರ್ಧ ಸಂಬಳ ಕೊಟ್ಟು ಅವರು ನ್ಯಾಯಕ್ಕಾಗಿ ಹೋರಾಟ ಮಾಡುವಂತೆ ಮಾಡಬೇಕು. ಎಷ್ಟೋ ಕಾರ್ಖಾನೆಗಳಲ್ಲಿ ಸಸ್ಪೆಂಡ್ ಮಾಡುತ್ತಾರೆ, ಅಲೋಯನ್ಸ್ ಕೊಡುವುದಿಲ್ಲ. ಕನ್ಸಿಲೇಷನ್ಸ್ ವಿಚಾರದಲ್ಲಿ ಸೂಕ್ತ ತಿದ್ದುಪಡಿ ತರುತ್ತೇವೆಂದು ಹೇಳಿದಿರಿ ಅದನ್ನು ತರಲಿಲ್ಲ ? ಡಿಸ್‌ಮಿಸ್ ಆದಂಥ ಕೆಲಸಗಾರರು ಕೋರ್ಟಿಗೆ ಹೋಗುವುದಕ್ಕೆ ಅವಕಾಶ ಮಾಡಿಕೊಡಬೇಕೆಂದು ಹೇಳುತ್ತೇನೆ. ಎಲ್ಲದಕ್ಕೂ ಮಿಗಿಲಾಗಿ ಲಿಟಿಗೇಷನ್ ತಪ್ಪಿಸುವಂಥ ಮನೋಭಾವನೆ ನಮ್ಮಲ್ಲಿ ಬರಬೇಕು. ಫ್ಯಾಕ್ಟರಿ ಇನ್ಸ್‌ಪೆಕ್ಟರುಗಳಿಗೆ ಮ್ಯಾಂಡೇಟರಿ ಪವರ್ ಇದೆ, ಕಾರ್ಖಾನೆಗಳವರು ಅಟೆಂಡೆನ್ಸ್ ಪುಸ್ತಕ ಇಡಬೇಕು. ಕ್ರಮಬದ್ಧವಾಗಿ ಸಂಬಳ ಕೊಡಬೇಕು. ಹೆಣ್ಣುಮಕ್ಕಳನ್ನು ರಾತ್ರಿವೇಳೆಯಲ್ಲಿ ದುಡಿಸಿಕೊಳ್ಳಬಾರದು ಎಂದು ಇದ್ದರೂ ಮಾಲೀಕರುಗಳು ಇದಕ್ಕೆ ತದ್ವಿರುದ್ಧವಾಗಿ ನಡೆದುಕೊಳ್ಳುತ್ತಿದ್ದರು. ಇಲಾಖೆಯ ಅಧಿಕಾರಿಗಳು ಇವರ ಕಡೆ ಲಂಚ ತೆಗೆದುಕೊಂಡು ಯಾವ ಕ್ರಮವನ್ನು ಅವರ ಮೇಲೆ ಜರುಗಿಸುವುದಿಲ್ಲ. ಅಧಿಕಾರಿಗಳ ವಿರುದ್ಧ ಸಿ.ಐ.ಟಿ.ಯು. ರಾಜ್ಯ ವ್ಯಾಪಿ ಜಿಲ್ಲಾಧಿಕಾರಿಗಳ ಕಛೇರಿ ಮುಂದೆ ಲೇಬರ್ ಇಲಾಖೆಯ ಮುಂದೆ ಧರಣಿ ಮಾಡಬೇಕು ಪಿಕೆಟಿಂಗ್ ಮಾಡಬೇಕೆಂದು ಮಾಡಬೇಕೆಂದು ತೀರ್ಮಾನ ಕೈಗೊಂಡಿದೆ. ಮಿನಿಮಮ್ ವೇಜಸನ್ನು ೨೬ನೇ ಷೆಡ್ಯೂಲ್ ಮೇರೆಗೆ ಕೈಗಾರಿಕೆಗಳವರು ಕೊಡಬೇಕೆನ್ನುವ ವಿಷಯ ಆಗನೇ ಇಸವಿಯಲ್ಲಿ ಹೈಕೋರ್ಟಿಗೆ ಹೋಯಿತು. ಅಲ್ಲಿ ತೀರ್ಮಾನವಾಗಿರುವುದನ್ನು ಕಾರ್ಯಗತ ಮಾಡುವುದಕ್ಕೆ ಸರ್ಕಾರ ವಿಳಂಬಧೋರಣೆ ಮಾಡುತ್ತಿದೆ. ಇದರಿಂದ ಲಕ್ಷಾಂತರ ಜನಕ್ಕೆ ಅನ್ಯಾಯ ವಾಗುತ್ತಿದೆ. ಮಿನಿಮಮ್ ವೇಜಸ್ ಅಡ್ವೈಸರಿ ಕಮಿಟಿಯವರು ಏನು ಶಿಫಾರಸ್ಸು ಮಾಡಿದ್ದಾರೆ ಅದನ್ನು ಕಾರ್ಯಗತ ಮಾಡುವ ಬಗ್ಗೆ ಮಾನ್ಯ ಮಂತ್ರಿಯವರು ಉತ್ತರ ಕೊಡುವಾಗ ಸ್ಪಷ್ಟವಾಗಿ ಹೇಳಬೇಕು. ಇಲ್ಲದಿದ್ದರೆ ಸೋಮವಾರವಾದರೂ ಹೇಳಬೇಕೆಂದು ಹೇಳುತ್ತೇನೆ.

ಕಾರ್ಮಿಕರಿಗೆ ಇರತಕ್ಕ ಇ.ಎಸ್.ಐ. ಆಸ್ಪತ್ರೆಗಳ ಬಗ್ಗೆ ಎಷ್ಟು ಹೇಳಿದರೂ ತೀರುವುದಿಲ್ಲ. ಕಾರ್ಮಿಕರಲ್ಲಿ ಇ.ಎಸ್.ಐ. ಏತಕ್ಕೆ ಬೇಕೆಂಬ ಭಾವನೆ ಬೆಳೆಯುತ್ತಿದೆ. ಅದೇರೀತಿ ಎಂಪ್ಲಾಯ್‌ಮೆಂಟ್‌ನಲ್ಲಿಯೂ ಸರಿಯಾದಂಥ ವ್ಯವಸ್ಥೆಯೂ ಇಲ್ಲ. ಸಂಬಳಭರಿಕೆಯಲ್ಲಿ ರಿಜಿಸ್ಟರ್ ಮಾಡಿಸುವುದಕ್ಕೆ ಅವಕಾಶ ಇಲ್ಲ, ಗಂಟೆಗಟ್ಟಲೆ ಕಾಯುವಂಥ ವ್ಯವಸ್ಥೆಯನ್ನು ತೆಗೆದುಹಾಕಬೇಕೆಂದು ಹೇಳುತ್ತೇನೆ. ಕ್ರಾಫ್ಟ್‌ಮೆನ್ ಟ್ರೈನಿಂಗ್ ಸ್ಕೀಂನಲ್ಲಿ ಟೋಟಲ್ ಸ್ಟ್ರೆಂಗ್ತ್ ೬೮೦೪, ಸ್ಯಾಂಕ್ಷನ್ಡ್ ಪೋಸ್ಟ್ ಎಷ್ಟು ಖಾಲಿ ಇದೆ. ಈ ಒಂದು ಟ್ರೈನಿಂಗ್‌ಗೆ ಯಾರು ಬರಲಿಲ್ಲವೆ ? ನಮ್ಮ ಹತ್ತಿರ ಎಷ್ಟೋ ಜನ ಬಂದಿದ್ದಾರೆ. ಎಲ್ಲರಿಗೂ ಉದ್ಯೋಗ ಸಿಕ್ಕಿದೆಯೆ ? ಇದರ ಬಗ್ಗೆ ಕೂಡ ಮಾನ್ಯ ಮಂತ್ರಿಯವರು ವಿವರಣೆ ಕೊಡಬೇಕೆಂದು ಹೇಳುತ್ತೇನೆ. ಇನ್ನು ಹೌಸಿಂಗ್ ಸ್ಕೀಂಗೆ ಹಣ ಕಡಿಮೆ ಇಟ್ಟಿದ್ದಾರೆ. ರಾಜ್ಯದಲ್ಲಿ ಎಷ್ಟು ಜನಕ್ಕೆ ಮನೆ ಇಲ್ಲ, ನಿವೇಶನ ಇಲ್ಲ ಎನ್ನುವ ಬಗ್ಗೆ ಜನಗಣತಿ ಏನಾದರೂ ಮಾಡಿದ್ದೀರಾ ? ೧೩ ಲಕ್ಷ ಬಂತು, ೧೧ ಲಕ್ಷ ಕೊಟ್ಟಿದ್ದೇವೆಂದು ಹೇಳುತ್ತೀರಿ. ಕರಾರುವಾಕ್ಕಾಗಿ ಲೆಕ್ಕ ಇದೆಯೆ ? ಇವೊತ್ತು ಕೂಡ ಗ್ರಾಮಾಂತರ ಪ್ರದೇಶಗಳಲ್ಲಿ ಜೋಪಡಿಗಳಲ್ಲಿ ವಾಸ ಮಾಡುವವರನ್ನು ನೋಡಿದ್ದೇವೆ. ಹಳ್ಳಿ ಪ್ರದೇಶದಲ್ಲಿ ಸೈಟ್ ಮಾಡುವುದಕ್ಕೆ ೨೫ ರೂಪಾಯಿ ಕೊಡುತ್ತಿದ್ದಾರೆಂದು ಕೇಳಿದ್ದೇನೆ. ಇದನ್ನು ಅವರಿಗೆ ಕಾಫಿ ಕುಡಿಯುವುದಕ್ಕೆ ಕೊಡುತ್ತೀರಾ ? ಗ್ರಾಮೀಣ ಪ್ರದೇಶಗಳಲ್ಲಿ ಮತ್ತು ನಗರ ಪ್ರದೇಶಗಳಲ್ಲಿ ನಿವೇಶನ ಇಲ್ಲದವರ ಮತ್ತು ಮನೆ ಇಲ್ಲದವರ ಒಂದು ಜನಗಣತಿಯನ್ನು ಮಾಡಬೇಕೆಂದು ಹೇಳುತ್ತೇನೆ.

ಇನ್ನು ಕೃಷಿ ಕಾರ್ಮಿಕರಿಗೆ ಮನೆ ಕಟ್ಟುವುದಕ್ಕೆ ೩,೦೦೦ ರೂಪಾಯಿಗಳನ್ನು ಕೊಡುತ್ತೀರಿ, ಅದು ಸಾಲಾಗುವುದಿಲ್ಲ. ಅದನ್ನು ಕನಿಷ್ಠ ೬–೭ ಸಾವಿರಕ್ಕೆ ಹೆಚ್ಚಿಸಿ ಅವರಿಗೆ ಕಟ್ಟಿಕೊಳ್ಳಲು ಸಹಾಯ ಮಾಡಬೇಕೆಂದು ಹೇಳುತ್ತೇನೆ. ಸರ್ಕಾರಿ ನೌಕರರಿಗೂ ಟ್ರೇಡ್ ಯೂನಿಯನ್ ರೈಟ್ಸ್ ಬರುವಂಥ ರೀತಿಯಲ್ಲಿ ತಿದ್ದುಪಡಿ ತರಬೇಕೆಂದು ಹೇಳುತ್ತೇನೆ, ದೇಶದಲ್ಲಿ ದುಡಿಯುತಕ್ಕ ಜನಗಳಿಗೆ ಸಂಘಟನೆ

ಹಕ್ಕು ಕೊಡಬೇಕು. ಕಾರ್ಮಿಕರು ಮತ್ತು ಮಾಲೀಕರ ನಡುವೆ ಘರ್ಷಣೆ ಉಂಟಾದರೆ ಲೇಬರ್ ಇಲಾಖೆಯವರು ಮತ್ತು ಪೋಲೀಸ್ ಇಲಾಖೆಯವರು ಮೊದಲು ಮಾಲೀಕರ ಮನೆಗೆ ಹೋಗುತ್ತಾರೆ. ಕಾನೂನು ವ್ಯವಸ್ಥೆಯನ್ನು ಇಲ್ಲಿ ಮೆಕಾನಿಕಲ್ಲಾಗಿ ನೋಡಬಾರದು. ಇವೊತ್ತು ಏನಾಗಿದೆ, ಚಳುವಳಿ ಮಾಡಿದರೂ ಪೋಲೀಸು, ಲಾಕೌಟ್ ಮಾಡಿದರೂ ಪೋಲೀಸು, ಮೆರವಣಿಗೆ ತೆಗೆದರೂ ಪೋಲೀಸು, ಇದು ಸರಿಯೆ ? ಈ ದೇಶದಲ್ಲಿ ಕಾರ್ಮಿಕರ ಹೋರಾಟವನ್ನು ಪೋಲೀಸರು ದಮನ ಮಾಡುವುದನ್ನು ನಾವು ಕಾಣುತ್ತಿದ್ದೇವೆ. ಪೋಲೀಸಿನವರು ಮೊದಲು ಲೇಬರ್ ಇಲಾಖೆಯೊಡನೆ ಸಂಪರ್ಕ ಮಾಡಿ, ಕಾರ್ಮಿಕರ ಸಮಸ್ಯೆಗಳ ಬಗ್ಗೆ ತಿಳಿದುಕೊಳ್ಳಬೇಕು. ಮಾಲೀಕರ ಆಸ್ತಿಪಾಸ್ತಿಯನ್ನು ರಕ್ಷಣೆ ಮಾಡಲಿ. ಕಾರ್ಮಿಕರ ಹೋರಾಟವನ್ನು ದಮನ ಮಾಡುವುದಕ್ಕೆ ಮಾಲೀಕ ವರ್ಗ ಪೋಲೀಸಿನವರು ಉಪಯೋಗ ಮಾಡಿದರೆ ಸರ್ಕಾರದವರು ಬಹಳ ತೊಂದರೆಯನ್ನು ಅನುಭವಿಸಬೇಕಾಗುತ್ತದೆ. ಬೆಂಗಳೂರು ನಗರದ ೧೨ ಕ್ಷೇತ್ರಗಳಲ್ಲಿ ಕಾಂಗ್ರೆಸ್ಸೇತರ ಉಮೇದುವಾರರು ಗೆಲ್ಲುವುದಕ್ಕೆ ಕಾರ್ಮಿಕ ವರ್ಗವೇ ಕಾರಣ. ಈ ಸರ್ಕಾರದ ಮೇಲೆ ಕಾರ್ಮಿಕರು ಅಭಿಮಾನ ಇಟ್ಟಿದ್ದಾರೆ ಎನುವಂಥ ಮಾತನ್ನು ಹೇಳಿ, ನನಗೆ ಮಾತನಾಡಲು ಅವಕಾಶ ಕೊಟ್ಟ ತಮಗೂ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

6-00 ಪಿ.ಎಂ.

† ಶ್ರೀ ಎಂ. ಎಸ್. ಕೃಷ್ಣನ್ (ರಾಜಾಜಿನಗರ).--ಸನ್ಮಾನ್ಯ ಉಪ ಸಭಾಧ್ಯಕ್ಷರೆ, ಇವೊತ್ತಿನ ದಿವಸ ಮೂರು ಮುಖ್ಯವಾದ ವಿಷಯಗಳ ಬಗ್ಗೆ ನಾನು ಪ್ರಸ್ತಾಪ ಮಾಡಬೇಕಾಗಿದೆ. ಆದರೆ ಅಷ್ಟೊಂದು ಮಾತನಾಡಲು ಬಹಳ ಸಮಯ ಬೇಕಾಗುತ್ತದೆ. ಈಗಾಗಲೇ ಮಾನ್ಯ ಸದಸ್ಯರಾದ ರಾಮಕೃಷ್ಣರವರು ಸಂಸದೀಯ ವಿಷಯದ ಬಗ್ಗೆ ಬಹಳ ಸವಿಸ್ತಾರವಾಗಿ ಮಾತನಾಡಿರುವುದರಿಂದ ನಾನು ಅದರ ಬಗ್ಗೆ ಹೆಚ್ಚು ಹೇಳುವುದಕ್ಕೆ ಹೋಗುವುದಿಲ್ಲ. ಇದುವರೆಗೆ ನನ್ನ ಅನುಭವದಲ್ಲಿ ಬಂದಿರತಕ್ಕ ಒಂದು ವಿಚಾರವನ್ನು ಮಾತ್ರ ಇಲ್ಲಿ ಹೇಳಬಯಸುತ್ತೇನೆ.

ಶಾಸನಸಭಾ ಸದಸ್ಯರಾಗಿ ನಾವುಗಳು ಈ ಮನೆಯಲ್ಲಿ ಅನೇಕಸಾರಿ ಏನು ಒತ್ತಾಯ ಮಾಡುತ್ತಿದ್ದೇವೆಂದರೆ ಪ್ರಮುಖವಾಗಿ ಶಾಸಕಾಂಗ ಮತ್ತು ಸರ್ಕಾರ ಬೇರೆಬೇರೆ ಆಗಬೇಕೆಂಬ ಬಗ್ಗೆ. ನನಗೆ ತಿಳಿದಿರುವಂತೆ ಸುಮಾರು ವರ್ಷಗಳಿಂದ ಈ ಕೂಗು ಇದ್ದೇ ಇದೆ. ಮಾನ್ಯ ಮಂತ್ರಿಗಳು ಹೇಳಿದರು ಇದಕ್ಕೆ ಒಂದು ಕಾನೂನು ಮಾಡುತ್ತಿದ್ದೇವೆ ಎಂದು. ನಾನಾದರೂ ತಮಗೆ ಹೇಳುತ್ತೇನೆ. ನೀವು ಏನಾದರೂ ಮಾಡಿಕೊಳ್ಳಿ ಆದರೆ ಮುಂದಿನ ವರ್ಷ ಮತ್ತೆ ಇದೇ ಮಾತನ್ನು ಇಲ್ಲಿ ನಾವು ಹೇಳುವುದಕ್ಕೆ ಅವಕಾಶ ಕೊಡಬೇಡಿ. ನಿಮಗೆ ಏನು ಅವಶ್ಯಕವಾದಂಥ ಕಾನೂನುಗಳು ಬೇಕೋ ಅದನ್ನೆಲ್ಲಾ ತಕ್ಷಣ ಮಾಡಿಕೊಂಡು ಸರ್ಕಾರ ಮತ್ತು ಶಾಸಕಾಂಗವನ್ನು ಬೇರೆ ಬೇರೆ ಮಾಡಿ ನಿಮ್ಮ ಮರ್ಯಾದೆಯನ್ನು ಉಳಿಸಿಕೊಳ್ಳಿ ಎಂದು ನಾನು ಹೇಳಬಯಸುತ್ತೇನೆ.

ಇನ್ನೊಂದು ವಿಶೇಷ ವಿಚಾರ ಎಂದರೆ ಲೈಬ್ರರಿಯಲ್ಲಿ ರೀಸರ್ಚ್ ವಿಂಗ್ ಎಂದು ನಮ್ಮಲ್ಲಿ ಇರುವುದಾಗಿ ಕೇಳಿದ್ದೇನೆ. ಅದು ಈ ಗೋಡೆಯ ಆಚೆಗೆ ಹೋದರೆ ಆಕಡೆ ಇದೆ. ಅಲ್ಲಿ ಲೇಖನ ಸೂಚಿ ಇನ್ನೂ ಮುಂತಾದ ಅನೇಕ ರೀತಿಯ ಮಾಹಿತಿಗಳನ್ನು ಇಟ್ಟಿದ್ದಾರೆ. ನಮಗೆ ಬೇಕಾದಂಥ ಮಾಹಿತಿಗಳನ್ನು ಅಲ್ಲಿಂದ ತರಿಸಿಕೊಳ್ಳುತ್ತೇವೆ (ಅದು ಸಿಕ್ಕಿದರೆ). ಅಷ್ಟೇ ಅಲ್ಲ ನಮಗೆ ಬೇಕಾದಂಥ ಅತಿ ಮುಖ್ಯವಾದ ಸ್ಟ್ಯಾಟಿಸ್ಟಿಕಲ್ ಮೆಟೀರಿಯಲ್ಸ್ ಏನಾದರೂ ಬೇಕಾದರೆ ಅಲ್ಲಿ ಸಿಕ್ಕುವುದಿಲ್ಲ. ನಾವು ಅವರನ್ನು ಕೇಳಿದರೆ ಆ ಇಲಾಖೆಗೆ ಬರೆಯಿರಿ, ಈ ಇಲಾಖೆಗೆ ಬರೆಯಿರಿ ಎಂದು ಹೇಳುತ್ತಾರೆ. ನಾವು ಕೇಳುವಂಥ ಮಾಹಿತಿಗಳು ಒಂದೂ ಕೂಡ ಅಲ್ಲಿ ಸರಿಯಾಗಿ ಸಿಕ್ಕುವುದಿಲ್ಲ. ನನಗೆ ಹಲವಾರು ವಿಷಯಗಳ ಬಗ್ಗೆ ಓದಿ ತಿಳಿದುಕೊಳ್ಳುವ ಛಟ ಇದೆ. ಆದರೆ ನಮಗೆ ಬೇಕಾದದ್ದು ಇಲ್ಲಿ ಸಿಕ್ಕುವುದಿಲ್ಲ. ಕಾರಣ ಅಲ್ಲಿ ಸರಿಯಾದ ಸಿಬ್ಬಂದಿ ವರ್ಗ ಇಲ್ಲವಂತೆ. ಆ ವಿಭಾಗದವರು ಸರಿಯಾದ ದಾರಿಯಲ್ಲಿ ಹೋಗುವುದಕ್ಕೆ ತಕ್ಕ ವ್ಯವಸ್ಥೆ ಇಲ್ಲ. ಸಂಭೆಯ ಮುಂದೆ ಇಂಥಿಂಥ ಇಲಾಖೆಗಳ ಬೇಡಿಕೆಗಳು ಬಂದಾಗ ಇಂಥಿಂಥ ಪುಸ್ತಕಗಳನ್ನು ಓದಿ ಎಂದು ಹೇಳತಕ್ಕಂಥ ಒಂದು ವ್ಯವಸ್ಥೆ ಹಿಂದೆ ಇತ್ತು, ಆದರೆ ಇವೊತ್ತು ಅಂಥ ಒಂದು ವ್ಯವಸ್ಥೆ ಕಂಡು ಬರುತ್ತಿಲ್ಲ. ನಾವು ಕೇಳಿದ ಮಾಹಿತಿಗಳೂ ಸಿಕ್ಕುತ್ತಿಲ್ಲ. ಆದ್ದರಿಂದ ಈ ರೀಸರ್ಚ್ ವಿಂಗ್ ನಮ್ಮ ಸದಸ್ಯರಿಗೆ ಉಪಯುಕ್ತ ಆಗುವಂಥ ರೀತಿಯಲ್ಲಿ ಕೆಲಸಮಾಡಬೇಕಾದರೆ ಅಲ್ಲಿಗೆ ಅವಶ್ಯಕವಾಗಿ ಬೇಕಾದ ಸಿಬ್ಬಂದಿವರ್ಗವನ್ನು ಕೊಟ್ಟು ಕೆಲಸ ಸುಸೂತ್ರವಾಗಿ ನಡೆಯುವಂತೆ ಮಾಡಬೇಕು.

ಮಾನ್ಯ ಉಪಾಧ್ಯಕ್ಷರೆ, ಇನ್ನೊಂದು ಅತಿ ಮುಖ್ಯವಾದ ವಿಚಾರ ಎಂದರೆ ನಮ್ಮ ಕರ್ನಾಟಕ ವಿಧಾನ ಮಂಡಲದ ವರದಿಗಾರರಿಗೆ ಸಂಬಂಧಪಟ್ಟಿದ್ದು. ಇವರಿಗೆ ಆಗಿರತಕ್ಕ ಅನ್ಯಾಯವನ್ನು ಮೊದಲು ಸರಿಪಡಿಸಬೇಕು. ಏಕೆಂದರೆ ನನಗೆ ತಿಳಿದಮಟ್ಟಿಗೆ ಇವರ ಬೇಡಿಕೆಗಳು ಬಹಳ ವರ್ಷಗಳಿಂದಲೂ ಇವೆ. ಇವರ ಮುಖ್ಯವಾದ ಬೇಡಿಕೆಗಳು ಎಂದರೆ ೭೫ ರೂಪಾಯಿಗಳ ವಿಶೇಷ ಭತ್ಯ ನೀಡಬೇಕು, ಅತೀ ಕಡಿಮೆ ಇರತಕ್ಕ ಭಡ್ತಿ ಅವಕಾಶವನ್ನು ಹೆಚ್ಚು ಮಾಡಬೇಕು. ಇನ್ನೂ ಮುಂತಾದ ಸೌಲಭ್ಯಗಳನ್ನು ಆದಷ್ಟು ಜಾಗತ್ರ ಒದಗಿಸಿಕೊಡಬೇಕು. ನಾನು ಏತಕ್ಕೆ ಈ ಮಾತನ್ನು ಹೇಳುತ್ತಿದ್ದೇನೆಂದರೆ, ಈ ವರದಿಗಾರರು ಬೆಳಿಗ್ಗೆ ೯ ಗಂಟೆಗೆ ಬಂದವರು ರಾತ್ರಿ ೯ ಗಂಟೆಯವರೆಗೂ ಕಷ್ಟಪಟ್ಟು ಕೆಲಸಮಾಡುತ್ತಿರುತ್ತಾರೆ. ಇವರಿಗೆ ಕೊಡುತ್ತಿರುವ ಸೌಲಭ್ಯಗಳು ಬಹಳ ಕಡಿಮೆ. ಇವರಿಂದ ನಾವು ಏನು ಕೆಲಸವನ್ನು ತೆಗೆದುಕೊಳ್ಳುತ್ತೇವೆ ಅದಕ್ಕೆ ತಕ್ಕಂತೆ ಇವರಿಗೆ ಸೌಲಭ್ಯಗಳನ್ನು ಒದಗಿಸಿಕೊಡಬೇಕು. ಆದ್ದರಿಂದ ಮಾನ್ಯ ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು ಇದರ ಬಗ್ಗೆ ತೀವ್ರ ಗಮನ ಹರಿಸಬೇಕೆಂದು ಒತ್ತಾಯಪೂರ್ವಕವಾಗಿ ಹೇಳಬಯಸುತ್ತೇನೆ.

ಇನ್ನೊಂದು ವಿಷಯವನ್ನು ಈ ಸಂದರ್ಭದಲ್ಲಿ ಹೇಳುವುದಾದರೆ ಶಾಸಕರು ಬೆಳಿಗ್ಗಿನಿಂದ ರಾತ್ರಿಯವರೆಗೂ ಇಲ್ಲೇ ಕುಳಿತಿರುತ್ತೇವೆ. ಹತ್ತಿರದಲ್ಲಿ ಎಲ್ಲೂ ನಮಗೆ ಬೇಕಾದ ಒಳ್ಳೆಯ ಉಪಹಾರ ಸಿಕ್ಕುವುದಿಲ್ಲ. ವಿಧಾನ ಸೌಧದ ಮೊದಲನೆಯ ಮಹಡಿಯಲ್ಲಿರುವ ಕ್ಯಾಂಟೀನ್‌ಗೆ ಹೋದರೆ ಒಂದಕ್ಕೆ ಎರಡರಷ್ಟು ಹಣವನ್ನು ನಾವು ಕೊಡಬೇಕಾಗುತ್ತದೆ. ಅದನ್ನು ಬಿಟ್ಟರೆ ವಿಧಾನ ಸೌಧದ ಕೆಳಗಡೆ ಒಂದು ಕ್ಯಾಂಟೀನ್ ಇದೆ. ಅನೇಕ ಜನ ಏನು ಹೇಳುತ್ತಾರೆಂದರೆ ಮೊದಲನೆಯ ಮಹಡಿಯಲ್ಲಿರತಕ್ಕ ಕ್ಯಾಂಟೀನ್‌ಗಿಂತಲೂ ಇಲ್ಲಿ ಕೆಳಗಡೆ ಇರತಕ್ಕ ಕ್ಯಾಂಟೀನ್ ಎಷ್ಟೋ ವಾಸಿ ಎಂದು ಹೇಳುತ್ತಾರೆ. ಈ ಎರಡನ್ನು ಬಿಟ್ಟರೆ ನಮಗೆ ಬೇರೆ ತಿಂಡಿಯೇ ಇಲ್ಲಿ ಎಲ್ಲಿಯೂ ಸಿಕ್ಕುವುದಿಲ್ಲ. ಕೇವಲ ಕಾಫಿ ಮಾತ್ರ ಸಿಕ್ಕುತ್ತದೆ ಅಷ್ಟೆ. ಆದ್ದರಿಂದ ಸದಸ್ಯರಿಗೆ ಉಪಹಾರಕ್ಕೆ ಅನುಕೂಲವಾಗುವಂಥ ರೀತಿಯಲ್ಲಿ ಏನಾದರೂ ವ್ಯವಸ್ಥೆ ಮಾಡಬೇಕೆಂದು ಹೇಳಬಯಸುತ್ತೇನೆ. ಇನ್ನೂ ಅನೇಕ ವಿಚಾರಗಳನ್ನು ಮಾನ್ಯ ಸದಸ್ಯರಾದ ರಾಮಕೃಷ್ಣರವರು ಹೇಳಿದ್ದಾರೆ. ಆದ್ದರಿಂದ ನಾನು ಮತ್ತೆ ಅವನ್ನೆಲ್ಲಾ ಹೇಳುವುದಕ್ಕೆ ಹೋಗುವುದಿಲ್ಲ.

ಗೃಹನಿರ್ಮಾಣದ ವಿಚಾರದಲ್ಲಿ ಏನು ಅಂಕಿಅಂಶಗಳನ್ನು ಕೊಟ್ಟಿದ್ದೀರಿ ಇದು ಅಷ್ಟೊಂದು ಸಮಂಜಸವಾಗಿ ಕಾಣುತ್ತಿಲ್ಲ. ಇದನ್ನು ವಾರ್ ಫುಟಿಂಗ್ ರೀತಿಯಲ್ಲಿ ಮಾಡಬೇಕು. ಈಗಾಗಲೇ ಕಟ್ಟಿ ಕೊಟ್ಟಿರತಕ್ಕ ಮನೆಗಳಿಗೆ ಏನು ಅನುಕೂಲ ಮಾಡಿಕೊಟ್ಟಿದ್ದೀರಿ ಎಂದರೆ ನಮಗೆ ಬಂದಿರುವ ವರದಿಗಳ ಪ್ರಕಾರ ಆ ಮನೆಗಳ ಗೋಡೆಗಳು ಬಿದ್ದು ಹೋಗುತ್ತಿವೆ. ಇದರ ಬಗ್ಗೆ ತಾ. ೧೯-೧೧-೮೩ ರ ಇಂಡಿಯನ್ ಎಕ್ಸ್‌ಪ್ರೆಸ್ ಪತ್ರಿಕೆಯಲ್ಲಿ ಏನು ವರದಿಯಾಗಿದೆ ಅದರಲ್ಲಿ ಎಲ್ಲವನ್ನೂ ಇಲ್ಲಿ ಓದುವುದಕ್ಕೆ ಹೋಗದೆ ಸ್ವಲ್ಪ ಭಾಗವನ್ನು ಮಾತ್ರ ಓದುತ್ತೇನೆ.

> "The allottees belonging to weaker sections have already occupied some of the houses. Public Lavetories are not provided The Karnataka Housing and Urban Sanetory Board is in deep slumber and it has not acted even though 12.186 lakhs has been deposited by the Karnataka Housing Board to complete the underground drainage system for the colony. If this colony continues to be neglected it stands as a modern version of Hampi ruins."

ಇದು ಯಾವುದರ ಬಗ್ಗೆ ಎಂದರೆ, ಇವತ್ತು ಬೆಳಗಾಂನಲ್ಲಿ ..

ಶ್ರೀ ಎ. ಲಕ್ಷ್ಮೀಸಾಗರ್.—ಇದು ಅರ್ಬನ್ ಡೆವಲಪ್‌ಮೆಂಟ್ ಬರುತ್ತದೆ.

ಶ್ರೀ ಎಂ. ಎಸ್. ಕೃಷ್ಣನ್.—ನೀವು ಮಾನ್ಯ ಚಂದ್ರಶೇಖರ್‌ರವರಿಗೆ ಹಾಕುತ್ತೀರಿ. ಅವರು ಸ್ಲಂ ಬೋರ್ಡ್‌ನ ಮೇಲೆ ಹಾಕುತ್ತಾರೆ. ಮತ್ತೆ ಇದೇ ರೀತಿ ಬಳ್ಳಾರಿ ಜಿಲ್ಲೆಯ ಬಗ್ಗೆ ಜನತಾ ಹೌಸಿಂಗ್ ಬಗ್ಗೆ ಕೂಡ ಅದರಲ್ಲಿ ಬರೆದಿದೆ.

"If the HUDCO in Belgaum is guilty of throwing open a skeleton of houses for occupation in Bellary district there are modern janata houses which have sky for the roof and some houses have doors but no rooms while some have rooms but no doors. This is the misery of 100 janata houses constructed at Huvina Hadagali town These houses are constructed by the town mauicipality through the BDC, Hadagali."

ಇದು ಒಳ್ಳೆಯ ವಿಚಾರ ಇದೆ. ಇದು ಈಗ ಬರೆದಿರುವುದು. ಇದು ತಮಗೆ ಬರುವುದಿಲ್ಲವೆ ?

ಶ್ರೀ ಎ. ಲಕ್ಷ್ಮೀಸಾಗರ್.—ಟೌನ್ ಮುನಿಸಿಪಾಲಿಟೀಸ್‌ಗೆ...

ಶ್ರೀ ಎಂ. ಎಸ್. ಕೃಷ್ಣನ್.—ಭಾಗ್ಯಜ್ಯೋತಿ ಬಗ್ಗೆಯೂ ಕೂಡ ಬರೆದಿದ್ದಾರೆ.

"The residents are now provided with thatched roofs, the the doors and windows are covered with gunny cloth. There is neither Bhagyajyothi nor Bhagyalakshmi to give them light." This is also the situation in Bellary and Belgaum.

ಇಲ್ಲೇ ಅಲ್ಲ. ಎಲ್ಲಾ ಕಡೆಯಲ್ಲೂ ಇದೇರೀತಿ ಇದೆಯೆಂದು ನನ್ನ ಅಭಿಪ್ರಾಯ. ಯಾವರೀತಿಯಲ್ಲಿಯಾದರೂ ಯೋಜನೆಯನ್ನು ತೆಗೆದುಕೊಂಡು ಜನತಾ ಮನೆಗಳನ್ನು ಕಟ್ಟಿಸಿಕೊಡಬೇಕೆಂದು ಕೇಳುತ್ತೇನೆ.

ಇನ್ನು ಕಾರ್ಮಿಕ ಇಲಾಖೆಯ ಬಗ್ಗೆ ಹೇಳುವುದಾದರೆ, ಮಾನ್ಯ ಸದಸ್ಯರಾದ ಸೂರ್ಯನಾರಾಯಣ ರಾವ್ ರವರು ಬಹಳ ಚೆನ್ನಾಗಿ ಪ್ರಸ್ತಾಪ ಮಾಡಿದ್ದಾರೆ. ಅತಿ ಮುಖ್ಯವಾಗಿ ನನಗೆ ಏನು ಕಂಡು ಬರುತ್ತದೆಂದರೆ ಯಾವ ಕಾನೂನನ್ನು ಕಾರ್ಯಗತ ಮಾಡಬೇಕೋ, ಅದಕ್ಕೆ ಮಂತ್ರಿಗಳು ಬೇಕಾಗಿಲ್ಲ, ಅದಕ್ಕೆ ಆದೇಶ ಬೇಕಾಗಿಲ್ಲ, ಅದನ್ನೂ ಕೂಡ ನೀವು ಕಾರ್ಯಗತಮಾಡಿಲ್ಲ. ೩ ಸಾವಿರ ಲೇಬರ್ ಕೇಸುಗಳು ಕೋರ್ಟ್‌ನಲ್ಲಿ ಡಿಸೈಡ್ ಆಗಿ ಅವಾರ್ಡ್ ಪಾಸ್ ಆಗಿ ಅವಾರ್ಡ್ ಪಾಸ್ ಆಗಿದ್ದರೂ ೩ವರ್ಷ, ೫ ವರ್ಷ ೧೦ ವರ್ಷ, ೧೧ ವರ್ಷದಿಂದಲೂ ಅವು ಪಬ್ಲಿಶ್ ಆಗದೆ ಹಾಗೆಯೇ ಉಳಿದಿವೆ. ಇದನ್ನು ಮಾನ್ಯ ಅಜೀಜ್‌ಸೇಠ್ ರವರೂ ಕೂಡ ಒಪ್ಪಿಕೊಂಡಿದ್ದಾರೆ. ಇನ್ನೊಂದು ಏನೆಂದರೆ, ಅವಾರ್ಡನ್ನು ಪಬ್ಲಿಶ್ ಮಾಡಬೇಕಾದರೂ ದುಡ್ಡನ್ನು ತೆಗೆದುಕೊಳ್ಳುತ್ತಾರೆ ಮಾಲೀಕರು ತಮಗೆ ಅನುಕೂಲವಾಗುವಂಥ ಅವಾರ್ಡ್‌ಗಳಿದ್ದರೆ ದುಡ್ಡು ಕೊಟ್ಟು ಲೇಬರ್ ಡಿಪಾರ್ಟ್‌ಮೆಂಟ್‌ನಲ್ಲಿ ಅಥವಾ ಸರ್ಕಾರೀ ಮುದ್ರಣಾಲಯದಲ್ಲಿ ಗೆಜೆಟ್‌ನಲ್ಲಿ ಪಬ್ಲಿಷ್ ಮಾಡಿಸಿಕೊಳ್ಳುತ್ತಾರೆ. ಅವಾರ್ಡ್ ಪಾಸ್ ಆದಮೇಲೆ ೩೦ ದಿವಸದೊಳಗಾಗಿ ಪಬ್ಲಿಷ್ ಮಾಡಬೇಕೆಂದು ಕಾನೂನಿನಲ್ಲಿದೆ. ಆದರೆ ಇದು ಏತಕ್ಕೆ ಆಗುತ್ತಿಲ್ಲ. ಇದರಲ್ಲಿ ಜನತಾ ಪಕ್ಷ, ಕಾಂಗ್ರೆಸ್ ಪಕ್ಷ, ಕಮ್ಯುನಿಸ್ಟ್ ಪಕ್ಷ ಎಂದು ಏನೂ ಬರುವುದಿಲ್ಲ ಉದಾಹರಣೆಗೆ ಹೇಳುವುದಾದರೆ ಹಣ ಕೊಟ್ಟು ಪಬ್ಲಿಷ್ ಮಾಡಿಸಿಕೊಂಡಿರುವುದು ನನಗೆ ತಿಳಿದಂತೆ ಬೆಂಗಳೂರು ಬಾಡಿ ಬಿಲ್ಡರ್ಸ್ ಎಂದು ಉದ್ದಿಮೆ ಇದೆ. ಅವರಲ್ಲಿ ಕೆಲಸಮಾಡುತ್ತಿದ್ದ ಕಾರ್ಮಿಕರ ಡಿಮ್ಯಾಂಡ್‌ಗಳು ರಿಜೆಕ್ಟ್ ಆದುವು. ಮಾಲೀಕರ ಪರವಾಗಿ ಅವಾರ್ಡ್ ಪಾಸ್ ಆಯಿತು. ೧೬-೧೧-೮೩ ರಲ್ಲಿ ಅವಾರ್ಡ್ ಪಾಸ್ ಆದದ್ದು ೨೩-೧೨-೮೩ರಲ್ಲಿ ಪಬ್ಲಿಷ್ ಮಾಡಿಸಿಕೊಂಡಿದ್ದಾರೆ. ಈ ಮಾಲೀಕ ದೊಡ್ಡ ಖದೀಮ. ಇವನು ದುಡ್ಡು ಕೊಟ್ಟು ಪಬ್ಲಿಷ್ ಮಾಡಿಸಿಕೊಂಡಿದ್ದಾನೆ. ಇಂಡಸ್ಟ್ರಿಯಲ್ ಡಿಸ್‌ಪ್ಯೂಟ್ ಆ್ಯಕ್ಟ್‌ನ ಸೆಕ್ಷನ್ ೧೭ರ ಪ್ರಕಾರ ೩೦ ದಿವಸದಲ್ಲಿ ಅವಾರ್ಡ್ ಪಬ್ಲಿಷ್ ಆಗಬೇಕು. ಆದರೆ ಈ ೩ ಸಾವಿರ ಅವಾರ್ಡ್‌ಗಳು ಪಬ್ಲಿಷ್ ಆಗದೇ ಇರುವುದಕ್ಕೆ ಕಾರಣವೇನು ? ನಿಮಗೆ ಈಗ ಇದು ಜ್ಞಾನೋದಯವಾಗಿದೆಯೇ?

ಶ್ರೀ ಎ. ಲಕ್ಷ್ಮೀಸಾಗರ್.—ಸರ್ಟಿಫೈಡ್ ಕಾಪೀಸ್‌ಗೆ ಪ್ರೊವಿಷನ್ ಇದೆ.

ಶ್ರೀ ಎಂ. ಎಸ್. ಕೃಷ್ಣನ್.—ಸರ್ಟಿಫೈಡ್ ಕಾಪೀಸ್ ಅಲ್ಲ. Three hundred awards are not published and now alone the Government is waking up. Who is responsible for this ? What is the secucy that is hiding ? Who is the Labour Commissioner keeping this pending ? Who is the

Deputy Secretary ? If you don't take action on them, how can they give justice to the warking class ? ಇದು ಬಹಳ ಪ್ರಮುಖವಾದ ವಿಷಯ. ಪಬ್ಲಿಷ್ ಮಾಡುವುದಕ್ಕೆ ಪ್ರಿಂಟಿಂಗ್ ಬಹಳ ಜಾಸ್ತಿ ಆಗುತ್ತದೆ. ಆದ್ದರಿಂದ ಇದು ಆಗುವುದಿಲ್ಲವೆಂದು ಸಬೂಬು ಹೇಳಬಹುದು. ಅದೂ ಕೂಡ ಆಗುವುದಿಲ್ಲ. ಸೆಕ್ಷನ್ ೧೭ (೧) ರಲ್ಲಿ ಏನು ಹೇಳುತ್ತಿದ್ದೀರಿ ಎಂದರೆ. "Award may be published in such a manner as prescribed." ಪ್ರಿಂಟ್ ಮಾಡದಿದ್ದರೆ ಬರೆದು ನೋಟೀಸ್ ಬೋರ್ಡ್‌ನಲ್ಲಿ, ಮಾಲೀಕರು ಹಾಕಲೇಬೇಕೆಂದು ಹೇಳಿ. ಇದನ್ನು ನೀವು ಏತಕ್ಕೆ ಮಾಡುತ್ತಿಲ್ಲ? ಇಲ್ಲಿ ಒಂದು ಉದಾಹರಣೆಯನ್ನು ಹೇಳುವುದಾದರೆ, ಕೆ. ಎಸ್. ಆರ್. ಟಿ. ಸಿ ಯಲ್ಲಿ ಡ್ರೈವರ್ ಆಗಿದ್ದ ರಾಮಕೃಷ್ಣ ಎನ್ನುವವನು ಏನೋ ಕಾರಣಕ್ಕೆ ಸಸ್ಪೆಂಡ್ ಆಗಿದ್ದ. ೫-೬ ವರ್ಷ ಆದಮೇಲೆ ಅವನು ರೀ-ಇನ್‌ಸ್ಟೇಟ್ ಆದ. ಅವನು ಹೇಳಿದ ನನಗೆ ರೀ-ಇನ್‌ಸ್ಟೇಟ್ ಆದ ಕಾಪಿ ಅಫಿಷಿಯಲ್ ಆಗಿ ಬಂದಿಲ್ಲ ಎಂದು.

ಸರ್ಕಾರಿ ಕೈಗಾರಿಕೆ ನಡೆಸತಕ್ಕವರದು ಪೇಪರಿನಲ್ಲಿ ಬಂದಿದೆ ಎಂದರೆ ಅಫಿಷಿಯಲ್ಲಾಗಿ ಬರಬೇಕು ಎಂದು ಹೇಳಿದರು ಇದನ್ನು ೧೦೦ ರೂಪಾಯಿಗಳನ್ನು ಕೊಟ್ಟು ಪಬ್ಲಿಷ್ ಮಾಡಿಸಿಕೊಂಡಿದ್ದಾರೆ. ಇಂತಹ ಅಧೋಗತಿಗೆ ಲೇಬರ್ ಇಲಾಖೆ ಬಂದಿದೆ ಎಂದರೆ ಏನು ಹೇಳಬೇಕೋ ನನಗೆ ಗೊತ್ತಾಗುವುದಿಲ್ಲ. ಈ ಇಲಾಖೆಯ ಪರ್‌ಫಾರ್ಮೆನ್ಸ್ ಈಸ್ ಮಿಸರಬಲ್ ಇದರಿಂದ ಯಾರಿಗೂ ಮರ್ಯಾದೆ ತರತಕ್ಕ ವಿಷಯವಲ್ಲ, ಇದು ತಲೆತಗ್ಗಿಸತಕ್ಕ ಪ್ರಶ್ನೆ. ಇದು ಕಾನೂನು ಪ್ರಶ್ನೆ, ಪಾಲಿಸಿ ಪ್ರಶ್ನೆ, ಪ್ಯೂರ್ಲಿ ಅಡ್ಮಿನಿಸ್ಟ್ರೇಟೀವ್. ಇದನ್ನು ಸರಿಯಾಗಿ ನಡೆಸುವುದಕ್ಕೆ ಆಗದೇ ಹೋದರೆ Why shoud there be the Minister ? Why should there be a Labour Department ಎಂದು ಅರ್ಥವಾಗುತ್ತದೆ. ಕಳೆದ ವರ್ಷ ಬಡ್ಜೆಟ್ ಅಧಿವೇಶನದಲ್ಲಿ ಏನೇನು ಆಶ್ವಾಸನೆಗಳನ್ನು ಕೊಟ್ಟಿರಿ. ಅಲ್ಲಿಂದ ಇಲ್ಲಿಯವರೆ ಏನಾಯಿತು ಎಂದು ಲೇಬರ್ ಇಲಾಖೆಯಲ್ಲಿ ವಿಮರ್ಶೆ ಮಾಡಿದರೆ ಬಹಳ ಶೋಚನೀಯವಾದ ಪರಿಸ್ಥಿತಿ ನಮಗೆ ಕಂಡುಬರುತ್ತದೆ. ಹಿಂದೆ ಮೇ ದಿನಾಚರಣೆ ಬಗ್ಗೆ ಹೇಳಿಕೊಂಡರು. ಮೇ ದಿನಾಚರಣೆ ದಿವಸ ಸಂಬಳ ಸಮೇತ ರಜ ಘೋಷಿಸಲಾಗಿದೆ ಎಂದು ಮಾನ್ಯ ಮುಖ್ಯ ಮಂತ್ರಿಗಳು ಹೇಳಿದರು. ನಾವೆಲ್ಲಾ ಸಂತೋಷಪಟ್ಟೆವು. ಅದನ್ನು ವಿಶ್ವ ಕಾರ್ಮಿಕ ದಿನಾಚರಣೆ ಎಂದು. ಮಾಡಿದರು ಆಮೇಲೆ ಅದು ಏನಾಯಿತು ಎಂದರೆ, It is lying in cold storage. ಏನೂ ಆಗಿಲ್ಲ. ಶ್ರೀಮಾನ್ ರಾಮಕೃಷ್ಣ ಹೆಗಡೆಯವರು ಉತ್ತರ ಕೊಟ್ಟರು. ಏನು ಮಾಡುವುದು ಕೇಂದ್ರಕ್ಕೆ ಬರೆದಿದ್ದೇವೆ, ಉತ್ತರ ಬರಲಿಲ್ಲ ಎಂದು ಹೇಳಿದರು. ಎಷ್ಟು ದಿವಸಬೇಕು ಉತ್ತರ ಬರುವುದಕ್ಕೆ. ನೀವು ಕಾರ್ಮಿಕರ ವಿಶ್ವಾಸ ಕಳೆದುಕೊಂಡಿರಿ, ನಿಮಗೆತಾನೇ ನಷ್ಟ. ಸಾರ್ವತ್ರಿಕ ಚುನಾವಣೆ ನಡೆದಾಗ ಆ ದಿವಸ ಸಂಬಳ ಕೊಡಬೇಕು ಎಂದು ಕಾನೂನಿನಲ್ಲಿದೆ. ನೀವೂ ಘೋಷಣೆ ಹೊರಡಿಸಿದಿರಿ. ಆದರೆ ಮಾಲೀಕರು ಅದನ್ನು ಕೊಟ್ಟಿಲ್ಲ. No follow-up action. ಇವೆಲ್ಲಾ ದೊಡ್ಡ ದೊಡ್ಡ ಪ್ರಶ್ನೆಗಳಲ್ಲ. ಸಣ್ಣ ಪ್ರಶ್ನೆಗಳು. ಅದೇರೀತಿ ಇನ್ನೊಂದು ವಿಷಯವೇನೆಂದರೆ, ಮಾನ್ಯ ಮೈಖೇಲ್ ಫರ್ನಾಂಡಿಸ್ ಅವರಿಲ್ಲ. ನಾವೆಲ್ಲಾ ದೊಡ್ಡ ಹೋರಾಟ ನಡೆಸಿದೆವು. ಕೇಸುಗಳನ್ನು ಹಾಕಿದ್ದಾರೆ, ಅದನ್ನು ವಾಪಸ್ ತೆಗೆದುಕೊಳ್ಳಿ ಎಂದು ಹೇಳಿದಾಗ ವಾಪಸ್ ತೆಗೆದುಕೊಳ್ಳುತ್ತೇವೆಂದು ಹೇಳಿದರು. ರೈಲ್ ರೋಕೋ ಬಗ್ಗೆ ಹಾಕಿದಂಥ ಕೇಸುಗಳು ಇನ್ನೂ ಇವೆ. ಈ ಬಗ್ಗೆ ಕೇಂದ್ರಸರ್ಕಾರಕ್ಕೆ ಬರೆದಿದ್ದೇವೆ ಎಂದು ಹೇಳಿದರು. ಇನ್ನೂ ಎಷ್ಟು ದಿವಸ ಇವು ನಡೆದುಕೊಂಡು ಹೋಗುತ್ತವೆ. Hindustan Electronic, Bharat Electronic, BEML ಅಲ್ಲೆಲ್ಲಾ ಸುಮಾರು ಒಂದು-ಒಂದೂವರೆ ಲಕ್ಷ ಕಾರ್ಮಿಕರು ಓಟ್ ಹಾಕಿ ನಿಮ್ಮನ್ನು ಅಧಿಕಾರಕ್ಕೆ ತಂದಿದ್ದಾರೆ. ಅವರ ಕೇಸುಗಳನ್ನು ವಾಪಸ್ ತೆಗೆದುಕೊಳ್ಳದೇ ಹೋದರೆ ಸರ್ಕಾರಕ್ಕೆ ಬೆಂಬಲ ಕೊಡಿ ಎಂದು ಯಾವರೀತಿ ಹೇಳುವುದು, ಹೇಳುವುದಕ್ಕೆ ನಮಗೆ ಕಷ್ಟವಾಗುತ್ತದೆ. ಇದುವರೆಗೆ ಕೇಸುಗಳನ್ನು ವಾಪಸ್ ತೆಗೆದುಕೊಂಡಿಲ್ಲ. ಅನೇಕ ಸಾರಿ ಮಾನ್ಯ ಮುಖ್ಯ ಮಂತ್ರಿಗಳು ಕರೆಸುತ್ತೇವೆಂದು ಹೇಳಿದರು, ಮಾನ್ಯ ಅಜೀಜಸೇಠರೂ ಆಗಲಿ ಎಂದು ಹೇಳಿದರು. ಮಾನ್ಯ ಅಜೀಜ್‌ಸೇಠರ ಹಾರಿಸುವಂಥ ಮಾತನಾಡಿ ಕಳಿಸುತ್ತಾರೆ ನಾವು ಸುಮ್ಮನೆ ಇರಬೇಕಾಗುತ್ತದೆ. ಇದು ಈಗ ಪರಮಾವಧಿಗೆ ಮುಟ್ಟುತಕ್ಕ ಪರಿಸ್ಥಿತಿಗೆ ಬಂದಿದೆ. ಜನತಾ ಸರ್ಕಾರ ಬಂದಮೇಲೆ ಮೊದಲು ಮಾನ್ಯ ವಿ. ಎಲ್. ಪಾಟೀಲರು ಕಾರ್ಮಿಕ ಮಂತ್ರಿಗಳಾದರು ಆಗ ಯಾಕಪ್ಪಾ ಇವರು ಕಾರ್ಮಿಕ ಮಂತ್ರಿಗಳಾದರು. ಇವರಿಗೆ ಕಾರ್ಮಿಕರ ವಿಷಯಗೊತ್ತಿಲ್ಲ ಎಂದು ನಮಗೆ ಸಂಕಟವಾಯಿತು. ಆಮೇಲೆ ಮಾನ್ಯ ಮುಖ್ಯ ಮಂತ್ರಿಗಳು ಟ್ರೇಡ್‌ಯೂನಿಯನ್ ಮುಖಂಡ

ರನ್ನು ಕರೆಯಿಸಿ ಪ್ರತಿ ತಿಂಗಳು ಸಭೆ ಮಾಡುತ್ತೇನೆಂದು ಹೇಳಿದರು. ಕೈಗಾರಿಕಾ ಬಾಂಧವ್ಯ ಯಾವ ರೀತಿ ಇರಬೇಕ ಎನ್ನುವುದರ ಬಗ್ಗೆ ಸಭೆ ಮಾಡುತ್ತೇವೆಂದು ಹೇಳಿದರು ಮಾನ್ಯ ಅಜೀಜ್‌ಸೇಠರೂ ಕೂಡ ಕರೆಯಿಸಿ ಮಾತನಾಡುತ್ತೇನೆಂದು ಹೇಳಿದರು ಅಲ್ಲಿಂದ ಇಲ್ಲಿಯವರೆಗೆ ಎಷ್ಟು ಸಭೆಗಳನ್ನು ಕರೆದಿದ್ದೀರಿ. ಎರಡು ಸಾರಿ ಇಬ್ಬರು ಮಂತ್ರಿಗಳು ನಮಗೆ ಕಾಫಿ ಕುಡಿಸಿದ್ದೀ ವಿನಹ ಬೇರೆ ಏನೂ ಆಗಿಲ್ಲ. ಕೈಗಾರಿಕಾ ಬಾಂಧವ್ಯದ ಬಗ್ಗೆ ಮಾಲೀಕರು ಮತ್ತು ಟ್ರೇಡ್ ಯೂನಿಯನ್ ಮುಖಂಡರು, ಸರ್ಕಾರ ಚರ್ಚೆ ಮಾಡುವಂಥ ಸಭೆ ಅತಿ ಮಹತ್ವವಾದ ಸಭೆ, ಸಂಯುಕ್ತ ಸಭೆ ಮತ್ತು ಅದು ತ್ರಿಕೋನ ಸಭೆ. ಅದರಲ್ಲಿ ಅನೇಕ ವಿಷಯಗಳನ್ನು ಚರ್ಚೆ ಮಾಡುವುದಕ್ಕೆ ಅವಕಾಶವಿದೆ. ಅಂತಹ ಉಪಯುಕ್ತವಾದ ಸಭೆಯನ್ನು ಇದುವರೆಗೆ ಕರೆಯಿಸಿಲ್ಲ. ಇದಕ್ಕೆ ಯಾರು ಹೊಣೆ ? ಯಾರು ಹೊಣೆಗಾರರೋ ಅವರನ್ನು ನೇಣು ಹಾಕಿ ಎಂದು ಹೇಳುತ್ತೇನೆ. ಅವರು ಯಾರೇ ಆಗಿರಲಿ, ವೈಯಕ್ತಿಕವಾಗಿ ಅವರ ಮೇಲೆ ನನಗೆ ಭಿನ್ನಾಭಿಪ್ರಾಯವಿಲ್ಲ. ಯಾರಾದರೂ ಕೈಗಾರಿಕಾ ಬಾಂಧವ್ಯವನ್ನು ಸಡಿಲಗೊಳಿಸುವುದಕ್ಕೆ ಪ್ರಯತ್ನ ಪಟ್ಟರೆ ಅವರಿಗೆ ಶಿಕ್ಷೆಯಾಗಲೇಬೇಕು ಎನ್ನುವುದು ನನ್ನ ಅಭಿಪ್ರಾಯ. ಏನು ಮಾಡುತ್ತಿರೋ ನೋಡೋಣ, ಇನ್ನೊಂದು ತಮಾಷೆ ಏನೆಂದರೆ, ಮಾನ್ಯ ಅಜೀಜ್‌ಸೇಠರು ಒಂದು ಸಬ್ ಕಮಿಟಿ ಮಾಡಿದರು. ಪ್ಯಾನ್ ಕಮಿಟಿ ಲೇಬರ್ ಅಡ್ವೈಸರಿ ಬೋರ್ಡ್, ಮತ್ತು ಒಂದು ಸಬ್ ಕಮಿಟಿ ಮಾಡಿದರು. ಕೈಗಾರಿಕಾ ರಂಗದಲ್ಲಿ ವಾದ ಇದೆ ಏನೆಂದರೆ, ಯೂನಿಯನ್ಸ್ ಬಹಳ ಜಾಸ್ತಿ ಇದೆ. Proliferation of Unions ಟ್ರೇಡ್ ಯೂನಿಯನ್ಸ್ ಜಾಸ್ತಿ ಇದೆ, ಇವುಗಳಲ್ಲಿ ಒಂದಕ್ಕೊಂದಕ್ಕೆ ಘರ್ಷಣೆಯಾಗುತ್ತವೆ, ಅದು ಆಗಕೂಡದು ಎಂಬ ದೃಷ್ಟಿಯಿಂದ ಮಾಡಿದರು ಆ ಕಮಿಟಿಯನ್ನು ಒಂದು ಕೈಗಾರಿಕೆಯಲ್ಲಿ ಒಂದು ಯೂನಿಯನ್ ಇರಬೇಕಾದುದು ನ್ಯಾಯ ಕೆ.ಟಿ. ಭಾಷ್ಯಂಯವರು ಇದ್ದಾಗ ಮೈಸೂರು ಲೇಬರ್ ಆಕ್ಟ್ ತೆಗೆದುಕೊಂಡು ಬಂದರು. ಅದು ಬಹಳ ಒಳ್ಳೆಯದು. ಅದು ಒಳ್ಳೆಯ ಶಾಸ ಆಮೇಲೆ ಇಂಡಸ್ಟ್ರಿಯಲ್ ಡಿಸ್‌ಪ್ಯೂಟ್ಸ್ ಆಕ್ಟ್ ಬಂತು. ಅದರಲ್ಲಿ ೭ ಜನ ಸೇರಿದರೆ ಒಂದು ಯೂನಿಯನ್ ಮಾಡಿಕೊಳ್ಳಬಹುದು ಎಂದು ಅವಕಾಶವಾಯಿತು. ಒಂದು ಕಡೆ ೮–೧೦ ಯೂನಿಯನ್‌ಗಳಿವೆ. ಅವನ್ನು ಸೇರಿಸುವುದಕ್ಕೆ ಒಂದು ಸಬ್ ಕಮಿಟಿ ಮಾಡಿದರು. ಅದರಲ್ಲಿ M.C. Narasimhan, AITUC, Ex-Member of the Assembly, Ex-Member of the Council Leading advocate in Labour, S. Suryanayan Rao, CITU ಅಧ್ಯಕ್ಷರು ಮತ್ತು ಶಾಸಕರು, H.B. Shwetadri, BMFC ಮುಖಂಡರು, D. Venkatesh, INTUC ಮುಖ್ಯ ಕಾರ್ಯದರ್ಶಿ. ಇವರೆಲ್ಲರೂ ಸೇರಿದಂಥ ಒಂದು ಸಬ್‌ಕಮಿಟಿ ಮಾಡಿದರು ಅವರು ೧೯೮೩ರ ಆಗಸ್ಟ್–ಸೆಪ್ಟೆಂಬರ್‌ನಲ್ಲಿ ರಿಪೋರ್ಟ್ ಕೊಟ್ಟಿದ್ದಾರೆ. ಆ ರಿಪೋರ್ಟನ್ನು ಏನು ಮಾಡಿದ್ದೀರಿ ? ಅದು ನನಗೆ ಗೊತ್ತಿಲ್ಲ ಎಂದು ಮಂತ್ರಿಗಳು ಹೇಳಿಬಿಟ್ಟರೆ ನನ್ನ ಕೈಯಲ್ಲಿ ಹಿಡಿಯುವುದಕ್ಕೆ ಆಗುತ್ತದೆಯೇ. ನಾನು ಕೇಳಿದರೆ, ನನಗೆ ಗೊತ್ತಿಲ್ಲ ಹೋಗಪ್ಪ ಕೃಷ್ಣ I do not know what has happened ಅಂದರೆ ನಾನು ಏನು ಹೇಳಬೇಕು ಅದಕ್ಕೆ ನೀವೇ ಯೋಚನೆಮಾಡಿ ? ಮತ್ತೆ ಲೇಬರ್ ಅಡ್ವೈಸರಿ ಬೋರ್ಡ್ ಏನು ಮಾಡಿದ್ದಾರೆ ಅದು ಒಂದು ಸಾರಿಯೂ ಮೀಟಿಂಗ್ ಮಾಡಿಲ್ಲ. ತಾವು ಪರ್‌ಫಾರ್ಮೆನ್ಸ್ ಬಡ್ಜೆಟ್ ಕೊಟ್ಟಿದ್ದೀರಿ. ಕೈಗಾರಿಕಾ ಬಾಂಧವ್ಯದ ಬಗ್ಗೆ ಮತ್ತು ಉತ್ಪಾದನೆ ಇಲ್ಲ ಎಂಬ ವಿಷಯಗಳ ಮೇಲೆ ಹೇಳಿದ್ದೀರಿ. ಇವೆಲ್ಲಾ ಅದರಲ್ಲಿ ಚರ್ಚೆಮಾಡುವುದಕ್ಕೆ ಅವಕಾಶವಿದೆ. ಆದರೆ ಕಮಿಟಿ ಸೇರದೇ ಹೋದರೆ ಏನು ಚರ್ಚೆ ಮಾಡುವುದು ? ಏನುತಾನೇ ಜಾರಿಗೆ ತರುವುದಕ್ಕೆ ಸಾಧ್ಯ ? ನೀವು ಕೊಟ್ಟಂಥ ಆಶ್ವಾಸನೆ ಯಾವುದೂ ಜಾರಿಗೆ ಬರಲಿಲ್ಲ ಎಂದು ನಾವು ಹೇಳಬೇಕಾಗಿದೆ. ಇನ್ನೊಂದು ವಿಷಯವೇನೆಂದರೆ ನಮ್ಮಲ್ಲಿ ಕಾನೂನುಗಳಿವೆ. ನಾವು ಕಾನೂನು ಮಾಡುವುದಕ್ಕೆ ಇರುವಂಥ ಜನ. ನೀವು ಈ ಸರ್ಕಾರ ಕಾರ್ಮಿಕರ ಪರವಾದಂಥ ಸರ್ಕಾರ ಎಂದು ಹೇಳಿಕೊಳ್ಳುವುದರಿಂದ ಹೊಸ ಹೊಸ ಕಾನೂನುಗಳನ್ನು ತೆಗೆದುಕೊಂಡು ಬರುತ್ತೀರಿ, ಈಗಾಗಲೇ ಕೆಲವು ಕಾರ್ಯಕ್ರಮಗಳನ್ನು ತೆಗೆದುಕೊಂಡಿದ್ದೀರಿ, ಅದಾದ ನಂತರ ಜಾರಿಗೆ ತರುತ್ತೀರಿ ಎಂದು ಯೋಚನೆಮಾಡಿದೆ. ಹಿಂದೆ ಇದ್ದಂಥ ಸರ್ಕಾರದಲ್ಲಿ ಶ್ರೀಮಾನ್ ಅಜೀಜ್‌ಸೇಠರು ಮಂತ್ರಿಗಳಾಗಿದ್ದರು. ಆಗ ನಾವು ಹೀಗೇ ಇದ್ದೆವು. ಆಗ ಕೆಲವು ಶಾಸನಗಳನ್ನು ತೆಗೆದುಕೊಂಡು ಬನ್ನಿ ಎಂದು ಹೇಳುತ್ತಿದ್ದೆವು. ಕೆಲವೆಲ್ಲ ಮಸೂದೆ ರೂಪದಲ್ಲಿದ್ದುವು. ಅವೆಲ್ಲ ಏನಾಗಿದೆಯೋ ಗೊತ್ತಿಲ್ಲ ಅವುಗಳನ್ನು ಇಲಿಗಿಲಿ ತಿಂದು ಹಾಕಿದೆಯೋ ನೋಡಬೇಕು. ಸ್ವಲ್ಪ ಹುಡುಕಿ ನೋಡಿ. ನಾನು ಒಂದೊಂದಾಗಿ ಹೇಳುತ್ತೇನೆ. ಉದಾಹರಣೆಗೆ ಹೇಳುವುದಾದರೆ, ಸೆಕ್ಷನ್ ೧೦ಎಗೆ ಅಮೆಂಡ್‌ಮೆಂಟ್ ಮಾಡಬೇಕು, ಒಂದು ಮಸೂದೆ ತರುತ್ತೇವೆ ಎಂದು ಹೇಳಿದರು. ಇಂಡಸ್ಟ್ರಿಯಲ್ ಡಿಸ್ಪ್ಯೂಟ್ ಆಕ್ಟ್ ಇದೆ. ಇಂಡಸ್ಟ್ರಿಯಲ್ ಟ್ರಿಬ್ಯೂನಲ್ ಇದೆ. Enabling the Government to pass

an interim order. ಯಾವುದಾದರೂ ಕಾರ್ಮಿಕರಿಗೆ ಸಂಬಂಧಪಟ್ಟ ವಿಷಯಗಳ ಬಗ್ಗೆ ಇಂಟರಿಂ ಆರ್ಡರ್ ಪಾಸ್ ಮಾಡುವುದಕ್ಕೆ ಸರ್ಕಾರಕ್ಕೆ ಅಧಿಕಾರ ಇರುವುದಕ್ಕೆ ಈ ರೀತಿಯಾದ ಒಂದು ಕಾನೂನು ತೆಗೆದುಕೊಂಡು ಬರಬೇಕು ಎಂದು ಯೋಚನೆಮಾಡಿ ಆ ಬಿಲ್ ಇನ್ನೂ ಪೆಂಡಿಂಗ್ ಇದೆ. ಡಿಪಾರ್ಟ್‌ಮೆಂಟ್‌ನಿಂದ ಪ್ರಪೋಸಲ್ಸ್ ಕಳಿಸಿದ್ದಾರೆ, ಕಳಿಹಿಸಿರತಕ್ಕ ಪ್ರಪೋಸಲ್ಸ್ ಹಾಗೇ ಇದೆ. ಇನ್ನೊಂದು ವಿಷಯ ಏನೆಂದರೆ, Section 33 (2) B. of the Industrial Disputes Act ಪ್ರಕಾರ ಕಾರ್ಮಿಕನನ್ನು ಡಿಸ್‌ಮಿಸ್ ಮಾಡಬಹುದು. ಕೋರ್ಟಿನಲ್ಲಿ ಕೇಸ್ ಇದ್ದರೆ ಅಪ್ಲಿಕೇಷನ್ ಹಾಕಬೇಕು ಏಕೆ ಡಿಸ್‌ಮಿಸ್ ಮಾಡಿದೆ ಎನ್ನುವುದನ್ನು ಸಾಬೀತು ಮಾಡಬೇಕಾಗುತ್ತದೆ. ಕೋರ್ಟಿನಲ್ಲಿ ಕೇಸು ತಿಂಗಳಾನುಗಟ್ಟಲೆ ನಡೆಯಬಹುದು. ಆ ಅವಧಿಯಲ್ಲಿ ಡಿಸ್‌ಮಿಸ್ ಆಗಿರುವುದರಿಂದ ಅವನು ಬೇರೆ ಕಡೆ ಕೆಲಸಕ್ಕೆ ಸೇರಿಕೊಳ್ಳುವಹಾಗಿಲ್ಲ.

ಏಕೆಂದರೆ ಮತ್ತೆ ತಿರುಗಿ ಕೆಲಸಕ್ಕೆ ಹೋಗುತ್ತೇವೆ ಎನ್ನುವ ವಿಶ್ವಾಸ ಇರುತ್ತದೆ. ಆದರೆ ಆ ಸಮಯದಲ್ಲಿ ಅವರಿಗೆ ಅಲ್ಲೂ ಕೆಲಸ ಇರುವುದಿಲ್ಲ. ಇಲ್ಲೂ ಕೆಲಸ ಇರುವುದಿಲ್ಲ. ಸಸ್‌ಪೆನ್ಷನ್ ಸಮಯದಲ್ಲಿ ಸಬ್ಸಿಸ್ಟೆನ್ಸ್ ಅಲೋಯನ್ಸ್ ಕೊಡಬೇಕೆಂಬ ಅಭಿಪ್ರಾಯ ಇವೊತ್ತು ಕೇಂದ್ರ ಸರ್ಕಾರದಲ್ಲಿ ಇದೆ. ರಾಜ್ಯ ಸರ್ಕಾರಗಳು ಕೂಡ ಅನೇಕ ಕಡೆ ಕೊಡುತ್ತಿದ್ದಾರೆ. ಪಶ್ಚಿಮ ಬಂಗಾಳದಲ್ಲಿ ಮಾಡಿದ್ದಾರೆ. ಕೇರಳಾದಲ್ಲಿ ಮಾಡಿದ್ದಾರೆ. ಇಲ್ಲೂ ಸಹ ಆ ಬಗ್ಗೆ ಕಾನೂನನ್ನು ತೆಗೆದುಕೊಂಡು ಬನ್ನಿ ಎಂದು ಹೇಳಿದ್ದೇನೆ. ಅದಕ್ಕಾಗಿ ಮಸೂದೆ ಕೂಡ ತಯಾರಾಗಿದೆ. ಅದನ್ನು ತನ್ನಿ ತನ್ನಿ ಎಂದು ಹೇಳಿದರೂ, ಇದುವರೆಗೂ ಅದನ್ನು ಮಾಡುತ್ತೇವೆ, ತರುತ್ತೇವೆ ಎಂದು ಹೇಳಿದರೆ ಹೊರತು ತೆಗೆದುಕೊಂಡು ಬರಲಿಲ್ಲ. ಅದನ್ನೂ ಕೂಡ ತಮಗೆ ಹೇಳಬೇಕಾಗಿದೆ.

ಇನ್ನೊಂದು ಬಹಳ ಮುಖ್ಯವಾದ ವಿಷಯದ ಬಗ್ಗೆ ನಮ್ಮ ದೇಶದಲ್ಲಿ ಗಮನಹರಿಸಬೇಕಾದು ಏನೆಂದರೆ, ಇವೊತ್ತು ಅನೇಕ ಕಾರ್ಖಾನೆಗಳನ್ನು ಮುಚ್ಚುತ್ತಿದ್ದಾರೆ. ಸರ್ವೇಸಾಧಾರಣವಾಗಿ ಯಾವಾಗಲೂ ಮುಷ್ಕರದಿಂದ ಕಾರ್ಖಾನೆಗಳು ಮುಚ್ಚುತ್ತವೆ ಎನ್ನುವುದು ಒಂದು ಅಭಿಪ್ರಾಯ. ಕಾರ್ಮಿಕರು ಯಾವಾಗಲೂ ಮುಷ್ಕರ ನಡೆಸುತ್ತಾರೆ ಎನ್ನುವ ಕೆಟ್ಟ ಅಭಿಪ್ರಾಯವನ್ನು ಕಾರ್ಮಿಕರ ಮೇಲೆ ಅನೇಕ ಜನ ಮಾನ್ಯ ಸದಸ್ಯರಿಗೆ ಇದೆ ಎಂದು ನಾನು ತಿಳಿದುಕೊಂಡಿದ್ದೇನೆ. ಈ ಕೆಟ್ಟ ಅಭಿಪ್ರಾಯವನ್ನು ಬಿಟ್ಟುಬಿಡಿ ಎಂದು ನಾನು ಹೇಳಲಿಕ್ಕಾಗುವುದಿಲ್ಲ. ಕೇಂದ್ರದ ಹಣಕಾಸು ಸಚಿವರಾದ ಶ್ರೀಮಾನ್ ಪ್ರಣಬ್ ಮುಖರ್ಜಿ ಹಾಗೂ ಕಾರ್ಮಿಕ ಸಚಿವರಾದ ಶ್ರೀಮಾನ್ ವೀರೇಂದ್ರ ಪಾಟೀಲ್ ರವರು ೧೯೮೨-೮೩ನೇ ಸಾಲಿನ ಅಂಕಿ ಅಂಶಗಳನ್ನು ಕೊಡುತ್ತಾ ನಮ್ಮ ದೇಶದಲ್ಲಿ ೧೯೮೩ನೇ ಇಸವಿಯಲ್ಲಿ ಲಾಕೌಟ್, ಕ್ಲೋಸರ್ ಹಾಗೂ ರಿಟ್ರೆಂಚ್‌ಮೆಂಟ್, ಈ ಕಾರಣಗಳಿಂದಲೇ ಮುಖ್ಯವಾಗಿ ಹೆಚ್ಚು ಕಾರ್ಖಾನೆಗಳು ಮುಚ್ಚಿವೆಯೇ ವಿನಹ ಸ್ಟ್ರೈಕ್‌ನಿಂದ ಅಲ್ಲ ಎಂದು ಹೇಳಿದ್ದಾರೆ. ಲಾಕೌಟ್, ಕ್ಲೋಸರ್, ರಿಟ್ರೆಂಚ್‌ಮೆಂಟ್ ನಿಂದ ಮುಚ್ಚಿವೆಯೇ ಹೊರತು not because of strike ಇದರಿಂದ number of workers involved are more. ಈ ರೀತಿ ಕಾರ್ಖಾನೆಗಳನ್ನು ಮುಚ್ಚುವುದು ಆಗಿರಬೇಕಾದರೆ, ಅದು ಜಾಸ್ತಿ ಜಾಸ್ತಿ ಆಗುತ್ತಾ ಹೋಗುತ್ತಿವೆ. ಬಂಡವಾಳಶಾಹಿ ಸಮಾಜದಲ್ಲಿ ಬದುಕಬೇಕಾಗಿರುವುದರಿಂದ ಖಂಡಿತವಾಗಿ ಕಾರ್ಖಾನೆಗಳನ್ನು ಮುಚ್ಚುವ ಪರಿಸ್ಥಿತಿಗೆ ಬರುತ್ತವೆ. ಮಫತ್‌ಲಾಲ್ ಪ್ಲೈಉಡ್ ಫ್ಯಾಕ್ಟರಿ ಮುಚ್ಚಿ ಈಗಾಗಲೇ ೫ ತಿಂಗಳಾಯಿತು. ಇದಕ್ಕೆ ಕಾರಣ ಮರ ಇಲ್ಲ. ಮರ ಕೊಡುವುದು ಸರ್ಕಾರ, ಅದರಲ್ಲೂ ಜನತಾ ಪಾರ್ಟಿ ಸರ್ಕಾರ. ಏಕೆ ಕೊಡಲಿಲ್ಲ? ಶ್ರೀಮಾನ್ ಜೀವಿಜಯ ರವರ ಅಡ್ಡಿಯಿಂದ ಏಕೆ ಸ್ವಾಮಿ ನಿಮಗೆ ಈ ಕೆಟ್ಟಬುದ್ಧಿ ಬಂತು. ಅವರನ್ನು ಕೇಳಿದರೆ, ಅವರು ನಾಲ್ಕು ಮರಗಳನ್ನು ಕಡಿಯುತ್ತಿದ್ದರು. ನಾವು ಎರಡು ಮರ ಕಡಿಯುವುದಕ್ಕೆ ಅವಕಾಶ ಕೊಟ್ಟಿದ್ದೇವೆಂದು ಹೇಳಿದರು. ಇದರ ಬಗ್ಗೆ ಬೇಕಾದಷ್ಟು ಸಾರಿ ಪ್ರಶ್ನೆಗಳನ್ನೂ ಕೇಳಿದ್ದಾಯಿತು. ಆ ಪ್ರಶ್ನೆಗಳಿಗೆ ಅವರಿಂದ ಉತ್ತರವನ್ನು ಕೊಡುವುದಕ್ಕಾಗುವುದಿಲ್ಲ. ಅವರು ಸ್ವಾರ್ಥ ಮನೋಭಾವದಿಂದ ಯೋಚಿಸುತ್ತಿದ್ದಾರೆಂದು ನಾನು ಹೇಳುವುದಿಲ್ಲ. ಅರಣ್ಯಗಳು ಉಳಿಯಬೇಕು ನಿಜ. ಆದರೆ ಕೈಗಾರಿಕೆಗಳನ್ನು ಅಳಿಸಕೂಡದು. ಅದನ್ನೂ ಕೂಡ ತಾವು ನೋಡಬೇಕು. ಇವೊತ್ತು ಈ ಕಾರ್ಖಾನೆಯನ್ನು ಮುಚ್ಚಿರುವುದರಿಂದ ೮೦೦ ಜನ ಬೀದಿ ಪಾಲಾಗಿದ್ದಾರೆ. ಸರ್ಕಾರ ಕ್ರಮವನ್ನು ಈ ಬಗ್ಗೆ ಪರಿಣಾಮಕಾರಿಯಾಗಿ ತೆಗೆದುಕೊಂಡಿಲ್ಲ. ಮಾತುಕತೆ ನಡೆದಿದೆ ನಿಜ. ಈ ಮಫತ್‌ಲಾಲ್ ರವರು ಗುತ್ತೇದಾರಿ ಬಂಡವಾಳಗಾರರಲ್ಲಿ ಒಬ್ಬರು. ಇವರು ಇವೊತ್ತು ನಮ್ಮನ್ನು ಕಂಟ್ರೋಲ್ ಮಾಡುತ್ತಿದ್ದಾರೆ. ಇಂತಹವರನ್ನು ಹೆದರಿಸುವ ಧೈರ್ಯ, ಸ್ಥೈರ್ಯ ಹಾಗೂ ಚಾತಿ

ಸರ್ಕಾರಕ್ಕೆ ಇರಬೇಕು. ಇದನ್ನು ಮಾಡುವ ಧೈರ್ಯ ಸರ್ಕಾರಕ್ಕಿಲ್ಲವೆಂಬುದು ನನಗೆ ಖಾತರಿಯಾಗಿದ್ದುದರಿಂದಲೇ ಈ ಮಾತನ್ನು ನಾನು ಹೇಳಬೇಕಾಗಿದೆ. ಈ ಬಗ್ಗೆ ಸಚಿವರ ಕಚೇರಿಯಲ್ಲಿ ಮಾತುಕತೆಯಾಗುವ ಸಮಯದಲ್ಲಿ ಪರಿಹಾರ ತೆಗೆದುಕೊಂಡು ಹೊರಡಿ ಒಪ್ಪಿಕೊಳ್ಳಿ ಎಂದು ಮಂತ್ರಿಗಳೇ ನಮಗೆ ಹೇಳಿಬಿಟ್ಟರೆ ಅದರಲ್ಲೂ ಮಾಲೀಕನ ಮುಂದೆ, ನಾವು ಏನು ಮಾಡುವುದು? ನಮಗೆ ಕಷ್ಟ ಪರಿಸ್ಥಿತಿ ಇದೆ. ಆದರೂ ಸಹ ಅದನ್ನು ನಾವು ತಡೆದುಕೊಳ್ಳುವುದಕ್ಕಾಗುವುದಿಲ್ಲ ಎಂದು ಸ್ಪಷ್ಟವಾಗಿ ಹೇಳುವುದಕ್ಕಾಗುವುದಿಲ್ಲ. ಅದೇ ರೀತಿ ಇಂಟರ್‌ನ್ಯಾಷನಲ್ ಇನ್‌ಸ್ಟ್ರುಮೆಂಟ್ ಕಾರ್ಖಾನೆ ಲಾಕೌಟ್ ಆಗಿ ೧೮ ದಿವಸವಾಯಿತು. ಅದಕ್ಕೆ ತೊಂದರೆ ಇದೆ. ಅದು ತೊಂದರೆ ಇರತಕ್ಕಂತಹ ಕಾರ್ಖಾನೆ ಎಂದು ಹೇಳುತ್ತಿದ್ದಾರೆ. ಅದರ ಎಲ್ಲಾ ವಿವರಗಳಿಗೆ ನಾನು ಹೋಗುತ್ತಿಲ್ಲ. ಸರ್ಕಾರದ ಅಪ್ಪಣೆಯನ್ನು ತೆಗೆದುಕೊಂಡ ನಂತರ ಲಾಕೌಟ್ ಅಥವಾ ಕ್ಲೋಸರ್ ಅನ್ನು ಮಾಡುವಂತಹ ಒಂದು ಕಾನೂನನ್ನು ತೆಗೆದುಕೊಂಡು ಬರಬೇಕೆಂದು ಈ ಬಗ್ಗೆ ಸರ್ಕಾರವನ್ನು ನಾವು ಕೇಳುತ್ತಲೇ ಇದ್ದೇವೆ. ಅದು ಹೊಸದಾಗಿ ಮಾಡುವಂತಹ ಕಾನೂನು ಏನಲ್ಲ. ನಮ್ಮ ರಾಷ್ಟ್ರದಲ್ಲಿ ತುರ್ತು ಪರಿಸ್ಥಿತಿ ಇದ್ದಂತಹ ಸಮಯದಲ್ಲಿ ಒಂದು ತಿದ್ದುಪಡಿಯನ್ನು ಇಂಡಸ್ಟ್ರಿಯಲ್ ಡಿಸ್‌ಪ್ಯೂಟ್ ಆಕ್ಟ್‌ಗೆ ತೆಗೆದುಕೊಂಡು ಬಂದರು. There was an amendment to the Industrial Dispute Act that, without the permission of the Government, no factory can be locked-out or closed. ಅದರಲ್ಲೂ ಪರ್ಟಿಕ್ಯುಲರ್ ಆಗಿ ೨೫ಕ್ಕೆ ಚಾಪ್ಟರ್-೫ ಎನ್ ಒ.ಆರ್ ಈ ಸಬ್ ಕ್ಲಾಸ್‌ಗಳಿಗೂ ಅಪ್ಪಣೆಯನ್ನು ತೆಗೆದುಕೊಳ್ಳಬೇಕಾಗಿತ್ತು. ಆದರೆ ಅದನ್ನು ಸುಪ್ರೀಂ ಕೋರ್ಟಿನವರು ಸ್ಟ್ರಕ್‌ಡೌನ್ ಮಾಡಿದರು. ಏಕೆ ಅದನ್ನು ಸ್ಟ್ರಕ್ ಡೌನ್ ಮಾಡಿದರು ಎಂದರೆ ಆಗ 42nd amendment to the Constitution ಗೆ ತಂದಿದ್ದಾರೆ ಎಂದು ಕಾಣುತ್ತದೆ, ತಾವು ಹೇಳಬೇಕು. ಏಕೆಂದರೆ ತಾವು ಪಂಡಿತರು.

ಶ್ರೀ ಎ. ಲಕ್ಷ್ಮೀಸಾಗರ್.—ಹೌದು 42nd amendment to the Constitution.

ಶ್ರೀ ಎಂ. ಎಸ್. ಕೃಷ್ಣನ್ —ಆಗ directive principles. You cannot make use of the fundamental rights. ರಾಜ್ಯಾಂಗದ ೪೨ನೇ ಸೆಕ್ಷನ್ ತಿದ್ದುಪಡಿಯ ಬಿಲ್ಲು ಏನಾಯಿತೆಂದರೆ, ಇದು ಮೊದಲು ಪಾಸಾಯಿತು. ಈ ಇಂಡಸ್ಟ್ರಿಯಲ್ ಡಿಸ್‌ಪ್ಯೂಟ್ ಆಕ್ಟ್ ತಂದಂತಹ ತಿದ್ದುಪಡಿ ಆಮೇಲೆ ಆಯಿತು. ದುರಾದೃಷ್ಟವಶಾತ್ ಕಾರ್ಮಿಕರ ಹಿತಕ್ಕಾಗಿ ಇದಂತಹ ತಿದ್ದುಪಡಿ ಮೊದಲು ಆಗಬೇಕಾಗಿತ್ತು. ಆದರೆ ಮೊದಲು ರಾಜ್ಯಾಂಗದ ೪೨ನೇ ಸೆಕ್ಷನ್ ತಿದ್ದುಪಡಿಯಾಗಿರುವುದರಿಂದ, ಆಮೇಲೆ ಇದು ಬಂದದ್ದರಿಂದ does not apply ಅಂತ ಸ್ಟ್ರಕ್ ಡೌನ್ ಮಾಡಿದರು. ಈಗ ತುರ್ತು ಪರಿಸ್ಥಿತಿ ಇಲ್ಲ. ರಾಜ್ಯಾಂಗದ ೪೨ನೇ ಸೆಕ್ಷನ್‌ಗೆ ತಿದ್ದುಪಡಿಯಾಗಿಬಿಟ್ಟಿದೆ. ಈಗಲಾದರೂ ಆ ಒಂದು ಕಾನೂನನ್ನು ತೆಗೆದುಕೊಂಡು ಬರುವುದಕ್ಕೆ ಏನು ತೊಂದರೆ? ತೆಗೆದುಕೊಂಡು ಬರುವುದಕ್ಕೆ ಸಾಧ್ಯ ಇದೆ. ದುರಾದೃಷ್ಟವಶಾತ್ ಅದನ್ನು ತೆಗೆದುಕೊಂಡು ಬರುವಂತಹ ಮನೋಭಾವವನ್ನು ತಾವು ತೋರಿಸುತ್ತಿಲ್ಲ. ಸರ್ಕಾರ ಈ ಕಾನೂನನ್ನು ತೆಗೆದುಕೊಂಡು ಬಂದರೆ, ಕಾರ್ಮಿಕರನ್ನು ಮಾಲೀಕರು ವಿನಾಕಾರಣ, ರಿಟ್ರೆಂಚ್‌ಮೆಂಟ್ ಮಾಡುವುದನ್ನು ತಡೆಗಟ್ಟುವುದಕ್ಕೆ ಸಾಧ್ಯವಾಗುತ್ತದೆ. ಇದನ್ನು ತಾವು ಯೋಚನೆ ಮಾಡಬೇಕು.

ಇನ್ನೊಂದು ವಿಷಯ. ಹಿಂದೆ ಶ್ರೀಮಾನ್ ಅಜೀಜ್ ಶೇಠ್ ರವರು ಮಾತನಾಡುತ್ತಾ ಹಿಂದುಳಿದ ಕಾರ್ಮಿಕರ ಬಗ್ಗೆ ಮೊದಲು ಯೋಚನೆ ಮಾಡುತ್ತೇವೆ ಎನ್ನುವ ಮಾತನ್ನು ಹೇಳಿದರು. ಅದು ನ್ಯಾಯ. ಅಸಂಘಟಿತ ಕಾರ್ಮಿಕರ ಬಗ್ಗೆ ಸಂಬಂಧಪಟ್ಟಹಾಗೆ ಇಲ್ಲಿಯವರೆಗಾದರೂ ಶಾಸನವನ್ನು ತೆಗೆದುಕೊಂಡು ಬಂದಿದ್ದಾರೆಯೇ? ಇಲ್ಲ. ಇದುವರೆವಿಗೂ ತೆಗೆದುಕೊಂಡು ಬಂದಿಲ್ಲ. ಅಗರಬತ್ತಿ ಕಾರ್ಮಿಕರು ಇದ್ದಾರೆ. ಆ ಬಗ್ಗೆ ಎ.ಐ.ಟಿ.ಯು.ಸಿ. ಸಂಘ ಕೂಡ ಇದೆ. ಹೆಣ್ಣುಮಕ್ಕಳು ೨ ಸಾವಿರ ಜನ ಕಾರ್ಮಿಕರು ಇದ್ದಾರೆ. ಅವರು ಮೆರವಣಿಗೆ ಕೂಡ ಬಂದರು. ಆ ಕಾರ್ಮಿಕರ ಪರಿಸ್ಥಿತಿ ಬಹಳ ಚಿಂತಾಜನಕವಾಗಿದೆ. ನಮ್ಮ ರಾಜ್ಯದಲ್ಲೂ ಇವರಿಗೆ ಸಂಬಂಧಪಟ್ಟಹಾಗೆ ಶಾಸನ ಅಥವಾ ಮಸೂದೆಯನ್ನು ತೆಗೆದುಕೊಂಡು ಬನ್ನಿ ಎಂದು ನಾವು ಹೇಳಿದ್ದೇವೆ. ನಮ್ಮ ಸಹಕಾರವನ್ನೂ ಕೂಡ ಅದಕ್ಕೆ ಕೊಟ್ಟಿದ್ದೇವೆ ಅದಕ್ಕೆ ಸಂಬಂಧಪಟ್ಟ ಕರಡನ್ನು ನಾವೇ ಬರೆದು ಕೊಟ್ಟಿದ್ದೇವೆ. ಕರಡು ಪ್ರತಿ ತಯಾರಾಗಿದ್ದರೂ ಸಹ ಏತಕ್ಕಾಗಿ ಮಸೂದೆಯನ್ನು ತೆಗೆದುಕೊಂಡು ಬರಕೂಡದು? ಕೃಷಿ ಕಾರ್ಮಿಕರಿಗೆ ಸಂಬಂಧಪಟ್ಟಹಾಗೆ ಕಾನೂನನ್ನು-ಮಸೂದೆಯನ್ನು ತೆಗೆದುಕೊಂಡು ಬರುತ್ತೇವೆಂದು

ಅನೇಕ ವರ್ಷಗಳಿಂದ ಹೇಳುತ್ತಿದ್ದಾರೆ. ಆದರೆ ಅದನ್ನು ಏಕೆ ಜಾರಿಗೆ ತೆಗೆದುಕೊಂಡು ಬರುತ್ತಿಲ್ಲ? ಅದನ್ನಾದರೂ ಮಾಡಬಹುದಾಗಿತ್ತಲ್ಲ. ನಮ್ಮ ರಾಜ್ಯದ ಹೈಕೋರ್ಟಿನ ಜಸ್ಟೀಸ್ ರಾಮ ಜೋಯಿಸ್ ರವರು ತೀರ್ಮಾನಗಳನ್ನು ಕೊಟ್ಟಿದ್ದಾರೆ. ಕಾರ್ಮಿಕರಿಗೆ ತೊಂದರೆ ಇದೆ. ಇಂಡಸ್ಟ್ರಿಯಲ್ ಡಿಸ್‌ಪ್ಯೂಟ್ ಆಕ್ಟ್ ಪ್ರಕಾರ ಕಾರ್ಮಿಕರಿಗೆ ತೊಂದರೆಯಾದರೆ, ಅವರು ಕೋರ್ಟಿಗೆ ನೇರವಾಗಿ ಹೋಗುವುದಕ್ಕಾಗುವುದಿಲ್ಲ. ಮೊದಲು ಕನ್‌ಸಿಲಿಯೇಷನ್‌ಗೆ ಹೋಗಬೇಕು. ಅಲ್ಲಿಂದ ಲೇಬರ್ ಕೋರ್ಟಿಗೆ ಹೋಗಬೇಕು. ಕೊನೆಗೆ ಕೋರ್ಟಿಗೆ ಹೋಗಬೇಕಾಗಿರುವುದರಿಂದ ಕಾರ್ಮಿಕರಿಗೆ ಬಹಳ ತೊಂದರೆಯಾಗುತ್ತದೆ. ನೇರವಾಗಿ ಅವನು ಕೋರ್ಟಿಗೆ ಹೋಗುವ ಅಧಿಕಾರವನ್ನು ಕೊಡಬೇಕೆಂದು ಸರ್ವೇಸಾಧಾರಣವಾದ ಅಭಿಪ್ರಾಯ ನಮ್ಮ ದೇಶದಲ್ಲಿ ಬಂದಿದೆ. ಅದಕ್ಕಾಗಿ ಕಾನೂನನ್ನು ತಿದ್ದುಪಡಿ ಮಾಡಬೇಕೆಂಬ ಮಾತನ್ನು ಜಸ್ಟೀಸ್ ರಾಮ ಜೋಯಿಸ್ ರವರು ೨-೩ ತೀರ್ಮಾನಗಳಲ್ಲಿ ಹೇಳಿದ್ದಾರೆ. ಆ ರೀತಿ ಹೇಳಿದ ಮೇಲೂ ಸರ್ಕಾರದ ಅಡ್ವೋಕೇಟ್ ಜನರಲ್ ಅವರಿಗೂ ಕೂಡ ಇದನ್ನು ಮಾಡಿ ಎಂದು ಹೇಳುತ್ತಿದ್ದಾರೆ. ಕಾರ್ಮಿಕರಿಗೆ ೮-೧೦ ವರ್ಷಗಳಲ್ಲಿ ಅನ್ಯಾಯವಾಗುತ್ತದೆ. ದೊಡ್ಡ ಕಾನೂನು ಏನಲ್ಲ. ಇದೊಂದು ಸಿಂಪಲ್ ಲೆಜಿಸ್ಲೇಷನ್. ಇದುವರೆವಿಗೂ ಅದನ್ನು ಮಾಡಲಿಲ್ಲ. Justice Sri Ramajois said this must be done. You don't ever care to the Judges verdict. Why do you care for them? It is very important aspect of it. ನಮ್ಮ ಮಾತನ್ನು ನೀವು ಕೇಳಬೇಡಿ. ಅವರ ಮಾತನ್ನಾದರೂ ಕೇಳಬೇಕಲ್ಲವೇ? ಇಂಡಸ್ಟ್ರಿಯಲ್ ಎಂಪ್ಲಾಯಿಮೆಂಟ್ ಸ್ಟ್ಯಾಂಡಿಂಗ್ ಆರ್ಡರ್ ಎಂದು ಇದೆ. ಅದರ ಪ್ರಕಾರ ಸಸ್‌ಪೆನ್ಷನ್ ಪೀರಿಯೆಡ್‌ನಲ್ಲಿ ಅಲೋಯನ್ಸ್ ಕೊಡಬೇಕು ಅದಕ್ಕೊಂದು ತಿದ್ದುಪಡಿಯನ್ನು ತೆಗೆದುಕೊಂಡು ಬನ್ನಿ ಎಂದು ಹೇಳುತ್ತಿದ್ದೇವೆ. ಆ ಬಗ್ಗೆ ಒಂದು ತಿದ್ದುಪಡಿಯನ್ನು ತೆಗೆದುಕೊಂಡು ಬರುವುದಕ್ಕೆ ಸರ್ಕಾರ ತಯಾರಿಲ್ಲ. There is a Central Law...... ಅದೇ ಮಾಡಲ್, ಸ್ಟ್ಯಾಂಡಿಂಗ್ ಆರ್ಡರ್‌ನಲ್ಲಿ ಸೇರಿಸಿಕೊಳ್ಳಬಹುದು, ಸೇರಿಸಿಕೊಳ್ಳದಿದ್ದರೆ ಇಲ್ಲ ಎಂದು ಇದೆ. ಆದ್ದರಿಂದ ಸಸ್‌ಪೆನ್ಷನ್ ಪೀರಿಯೆಡ್‌ನಲ್ಲಿ ಸಬ್ಸಿಸ್ಟೆನ್ಸ್ ಅಲೋಯನ್ಸ್ ಕೊಡಬೇಕೆಂದು ತಿದ್ದುಪಡಿಯನ್ನು ಮಾಡಿದರೆ, ಕಾನೂನಾಗಿ ಪರಿವರ್ತನೆಯಾಗಿ ಮಾಲೀಕರು ಅದನ್ನು ಜಾರಿಗೆ ತೆಗೆದುಕೊಂಡು ಬರಬೇಕಾಗುತ್ತದೆ. ಇದು ಬೇರೆ ರಾಜ್ಯಗಳಲ್ಲಿದೆ. ಆಂಧ್ರ ಪ್ರದೇಶ, ತಮಿಳುನಾಡು, ಕೇರಳಾ ಈ ನೆರೇ ರಾಜ್ಯಗಳಿಂದ ಮಾಹಿತಿಯನ್ನು ತೆಗೆದುಕೊಂಡು ಬನ್ನಿ. ಪಶ್ಚಿಮ ಬಂಗಾಳದಲ್ಲಾದರೆ ಅದು ಕಮ್ಯೂನಿಸ್ಟ್ ರಾಜ್ಯ, ಅಲ್ಲಿ ಮಾಡಿದ್ದಾರೆ ಎಂದು ಹೇಳಬಹುದು, ನೆರೆ ರಾಜ್ಯಗಳಲ್ಲಿ ಏನು ಮಾಡಿದ್ದಾರೆ ಎಂಬುದನ್ನು ನೋಡಿಕೊಂಡು ಬಂದು ಅದನ್ನು ನೀವೂ ಕೂಡ ತೆಗೆದುಕೊಂಡು ಬನ್ನಿ. ಅದನ್ನು ನೀವು ಜಾರಿಗೆ ತೆಗೆದುಕೊಂಡು ಬರದಿದ್ದರೆ ಇಲ್ಲಿ ಬಹಳ ಶೋಚನೀಯವಾದ ಪರಿಸ್ಥಿತಿ ಇದೆ. ಈ ಸರ್ಕಾರ ಹೋಗುವ ರೀತಿಯನ್ನು ನೋಡುವುದಾದರೆ, ನೀವು ಕೊಟ್ಟಿರುವುದನ್ನೆಲ್ಲಾ ಓದಿದ್ದರೆ ಇದು ಮಾಲೀಕರ ಪರವಾದ ಸರ್ಕಾರವಾಗುತ್ತದೆ ಎನ್ನುವ ಅಭಿಪ್ರಾಯಕ್ಕೆ ಬರುವುದಕ್ಕೆ ಅವಕಾಶ ಇದೆ.

೬.೩೦ ಪಿ. ಎಂ.

ಕಾಂಟ್ರಾಕ್ಟ್ ಅಬಾಲಿಷನ್ ಮತ್ತು ರೆಗ್ಯುಲೇಷನ್ ಆಕ್ಟ್ ಎಂದು ಇದೆ. ತಾವು ಕಾನೂನು ಪರಿಣಿತರು ಇರುವುದರಿಂದ ಇದರ ಬಗ್ಗೆ ಹೇಳಬಹುದು. ಅಡ್ವೈಸರಿ ಬೋರ್ಡ್ ಮಾಡಬೇಕೆಂದು ಮಾಡಿದಾಗ ಹಿಂದಿನ ಸರ್ಕಾರದವರು ಅದರಲ್ಲಿ ಯಾರನ್ನು ಹಾಕಿದರು ಎಂದರೆ ಕೆಲಸಗಾರರ ಪ್ರತಿನಿಧಿಯನ್ನು ಹಾಕಿದರು. ಆ ಬಗ್ಗೆ ನಾವು ಕೇಳಿದಾಗ, ಈ ಸರ್ಕಾರ ಮಾಡಿದ್ದಲ್ಲ, ಹಿಂದಿನ ಸರ್ಕಾರ ಮಾಡಿದ್ದು ಎಂದು ಹೇಳಿದರು. ಆಗ ಇವರನ್ನು ಬದಲಾವಣೆ ಮಾಡಿ ಎಂದು ಹೇಳಿದೆವು. ಆದರೆ ಇದುವರೆಗೆ ಏನಾಗಿದೆಯೋ ಗೊತ್ತಿಲ್ಲ. ಇದರ ಬಗ್ಗೆ ನಮಗೆ ಸ್ಪಷ್ಟವಾದ ಅಭಿಪ್ರಾಯ ಕೊಡಬೇಕು. ಹಾಗೆ ಅನೇಕ ಸಮಿತಿಗಳು ಕಾರ್ಮಿಕರಿಗಾಗಿ ಇವೆ. ಅಲ್ಲಿ ಕಾರ್ಮಿಕ ಪ್ರತಿನಿಧಿಗಳನ್ನು ಹಾಕಬೇಕು. ಈ ಪ್ರಕಾರ ಎಲ್ಲಾ ಕೇಂದ್ರ ಕಾರ್ಮಿಕ ಸಂಘಗಳಿಗೂ ಹಾಕಿ ಎಂದು ಹೇಳುತ್ತೇನೆ.

ಇನ್ನು ಕನಿಷ್ಠ ಕೂಲಿ ವಿಷಯದ ಬಗ್ಗೆ ಹೇಳುವುದಾದರೆ ೧೯೪೮ರಲ್ಲಿ ಕನಿಷ್ಠ ಕೂಲಿಯನ್ನು ನಿಗದಿ ಮಾಡಿದರು, ಇದೊಂದು ದೊಡ್ಡ ಚರಿತ್ರೆಯೇ ಇದೆ. ಮಾನ್ಯ ಜಕನೂರ್‌ರವರು ಕಾರ್ಮಿಕ ಮಂತ್ರಿಗಳಾಗಿದ್ದಾಗ ಒಂದು ಕರ್ಮಕಾಂಡವೇ ನಡೆಯಿತು. ಅವರು ಹಣ ತೆಗೆದುಕೊಂಡರು ಎಂದು ಅವರ ಮೇಲೆ ದೊಡ್ಡ ಆರೋಪಣೆಯೇ ಇದೆ. ಲಕ್ಷಾಂತರ ರೂಪಾಯಿಗಳ ಹಣ ಮಾಡಿಕೊಂಡರು ಎಂದು ಪತ್ರಿಕೆಗಳಲ್ಲೆಲ್ಲ ಬಂತು. ಅದರ ಬಗ್ಗೆ ನಾನು ಈಗ ಹೇಳುವುದಕ್ಕೆ ಹೋಗುವುದಿಲ್ಲ. ಅವರು ಮಾಡಿದ್ದಕ್ಕೆ ಪ್ರಾಯಶ್ಚಿತ್ತ ಅನು

ಭವಿಸಿದರು ; ಮತ್ತೆ ಜನ ಯಾರೂ ಅವರಿಗೆ ಓಟು ಹಾಕಲಿಲ್ಲ. ಅದನ್ನು ಇಲ್ಲಿಗೆ ಬಿಡೋಣ. ೧೯೮೨ರಲ್ಲಿ ಕಾರ್ಮಿಕರ ಒಂದು ಕನಿಷ್ಟ ವೇತನವನ್ನು ನಿಗದಿ ಮಾಡಿದರು. ಅದನ್ನು ಮಾಡಿದ ತಕ್ಷಣ ಮಾಲೀಕರು ಹೈಕೋರ್ಟಿಗೆ ಹೋದರು. ಆ ರೀತಿ ಮಾಡಿದ್ದು ಸರಿಯಿಲ್ಲವೆಂದು ಸ್ಟೇ ತಂದರು. ಹೈಕೋರ್ಟ್ ಅದನ್ನು ವಿಮರ್ಶೆ ಮಾಡಿ, ಆ ರೀತಿ ಮಾಡಿದ್ದು ಸರಿಯಲ್ಲ ; ಯಾವ ರೀತಿ ಮಾಡ ಬೇಕಿತ್ತೋ ಆ ರೀತಿ ಮಾಡಿಲ್ಲ ; ಇದಕ್ಕೆ ಮಂತ್ರಿಗಳೇ ಅಧ್ಯಕ್ಷರಾಗಿರುವುದು ಸರಿಯಾದುದಲ್ಲ, ಬೇರೆ ಯವರಿಗೆ ಅವಕಾಶ ಕೊಡಬೇಕು. ಮತ್ತು ಈಗ ಇರುವಂಥ ಕನಿಷ್ಟ ಕೂಲಿಗೂ, ನಿಗದಿ ಮಾಡಿರತಕ್ಕ ಕನಿಷ್ಟ ಕೂಲಿಗೂ ವ್ಯತ್ಯಾಸ ಇರುವುದರಿಂದ ಶೇಕಡ ೫೦ರಷ್ಟು ಹಣವನ್ನು ಎಲ್ಲಾ ಕೈಗಾರಿಕೆಗಳಿಗೂ ಕೊಡ ಬೇಕೆಂದು ಹೇಳಿದರು. ಈ ರೀತಿ ಕೋರ್ಟ್ ತೀರ್ಮಾನವಾಗಿದೆ. ಅದು ಎಷ್ಟರಮಟ್ಟಿಗೆ ಜಾರಿಗೆ ಬಂದಿದೆ ? ಇದು ಅನೇಕ ಕಡೆಗಳಲ್ಲಿ ಜಾರಿಗೆ ಬಂದಿಲ್ಲವೆಂದು ಮಾನ್ಯ ಸಚಿವರ ಗಮನಕ್ಕೆ ನಾನು ತರ ಬಯಸುತ್ತೇನೆ. ಅದೇ ಅವ್ಯಾಹತ ಶೋಷಣೆ, ಅದೇ ಅನ್ಯಾಯ ಅಕ್ರಮಗಳು ಈಗಲೂ ನಡೆಯುತ್ತಿವೆ. ಈ ಸಂಬಂಧದಲ್ಲಿ ನಿವೃತ್ತ ಜಿಲ್ಲಾ ನ್ಯಾಯಾಧೀಶರನ್ನು ಹಾಕಿ ಒಂದು ಸಮಿತಿಯನ್ನು ರಚನೆ ಮಾಡಿದ್ದಾರೆ. ಅವರು ಕೂಡ ಶಿಫಾರಸ್ಸು ಮಾಡಿದ್ದಾರೆ ; ಆ ಶಿಫಾರಸ್ಸನ್ನು ಏತಕ್ಕೆ ಜಾರಿಗೆ ತರಲಿಲ್ಲ ? ಅವರು ೬ ಕೈಗಾರಿಕೆಗಳ ಬಗ್ಗೆ ಶಿಫಾರಸ್ಸು ಮಾಡಿದ್ದಾರೆ. ಇದನ್ನು ಏತಕ್ಕೆ ಜಾರಿಗೆ ತರಲಿಲ್ಲವೆಂಬುದು ನನ್ನ ಪ್ರಶ್ನೆ. ಅಲ್ಲೇ ನನಗೆ ಅನುಮಾನ ಬರುವುದು. ನನ್ನ ಆಪಾದನೆ ಏನೆಂದರೆ ನೀವೂ ಕೂಡ ಅಂದರೆ ನಿಮ್ಮಲ್ಲಿ ಕೆಲವರು ಹಳೇ ರೀತಿಯಲ್ಲಿ ದುಡ್ಡು ಮಾಡಿಕೊಳ್ಳುವುದಕ್ಕೆ ಪ್ರಯತ್ನ ಮಾಡುತ್ತಿದ್ದಾರೋ ಏನೋ ಎಂಬ ಅನುಮಾನ ಬರುತ್ತಿದೆ. ಇದನ್ನು ಏತಕ್ಕೆ ಹೇಳುತ್ತಿದ್ದೇನೆಂದರೆ ೧೯೮೧ರಲ್ಲಿ ಈ ಪ್ರಶ್ನೆ ಬಂದಾಗ ವೇರಿ ಯಬಲ್ ಡಿ.ಎ ಎಂದು ಎರಡು ಪೈಸೆ ಗೊತ್ತು ಮಾಡಿದರು. ಆಮೇಲೆ ಗುಂಡೂರಾಯರ ಸರ್ಕಾರ ಬಂದಮೇಲೆ ಅದನ್ನು ಒಂದು ಪೈಸೆಯಿಂದ ಎರಡು ಪೈಸೆ ಎಂದು ಮಾಡಿದರು ಈ ಬಗ್ಗೆ ಬಹುಪಾಲು ಬಂದ ಸೂಚನೆಗಳಲ್ಲೆಲ್ಲ ೧೯೮೧ರದ್ದೇ ಇರಬೇಕೆಂದು ಇದೆ ; ಅಂದರೆ ಎರಡು ಪೈಸೆಯೇ ಇರಬೇಕೆಂಬ ನೋಟಿಫಿಕೇಷನ್ ಮಾಡಬೇಕೆಂದು ಹೇಳಲಾಗಿದೆ. ಆದರೆ ಅದನ್ನು ಜಾರಿಗೆ ಕೊಡಲಿಲ್ಲ. ಅದರ ಬಗ್ಗೆ ಕೇಳಿದರೆ ಏನು ಹೇಳುತ್ತಾರೆಂದರೆ, ಬೇರೆಯದು ಆಗಲಿ, ಆಮೇಲೆ ನೋಡೋಣವೆಂದು ಹೇಳುತ್ತಾರೆ. ಇದರಿಂದ ಅನುಮಾನಕ್ಕೆ ಆಸ್ಪದವಾಗುತ್ತದೆ. ದಯವಿಟ್ಟು ಇಂಥ ಅನುಮಾನಕ್ಕೆ ಆಸ್ಪದ ಕೊಡಬೇಡಿ. ಯಾವುದು ಆಗಿದೆ ಅದನ್ನು ಪಬ್ಲಿಷ್ ಮಾಡಿ. ಅದನ್ನು ಏತಕ್ಕೆ ತಡೆಹಿಡಿಯುತ್ತೀರಿ ? ಬೇರೆಯದು ಬರಲಿ ಎಂದರೆ ಕಾರ್ಮಿಕರಿಗೆ ಅನ್ಯಾಯವಾಗುತ್ತದೆ ; ಮತ್ತೊಂದು ಕಡೆ ಅನುಮಾನಕ್ಕೆ ಆಸ್ಪದ ವಾಗುತ್ತದೆ. ಪಬ್ಲಿಕ್ ಟ್ರಾನ್ಸ್‌ಪೋರ್ಟ್ ಮತ್ತು ಅಗರಬತ್ತಿ ಕಾರ್ಮಿಕರಿಗೆ ಅನ್ವಯಿಸತಕ್ಕದ್ದು ಏನಿದೆ ಅದನ್ನು ದಯವಿಟ್ಟು ತಕ್ಷಣ ಜಾರಿಗೆ ತರಬೇಕೆಂದು ಹೇಳುತ್ತೇನೆ. ಇದರಲ್ಲಿ ಬೀಡಿ ಕಾರ್ಮಿಕರ ಪ್ರಶ್ನೆ ಬರುತ್ತದೆ. ಪಂಪಾಪತಿಯವರು ಮತ್ತಿತರರು ಬೀಡಿ ಕಾರ್ಮಿಕರ ಕಮಿಟಿಯಲ್ಲಿದ್ದಾರೆ. ಮಾನ್ಯ ಅಜೀಜ್ ಸೇಟರು ಬೀಡಿ ಕಾರ್ಮಿಕರ ಬಗ್ಗೆ ಕಳವಳ ವ್ಯಕ್ತಪಡಿಸುತ್ತಾರೆ. ಏಕೆಂದರೆ ಅವರೇ ಬೀಡಿ ಕಾರ್ಮಿಕರನ್ನು ಸಂಘಟನೆ ಮಾಡಿದವರು. ಅವರಿಗೆ ವಿಷಯವೆಲ್ಲ ಚೆನ್ನಾಗಿ ತಿಳಿದಿದೆ. ಆದರೆ ಅವರಿಗೆ ವಿಷಯ ತಿಳಿ ದಿದ್ದರೂ ಅದನ್ನು ನಿವಾರಿಸುವಷ್ಟು ಕಾನೂನಿನ ವ್ಯವಸ್ಥೆ ಮಾಡಿಲ್ಲ. ಇವೊತ್ತಿನ ದಿವಸ, ಬೀಡಿ ಕಾರ್ಮಿ ಕರಿಗೆ ವಸತಿ ಗೃಹಗಳನ್ನು ಮಾಡಿಕೊಡುತ್ತೇವೆಂದು ಏನು ಹೊರಟ್ಟಿದ್ದಾರೆ ಅದು ನಿಜಕ್ಕೂ ಶ್ಲಾಘನೀ ಯವಾದ ಕೆಲಸ. ಅದೇ ರೀತಿ ಬೇರೆ ಕಾರ್ಮಿಕರಿಗೂ ಮಾಡಬೇಕೆಂದು ಈ ಸಂದರ್ಭದಲ್ಲಿ ಹೇಳಬಯಸುತ್ತೇನೆ, ನೋಟಿಫಿಕೇಷನ್ ಅನ್ನು ಜಾರಿಗೆ ತಂದು ಅಸಂಘಟಿತ ಕಾರ್ಮಿಕರ ಬಗ್ಗೆ ಹೆಚ್ಚಿನ ಗಮನ ಹರಿಸ ಬೇಕಾಗಿದೆ. ಇಲ್ಲದಿದ್ದರೆ, ಬಹಳ ತೊಂದರೆಯಾಗುತ್ತದೆ. ಇನ್ನೊಂದು ಪ್ರಮುಖ ವಿಷಯವೇನೆಂದರೆ, ಮಂತ್ರಿಗಳು ಕಾರ್ಮಿಕರನ್ನು ಮತ್ತು ಮಾಲೀಕರನ್ನು ಕರೆಸಿ, ಮಾಲೀಕರು ಹೇಳುವುದನ್ನು ಮಾತ್ರ ಕೇಳಿದರೆ ಕಾರ್ಮಿಕರಿಗೆ ತೊಂದರೆ ಆಗುತ್ತದೆ.ದೀಪಕ್ ಕೇಸಸ್‌ನಲ್ಲಿ ಆ ರೀತಿ ನಡೆದಿದೆ. ಅದು ಆಗದಂತೆ ನೋಡಿಕೊಳ್ಳುವ ಜವಾಬ್ದಾರಿ ತಮ್ಮ ಮೇಲೆ ಇದೆ. ಇನ್ನು ಅಡ್ಮಿನಿಸ್ಟ್ರೇಷನ್ ಬಗ್ಗೆ ಮಾತ್ರ ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ. ಲೇಬರ್ ಅಡ್ಮಿನಿಸ್ಟ್ರೇಷನ್‌ನಲ್ಲಿ ಮೊದಲಿನಿಂದ ಇದ್ದ ಬೇಡಿಕೆ ಏನೆಂದರೆ ಸರಿಯಾದ ಅಧಿಕಾರಿಗಳನ್ನು ಹಾಕಿ ಎಂದು. ಲೇಬರ್ ಕಮೀಷನರ್ ಮತ್ತು ಅವರ ಕೆಳಗಿನ ಅಧಿಕಾರಿಗಳನ್ನು ಸರಿಯಾದವರನ್ನು ಹಾಕಿ ಎಂಬ ಬೇಡಿಕೆ ಮೊದಲಿನಿಂದಲೂ ಇದ್ದೇ ಇದೆ. ಒಂದೆರಡು ವರ್ಷಗಳಿಗೆಲ್ಲ, ಅಧಿಕಾರಿಗಳನ್ನು ಬದಲಾವಣೆ ಮಾಡುತ್ತೀರಿ ; ಆ ರೀತಿ ಮಾಡಿದರೆ ಅವರಿಗೆ ನಾವು ಪಾಠ ಹೇಳಿ ಕೊಡಬೇಕಾಗುತ್ತದೆ. ಹೀಗಾಗಿ ಕಾರ್ಮಿಕ ಇಲಾಖೆ ಮೇಲಿನಿಂದ ಕೆಳಗಿನವರೆಗೆ ತೊಂದರೆಯಲ್ಲಿದೆ.

ಯಾವ ಸಮಸ್ಯೆಗಳೂ ಇತ್ಯರ್ಥವಾಗುವ ಹಾಗೆ ಇಲ್ಲ. ಕಾರ್ಮಿಕ ಇಲಾಖೆಗೆ ಸಂಬಂಧಪಟ್ಟ ಯಾವುದೇ ಕಛೇರಿಗೆ ಹೋದರೂ ನಮಗೆ ಸಾಕಷ್ಟು ಸಿಬ್ಬಂದಿ ವರ್ಗ ಇಲ್ಲವೆಂದು ಹೇಳುತ್ತಾರೆ. ಸಿಬ್ಬಂದಿ ವರ್ಗದವರು ಸಾಕಷ್ಟು ಮಂದಿ ಇದ್ದರೆ ತಾನೇ ಕೆಲಸ ಸರಿಯಾದ ರೀತಿಯಲ್ಲಿ ನಡೆಯುವುದು ? ಇಲ್ಲಿ ಲೇಬರ್ ಕಮಿಷನರ್‌ರವರಿಗೆ ಮಾತ್ರ ಜೀಪ್ ಕೊಟ್ಟಿದ್ದಾರೆ : ಬೇರೆ ಯಾವ ಅಧಿಕಾರಿಗಳಿಗೂ ಕೊಟ್ಟಿಲ್ಲ. ಅದೇ ಬೇರೆ ಇಲಾಖೆಗಳಲ್ಲಿ ಪ್ರತಿಯೊಬ್ಬ ಅಧಿಕಾರಿಗೂ ಜೀಪ್ ಕೊಡುತ್ತಾರೆ. ಈ ಇಲಾಖೆಯಲ್ಲೂ ಕೂಡ ಬೇರೆ ಇಲಾಖೆಗಳಂತೆ ಪ್ರತಿಯೊಬ್ಬ ಅಧಿಕಾರಿಗೂ ಜೀಪನ್ನು ಕೊಡತಕ್ಕದ್ದು ಅತ್ಯಂತ ಅವಶ್ಯಕ. ಇಲ್ಲದಿದ್ದರೆ ಅವರು ಏನು ಮಾಡುತ್ತಾರೆಂದರೆ, ಕಾರ್ಖಾನೆಯ ಮಾಲೀಕರಿಗೆ ಕಾರು ಕಳುಹಿಸಿ ಎಂದು ಹೇಳಿ ಕಳುಹಿಸುತ್ತಾರೆ. ಅವರು ಕಾರು ತೆಗೆದುಕೊಂಡು ಬಂದಮೇಲೆ ಅಶೋಕ ಹೋಟೆಲಿಗೆ, ವೆಸ್ಟೆಂಡ್ ಹೋಟಲಿಗೆ ಹೋಗುತ್ತಾರೆ. ಅಂದಾಗ ಅಧಿಕಾರಿಗಳಿಗೆ ಮಾಲೀಕರೊಡನೆ ಎಷ್ಟರ ಮಟ್ಟಿಗೆ ಬಾಂಧವ್ಯ ಇರುತ್ತದೆಂಬುದನ್ನು ಲೆಕ್ಕ ಹಾಕಿಕೊಳ್ಳಬಹುದು. ಹೀಗಿರುವಾಗ ಕಾರ್ಮಿಕರ ಸಮಸ್ಯೆಗಳು ಹೇಗೆ ಇತ್ಯರ್ಥವಾಗುತ್ತವೆ: ಇದರಿಂದಾಗಿ ಕಾರ್ಮಿಕರಿಗೆ ಬಹಳ ತೊಂದರೆಯಾಗಿದೆ. ಆದುದರಿಂದ, ಇಲ್ಲಿಯೂ ಕೂಡ ಭ್ರಷ್ಟಾಚಾರ ಇದೆ, ಇಲ್ಲವೆಂದು ಹೇಳುವುದಿಲ್ಲ. ಇದನ್ನು ಬೇಕಾದರೆ ಖಾಸಗಿಯಾಗಿ ಹೇಳುತ್ತೇನೆ. ಇದನ್ನು ತಪ್ಪಿಸಬೇಕಾದರೆ ಸರಿಯಾದ ಅಧಿಕಾರಿಗಳನ್ನು ಹಾಕಬೇಕು ಮತ್ತು ಅವರಿಗೆ ಸಕಲ ಸೌಕರ್ಯಗಳನ್ನು ಕಲ್ಪಿಸಿಕೊಡಬೇಕು. ಒಟ್ಟಿನಲ್ಲಿ, ಕಾರ್ಮಿಕ ಇಲಾಖೆಯಲ್ಲಿ ಡೀ ಕಂಟ್ರೋಲ್, ಅನಾರ್ಕಿ, ಇನ್ಯಾಪ್ಟ್ ಆ್ಯಟಿಟ್ಯೂಡ್ ಇದೆ ಎಂದು ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಷ್ಟಪಡುತ್ತೇನೆ. ಇವತ್ತಿನ ದಿವಸ, ಹೈಕೋರ್ಟಿನಲ್ಲಿ ಬಹಳ ಕೇಸುಗಳು ಪೆಂಡಿಂಗ್ ಇವೆ. ಅದಕ್ಕೆ ಏನಾದರೂ ಮಾಡಬೇಕು. ನಿಮ್ಮ ವರದಿಯಲ್ಲಿ ಕೂಡ ಆ ವಿಚಾರ ಇದೆ. ಕನ್ಸಿಲಿಯೇಷನ್ನಿಗೆ ಬಂದಿರುವ ಮತ್ತು ಉಳಿದಿರುವ ಕೇಸುಗಳು ಪೆಂಡಿಂಗ್ ಇವೆ. ಅದಕ್ಕೆ ಏನಾದರೂ ಒಂದು ಫೋರಂ ಮಾಡಬೇಕಾಗುತ್ತದೆ. ವಕೀಲರನ್ನು ಕೇಳಿ ಫೋರಂ ಮಾಡಿದರೆ ಒಳ್ಳೆಯದೆಂದು ಕಾಣುತ್ತದೆ. ಇಂಡಸ್ಟ್ರಿಯಲ್ ಟ್ರಿಬ್ಯುನಲ್ಸ್ ಮತ್ತು ಲೇಬರ್ ಕೋರ್ಟುಗಳು ಹೈಕೋರ್ಟಿನ ಡಿಸಿಪ್ಲಿನ್‌ನಲ್ಲಿ ಬರುವಂತೆ ಇರಬೇಕು. ಈಗ ಯಾವ ಡಿಸಿಪ್ಲಿನ್‌ನಲ್ಲೂ ಇಲ್ಲ. ಜಿಲ್ಲಾ ನ್ಯಾಯಾಧೀಶರನ್ನು ನೀವು ಕೇಳುವುದಕ್ಕೆ ಅಧಿಕಾರ ಇಲ್ಲ ; ಹೈಕೋರ್ಟ್ ಜಡ್ಜನ್ನಂತೂ ಕೇಳುವ ಹಾಗೇ ಇಲ್ಲವೆಂದು ಕಾನೂನು ಇದೆ. ಆದ್ದರಿಂದ, ಇಲ್ಲಿ ಹೇಳುವವರೂ ಇಲ್ಲ, ಕೇಳುವವರೂ ಇಲ್ಲ. ಎಲ್ಲೆಲ್ಲೂ ಡೈಕೋಟಮಿ ಇದೆ. ಅದು ಹೋಗಬೇಕೆಂದರೆ ಹತೋಟಿ ಇರಬೇಕಾಗುತ್ತದೆ. ಏತಕ್ಕೆ ಕೇಸುಗಳನ್ನು ಇತ್ಯರ್ಥ ಮಾಡುತ್ತಿಲ್ಲ, ಏತಕ್ಕೆ ಇಷ್ಟೊಂದು ಕೇಸುಗಳು ಪೆಂಡಿಂಗ್ ಇವೆ ಎಂದು ಕೇಳಿದರೆ ಆಗುತ್ತದೆ. ಅದನ್ನು ಹೈಕೋರ್ಟಿನವರು ಮಾಡಬೇಕಾಗುತ್ತದೆ ಮತ್ತು ಅದಕ್ಕೆ ಫೋರಂ ಎಸ್ಟಾಬ್ಲಿಷ್ ಮಾಡಬೇಕಾಗುತ್ತದೆ.

ಮಾನ್ಯ ರಾಮಕೃಷ್ಣ ಅವರು ಕರ್ನಾಟಕ ಸೋಪ್ಸ್ ಅಂಡ್ ಡಿಜರ್‌ಜಂಟ್ಸ್ ಬಗ್ಗೆ ಮಾತನಾಡುತ್ತಾ ಹೇಳಿದರು. ಅದು ಬಹಳ ಮುಖ್ಯವಾದ ವಿಷಯ. ಮ್ಯಾನೇಜ್‌ಮೆಂಟ್‌ನವರಿಗೂ ಅವರಿಗೂ ಕ್ಲಾಷ್ ಆಗಿದ್ದರಿಂದ ಅವರನ್ನು ತೆಗೆದುಕೊಂಡು ಹೋಗಿ ಸುಳ್ಳು ಆಪಾದನೆಗಳನ್ನು ಹೊರಿಸಿ ಕೆಲಸದಿಂದ ಕಿತ್ತುಹಾಕಿದ್ದಾರೆ. ಅವರಿಗೆ ಕಲ್ಲು ಹೊಡೆದವರು, ಬಸ್ಸಿಗೆ ಹೊಡೆದರು ಎಂದು ಹೇಳಿದ್ದಾರೆ. ಆದರೆ ಫ್ಯಾಕ್ಟರಿಗೆ ಒಳಗಡೆ ಏನೂ ಜಖಂ ಆಗಿಲ್ಲ. ಸೋವಿಯಟ್ ಡೆಲಿಗೇಟ್ಸ್ ಬಂದಿದ್ದರು. ಎಲ್ಲಾ ಗೇಟ್‌ಗಳ ಮೇಲೆ, ಕಾಂಪೌಂಡ್ ಗೋಡೆ ಮೇಲೆಲ್ಲಾ ಕೆಂಪು ಬಾವುಟಗಳು ತುಂಬಿದ್ದವು. ನಮಗೆ ಸ್ವಾಗತ ಬಯಸುವುದಕ್ಕೋಸ್ಕರ ಹೀಗೆ ಬಾವುಟ ಹಾರಿಸಿದ್ದಾರೆ ಎಂದು ಅವರು ಏನು ತಿಳಿದುಕೊಂಡರು. ಒಳಗೆ ಹೋಗಿ ಅವರು ಇದು ಏನೆಂದು ಕೇಳಿದ್ದಕ್ಕೆ No. They are all rowdies -ಎಂದು ಅಲ್ಲಿಯ ಒಬ್ಬ ಅಧಿಕಾರಿ ಹೇಳಿದ್ದಾರೆ. One of the Officers of the Karnataka Soaps and Detergents has said like that. First he must be dismissed. He deserves to be dismissed whoever he may be and how high he may be. ಇದರ ಬಗ್ಗೆ ನನ್ನ ಆಕ್ರೋಶ ಇದೆ. ಇದು ಅಕ್ಷಮ್ಯ ಅಪರಾಧ ಹಾಗೆಯೇ ಪ್ಲೈವುಡ್ ಫ್ಯಾಕ್ಟರಿ ಇಂಟರ್‌ನ್ಯಾಷನಲ್ ಇನ್‌ಸ್ಟ್ರುಮೆಂಟ್ ಫ್ಯಾಕ್ಟರಿಯಲ್ಲಿ ಹಲವಾರು ಸಮಸ್ಯೆಗಳು ಇವೆ ಅವುಗಳನ್ನು ಇತ್ಯರ್ಥ ಮಾಡುವ ಮನೋಭಾವ ಸರ್ಕಾರಕ್ಕೆ ಇಲ್ಲ ತಿಂಗಳು, ಗಟ್ಟಲೆ ವರ್ಷಗಟ್ಟಲೆ ಅವುಗಳು ಹಾಗೆಯೇ ಉಳಿದಿವೆ ಇದರ ಬಗ್ಗೆ ಕೂಡಲೇ ಕ್ರಮ ತೆಗೆದುಕೊಳ್ಳಬೇಕೆಂದು ನಾನು ಹೇಳುತ್ತೇನೆ. ಸರ್ಕಾರದವರು ಸಂಬಂಧಪಟ್ಟವರನ್ನು ಕರೆಯಿಸಿ ಅವರ ಜೊತೆಯಲ್ಲಿ ಮಾತನಾಡಬೇಕು. ಅದೇ ರೀತಿಯಲ್ಲಿ ಬಾಗಲಕೋಟೆ ಉದ್ಯೋಗ ಇದು ಬಹಳ ಮುಖ್ಯವಾದದ್ದು. All the 6–7

Office-bearers are dismissed. ಆದರೆ ಅಧ್ಯಕ್ಷರು ಎಸ್. ಬಿ. ಪಾಟೀಲ್ ಮಾಜಿ ಲೋಕ ಸಭಾ ಸದಸ್ಯರು. ಬಹಳ ಒಳ್ಳೆಯ ಮನುಷ್ಯ. ಮಾನ್ಯ ವೀರೇಂದ್ರ ಪಾಟೀಲರು ಈ ಸಮಸ್ಯೆಯನ್ನು ಇತ್ಯರ್ಥಗೊಳಿಸಲಿಕ್ಕೆ ಪ್ರಯತ್ನಪಟ್ಟರು. ಆದರೆ ಮಾಲೀಕ, ವೀರೇಂದ್ರ ಪಾಟೀಲರ ಜೊತೆಯಲ್ಲಿ ಮಾತನಾಡಲಿಕ್ಕೆ ಸಿದ್ಧನಿಲ್ಲ. ಮಾಲೀಕರ ಹೆಸರು ಕನೋರಿಯಾ ಎಂದು ಬಹಳ ದೊಡ್ಡ ಶ್ರೀಮಂತ. ನನಗೆ ತಿಳಿದು ಬಂದ ಹಾಗೆ ಆ ಮಾಲೀಕರ ಬಗ್ಗೆ ನಮ್ಮ ಮುಖ್ಯಮಂತ್ರಿಯವರಿಗೆ ಗುರುತು ಇದೆ. ಅವರು ಸ್ವಲ್ಪಮಟ್ಟಿಗೆ ಪ್ರಭಾವ ಬೀರಿ ಮಾತನಾಡಿದರೆ ಸಮಸ್ಯೆ ಇತ್ಯರ್ಥವಾಗಬಹುದೇನೋ. ಏಕೆ ಅವರೊಡನೆ ಇವರು ಮಾತನಾಡಬಾರದು ? ಮಾನ್ಯ ವೀರೇಂದ್ರ ಪಾಟೀಲರ ಜೊತೆಯಲ್ಲಿ ಮಾತ ನಾಡಲಿಕ್ಕೆ ತಯಾರಿಲ್ಲದ ಆತ ರಾಮಕೃಷ್ಣ ಹೆಗಡೆಯವರ ಜೊತೆಯಲ್ಲಿ ಮಾತನಾಡಬಹುದು, ನಮಗೆ ಸಮಸ್ಯೆ ಪರಿಹಾರವಾಗಬೇಕಾದದ್ದು ಮುಖ್ಯ. ಮಾನ್ಯ ಪಾಟೀಲರು ಕಾಂಗ್ರೆಸ್ (ಐ) ಎಂದು ಮಾತ ನಾಡುವುದಕ್ಕೆ ಇಷ್ಟ ತೋರಿಸಿಲ್ಲದೇ ಇರಬಹುದು. ಆದ್ದರಿಂದ ಸರ್ಕಾರದವರು ಈ ಸಮಸ್ಯೆಯನ್ನು ಇತ್ಯರ್ಥಗೊಳಿಸುವ ಮನೋಭಾವ ತೋರಿಸಬೇಕೆಂದು ಹೇಳುವುದಕ್ಕೆ ಇಷ್ಟಪಡುತ್ತೇನೆ. ಇನ್ನು ಕರ್ನಾಟಕ ಸಿಲ್ಕ್ ಮಾರ್ಕೆಟಿಂಗ್ ಬೋರ್ಡ್ ಅಲ್ಲಿ ಒಬ್ಬ ಅಧಿಕಾರಿ ಹೊಸದಾಗಿ ಬಂದಿದ್ದಾರೆ ಹೊಸ ದಾಗಿ ಬಂದಿರುವ ಐ.ಎ.ಎಸ್. ಅಧಿಕಾರಿ ಅಲ್ಲಿಯ ಯೂನಿಯನ್‌ನವರಿಗೆ ಬಹಳಷ್ಟು ಮಟ್ಟಿಗೆ ತೊಂದರೆ ಕೊಡುತ್ತಿದ್ದಾರೆ ಆತ ನೆಗೋಶಿಯೇಟ್ ಮಾಡುವುದಕ್ಕೆ ತಯಾರಿಲ್ಲ. ನಾಲ್ಕನೆಯ ದರ್ಜೆಯ ನೌಕರರೊಬ್ಬರನ್ನು ಬೇರೆ ಊರಿಗೆ ವರ್ಗಾವಣೆ ಮಾಡಿದ್ದಾರೆ. I learnt that he is a throughly communal element. This is an IAS Officer, it appears he is thoroughly communal personality. Please verify. ಇಷ್ಟು ಮಾತ್ರ ಹೇಳಿ ಮಾನ್ಯ ಸೂರ್ಯನಾರಾಯಣರಾವ್ ಅವರು ಪೋಲೀಸರ ಬಗ್ಗೆ ಹೇಳಿದರು. Police interference in labour disputes...ಇದರಿಂದ ಬಹಳ ತೊಂದರೆಯಾಗುತ್ತದೆ ಎಂದು ಹೇಳುತ್ತೇನೆ. ಇವರಿಗೆ ಷಾಕ್ ಟ್ರೀಟ್‌ಮೆಂಟ್ ಕೊಡಬೇಕು. ಇಲ್ಲದಿದ್ದರೆ ಆಗುವುದಿಲ್ಲ. ಮೇಲಿನಿಂದ ಕೆಳಗಿನವರೆಗೆ ಷಾಕ್ ಟ್ರೀಟ್‌ಮೆಂಟ್ ಕೊಡಬೇಕು. From the Minister right down to the Labour Department, this shock treatment is required. ಇದನ್ನು ಮಾಡಿದರೆ ಮಾತ್ರ ಉಪಯೋಗವಾಗುತ್ತದೆ. ಇಲ್ಲದೇ ಹೋದರೆ ನಾವು ಷಾಕ್ ಟ್ರೀಟ್‌ಮೆಂಟ್ ಕೊಡಬೇಕಾಗುತ್ತದೆ. ಇಷ್ಟು ಮಾತ್ರ ಹೇಳಿ ತಾವು ನನಗೆ ಅವಕಾಶ ಮಾಡಿಕೊಟ್ಟಿದ್ದಕ್ಕಾಗಿ ವಂದನೆಗಳನ್ನು ಅರ್ಪಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

† ಶ್ರೀ ವೈ. ಕೆ. ರಾಮಯ್ಯ (ಕುಣಿಗಲ್).—ಸನ್ಮಾನ್ಯ ಅಧ್ಯಕ್ಷರೇ, ಈಗ ಕಾನೂನು ಮತ್ತು ಸಂಸದೀಯ ವ್ಯವಹಾರಗಳು ಮತ್ತು ವಸತಿ ಬಗ್ಗೆ ಮಾತನಾಡಲು ನನ್ನ ಮಟ್ಟಿಗೆ ಕಾಲಾವಕಾಶ ಬಹಳ ಕಡಿಮೆ ಇರುವುದರಿಂದ ಕೇವಲ ವಸತಿ ಡಿಮ್ಯಾಂಡ್ ಬಗ್ಗೆ ಮಾತ್ರ ಮಾತನಾಡುವುದಕ್ಕೆ ಪ್ರಯತ್ನ ಮಾಡುತ್ತೇನೆ. ಸನ್ಮಾನ್ಯ ಅಧ್ಯಕ್ಷರೇ, ಈ ವಸತಿ ಸಮಸ್ಯೆ ಬಹುಶಃ ಹಳ್ಳಿಗಿಂತ ಪಟ್ಟಣಗಳಲ್ಲಿ ಹೆಚ್ಚಾಗಿದೆ. ಕಾರಣ ಇಷ್ಟೇ, ಹಳ್ಳಿಗಳಲ್ಲಿ ನೌಕರರಿಗೆ ಸಣ್ಣ ಒಂದು ಸ್ವಂತವಾದ ಮನೆ ಇದ್ದೇ ಇರುತ್ತದೆ. ಪಟ್ಟಣದಲ್ಲಿ ಈ ಸಮಸ್ಯೆ ಜಾಸ್ತಿಯಾಗಿದೆ. ಕರ್ನಾಟಕ ರಾಜ್ಯದಲ್ಲಿ ಈ ಸಮಸ್ಯೆಯನ್ನು ಬಗೆಹರಿಸಬೇಕೆಂದು, ಹಳ್ಳಿಗಳಲ್ಲಿ ಸರ್ಕಾರದಿಂದ ಬರುವಂಥ ಹಣ ಮತ್ತು ಹುಡ್ಕೋದಿಂದ ಬರುವ ಹಣ ಎರಡನ್ನೂ ಸೇರಿಸಿ ಜನತಾ ಮನೆಗಳನ್ನು ಕಟ್ಟಿಸುತ್ತಿದ್ದಾರೆ. ಪಟ್ಟಣಗಳಲ್ಲಿ ಮನೆ ಕಟ್ಟುವಂಥಹ ಒಂದು ವ್ಯವಸ್ಥೆ ಸುಮಾರು ೧೯೫೬ನೇ ಇಸವಿಯಿಂದ ಮೇಲಾಗಿ ೧೯೮೩ರವರೆಗೆ ಸುಮಾರು ೫೭ ಸಾವಿರ ಮನೆಗಳನ್ನು ಕೊಡಲಾಗಿದೆ. ೧೯೮೩-೮೪ರಲ್ಲಿ ೬ ಸಾವಿರ ಮನೆಗಳನ್ನು ಕೊಡಲಾಗಿದೆ. ಸದಸ್ಯ ರೊಬ್ಬರು ಬಿ.ಡಿ.ಎ. ಹೌಸಿಂಗ್ ಬೋರ್ಡ್‌ನಿಂದ ಏನು ಮಾಡಿದ್ದೀರಿ ಎಂದು ಕೇಳಿದರು. ಇದಕ್ಕಾಗಿ ನಾನು ಹೇಳುತ್ತಿದ್ದೇನೆ. ೧೯೮೩-೮೪ರಲ್ಲಿ ೬ ಸಾವಿರ ಮನೆಗಳನ್ನು ಕಟ್ಟಿದೆ. ೧-೧-೧೯೮೩ ರಿಂದ ೨೮-೨-೧೯೮೪ರವರೆಗೆ ೩ ಸಾವಿರದ ೧೬೭ ಮನೆಗಳನ್ನು ಹೌಸಿಂಗ್ ಬೋರ್ಡಿನಿಂದ ಪಟ್ಟಣ ವಾಸಿಗಳಿಗೆ ಕೊಡುವ ಮನೆಗಳನ್ನು ಹಂಚಿದ್ದೇವೆ. ಮನೆಗಳನ್ನು ಪಡೆಯುವವರಲ್ಲಿ ಎರಡು ವಿಧದವರು ಇದ್ದಾರೆ. ಮೊದಲನೆಯ ವಿಧದ ಜನಕ್ಕೆ ಮನೆಗಳು ಬೇಕಾಗಿರುವುದು ಸಮಾಜದಲ್ಲಿರತಕ್ಕಂಥ ತಮ್ಮ ಸ್ಥಾನಮಾನ ಮತ್ತು ಪ್ರತಿಷ್ಠೆಗಾಗಿ. The House is a symbol of the statusin society. ಆದರೆ, ಇನ್ನೊಂದು ಗುಂಪು ಏನಿದೆ, ಬಿಸಿಲು ಮಳೆಯಿಂದ ತಪ್ಪಿಸಿಕೊಳ್ಳಲಿಕ್ಕೆ, ಕಳ್ಳಕಾಕರಿಂದ ರಕ್ಷಿಸಿಕೊಳ್ಳಲಿಕೆ ಮನೆಬೇಕಾಗಿರುತ್ತದೆ. ಬಹುಶಃ ಸರ್ಕಾರಕ್ಕೆ ಮನೆಗಳನ್ನು ಕೊಡಬೇಕಾಗಿರುವುದು ಈ ಎರಡನೇ

ವರ್ಗಕ್ಕೆ ಹೊರತು ಮೊದಲನೆಯ ವರ್ಗಕ್ಕೆ ಇಲ್ಲ. ಮಾನ್ಯ ಅಧ್ಯಕ್ಷರೇ. ಮಾನ್ಯ ಸದಸ್ಯರಾದ ಕೃಷ್ಣನ್ ಅವರು ಒಂದು ಪತ್ರಿಕೆಯನ್ನು ಓದಿದರು. ಆಗ ನಾನು ಕೂಡ ಅದೇ ಪತ್ರಿಕೆಯನ್ನು ಓದುತ್ತಾ ಕುಳಿತಿದ್ದೆ. ನಿಜ, ಮನೆ ನಿರ್ಮಾಣದ ಬಗ್ಗೆ ಅವರು ಹೇಳಿದ ಹಾಗೆ ಕರ್ನಾಟಕ ಹೌಸಿಂಗ್ ಬೋರ್ಡ್ ಮೇಲೆ ಮೂರು ಪ್ರಧಾನವಾದ ಆಪಾದನೆಗಳು ಇವೆ, ಎರಡು ಪ್ರಭಲವಾದ ಸಮಸ್ಯೆಗಳೂ ಇವೆ. ಸಂಪೂರ್ಣವಾಗಿ ಒಬ್ಬ ಶಾಸಕನಾಗಿ ನಾನು ಇದನ್ನು ಒಪ್ಪುತ್ತೇನೆ. ಕಾರಣ ಇಷ್ಟೇ, ಮೊದಲನೆಯ ಅಪವಾದ ಮನೆಕೊಡುವ ಬಗ್ಗೆ ಏನೆಂದರೆ ಹೇಳಿದ ಹಣಕ್ಕಿಂತ ಹೆಚ್ಚಿಗೆ ಹಣವನ್ನು ವಸೂಲು ಮಾಡುತ್ತಿದ್ದಾರೆ, ಎರಡನೆಯದು ಮನೆ ನಿರೀಕ್ಷಿಸಿದ ಗುಣಮಟ್ಟಕ್ಕಿಂತ ಕಡಿಮೆ ಇರುವುದು, ಮತ್ತು ಮೂರನೇಯದು ಎಷ್ಟು ದಿವಸದಲ್ಲಿ ಮನೆ ಕೊಡುತ್ತೇವೆ ಎಂದು ಹೇಳುತ್ತಾರೆಯೋ, ಅಷ್ಟು ದಿವಸಗಳಲ್ಲಿ ಮನೆ ಕೊಡದೆ ಇರುವುದು. ಇವು ಮೂರು ಪ್ರಧಾನವಾದ ಅಪವಾದಗಳು. ಇನ್ನು ಸಮಸ್ಯೆ ಬಗ್ಗೆ ಹೇಳುವುದಾದರೆ ಉತ್ತಮವಾದ ಗುಣಮಟ್ಟವುಳ್ಳ ಮನೆಯನ್ನು ಕಡಿಮೆ ಬೆಲೆಯಲ್ಲಿ ಕೊಡುವುದು. ಅದೂ ಹಿಂದೆ ನಿಗದಿಯಾದ ಬೆಲೆಗೆ ಈಗ ಕೊಡುವುದು ಕಷ್ಟವಾಗುತ್ತದೆ. ಯಾವುದೇ ಗುಣಮಟ್ಟವುಳ್ಳ ವಸ್ತುವಿಗೆ ಬೆಲೆ ಹೆಚ್ಚಾಗುತ್ತದೆ. ಇದು ಎಲ್ಲರಿಗೂ ತಿಳಿದ ವಿಷಯ. ಬೆಲೆ ಕಡಿಮೆ ಆಗಿರಬೇಕು ಮತ್ತು ಗುಣಮಟ್ಟ ಜಾಸ್ತಿ ಇರಬೇಕು ಎನ್ನುವುದು ಒಂದು ಪ್ರಭಾವಯುತವಾದ ಸಮಸ್ಯೆಯಾಗಿದೆ. ಮಾನ್ಯ ಕೃಷ್ಣನ್ ಅವರು ನುಡಿದಂಥ ಮಾತು ನನಗೆ ಪ್ರಚೋದನೆಯನ್ನು ಕೊಡುತ್ತಿದೆ. ಮನೆಗಳು ಬೀಳುತ್ತಿವೆ ಎಂದು ಅವರು ಹೇಳಿದ್ದಾರೆ. ನಿಜ, ನಾನು ಒಪ್ಪಿಕೊಳ್ಳುತ್ತೇನೆ. ಅವರು ಬೆಳಗಾಮ್‌ನ ಮಾಲಮಾರುತಿಯ ಉದಾಹರಣೆಯನ್ನು ಕೊಟ್ಟರು. ಕರ್ನಾಟಕದ ಜಿಲ್ಲೆಗಳಲ್ಲಿ ಒಂದು ಜಿಲ್ಲೆಯಾದಂಥ ಬೆಳಗಾವ್‌ನಲ್ಲಿ ಮಾಲಮಾರುತಿ ಎಂಬ ಸ್ಥಳ ಇದೆ ಆ ಸ್ಥಳದಲ್ಲಿ ಕರ್ನಾಟಕ ಗೃಹ ನಿರ್ಮಾಣ ಮಂಡಳಿ ಮನೆ ಕಟ್ಟುವುದಕ್ಕೆ ಒಂದು ಸ್ಕೀಮ್‌ನ್ನು ರೆಡಿಮಾಡಿ ಮನೆಗಳನ್ನು ಕಟ್ಟಿದ್ದಾರೆ.

ಈ ಸಂದರ್ಭದಲ್ಲಿ ಮಾನ್ಯ ಕೃಷ್ಣನ್ ಅವರು ಓದಿದ ಪದಗಳನ್ನೇ ನಾನೂ ಕೂಡಾ ಓದುತ್ತೇನೆ.

> "But has the purpose been achieved? May be Yes, because HUDCO has built houses for the economically weaker sections but how could a house is built is a million dollars questions. If this colony continues to be neglected, it will stand as a martyrdom version of Hampi ruins...

ಇದರಲ್ಲಿ ಮಾನ್ಯ ಕೃಷ್ಣನ್ ಅವರು ಏನು ಹೇಳಿದರು ಅದನ್ನು ನಾನು ಸಂಪೂರ್ಣವಾಗಿ ಸಮರ್ಥನೆ ಮಾಡುತ್ತೇನೆ. ಹಾಗೂ ಅದಕ್ಕೆ ಕಾರಣ ಏನು ಎಂದೂ ನಾನು ಹೇಳುತ್ತೇವೆ. ಈ ಮಾಲಮಾರುತಿ ಹಂಪೆಯ ಒಂದು ಪ್ರತಿರೂಪು ಆಗುತ್ತದೆಂದು ಏನು ಪತ್ರಿಕೆಗಳಲ್ಲಿ ವರದಿಯಾಗಿದೆ ಅದಕ್ಕೆ ಕಾರಣ ಇದೆ, ಆ ಸ್ಥಳದಲ್ಲಿ ಸುಮಾರು ೫೭೬ ಮನೆಗಳನ್ನು ೫೮ ಲಕ್ಷ ೫೬ ಸಾವಿರ ರೂಪಾಯಿಗಳ ವೆಚ್ಚದಲ್ಲಿ ಕಟ್ಟುವ ಯೋಜನೆ ತಯಾರು ಆಗಿದೆ. ಹಾಗೂ ಆ ಯೋಜನೆ ಪ್ರಕಾರ ಮನೆಗಳನ್ನು ಕಟ್ಟಿದ್ದಾರೆ. ಯಾವ ಒಂದು ಮಟ್ಟದಲ್ಲಿ ಆ ಮನೆಗಳನ್ನು ಕಟ್ಟಿದ್ದಾರೆ ಎಂಬ ಬಗ್ಗೆ ಇವೊತ್ತು ಹೇಳಬೇಕಾಗುತ್ತದೆ. ನನ್ನ ಒಂದು ೧೦ ತಿಂಗಳ ಅನುಭವದಲ್ಲಿ ಇವೊತ್ತು ಹೇಳುವುದು ಏನೆಂದರೆ, ಈ ದೇಶದಲ್ಲಿ ಸಾರ್ವಜನಿಕರ ಕೆಲಸ, ಸಾರ್ವಜನಿಕರ ಹಣ, ಸಾರ್ವಜನಿಕರ ಆಸ್ತಿ ಬಹುಶಃ ಇವೊತ್ತು ಎಲ್ಲರಿಗಿಂತಲೂ ಹೆಚ್ಚಿನ ತಬ್ಬಲಿಯಾಗಿವೆಂದು ನನಗನ್ನಿಸುತ್ತದೆ. ಈ ದೇಶದಲ್ಲಿ ಸಾರ್ವಜನಿಕರ ಕೆಲಸ, ಸಾರ್ವಜನಿಕರ ಹಣ, ಸಾರ್ವಜನಿಕರ ಆಸ್ತಿ ಯಾವ ರೀತಿ ವ್ಯಯ ಆಗಿದೆ ಎಂಬುದಕ್ಕೆ ಈ ಮಾಲಮಾರುತಿ ಒಂದು ನಿದರ್ಶನ ಎಂದು ನಾನು ಹೇಳುತ್ತೇನೆ. ಇಲ್ಲಿನ ಮನೆಗಳ ಬಗ್ಗೆ ಮಾನ್ಯ ಕೃಷ್ಣನ್ ಅವರು ಬರೀ ವರದಿ ಓದಿದರು. ಆ ಬಗ್ಗೆ ನನ್ನ ಹತ್ತಿರ ಫೋಟೋಗಳೂ ಸಹಾ ಇವೆ. ಅವುಗಳಲ್ಲಿ ನಾಲ್ಕಾರು ಬಿದ್ದಿವೆ, ಹತ್ತಾರು ಗೋಡೆ ಬಿರುಕು ಬಿಟ್ಟಿವೆ, ಹಾಗೂ ಕೆಲವು ಮನೆಗಳ ಗೋಡೆಗಳು ಬಿರುಕು ಬಿಟ್ಟಿವೆ. ಈ ಮನೆಗಳಿಗೆ ಕಿಟಕಿ ಹಾಗೂ ಬಾಗಿಲಿಗೆ ಸ್ಪೆಸಿಫಿಕೇಷನ್ ಪ್ರಕಾರ ನಂದಿ, ಮತ್ತಿ ಮರವನ್ನು ಉಪಯೋಗಿಸಬೇಕಾಗುತ್ತದೆ. ಈ ಮನೆಗಳ ಕಿಟಕಿ ಹಾಗೂ ಬಾಗಿಲುಗಳಿಗೆ ಇವೊತ್ತು ನಂದಿ ಹೋಗಲಿ, ಮತ್ತಿ, ಹಲಸು, ಹುಣಸೆ ಮರಗಳನ್ನು ಹಾಕಿಲ್ಲ. ಅಲ್ಲಿ ಹೊರದೇಶದಿಂದ ಕೆಲವು ಯಂತ್ರಗಳನ್ನು ಏನು ತರಿಸಿಕೊಳ್ಳಲಾಗಿದೆ ಅವಕ್ಕೆ ಸುತ್ತ ಹೊಡೆದಿರುವಂತಹ ಡಾಕಾಯಿ ಪಟ್ಟಿಗಳು ಏನಿವೆ ಅವನ್ನು ತೆಗೆದುಕೊಂಡು ಬಂದು ಇಲ್ಲಿ ಕಿಟಕಿ, ಬಾಗಿಲುಗಳನ್ನು ಮಾಡಿದ್ದಾರೆ. ಈ ಕಿಟಕಿ ಮತ್ತು ಬಾಗಿಲುಗಳಿಗೆ ಹಾಕಿರುವ ಮರಕ್ಕೆ ಆಗಿರುವ

ಬೆಲೆ ಎಷ್ಟು ಗೊತ್ತೇ ? ಇದಕ್ಕಾಗಿ ಕೊಟ್ಟಿರತಕ್ಕ ಹಣ ರೂ. ೫,೧೧, ೨೭೯.೫೮ ಪೈಸೆ ಎಂದು ನಾನು ಹೇಳುತ್ತೇನೆ. ಇದಕ್ಕೆ ನಾನು ಹೇಳಿದ್ದು, ಇವೊತ್ತು ಸಾರ್ವಜನಿಕರ ಹಣ ತಬ್ಬಲಿ ಆಗಿದೆ ಎಂದು. ಇವೊತ್ತು ೫ ಲಕ್ಷ ರೂಪಾಯಿಗಳ ವೆಚ್ಚದಲ್ಲಿ ಜಾಕಾಯಿ ಪಟ್ಟಿಗಳಲ್ಲಿ ಕಿಟಕಿ ಬಾಗಿಲನ್ನು ಬೆಳಗಾಂನಲ್ಲಿ ಇಟ್ಟು ಮನೆಗಳನ್ನು ಕಟ್ಟಿದ್ದಾರೆ. ಈ ವಿಷಯವನ್ನು ನಾನು ನೊಂದು ನುಡಿಯುತ್ತಿದ್ದೇನೆ. ಈ ವಿಷಯದ ಬಗ್ಗೆ ರಾಜಕೀಯವನ್ನು ಬೆರೆಸುವುದು ಬೇಡ. ನಮಗೆ ಗೊತ್ತಿರುವ ಹಾಗೆ ಬೆಳಗಾಂ ಸೆಮಿ ಮಲೆನಾಡು ಆಗಿದ್ದು ಅಲ್ಲಿನ ಜನರಿಗೆ ಕೆಲಸ ಸಿಕ್ಕಿಲ್ಲ. ಬೆಳಗಾಂನ ಕಾಂಟ್ರಾಕ್ಟನ್ನು ಗುಲ್ಬರ್ಗಾದವರು ಹಿಡಿದಿದ್ದಾರೆ. ಇದಕ್ಕೆ ಕಾರಣ ಏನು ಎಂಬುದು ನನಗೆ ಗೊತ್ತಿಲ್ಲ. ಇವೊತ್ತಿನ ದಿವಸ ಆ ಮನೆಗಳಿಗೆ ಫ್ಲೋರಿಂಗ್ ಮಾಡಿರುವುದು ಎಷ್ಟು ಉತ್ತಮವಾಗಿದೆ ಎಂಬುದನ್ನು ನೋಡಬೇಕಾಗುತ್ತದೆ. ಅಲ್ಲಿ ಸ್ಪೆಸಿಫಿಕೇಷನ್ ಪ್ರಕಾರ ಒಂದು ಕೆಲಸವನ್ನೂ ಮಾಡಿರುವುದಿಲ್ಲ. ಪ್ಲಾಸ್ಟಿಂಗ್ ಅಲ್ಲಲ್ಲಿ ಕಿತ್ತು ಬಂದಿರುತ್ತದೆ. ಅಲ್ಲಿ ಬೌಂಡರಿ ಫಿಕ್ಸ್ ಮಾಡುವುದಕ್ಕೆ ಸುಮಾರು ೧,೨೦೦ ಕಲ್ಲುಗಳನ್ನು ನಿಲ್ಲಿಸಿದ್ದಾರೆ. ಇವೊತ್ತಿನ ದಿವಸ ಅವನ್ನು ನಿಲ್ಲಿಸುವುದಕ್ಕೆ ಎಷ್ಟು ಖರ್ಚು ಆಗಿದೆ ಗೊತ್ತೇ ? ಅಲ್ಲಿ ೧ ಕಲ್ಲಿಗೆ ೩೦ ರೂಪಾಯಿಗಳ ಪ್ರಕಾರ ಒಟ್ಟು ೩೦,೪೫೦ ರೂಪಾಯಿಗಳನ್ನು ಕೊಟ್ಟಿದ್ದಾರೆ. ಇವು ಮನೆ ಕಟ್ಟುವ ಕಲ್ಲುಗಳು ಅಲ್ಲ. ಬಂದೋಬಸ್ತ್ ಚಕ್ಕುಬಂಧಿಗೆ ನೆಡುವಂತಹ ಕಲ್ಲುಗಳು ಇವು. ೧ ಕಲ್ಲಿಗೆ ೩೦ ರೂಪಾಯಿಗಳ ಪ್ರಕಾರ ೩೦,೪೫೦ ರೂಪಾಯಿಗಳನ್ನು ಆಗಲೇ ಕೊಡಲಾಗಿದೆ. ಇವೊತ್ತಿನ ಲೆಕ್ಕದ ಪ್ರಕಾರ ಆ ಕಲ್ಲುಗಳಿಗೆ ಒಂದಕ್ಕೆ ಎಷ್ಟೇ ಹೆಚ್ಚು ಕೊಟ್ಟರೂ ೪ ರಿಂದ ೫ ರೂಪಾಯಿಗಳಿಂತ ಹೆಚ್ಚು ಆಗಲಾರದು. ಆ ಬಗ್ಗೆ ಅಲ್ಲಿ ಇಷ್ಟು ಖರ್ಚು ಆಗಿದೆ. ಇನ್ನು ಅಲ್ಲಿ ಮನೆ ಮುಂದೆ ಗಿಡ ನೆಡುವುದಕ್ಕೆಂದು ಗುಂಡಿ ತೋಡುವುದಕ್ಕೆಂದೂ, ಕೆಂಪು ಮಣ್ಣು ಹಾಕುವುದಕ್ಕೆಂದು, ಗಿಡ ನೆಡುವುದಕ್ಕೆಂದೂ ಎಸ್ಟಿಮೇಟ್ ಮಾಡಿದ್ದಾರೆ. ಅಲ್ಲಿ ಹೋಗಿ ನೋಡಿದರೆ ಒಂದೂ ಗಿಡವೂ ಇಲ್ಲ. ಅವು ಎಲ್ಲಿ ಎಂದರೆ ದನಗಳು ತಿಂದಿದ್ದಾವೆನ್ನುತ್ತಾರೆ, ಹೋಗಲಿ ಗುಂಡಿ ತೋರಿಸಿ ಎಂದರೆ, ಮಳೆ ಬಂದು ಮುಚ್ಚಿ ಹೋಗಿವೆ ಎಂದು ಹೇಳುತ್ತಾರೆ. ಸರಿ ಗಿಡ ನೆಡಲು ತಂದ ಕೆಂಪು ಮಣ್ಣು ತೋರಿಸಿ ಎಂದರೆ ಅದೂ ಇಲ್ಲ ಎಂದು ಹೇಳುತ್ತಾರೆ. ಈ ಒಂದು ಕೆಲಸಕ್ಕೆ ಸುಮಾರು ೧೦ ಸಾವಿರ ರೂಪಾಯಿಗಳು ಖರ್ಚು ಆಗಿದೆ. ಇದು ಬೆಳಗಾಂನ ಗತಿ ಆಗಿದೆ. ಇಂತಹ ಕೆಟ್ಟ ಕೆಲಸ ರಾಯಚೂರಿನಲ್ಲಿ ಆಗಿದೆ ಹಾಗೂ ಇನ್ನು ಒಂದೆರಡು ಕಡೆ ಆಗಿದೆ. ಮತ್ತೆಲ್ಲೂ ಈ ರೀತಿ ಆಗಿರುವುದಿಲ್ಲ. ಇನ್ನು ಎರಡನೆಯ ಆಪಾದನೆ ಎಂದರೆ, ಮನೆಗಳ ಗುಣಮಟ್ಟ ಯಾವುದೇ ರೀತಿ ಇದ್ದರೂ ಇವಕ್ಕೆ ಪಡೆಯುತ್ತಿರುವ ಹಣ ಹೆಚ್ಚಾಗುತ್ತಿದೆ ಎಂದು ಹೇಳಿದ್ದಾರೆ. ಈಗ ನಾವು ಏನು ಕಟ್ಟುತ್ತಿದ್ದೇವೆ ಅದಕ್ಕಿಂತ ಹೆಚ್ಚು ಹಣ ಕಟ್ಟಬೇಕಾಗಿದೆ ಎಂದು ಹೇಳಿದರು.

ಶ್ರೀ ಎಂ. ಎಸ್. ಕೃಷ್ಣನ್.—ಈ ದಿನ ಕಟ್ಟಿರುವ ಮನೆಗಳನ್ನು ವಿಲೇವಾರಿ ಮಾಡಿ ಸ್ವಾಮಿ. ಅದೇನೋ ಲಾಟ್ರಿ ಎಂದು ಹೇಳಿ ನಮ್ಮನ್ನೂ ಲಾಟ್ರಿ ಹೊಡೆಸಬೇಡಿ.

ಶ್ರೀ ವೈ. ಕೆ. ರಾಮಯ್ಯ.—ಇವೊತ್ತಿನ ದಿವಸ ಏನು ಹಣವನ್ನು ಕೊಟ್ಟಿದ್ದಾರೆ ಆ ಹಣಕ್ಕೆ ಮನೆಗಳನ್ನು ಅವರಿಗೆ ವಹಿಸಲಾಗುವುದಿಲ್ಲವೆಂಬುದನ್ನು ನಾನು ಒಪ್ಪಿಕೊಳ್ಳುತ್ತೇನೆ. ಈ ಬಗ್ಗೆ ನಾನು ಒಂದು ಉದಾಹರಣೆಯನ್ನು ಕೊಡುತ್ತೇನೆ. ಹಾಸನದಲ್ಲಿ ೧೯೭೫ರಲ್ಲಿ ೧ ಯೋಜನೆಯನ್ನು ತೆಗೆದುಕೊಂಡಿದ್ದೇವೆ. ಆ ಪ್ರಕಾರ ಮೊದಲಿಗೆ ಸುಮಾರು ೮೨೦ ಮನೆಗಳನ್ನು ಕಟ್ಟಬೇಕೆಂದು ಯೋಜನೆ ಮಾಡಲಾಯಿತು. ಆ ಪ್ರಕಾರ ಎಸ್ಟಿಮೇಟ್ ೧೮೩ ಲಕ್ಷ ರೂಪಾಯಿಗಳು ಆಗಿತ್ತು. ಆ ದಿನ ೧ ಮನೆಗೆ ೯,೫೦೦ ರೂಪಾಯಿಗಳು ಇವೊತ್ತು ಅದರ ಬೆಲೆ ೩೫ ಸಾವಿರ ರೂಪಾಯಿಗಳು ಆಗಿದೆ. ಆ ದಿನ ೧೯,೦೦೦ ಸಾವಿರ ರೂಪಾಯಿಗೆ ಒಪ್ಪಿಕೊಂಡ ಮನೆ ಇವೊತ್ತು ೫೫,೦೦೦ ರೂಪಾಯಿಗಳಾಗಿವೆ. ಆ ದಿನ ೩೪,೫೦೦ ರೂಪಾಯಿಗಳ ಬೆಲೆ ಬಾಳುತ್ತಿದ್ದ ಮನೆಗಳು ಇವೊತ್ತು ೯೫ ಸಾವಿರ, ೧ ಲಕ್ಷದ ೧೫ ಸಾವಿರ ರೂಪಾಯಿಗಳ ಬೆಲೆ ಆಗಿದೆ. ಇದು ಏಕಾಯಿತು ಎಂಬ ಬಗ್ಗೆ ಯೋಚನೆ ಮಾಡಬೇಕು. ಅವೊತ್ತು ಏನು ಬೆಲೆಯನ್ನು ನಿಗಧಿ ಮಾಡಿದ್ದೆವೋ ಅಷ್ಟಕ್ಕೇ ಇವೊತ್ತು ಕೊಡುವುದಕ್ಕೆ ಆಗುವುದಿಲ್ಲ. ಇವಕ್ಕೆ ಕೆಲವಾರು ಕಾರಣಗಳು ಇರಬಹುದು. ಈ ಬಗ್ಗೆ ಸ್ಪೆಸಿಫಿಕೇಷನ್ ಬದಲಾವಣೆ ಆಗಿರುತ್ತದೆ. ಅನ್‌ಫೋರ್‌ಸೀನ್ ಎಕ್ಸ್‌ಪೆನ್‌ಸಸ್ ಜಾಸ್ತಿಯಾಗಿರುತ್ತದೆ, ಕಾಸ್ಟ್ ಎಕ್ಸ್‌ಕಲೇಷನ್ ಹೆಚ್ಚಾಗಿರುತ್ತದೆ. ಈ ಖರ್ಚುಗಳ ಬಗ್ಗೆ ನಾನು ಒಪ್ಪಿಕೊಳ್ಳುತ್ತೇನೆ. ಈಗ ನಾನು ಹೇಳತಕ್ಕಂತಹ ಕೆಲವು ಖರ್ಚುಗಳ ಬಗ್ಗೆ ಯಾವ ದೇಶದ ಜನರು ಮನಸ್ಸನ್ನು ಒಲಿಸುವುದಕ್ಕೆ ಸಾಧ್ಯವೋ ನನಗೆ ಗೊತ್ತಾಗುವುದಿಲ್ಲ. ಅಲ್ಲಿ ಕೆರೆ ಹೊಡೆಯುವುದಕ್ಕೆ ೧೩,೮೦೦ ರೂಪಾಯಿಗಳ ಖರ್ಚು ತೋರಿಸಲಾಗಿದೆ. ರೈಲ್ವೇ ಸೇತುವೆ ನಿರ್ಮಾಣಕ್ಕೆ ೫,೨೧,೦೦೦ ರೂಪಾಯಿಗಳ ಖರ್ಚು ತೋರಿಸಲಾಗಿದೆ. ಈ ಮನೆ ಕಟ್ಟುವುದಕ್ಕೂ ಸೇತುವೆ ಕೆಲಸಕ್ಕೂ ಎಲ್ಲಿಯ

ಸಂಬಂಧವೋ ನನಗೆ ಗೊತ್ತಿಲ್ಲ. ಇನ್ನು ರಾಷ್ಟ್ರೀಯ ಹೆದ್ದಾರಿಯಲ್ಲಿ ಸೇತುವೆಯನ್ನು ಅಗಲ ಮಾಡುವುದಕ್ಕೆ ೫,೧೯,೦೦೦ ರೂಪಾಯಿಗಳನ್ನು ಕೊಡಲಾಗಿದೆ. ಮತ್ತು ವಾಟರ್ ವೆಂಟ್ ಬಗ್ಗೆ ೧.೨೫,೦೦೦ ರೂಪಾಯಿ ಹಾಗೂ ವೇಸ್ಟ್ ವೇರ್‌ಗೆ ೧,೩೫.೦೦೦ ರೂಪಾಯಿಗಳ ಖರ್ಚು ತೋರಿಸಲಾಗಿದೆ. ಕೆರೆಯ ಹಿಂದೆ ಕಾಲೋನಿ ಎದ್ದಿರುವುದರಿಂದ ಈ ಖರ್ಚುಗಳು ಆಗಿವೆ.

೭-೦೦ ಪಿ.ಎಂ.

ಶ್ರೀ ಎಂ. ವೀರಪ್ಪ ಮೊಯಿಲಿ.—ಅಧ್ಯಕ್ಷರೆ, ಮಾನ್ಯ ಸದಸ್ಯರು ಕೆಲವು ವಿಚಾರಗಳನ್ನು ಬಯಲಿಗೆ ಎಳೆಯುತ್ತಿದ್ದಾರೆ. ಅವರು ಹೌಸಿಂಗ್ ಬೋರ್ಡ್ ಅಧ್ಯಕ್ಷರಾಗಿದ್ದಾರೆ. ಅವರು ಒಂದು ಎನ್‌ಕ್ವಯರಿ ಇನ್‌ಸ್ಟಿಟ್ಯೂಟ್ ಮಾಡುವುದು ಒಳ್ಳೆಯದು. ಹೌಸಿಂಗ್ ಬೋರ್ಡ್‌ನಲ್ಲಿ ಯಾವ ಕಾರಣದಿಂದ ಇದು ಆಗಿದೆ ಎನ್ನುವುದು ಹೊರಗೆ ಬರಲಿ. ತಮ್ಮಲ್ಲಿ ವಿಚಾರಣೆ ಮಾಡಲಿಕ್ಕೆ ಸಿಬ್ಬಂದಿ ಇಲ್ಲದೆ ಇದ್ದರೆ ಸಿಒಡಿ ಎನ್‌ಕ್ವಯರಿಗೆ ಹಾಕಿ. ಅದು ಬೆಳಗಾಂ ವಿಚಾರವಾಗಲಿ, ರಾಯಚೂರು ವಿಚಾರವಾಗಲಿ ಯಾರು ಮಾಡಿದ್ದಾರೆ ಅವರು ಶಿಕ್ಷೆ ಅನುಭವಿಸಬೇಕು. ತಾವು ಛೇರ್‌ಮನ್‌ರಿದ್ದೀರಿ ತಾವು ಚರ್ಚೆ ಮಾಡುವುದನ್ನು ನಾವು ಸ್ವಾಗತ ಮಾಡುತ್ತೇನೆ. ತಪ್ಪಿತಸ್ಥರು ಯಾರು ಎನ್ನುವುದು ಜನತೆಗೆ ಗೊತ್ತಾಗಬೇಕು. ತಾವು ಮಂತ್ರಿಗಳಿಗೆ ಹೇಳಿ ಸಿಒಡಿ ಯಿಂದ ಎನ್‌ಕ್ವಯರಿ ಮಾಡಲಿಕ್ಕೆ ಇಮಿಡಿಯಟ್ ಆಗಿ ಆರ್ಡರ್ ಮಾಡಿಸಿ.

ಶ್ರೀ ವೈ. ಕೆ. ರಾಮಯ್ಯ.—ಅಧ್ಯಕ್ಷರೆ, ವಿರೋಧ ಪಕ್ಷದ ನಾಯಕರಿಗೆ ನಾನು ಆಭಾರಿಯಾಗಿದ್ದೇನೆ. ಕಾರಣ ಇಷ್ಟೇ, ಅವರು ಕೊಟ್ಟಂಥ ಸಲಹೆ ಬಗ್ಗೆ ನಾನು ಈಗಾಗಲೇ ಸೂಚನೆ ಮಾಡಿದ್ದೇನೆ. ಈ ದಿಸೆಯಲ್ಲಿ ಇಬ್ಬರು ಇಂಜಿನಿಯರುಗಳನ್ನು ಆಗಲೇ ಅಮಾನತ್ತಿನಲ್ಲಿ ಇಟ್ಟಿದ್ದೇವೆ. ಮೈಸೂರು ವಿಷಯದಲ್ಲಿ. ಇನ್ನು ಬೆಳಗಾಂ ವಿಷಯದ ಬಗ್ಗೆ ಈಗಾಗಲೇ ವಿಷಯವನ್ನು ಸಿಒಡಿಗೆ ರೆಫರ್ ಮಾಡಿದ್ದೇವೆ. ಸಿಒಡಿ ಅವರು ಕ್ರಮ ಕೈಗೊಳ್ಳುತ್ತಿದ್ದಾರೆ. ಮಾನ್ಯ ವಿರೋಧ ಪಕ್ಷದ ನಾಯಕರು ಮಾಡಿದಂಥ ಸಜೆಷನ್‌ಗೆ ನಾನು ಆಭಾರಿಯಾಗಿದ್ದೇನೆ.

SRI M. VEERAPPA MOILY.—As Finance Minister in every review I used to whip them up. ನನಗೆ ಗೊತ್ತಿದೆ, ಹೌಸಿಂಗ್ ಬೋರ್ಡ್‌ನಲ್ಲಿ ಬಹಳ ಹೆಗ್ಗಣಗಳು ಇವೆ. ಅದನ್ನು ಬಹಳ ಕ್ಲೀನ್ ಮಾಡುವುದು ಇದ್ದರೆ ಹೌಸಿಂಗ್ ಬೋರ್ಡ್‌ನಿಂದ ಪ್ರಯೋಜನವಾಗುತ್ತದೆ. ಆದ್ದರಿಂದ, ತಾವು ಕ್ರಮ ತೆಗೆದುಕೊಳ್ಳಬೇಕಾಗುತ್ತದೆ.

ಶ್ರೀ ವೈ. ಕೆ. ರಾಮಯ್ಯ.—೧೦ ತಿಂಗಳಿಂದ ಸಮಾಜದಲ್ಲಿ ಜವಾಬ್ದಾರಿ ಹೊತ್ತಂತ ನನಗೆ, ನಾನು ಎಷ್ಟು ಮಾನಸಿಕವಾಗಿ ವ್ಯಥೆಪಟ್ಟನೋ ಅದರ ಬಗ್ಗೆ ಮಾನ್ಯ ಮೊಯಿಲಿಯವರು ಒಂದು ಮಾರ್ಗ ತೋರಿಸಿದ್ದಾರೆ ಅದಕ್ಕೆ ಅವರಿಗೆ ವಂದನೆಗಳನ್ನರ್ಪಿಸುತ್ತೇನೆ. ಈಗ ನಾವು ಒಪ್ಪಿಕೊಂಡ ಸಮಯದಲ್ಲಿ ಕಟ್ಟಿದ ಮನೆಗಳನ್ನು ಸ್ವಾಧೀನಕ್ಕೆ ಕೊಡುತ್ತಿಲ್ಲ ಎನ್ನುವುದು ಇದೆ. ಈ ಸಂಸ್ಥೆಯಿಂದ ನಾವು ೧೯೭೪ನೇ ಇಸವಿಯಲ್ಲಿ ಮನೆಗಳನ್ನು ಅಲಾಟ್ ಮಾಡಿದ್ದೇವೆ. ೧೯೮೨ರಲ್ಲಿ ಸ್ವಾಧೀನಕ್ಕೆ ಕೊಡಲಿಕ್ಕೆ ನನ್ನ ಕೈಯಲ್ಲಿ ಆಗಲಿಲ್ಲ. ಈ ದೇಶದ ಜನರನ್ನು ಒಳ್ಳೆಯವರು ಎಂದು ಕರೆಯುತ್ತೀರೋ, ಕೆಟ್ಟವರು ಎಂದು ಕರೆಯುತ್ತೀರೋ. ಬೇರೆ ಜನ ಆಗಿದ್ದರೆ ಕಲ್ಲು ಹೊಡೆಯುತ್ತಿದ್ದರು, ಕೊಳಪಟ್ಟಿ ಹಿಡಿದುಕೊಳ್ಳುತ್ತಿದ್ದರು. ೧೯೭೪ರಲ್ಲಿ ಹಣ ತುಂಬಿಸಿಕೊಂಡು ಮನೆಗಳನ್ನು ಅಲಾಟ್ ಮಾಡಿ, ಕೆಲವರಿಗೆ ಸಾಕಷ್ಟು ಪ್ರಯತ್ನಪಟ್ಟರೂ, ಎಲ್ಲರಿಗೂ ಮನೆಗಳನ್ನು ಸ್ವಾಧೀನಕ್ಕೆ ಕೊಡಲಿಕ್ಕೆ ಸಾಧ್ಯವಾಗಿಲ್ಲ. ೧೦ ವರ್ಷ ಕಾಲ ಹಣ ಕೊಟ್ಟಿರುವವನು ಈ ಸರ್ಕಾರಕ್ಕೆ ಶಕ್ತಿ ಇಲ್ಲ ಎಂದರೆ ಅದಕ್ಕೆ ಏನು ಹೇಳಬೇಕು ? ಇದು ಬಹಳ ನಿಧಾನವಾಗುತ್ತಿದೆ. ಸರ್ಕಾರ ಯಾವುದೇ ಪಕ್ಷದ ಸರ್ಕಾರ ಆಗಿರಲಿ, ಯಾರೇ ಮಂತ್ರಿಗಳಾಗಿರಲಿ. ಒಂದು ಸಣ್ಣ ಉದಾಹರಣೆ ಕೊಡುತ್ತೇನೆ. ಇದು ಇದುವರೆಗೂ ಯಾರ ಗಮನಕ್ಕೂ ಬಂದಿರಲಿಕ್ಕಿಲ್ಲ. ಮನೆಗಳನ್ನು ಕಟ್ಟುವಾಗ ಬಾಗಿಲುಗಳಿಗೆ ಎರಡು ಕಡೆಗಳಲ್ಲಿ ಕಬ್ಬಿಣದ ರಾಡುಗಳನ್ನು ಹಾಕಬೇಕಾಗುತ್ತದೆ. ಉದಾಹರಣೆಗೆ ಒಂದು ಯೋಜನೆಯಲ್ಲಿ ೬೦೦ ಮನೆಗಳನ್ನು ತೆಗೆದುಕೊಂಡರೆ ಒಂದು ಮನೆಗೆ ೩೦ ಕಬ್ಬಿಣದ ರಾಡುಗಳು ಎಂದು ಹಾಕಿದರೆ ೬೦೦ ಮನೆಗಳಿಗೆ ೧೮ ಸಾವಿರ ಕಬ್ಬಿಣದ ಬಾರ್‌ಗಳು ಬೇಕಾಗುತ್ತದೆ. ಕೆಲವು ಕಡೆ ನೋಡಿದೆ, ಅಲ್ಲಿ ಹಾಕಿರುವಂಥ ಕಬ್ಬಿಣದ ಬಾರ್‌ಗಳು ಎರಡು ರೂಪಾಯಿಗಳು ಐವತ್ತು ಪೈಸೆ. ಟೆಂಡರ್ ಸ್ಪೆಸಿಫಿಕೇಷನ್ ಪ್ರಕಾರ ೮ ರೂಪಾಯಿಗಳು ಇದೆ. ೧೮ ಸಾವಿರ ಕಬ್ಬಿಣದ ಬಾರ್‌ಗಳಿಗೆ ೮ ರೂಪಾಯಿಗಳ ಟೆಂಡರ್ ಪ್ರಕಾರ ಬಿಲ್ ಮಾಡಿದರೆ ಒಂದು ಲಕ್ಷದ ೪೪ ಸಾವಿರ ರೂಪಾಯಿಗಳು ಆಗುತ್ತದೆ. ಹಾಕಿರುವಂಥ ಬಾರ್‌ಗಳ ಬಿಲ್ ಮಾಡಿದರೆ

೪೫ ಸಾವಿರ ರೂಪಾಯಿಗಳು ಆಗುತ್ತದೆ. ಇದು ಒಂದೇ ಐಟಮ್‌ನಲ್ಲಿ ೮೩ ಸಾವಿರ ರೂಪಾಯಿಗಳು ಸೋರಿ ಹೋಗಿದೆ. ಇದಕ್ಕೇ ನಾನು ಹೇಳುವುದು ಏನೆಂದರೆ, ಸಾರ್ವಜನಿಕರ ಹಣ, ಸಾರ್ವಜನಿಕರ ಸ್ವತ್ತು ಯಾರೂ ಕೇಳದೆ ತಬ್ಬಲಿಯಾಗಿದೆ. ಬಹುಶಃ ಇದು ಯಾರಿಗೂ ಸುಲಭವಾಗಿ ಗೊತ್ತಾಗುವುದಿಲ್ಲ. ಇದು ಹೇಗೆ ಗೊತ್ತಾಯಿತು ಎಂದರೆ, ಕೆಲಸ ಮಾಡತಕ್ಕ ಕಂಟ್ರಾಕ್ಟರ್, ಈ ಕೆಲಸ ಆಗುವುದಿಲ್ಲ ಎಂದು ಹೇಳಿದಾಗ, ನನಗೆ ನಂಬಿಕೆ ಬರಲಿಲ್ಲ, ಸ್ಥಳ ಪರೀಕ್ಷೆ ಮಾಡಿದಾಗ ಗೊತ್ತಾಯಿತು. ಇದು ಬಹಳ ಸಣ್ಣದಾಗಿ ಕಾಣುತ್ತದೆ, ೬೦೦ ಮನೆಗಳಿಗೆ ಹಾಕತಕ್ಕ ಕಬ್ಬಿಣದ ಬಾರಿನ ಒಂದು ಸಣ್ಣ ಇನ್‌ಸ್ಟೆನ್ಸ್‌ನಲ್ಲಿಯೇ ೮೩ ಸಾವಿರ ರೂಪಾಯಿಗಳು ಸೋರಿ ಹೋಗಿದೆ. ಇನ್ನು ಕಣ್ಣಿಗೆ ಕಾಣದೆ ಇರುವುದು ಎಷ್ಟು ಇದೆಯೋ ಗೊತ್ತಿಲ್ಲ. ಈ ದೇಶದಲ್ಲಿ ಸಾರ್ವಜನಿಕರು ಬಹಳ ಒಳ್ಳೆಯವರು. ದಾವಣಗೆರೆಯ ನಿಟ್ಟೋಹಳ್ಳಿ ಪ್ರದೇಶದಲ್ಲಿ ೧೯೭೫ರಂದು ಜಮೀನು ಸ್ವಾಧೀನ ಮಾಡಿಸಿಕೊಳ್ಳಬೇಕೆಂದು ಒಂದು ಯೋಜನೆ ತಯಾರು ಮಾಡಿದರು. ಹಣವನ್ನು ಜನರಿಂದ ತುಂಬಿಸಿಕೊಂಡಿದ್ದಾರೆ. ಯಾವುದೋ ಕಾರಣದಿಂದ ಆ ಜಮೀನು ನಮಗೆ ಬೇಕಾಗಿಲ್ಲ ಎಂದು ಬೋರ್ಡ್‌ನಲ್ಲಿ ತೀರ್ಮಾನ ತೆಗೆದುಕೊಂಡಿದ್ದಾರೆ. ಅದೇ ರೀತಿ ತುಮಕೂರಿನಲ್ಲಿ ೧೯೮೦ನೇ ಇಸವಿಯಲ್ಲಿ ಜಮೀನು ಸ್ವಾಧೀನಪಡಿಸಿಕೊಳ್ಳಬೇಕೆಂದು ಪ್ರಯತ್ನ ಮಾಡಿದ್ದಾರೆ. ಎರಡೂ ಕಡೆ ಜಮೀನು ಸ್ವಾಧೀನಕ್ಕೆ ತೆಗೆದುಕೊಳ್ಳಲಿಲ್ಲ, ಹಣವನ್ನು ವಾಪಸ್ಸು ಕೊಟ್ಟಿಲ್ಲ ಅದಕ್ಕೆ ನಾನು ಹೇಳುವುದು ನಮ್ಮ ದೇಶದ ಜನ ಬಹಳ ಒಳ್ಳೆಯ ಜನ ಎಂದು. ನಾಲ್ಕಾರು, ಹತ್ತಾರು ವರ್ಷಗಳ ಕಾಲ ನಾವು ಮನೆಗಳನ್ನು ಕಟ್ಟಿಕೊಡುತ್ತೇವೆ ಎಂದು ಜನರಿಂದ ದುಡ್ಡು ತೆಗೆದುಕೊಂಡು, ಸ್ವಾಧೀನಪಡಿಸಿಕೊಳ್ಳತಕ್ಕ ಜಮೀನನ್ನು ಕೈಬಿಟ್ಟು, ಹಣವನ್ನು ಜನರಿಗೆ ವಾಪಸ್ಸು ಕೊಡದೇ ಇರುವುದು ನೋಡಿದರೆ, ದೇಶದ ಜನ ಒಳ್ಳೆಯವರಲ್ಲವೇನು ? ಇದು ಇದರ ಪರಿಸ್ಥಿತಿ. ಈಗ ಇಲ್ಲಿ ಎರಡು ಉದಾಹರಣೆಗಳನ್ನು ಕೊಟ್ಟಿದ್ದೇನೆ. ಈ ಅವ್ಯವಸ್ಥೆಗೆ ಕಾರಣರು ಯಾರು ? ಅವೊತ್ತು ಇದ್ದಂಥ ಸರ್ಕಾರ ಕಾರಣವೇ ? ಅವೊತ್ತು ಕೆಲಸ ಮಾಡುತ್ತಿದ್ದ ಅಧಿಕಾರಿಗಳು ಕಾರಣರೇ ? ಅವೊತ್ತು ಅಲ್ಲಿದ್ದಂಥ ಛೇರ್‌ಮನ್‌ರು ಕಾರಣರೇ ? ಯಾರು ಕಾರಣ ಎಂದು ನಾನು ಬೆರಳು ಮಾಡಿ ತೋರಿಸಲಿಕ್ಕೆ ಸಿದ್ಧ ಇಲ್ಲ ನನ್ನ ದೃಷ್ಟಿಯಲ್ಲಿ ಒಂದೇ ಒಂದು ಕಾರಣ ಅಂದರೆ ನಾವು ಏನು ಕೆಟ್ಟ ವ್ಯವಸ್ಥೆಯಲ್ಲಿ ಬದುಕುತ್ತಿದ್ದೇವೆ, ಆ ಕೆಟ್ಟ ವ್ಯವಸ್ಥೆಯೇ ಇದಕ್ಕೆ ಕಾರಣ. ತಮ್ಮ ಮನೆ ಮಂದಿ ಸುಖವಾಗಿರಬೇಕೆಂದು, ತಮ್ಮ ಮನೆಗಳನ್ನು, ಕಟ್ಟಿಕೊಳ್ಳಬೇಕೆಂದು, ಕೆಟ್ಟ ರೀತಿಯಲ್ಲಿ ಹಣ ಸಂಪಾದನೆ ಮಾಡಿ, ಸುಖ ಜೀವನ ಅನುಭವಿಸಬೇಕೆಂಬ ಜನ ಎಲ್ಲಿಯವರೆಗೆ ಇರುತ್ತಾರೆ ಅಲ್ಲಿಯವರೆಗೂ ಈ ವ್ಯವಸ್ಥೆ ಸರಿಹೋಗುವುದಿಲ್ಲ. ಅದು ಕಾಂಗ್ರೆಸ್ ಸರ್ಕಾರವಾಗಲಿ, ಜನತಾ ಸರ್ಕಾರವಾಗಲಿ, ಎ, ಮಂತ್ರಿಯಾಗಿರಲಿ, ಅಥವಾ ಬಿ ಮಂತ್ರಿಯಾಗಿರಲಿ, ಯಾರೇ ಛೇರ್‌ಮನ್‌ರಾಗಿರಲಿ, ಅನೈತಿಕ ಮಾರ್ಗದಲ್ಲಿ ಹಣ ಸಂಪಾದನೆ ಮಾಡಿ ಕೆಟ್ಟ ಸುಖ ಅನುಭವಿಸಬೇಕೆನ್ನುವ ಜನ ಎಲ್ಲಿಯವರೆಗೆ ಇರುತ್ತಾರೆ ಅಲ್ಲಿಯವರೆಗೆ ಇದು ಹೋಗುವುದಿಲ್ಲ. ಮಾನ್ಯ ಮೊಯಿಲಿಯವರು ಹೇಳಿದ ಹಾಗೆ ಅಲ್ಲಿರತಕ್ಕ ಸಮಸ್ಯೆ ಬಗ್ಗೆ ಐಡೆಂಟಿಫೈ ಮಾಡುವುದರಲ್ಲಿ ನಾನು ಫಲಪ್ರದನಾಗಿದ್ದೇನೆ. ಇದನ್ನು ಬಗೆಹರಿಸುವುದರಲ್ಲಿ ನಾನು ಸರ್ಕಾರದ ಮತ್ತು ಈ ಮನೆಯ ಸದಸ್ಯರ ಸಹಕಾರವನ್ನು ಕೋರುತ್ತೇನೆ. ಅಲ್ಲಿರುವಂಥ ಹೊಲಸು ತೊಳೆಯಬೇಕಾದರೆ ಡ್ರಾಸ್ಟಿಕ್ ಸ್ಟೆಪ್ಸ್ ಎಂದು ಏನು ಹೇಳುತ್ತಾರೆ ಅದನ್ನು ತೆಗೆದುಕೊಳ್ಳಬೇಕಾಗುತ್ತದೆ. ಮಾನ್ಯ ಮೊಯಿಲಿಯವರಿಗೆ ಒಂದು ಮಾತು ಹೇಳಬೇಕೆಂದರೆ ನನಗೆ ಅಂಜಿಕೆಯಾಗುತ್ತದೆ. ಈ ದೇಶದಲ್ಲಿ ಸಾರ್ವಜನಿಕರ ಹಣವನ್ನು ತಿಂದವರಿಗೆ, ಭ್ರಷ್ಟಾಚಾರಿಗಳಿಗೆ ಶಿಕ್ಷೆ ಕೊಟ್ಟು ನೇಣು ಹಾಕಬೇಕೆಂದರೆ, ಭಾರತ ದೇಶದಲ್ಲಿ ಮರಗಳು ಸಾಲುವುದಿಲ್ಲ. ಇಸ್ರೇಲಿಗೆ ಹೋಗಬೇಕಾಗುತ್ತದೆ. ಇವೊತ್ತು ಎಷ್ಟೋ ಸಿಒಡಿ ಕೇಸುಗಳು ರಾಜಕಾರಣಿಗಳ ಮೇಲೆ, ಅಧಿಕಾರಿಗಳ ಮೇಲೆ ನಡೆದಿದೆ. ಯಾರನ್ನಾದರೂ ಒಬ್ಬರನ್ನು ನೇಣು ಹಾಕಿದ್ದಾರೆಯೇ ? ಡಿಸ್‌ಮಿಸ್ ಮಾಡಿದ್ದಾರೆಯೇ ಈ ದೇಶದಲ್ಲಿ ಅಂಥವರನ್ನು ಎನ್‌ಕ್ವಯರಿಗೆ ಒಳಪಡಿಸಬೇಕು ಒಪ್ಪುತ್ತೇನೆ. ಅದರಿಂದ ಬರತಕ್ಕ ರಿಪೋರ್ಟ್ ಪ್ರಕಾರ ಈ ದೇಶದಲ್ಲಿ ಅವರನ್ನು ದಂಡಿಸುವಂಥ ಕಾನೂನು, ಶಕ್ತಿ ನಮ್ಮಲ್ಲಿ ಇಲ್ಲ. ಈ ವಿಷಯದಲ್ಲಿ ನಾನು ನನ್ನ ವೈಯಕ್ತಿಕವಾಗಿ ಹೇಳುತ್ತಿರುವುದರಿಂದ ಇದು ಸರಿಯೋ ತಪ್ಪೋ ಗೊತ್ತಿಲ್ಲ. ಈ ದೇಶದಲ್ಲಿ ಸಾರ್ವಜನಿಕ ಹಣ ತಿಂದವರಿಗೆ, ಭ್ರಷ್ಟಾಚಾರಿಗಳಿಗೆ, ಶಿಕ್ಷೆಗೆ ಒಳಪಡಿಸುವುದರಲ್ಲಿ, ದಂಡಿಸುವುದರಲ್ಲಿ, ನಾವು ಸೋತಿದ್ದೇವೆ. ಆದ್ದರಿಂದ, ನಾನು ಆ ಕಡೆಗೆ ಹೆಚ್ಚು ಗಮನ ಕೊಡಲಿಕ್ಕೆ ಇಚ್ಛೆಪಡುವುದಿಲ್ಲ. ನಾನು ಸರ್ಕಾರಕ್ಕೆ ಕಳಕಳಿಯಿಂದ ಕೇಳಿಕೊಳ್ಳುತ್ತೇನೆ. ಇನ್ನು ಮುಂದೆ, ಈ ಒಂದು ಅವ್ಯವಸ್ಥೆಯನ್ನು, ಈ ಒಂದು ಕೆಟ್ಟ ಪ್ರವೃತ್ತಿಯನ್ನು ತೆಗೆದುಹಾಕಬೇಕಾಗುತ್ತದೆ. ಅದು ಹೌಸಿಂಗ್ ಬೋರ್ಡ್ ಆಗಿರಲಿ, ಸರ್ಕಾರದ

ಅಧೀನದಲ್ಲಿ ಬರತಕ್ಕ ಯಾವುದೇ ಸಂಸ್ಥೆಯಾಗಿರಲಿ, ಕಣ್ಣಲ್ಲಿ ಕಣ್ಣಿಟ್ಟು, ನಿರ್ದಿಷ್ಟವಾದ ನಿಗಾ ಇಟ್ಟು, ಅದನ್ನು ಸ್ವಚ್ಛವಾಗಿ ನಡೆಸಿಕೊಂಡು ಹೋಗಲಿಕ್ಕೆ ಅವಕಾಶ ಮಾಡಿಕೊಡಬೇಕು. ಇನ್ನು ಈ ಒಂದು ಸಂಸ್ಥೆಯ ಬಗ್ಗೆ ಹೇಳಬೇಕಾದರೆ, ಹೌಸಿಂಗ್ ಬೋರ್ಡ್ ಸ್ವಚ್ಛ ಮಾಡಲಿಕ್ಕೆ, ವ್ಯವಸ್ಥಿತ ರೀತಿಯಲ್ಲಿ ನಡೆಸಿಕೊಂಡು ಹೋಗಲಿಕ್ಕೆ ಏನೇನು ಆಗಬೇಕು ಅದರ ಬಗ್ಗೆ ಸರ್ಕಾರದ ಮುಂದೆ ಅನೇಕ ವಿಷಯಗಳು ಇವೆ. ಆ ವಿಷಯಗಳ ಬಗ್ಗೆ ಸರ್ಕಾರ ಆದಷ್ಟು ಬೇಗ ತೀರ್ಮಾನ ತೆಗೆದುಕೊಂಡು, ಮುಂದೆ ಉತ್ತಮ ಸಂಸ್ಥೆಯಾಗಿ ಬೆಳೆಸಲಿಕ್ಕೆ ಅವಕಾಶ ಮಾಡಿಕೊಡಬೇಕೆಂದು ಹೇಳಿ, ಇಷ್ಟು ಕಾಲ ಮಾತನಾಡಲು ಅವಕಾಶ ಕೊಟ್ಟ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ಎ. ಧನಂಜಯಕುಮಾರ್ (ಮಂಗಳೂರು).—ಸನ್ಮಾನ್ಯ ಉಪಾಧ್ಯಕ್ಷರೆ, ಇವೊತ್ತಿನ ದಿವಸ ವಸತಿ ಇಲಾಖೆ, ವಿಧಾನ ಮಂಡಲದ ಆಡಳಿತ ಇಲಾಖೆ, ಕಾನೂನು ಮತ್ತು ಸಂಸದೀಯ ವ್ಯವಹಾರಗಳು, ಧಾರ್ಮಿಕ ಮತ್ತು ವಕ್ಫ್ ಇಲಾಖೆಯ ಬಗ್ಗೆ ಬೇಡಿಕೆಗಳನ್ನು ಸರ್ಕಾರದವರು ಸಭೆಯ ಮುಂದೆ ಅನುಮೋದನೆಗಾಗಿ ಮಂಡಿಸಿದ್ದಾರೆ. ಸರ್ಕಾರ ತನ್ನ ಸಾಧನೆಗಳ ಬಗ್ಗೆ ದೊಡ್ಡ ದೊಡ್ಡ ಹೇಳಿಕೆಗಳನ್ನು ಮಾಡುತ್ತದೆ. ಪ್ರಚಾರ ಇಲಾಖೆಯ ವತಿಯಿಂದ ಬಹಳಷ್ಟು ಬಣ್ಣ ಬಣ್ಣದ ಮುದ್ರಣಗಳು ಹೊರಗೆ ಬಂದಿವೆ. ನಾವು ಸಾಕಷ್ಟು ಕೆಲಸಗಳನ್ನು ಮಾಡಿದ್ದೇವೆಂದು ಹೇಳಿಕೊಂಡಿದೆ. ಆದರೆ ನನಗನ್ನಿಸುತ್ತದೆ. ವಸತಿ ಇಲಾಖೆಯ ಬಗ್ಗೆ ಹೇಳುವುದಾದರೆ ಸರ್ಕಾರ ಮಾಡಿದಂಥ ಒಂದು ಮಹತ್ತರವಾದ ಸಾಧನೆ ಎಂದರೆ ಕಳೆದ ೨ ವರ್ಷದಲ್ಲಿ ಒಂದು ಹೊಸ ಮನೆಯನ್ನೂ ಕೂಡ ಮಂಜೂರು ಮಾಡದೇ ಇರುವಂಥ ದಾಖಲೆಯನ್ನು ನಿರ್ಮಿಸಿದೆ. ಇನ್ನೊಂದು ಏನೆಂದರೆ ಹಿಂದಿನ ಸರ್ಕಾರದವರು ೧.೨ ಲಕ್ಷ ಮನೆಗಳನ್ನು ಬಡವರಿಗೆ ಕಟ್ಟಿಸಿಕೊಡುತ್ತೇವೆ ಎಂದು ಹೇಳಿದ್ದರೇ ಹೊರತು ಅದಕ್ಕೆ ಹಣವನ್ನೇ ಒದಗಿಸಿರಲಿಲ್ಲ. ಆದರೆ ಆ ಕೆಲಸವನ್ನು ಇವೊತ್ತು ನಾವು ಮಾಡಿ ಜನರಿಗೆ ಮನೆಗಳನ್ನು ಕಟ್ಟಿಸಿಕೊಡಬೇಕಾಗಿದೆ ಎನ್ನುತ್ತಾರೆ. ನಾನಾದರೂ ಹೇಳುತ್ತೇನೆ ನೀವು ಕೇವಲ ಅಧಿಕಾರಕ್ಕೆ ಬಂದರೇ ಸಾಲದು, ನಾವು ಅಧಿಕಾರದಲ್ಲಿದ್ದೇವೆ ಎಂಬುದನ್ನು ಜನರಿಗೆ ತೋರಿಸಿಕೊಡಬೇಕು. ಹೊಸದಾಗಿ ಜನರಿಗೆ ಮನೆಗಳನ್ನು ಮಂಜೂರು ಮಾಡಿ ಅದಕ್ಕೆ ಬೇಕಾದ ಹಣವನ್ನು ನಿರಂತರವಾಗಿ ಒದಗಿಸುವ ಕೆಲಸ ಮಾಡಬೇಕು. ಅದು ಯಾವುದೇ ಸರ್ಕಾರ ಅಧಿಕಾರದಲ್ಲಿ ಇರಲಿ. ಹೊಸ ಮನೆಗಳನ್ನು ನಿರ್ಮಾಣ ಮಾಡಬೇಕು ಬಡ ಜನರಿಗೆ ಮನಸ್ಸಿನಲ್ಲಿ ಏನಿದೆಎಂದರೆ ಹಿಂದಿನ ಸರ್ಕಾರದವರು ಮನೆಗಳನ್ನು ಮಂಜೂರು ಮಾಡಿದರು, ಆದರೆಈ ಸರ್ಕಾರ ಬಂದ ಮೇಲೆ ಹೊಸದಾಗಿ ಮನೆಗಳು ಸಿಕ್ಕುತ್ತವೆ ಎನ್ನುವ ಆಸೆ ಇದೆ. ಇದನ್ನು ನೀವು ಕಳೆದುಕೊಳ್ಳುವುದಕ್ಕೆ ಹೋಗಬೇಡಿ. ೫೦ ಸಾವಿರ ಮನೆಗಳನ್ನು ಕಟ್ಟಿಸಿಕೊಟ್ಟಿದ್ದೇವೆಂದು ಹೇಳಿದ್ದೀರಿ. ಕನಿಷ್ಟಪಕ್ಷ ಒಂದೊಂದು ತಾಲ್ಲೂಕಿನಲ್ಲಿ ೧೦೦ ಮನೆಗಳನ್ನಾದರೂ ಕಟ್ಟಿಸಿಕೊಡುತ್ತೀರೆಂದು ನಾನು ಅಂದುಕೊಂಡಿದ್ದೆ. ಆದರೆ ನನ್ನ ನಿರೀಕ್ಷೆ ಸಫಲವಾಗಲಿಲ್ಲ. ನನಗೆ ಬಹಳ ನಿರಾಸೆಯಾಗಿದೆ. ನಾನು ತಮ್ಮನ್ನು ಈ ವಿಚಾರದಲ್ಲಿ ಸೇರಿಸಿಕೊಳ್ಳಬೇಕಾಗುತ್ತದೆ. ಮೊನ್ನೆ ನಡೆದ ಚುನಾವಣೆಯ ಸಂದರ್ಭದಲ್ಲಿ ನಮ್ಮ ಕ್ಷೇತ್ರದ ಜನರಿಗೆ ಅನೇಕ ರೀತಿಯ ಭರವಸೆಗಳನ್ನು ಕೊಟ್ಟು ಬಂದಿದ್ದೇವೆ. ನಾವು ನಿಮ್ಮ ಅಭಿವೃದ್ಧಿಯ ಬಗ್ಗೆ ಹೆಚ್ಚು ಆಸಕ್ತಿವಹಿಸಿ ಕೆಲಸ ಮಾಡುತ್ತೇವೆಂದು ಹೇಳಿ ಬಂದಿದ್ದೇವೆ. ಇವೊತ್ತು ಏನೂ ಕೆಲಸವಾಗಿಲ್ಲ ಎಂದರೆ ನಾವು ಅವರಿಗೆ ಏನು ಹೇಳಬೇಕು ? ಇಂಥ ವಿಚಿತ್ರ ಪರಿಸ್ಥಿತಿ ಬಂದಿರುವುದರಿಂದ ನಾನು ತಮ್ಮಲ್ಲಿ ಮನವಿ ಮಾಡಿಕೊಳ್ಳುತ್ತೇನೆ, ಎಷ್ಟು ಮನೆಗಳನ್ನು ಕಟ್ಟಿಸಿಕೊಡಬೇಕೆಂದು ಗುರಿಯನ್ನು ಇಟ್ಟುಕೊಂಡಿತ್ತು ಅದರಲ್ಲಿ ಈಗಾಗಲೇ ಎಷ್ಟು ಮನೆಗಳನ್ನು ಕಟ್ಟಿಸಿಕೊಟ್ಟಿದೆ ಎಂಬುದನ್ನು ನೋಡಿ ಬಾಕಿ ಇರತಕ್ಕ ಮನೆಗಳನ್ನಾದರೂ ಕಟ್ಟಿಸಿಕೊಡಿ. ಹುಡ್ಕೋ ಯೋಜನೆಯ ಮೂಲಕ ೧೬೫೦೦ ಮನೆಗಳನ್ನು ಕಟ್ಟಿಸಿಕೊಡಲು ಇದಕ್ಕೆ ಬೇಕಾದ ಹಣವನ್ನೊದಗಿಸಿಕೊಡಿ. ಇದರ ಜೊತೆಗೆ ನಮ್ಮ ಜಿಲ್ಲೆ, ಕರಾವಳಿ, ಉತ್ತರ ಕನ್ನಡ, ದಕ್ಷಿಣ ಕನ್ನಡ, ಶಿವಮೊಗ್ಗ, ಈ ಜಿಲ್ಲೆಗಳ ಬಗ್ಗೆ ಕೂಡ ವಿಶೇಷ ಗಮನಕೊಡಬೇಕು. ಏಕೆಂದರೆ ಈ ಭಾಗದಲ್ಲಿ ಅತಿವೃಷ್ಟಿ ಬಹಳವಾಗಿ ಇದೆ. ಈ ಬಗ್ಗೆ ನಮ್ಮ ಬೇಡಿಕೆಯನ್ನು ಸರ್ಕಾರದ ಮುಂದಿಟ್ಟಿದ್ದೇವೆ. ಈ ತಾಲ್ಲೂಕಿನಲ್ಲಿ ಅತಿ ಹೆಚ್ಚು ಮನೆಗಳನ್ನು ಕಟ್ಟಿಸಿಕೊಡಬೇಕು. ಅದರಲ್ಲೂ ಈ ರೀತಿ ತೊಂದರೆಗೆ ಒಳಗಾದವರಿಗೋಸ್ಕರ ತಕ್ಷಣ ವಸತಿ ಕಲ್ಪಿಸಲು ಕನಿಷ್ಟ ೨೫೦ ಮನೆಗಳನ್ನಾದರೂ ಕಟ್ಟಿಸಿಕೊಡಬೇಕೆಂದು ಕೇಳಿದ್ದೆವು. ಆದರೆ ಇದುವರೆಗೂ ಇದರ ಬಗ್ಗೆ ಸರ್ಕಾರ ತನ್ನ ಗಮನ ಹರಿಸಿಲ್ಲ. ಈಗಾಲಾದರೂ ಇದರ ಬಗ್ಗೆ ಗಮನಹರಿಸಬೇಕೆಂದು ಕೇಳಿಕೊಳ್ಳುತ್ತೇನೆ. ಇದೇ ರೀತಿ ಜನತಾ ಮನೆಗಳಿಗೆ ಕಾರವಾರ ಜಿಲ್ಲೆಯಲ್ಲಿ ತಲಾ ೪ ಸಾವಿರ ರೂಪಾಯಿಗಳಂತೆ ಏನು ಕೊಡುತ್ತಿದ್ದೀರಿ ಇದನ್ನು ೫ ಸಾವಿರ ರೂಪಾಯಿಗಳಿಗೆ ಏರಿಸಬೇಕು ಏಕೆಂದರೆ ಸ್ವಲ್ಪ ಭದ್ರವಾದ ತಳಹದಿ ಇರತಕ್ಕ ಮನೆಗಳನ್ನಾದರೂ ಕಟ್ಟಿಕೊಳ್ಳಲಿ. ಇವೊತ್ತು ಏನಾಗಿದೆ ಎಂದರೆ ಕೇವಲ

ಮನೆಗಳನ್ನು ಕಟ್ಟಿಸಿಕೊಡಿ ಎಂದು ಕೇಳುತ್ತಿದ್ದೇವೆಯೇ ಹೊರತು ಕಟ್ಟಿಸಿಕೊಟ್ಟ ಮನೆಗಳ ಪೈಕಿ ಎಷ್ಟು ಮನೆಗಳು ಬಿದ್ದುಹೋಗಿವೆ. ಎಷ್ಟು ಮನೆಗಳು ಉಳಿದಿವೆ ಎಂಬುದನ್ನು ಕೇಳುತ್ತಿಲ್ಲ.

ಇನ್ನು ವಸತಿ ಯೋಜನೆಗಳ ಬಗ್ಗೆ ವಿವರಗಳನ್ನು ತಾವು ಹೇಳಿದ್ದೀರಿ. ನಾನ್ ಹಡ್ಕೋ ಮನೆಗಳನ್ನು ಕಟ್ಟಿಸಿಕೊಡತಕ್ಕ ಯೋಜನೆ ನಿಮ್ಮಲ್ಲಿ ಇಲ್ಲ. ಹುಡ್ಕೋ ಯೋಜನೆಯ ಮೂಲಕ ಬ್ಯಾಂಕ್‌ಗಳ ನೆರವಿನಿಂದ ಮನೆಗಳನ್ನು ಕಟ್ಟಿಸಿಕೊಡುತ್ತೇವೆಂದು ಹೇಳುತ್ತಿದ್ದೀರಿ. ಚಿಕ್ಕಪುಟ್ಟ ನಗರ ಸಭೆಗಳು, ಪುರಸಭೆಗಳು ಇರತಕ್ಕ ಕಡೆಗಳಲ್ಲಿ ಭಾಗ್ಯಜ್ಯೋತಿ ಮಂದಿರಗಳು ಎಂದು ಹೇಳುತ್ತಿದ್ದೀರಿ ಸೆಪ್ಟೆಂಬರ್ ೭ರಲ್ಲಿ ಈ ಯೋಜನೆ ಜಾರಿಗೆ ಬಂತು. ಈ ಸಂದರ್ಭದಲ್ಲಿ ೨೫೦೦ ರೂಪಾಯಿಗಳನ್ನು ಏನು ಕೊಡುತ್ತಿದ್ದೀರಿ ಇದರಲ್ಲಿ ೧೦೦೦ ರೂಪಾಯಿ ಸಾಲವೆಂತಲೂ, ೧೫೦೦ ರೂಪಾಯಿಗಳನ್ನು ಸಬ್ಸಿಡಿ ಎಂತಲೂ ಕೊಡುತ್ತಿದ್ದೀರಿ ಹಿಂದಿನ ಸರ್ಕಾರದವರು ಏನೂ ಮಾಡಲಿಲ್ಲ ಎಂದು ಹೇಳಿದರೆ ತಪ್ಪಾಗುತ್ತದೆ. ಹಿಂದಿನ ಸರ್ಕಾರದವರು ಸ್ವಲ್ಪ ಹಣವನ್ನು ಕೊಟ್ಟಿದ್ದಾರೆ. ಎಂದು ಈ ವರದಿಯಿಂದ ಗೊತ್ತಾಗುತ್ತದೆ. ಇಂದಿನ ಸರ್ಕಾರ ಎಷ್ಟು ಕೊಡುತ್ತದೆ. ಎನ್ನುವ ಬಗ್ಗೆ ವಿವರ ಇಲ್ಲ. ನಗರ ಸಭೆಯು ಪ್ರದೇಶದಲ್ಲಿರತಕ್ಕ ಜನರ ಬಗ್ಗೆ ಇವರಿಗೆ ಕಾಳಜಿ ಇರಬೇಕು.

ಇನ್ನು ಕರ್ನಾಟಕ ಹೌಸಿಂಗ್‌ಬೋರ್ಡ್ ಬಗ್ಗೆ ಸಾಕಷ್ಟು ಮಾನ್ಯ ಸದಸ್ಯರು ಮಾತನಾಡಿದ್ದಾರೆ. ಆದ್ದರಿಂದ ನಾನು ಈ ಹೌಸಿಂಗ್ ಬೋರ್ಡ್‌ನ ಬಗ್ಗೆ ಮಾತನಾಡುವುದಕ್ಕೆ ಹೋಗುವುದಿಲ್ಲ. ಹೌಸಿಂಗ್ ಬೋರ್ಡ್‌ನವರು ವಿಶೇಷ ಆಸಕ್ತಿವಹಿಸಿ ಕೆಲಸಮಾಡಬೇಕು. ಮನೆಗಳನ್ನು ಕಟ್ಟುವ ಸಲುವಾಗಿ ಹಣವನ್ನು ಡಿಪಾಜಿಟ್ ಇಡುತ್ತಾರೆ. ೩-೪ ವರ್ಷ ಆದಮೇಲೆ ರೇಟುಗಳು ಜಾಸ್ತಿಯಾಯಿತು ಎಂದು ಮತ್ತೆ ಹಣ ಕೇಳುತ್ತಾರೆ. ಯಾರು ಅರ್ಜಿಗಳನ್ನು ಹಾಕಿಕೊಂಡಿರುತ್ತಾರೆ ಅವರಿಗೆ ಮನೆ ಕಟ್ಟಿಸಿಕೊಡಿ ನಗರ ಪ್ರದೇಶದಲ್ಲಿ ಯಾರು ತಮ್ಮದೇ ಆದ ಮನೆ ಕಟ್ಟಿಸಿಕೊಳ್ಳಬೇಕೆಂದು ಯೋಚನೆ ಮಾಡುತ್ತಾರೆ ಅವರಿಗೆ ಹೌಸಿಂಗ್ ಬೋರ್ಡ್ ಮೂಲಕ ಪ್ರಯತ್ನ ಮಾಡಬೇಕು. ಇದರ ಬಗ್ಗೆ ತೀವ್ರ ಗಮನ ಹರಿಸಬೇಕು.

ಇನ್ನು ಈ ಒಂದು ಸ್ಟೇಟ್ ಲೆಜಿಸ್ಲೇಚರ್ ಬಗ್ಗೆ ಈಗಾಗಲೇ ನಮ್ಮ ಮಿತ್ರರಾದಂಥ ಮಾನ್ಯ ರಾಮಕೃಷ್ಣರವರು ಮಾತನಾಡುತ್ತಿರಬೇಕಾದರೆ, ಹಿಂದಿನ ಸಭಾಧ್ಯಕ್ಷರಾದವರು ಇದರ ಬಗ್ಗೆ ಮಾತನಾಡುವಂಥದ್ದು ಯೋಗ್ಯವಲ್ಲವೆಂದು ಹೇಳುವಂಥ ಒಂದು ಸೂಚನೆಯನ್ನು ಕೊಟ್ಟಿದ್ದಾರೆ. ಅದಕ್ಕಾಗಿ ಮಾತನಾಡುವುದು ಬೇಡವೆಂದು ಮಂತ್ರಿಗಳ ಸೂಚನೆಯೂ ಕೂಡ ಬಂದಿದೆ ನಾನು ತೀವ್ರವಾಗಿ ಈ ವಿಚಾರದಲ್ಲಿ ಮಾತನಾಡಲಿಕ್ಕೆ ಹೋಗದಿದ್ದರೂ ಬಹುಶಃ ಈ ಒಂದು ಸ್ಟೇಟ್ ಲೆಜಿಸ್ಲೇಚರ್ ಬಗ್ಗೆ ಎಲ್ಲರೂ ಹೇಳಿರುವಂತೆ ಇದರ ಅಡ್ಮಿನಿಸ್ಟ್ರೇಷನನ್ನು ಸ್ವಾಯತ್ತತೆ ಮಾಡಬೇಕು. ಅವರದೇ ಕಂಟ್ರೋಲ್ ಇರುವ ರೀತಿಯಲ್ಲಿ ಆಗಬೇಕು ಎನ್ನುವ ಮಾತನ್ನು ನಾವು ಒಪ್ಪುವಂತದ್ದಾಗಿರುತ್ತದೆ. ಇದರ ಬಗ್ಗೆ ಶೀಘ್ರವಾಗಿ ಗಮನ ಹರಿಸುತ್ತಾರೆಂದು ನಾವು ತಿಳಿದುಕೊಂಡಿರುತ್ತೇವೆ. ನಮ್ಮ ವಿಧಾನ ಮಂಡಲಕ್ಕೆ ಸಂಬಂಧ ಪಟ್ಟಿರುವಂತೆ ಇದರ ಸಚಿವಾಲಯದ ಸಿಬ್ಬಂದಿಯನ್ನು ನಾವು ನೋಡುತ್ತಾ ಇದ್ದೇವೆ. ಇವರು ಬೆಳಿಗ್ಗೆ ೮-೯ ಗಂಟೆಗೆ ಬರಬೇಕಾದ ಸಂದರ್ಭಗಳಿರುತ್ತದೆ, ಬೆಳಿಗ್ಗೆ ೮-೯ ಗಂಟೆಗೆ ಸಭೆಯು ಪ್ರಾರಂಭವಾದರೆ ರಾತ್ರಿ ೯-೦೦ ಗಂಟೆಗಳವರೆಗೆ ನಡೆಯುತ್ತದೆ. ಇಂಥ ಸಂದರ್ಭದಲ್ಲಿ ಇಲ್ಲಿಯ ಸಿಬ್ಬಂದಿ ವರ್ಗದವರಿಗೆ ವಿಶೇಷವಾದ ಸೌಲಭ್ಯಗಳನ್ನು ಕೊಡಬೇಕು ಸರ್ಕಾರ ಇತ್ತಕಡೆ ಗಮನ ಹರಿಸಬೇಕು. ಯಾರಿಂದ ಹೆಚ್ಚಿನ ಕೆಲಸವನ್ನು ನಿರೀಕ್ಷಣೆ ಮಾಡುತ್ತೇವೆಯೋ ಅವರ ಬಗ್ಗೆ ಸ್ವಲ್ಪ ಅನುಕಂಪವನ್ನು ತೋರಿಸ ತಕ್ಕಂಥದ್ದು ಬಹಳ ಅವಶ್ಯಕತೆ ಇರುತ್ತದೆ. ಆದ್ದರಿಂದ ಅದನ್ನು ಕಡ್ಡಾಯವಾಗಿ ಸರ್ಕಾರದವರು ಮಾಡುತ್ತಾರೆಂದು ನಿರೀಕ್ಷೆ ಮಾಡುತ್ತೇನೆ.

ಇನ್ನು ನ್ಯಾಯಾಂಗ ಇಲಾಖೆ ಈ ಒಂದು ಇಲಾಖೆಯ ಬಗ್ಗೆ ಹೇಳುವುದಾದರೆ ಇವೊತ್ತಿನ ದಿವಸ ಬಡವರಿಗೆ ನ್ಯಾಯವೇ ದೊರಕುವುದಿಲ್ಲ. ಎನ್ನುವ ಕೂಗು ಕೇಳುತ್ತಾ ಇದೆ. ವಕೀಲರು ಆದಂತ ವರಿಂದಲಾದರೂ ಕೊನೆಯ ಪಕ್ಷ ನ್ಯಾಯಾಲಯದಲ್ಲಿ ನ್ಯಾಯ ದೊರಕುತ್ತದೆ ಎಂದು ಆಶಯ ಇಟ್ಟು ಕೊಂಡರು ನ್ಯಾಯಾಲಯದಲ್ಲಿ ಹೋದರೂ ನ್ಯಾಯ ದೊರೆಯುತ್ತಿಲ್ಲ. ನ್ಯಾಯಾಲಯಗಳಲ್ಲಿ ನ್ಯಾಯ ಮೂರ್ತಿಗಳೇ ಇರುವುದಿಲ್ಲ. ಅನೇಕ ಕೋರ್ಟುಗಳಲ್ಲಿ ನ್ಯಾಯಾಧೀಶರೇ ಇಲ್ಲದೆ ಕೋರ್ಟಿನ ವ್ಯವಹಾರ ನಡೆಯುವ ಸ್ಥಿತಿಯಲ್ಲಿಲ್ಲ. ವರ್ಷ ವರ್ಷ ಕೊಡುತ್ತಿರತಕ್ಕಂಥ ವರದಿಯನ್ನು ನೋಡಿದರೆ ಉಚ್ಚ ನ್ಯಾಯಾಲಯದಿಂದ ಹಿಡಿದು ಕೆಳಗಿನ ನ್ಯಾಯಾಲಯದವರೆಗೂ ಇರತಕ್ಕಂಥ ಕೇಸ್‌ಗಳ ಸಂಖ್ಯೆ ಬಹು

ಮಟ್ಟಿಗೆ ಜಾಸ್ತಿಯಾಗುತ್ತಾ ಹೋಗುತ್ತಿದೆ. ಈ ರೀತಿಯಲ್ಲಿ ಮುಂದುವರಿಯುತ್ತಲೇ ಹೋದರೆ ನ್ಯಾಯಾಂಗದಲ್ಲಿ ನ್ಯಾಯ ಸಿಗುವಂಥದ್ದು ಬಹಳ ಕಷ್ಟವಾಗುತ್ತದೆಂದು ನನಗನ್ನಿಸುತ್ತದೆ. ನ್ಯಾಯಾಲಯದ ಬಗ್ಗೆ ಒಂದು ಗಾಥೆಯನ್ನು ಹೇಳುತ್ತಾರೆ. Sir, there is a saying Justice delayed is justice denied.

ಈ ರೀತಿಯಲ್ಲಿ ಎಷ್ಟು ನಿಧಾನವಾಗಿ ನ್ಯಾಯವನ್ನು ಕೊಡಲಿಕ್ಕೆ ಸಾಧ್ಯವಾಗುತ್ತದೋ ಅಷ್ಟು ನಿಜವಾಗಿಯೂ ನ್ಯಾಯ ಸಿಗುವಂಥದ್ದು ಕಷ್ಟವಾಗುತ್ತದೆ. ಮಾನ್ಯ ಮಂತ್ರಿಗಳು ಇದರ ಬಗ್ಗೆ ಯೋಚನೆ ಮಾಡಬೇಕು.

SRI A. LAKSHMI SAGAR.—But, similarly it is equally true that ' Justice hurried is justice burried '.

ಶ್ರೀ ವಿ ಧನಂಜಯಕುಮಾರ್.—ಇಲ್ಲಿ ವಾದ ವಿವಾದಕ್ಕೆ ಅವಕಾಶವಿರುತ್ತದೆ. ನಾವು ನೀವು ವಾದ ವಿವಾದವನ್ನು ಮಾಡಿಕೊಂಡು ಹೋದರೆ ಕಕ್ಷಿಗಾರ ಬರುತ್ತಾನೆ. ಅವನು ನ್ಯಾಯ ಸಿಗಬೇಕೆಂದು ಕೇಳುತ್ತಾನೆ. ಅವನಿಗೆ ನ್ಯಾಯ ಸಿಗಬೇಕಾದರೆ ಸರ್ಕಾರ ಮಾಡಬೇಕಾದ ತನ್ನ ಕರ್ತವ್ಯವನ್ನು ತಾನು ಮಾಡಬೇಕು. ಸರಿಯಾದ ಸಿಬ್ಬಂದಿವರ್ಗವನ್ನು ನೇಮಕ ಮಾಡತಕ್ಕಂಥ ಆ ಒಂದು ಕೆಲಸವನ್ನಾದರೂ ಮಾಡಬೇಕು. ಜೊತೆಗೆ ಸರ್ಕಾರವೇ ಒಂದು ದೊಡ್ಡ ಕಕ್ಷಿಗಾರನಂತಾಗಿರುತ್ತದೆ. ಸರ್ಕಾರವೇ ಅನೇಕ ಮೊಕದ್ದಮೆಗಳಲ್ಲಿ ಒಂದು ಪಕ್ಷವಾಗಿರತಕ್ಕಂಥದ್ದನ್ನು ನಾವು ನೋಡಿದ್ದೇವೆ. ಇದಕ್ಕೆ ಕಾರಣ ಕಾನೂನು ವ್ಯವಸ್ಥೆ. ಪ್ರತಿವರ್ಷವೂ ವಿಧಾನಮಂಡಲದಲ್ಲಿ ಹೊಸ ಹೊಸ ಕಾನೂನುಗಳನ್ನು ರಚನೆ ಮಾಡುತ್ತಿರುತ್ತೇವೆ, ಈ ಕಾನೂನುಗಳನ್ನು ಜಾರಿಗೆ ತರತಕ್ಕಂಥ ಸಂದರ್ಭಗಳಲ್ಲಿ ತೊಡಕುಂಟಾಗಿ ಸಾಧಾರಣವಾಗಿ, ನ್ಯಾಯಾಲಯವನ್ನು ಮೊರೆಹೋಗುವಂಥ ಪರಿಸ್ಥಿತಿಗಳು ಬರುತ್ತವೆ. ಅದಕ್ಕಾಗಿ ಸರ್ಕಾರದ ಪರವಾಗಿ ವಾದಮಾಡಲಿಕ್ಕೆ ಇರತಕ್ಕಂಥ ವಕೀಲರ ನೇಮಕಾತಿಯೂ ಕೂಡ ವಿಳಂಬವಾಗುತ್ತಿರುವುದನ್ನು ನಾವು ನೋಡುತ್ತಿದ್ದೇವೆ. ಇದರ ಬಗ್ಗೆ ಸರ್ಕಾರ ತೀವ್ರ ಗಮನವನ್ನು ಹರಿಸಬೇಕು, ಇಲ್ಲದಿದ್ದರೆ ಮುಂದೆ ನ್ಯಾಯವೇ ಸಿಗುವುದಿಲ್ಲ ಎನ್ನುವ ಕಲ್ಪನೆ ಸಮಾಜದಲ್ಲಿ ಉಂಟಾಗಬಹುದು. ಅಂಥ ಒಂದು ದಿವಸ ಬರಬಹುದು. ಆಗ ಒಂದು ಗಂಭೀರವಾದ ಪರಿಣಾಮ ಉಂಟಾಗಬಹುದು, ಅದು ಆಗಬಾರದೆಂದು ಈ ಸಂದರ್ಭದಲ್ಲಿ ನಾನು ಹೇಳಬಯಸುತ್ತೇನೆ.

ಇನ್ನು ಮಾನ್ಯ ಸಚಿವರಿಗೆ ಸಂಕಷ್ಟ ಪರಿಹಾರದ ಒಂದು ಜವಾಬ್ದಾರಿಯೂ ಕೂಡ ಇದೆ. ಅವರೇ ಸ್ವತಃ ಹೇಳಿರುತ್ತಾರೆ, ಅವರು ಸಂಕಷ್ಟ ಸಚಿವರಾಗಿ ಅವರ ಸಂಕಷ್ಟವನ್ನು ಪರಿಹಾರ ಮಾಡಿಕೊಳ್ಳುವುದು ಕಷ್ಟವಾಗಿದೆ ಎಂದು ಹೇಳತಕ್ಕಂಥದ್ದು ಇದೆ. ಕೇವಲ ಹೆಸರಿಗೆ ಮಾತ್ರ ಈ ಇಲಾಖೆ ಇದೆ. ಅದಕ್ಕೆ ಬೇಕಾದಂಥ ವ್ಯವಸ್ಥೆ ಇಲ್ಲ. ಅದಕ್ಕೆ ಬೇಕಾದಂಥ ಸಿಬ್ಬಂದಿ ನೇಮಕವಾಗಿಲ್ಲ. ಇದು ಒಂದು ಪೋಸ್ಟ್ ಆಫೀಸ್ ರೀತಿಯಲ್ಲಿ ಕೆಲಸ ಮಾಡುತ್ತಿದೆ. ನಮಗೆ ರಸ್ತೆ ಬೇಕು, ನಮಗೆ ಇಂಥ ಕಷ್ಟ ಇದೆ ಎಂದು ಪತ್ರವನ್ನು ಬರೆದರೆ ಆ ಪತ್ರವನ್ನು ಬರೆ ಸಂಬಂಧಪಟ್ಟ ಇಲಾಖೆಗೆ ಕಳುಹಿಸಿರುತ್ತೇನೆಂದು ಉತ್ತರ ಬರೆಯುತ್ತಾರೆಯೋ ಹೊರತು ಮತ್ತೇನೂ ಇಲ್ಲ. ಅವರ ಸಂಕಷ್ಟ ಯಾವಾಗ ಪರಿಹಾರವಾಗುತ್ತದೆ. ಯಾರು ಪರಿಹಾರ ಮಾಡುತ್ತಾರೆ ? ಯಾವ ರೀತಿ ಪರಿಹಾರವಾಗುತ್ತದೆ. ಎನ್ನುವ ಬಗ್ಗೆ ವಿವರಣೆಯನ್ನು ಕೊಡಬೇಕು. ಈ ಒಂದು ವರ್ಷದಲ್ಲಿ ಸಂಕಷ್ಟಗಳು ಬಹಳ ಜಾಸ್ತಿಯಾಗಿರುತ್ತದೆ. ಮಾನ್ಯ ಮಂತ್ರಿಗಳು ಇದರ ಬಗ್ಗೆ ತೀವ್ರವಾದ ಗಮನವನ್ನು ಹರಿಸಬೇಕು. ಅವರು ನಿಮಗೆ ಭರವಸೆ ಕೊಡುತ್ತಿದ್ದೇನೆ. ಪರಿಶೀಲಿಸುತ್ತೇನೆ. ಈ ರೀತಿಯಲ್ಲಿ ಪರಿಶೀಲನೆ ನಡೆದರೆ ಬಹುಶಃ ಪರಿಹಾರವಾದರೂ ಸಿಗುವಂಥದ್ದು ಬಹಳ ಕಷ್ಟವಾಗುತ್ತದೆ, ಆದ್ದರಿಂದ ಮಾನ್ಯ ಮಂತ್ರಿಗಳು ಇದರ ಬಗ್ಗೆ ಹೆಚ್ಚಿನ ನಿಗವಹಿಸಬೇಕೆಂದು ಕೇಳಿಕೊಳ್ಳುತ್ತೇನೆ. ಮಾನ್ಯ ಸಚಿವರು ಅವರ ಖಾಯಂ ಖಾತೆಯ ಜೊತೆಗೆ ಹಂಗಾಮಿ ಖಾತೆಯನ್ನು ವಹಿಸಿಕೊಂಡಿರುತ್ತಾರೆ. ನಾನು ಅದರ ಬಗ್ಗೆ ಬಹಳ ಕನಿಕರದಿಂದ ಹೇಳಬೇಕಾಗಿದೆ. ಈ ಒಂದು ಖಾತೆ ಕಾರ್ಮಿಕ ಮತ್ತು ವಕ್ಫ ಖಾತೆಯಾಗಿರುತ್ತದೆ, ಇದರ ಜವಾಬ್ದಾರಿಯನ್ನು ಹಂಗಾಮಿಯಾಗಿ ವಹಿಸಿಕೊಂಡಿದ್ದಾರೆಂದು ಗೊತ್ತಾಯಿತು. ಇವರು ಸಾಕಷ್ಟು ಪರಿಣತರು. ವಿಚಾರಗಳನ್ನು ತಿಳಿದುಕೊಂಡಿರುತ್ತಾರೆ. ನಾವು ಇಲ್ಲಿ ಏನಾದರೂ ಕೇಳುವಾಗ, ಅದಕ್ಕೆ ಪರಿಹಾರವನ್ನು ಮಾಡುವಂಥ ಸೂಚನೆಗಳನ್ನು ಗಮನದಲ್ಲಿಟ್ಟುಕೊಂಡು ಅದಕ್ಕೆ ಸೂಕ್ತ ಪರಿಹಾರವನ್ನು ಕೊಡುತ್ತಾರೆಂದು ನಿರೀಕ್ಷೆ ಮಾಡುತ್ತೇವೆ. ಇವೊತ್ತು ಬಹಳ ವಿಷಾದದಿಂದ ಹೇಳ

ಬೇಕಾಗಿದೆ, ಈ ಒಂದು ಇಲಾಖೆಯನ್ನು ನೋಡುತ್ತಿರುವಂಥವರು ಸನ್ಮಾನ್ಯ ಸಚಿವರು ಬಹಳ ಬೇಜವಾಬ್ದಾರಿಯಿಂದ ನೋಡುತ್ತಿರತಕ್ಕಂಥ ಪರಿಸ್ಥಿತಿ ನಿರ್ಮಾಣವಾಗಿದೆ. ಶಾಸನ ಸಭೆಯ ಸದಸ್ಯರಾಗಿ ಇರತಕ್ಕಂಥವರು ನಾವು ಈ ಸಭೆಯಲ್ಲಿ ನಮಗೆ ಜವಾಬ್ದಾರಿ ಇದೆ, ಹಕ್ಕಿದೆ ಎಂದು ತಿಳಿದುಕೊಂಡು ಕೆಲಸ ಮಾಡಬೇಕಾಗಿದೆ. ನಾವು ಸಾಮಾನ್ಯ ಜನರ ಹತ್ತಿರ ಹೋಗಿ ಕೆಲಸ ಮಾಡುತ್ತಿದ್ದೇವೆ. ಸಾಮಾನ್ಯ ಜನರ ಸಂಪರ್ಕವನ್ನು ಎಷ್ಟು ಹತ್ತಿರ ಇಟ್ಟುಕೊಂಡಿರುತ್ತೇವೆಯೋ ಅಷ್ಟೇ ಪರಿಣಾಮವಾಗಿ ಅವರ ಸಂಕಷ್ಟಗಳನ್ನು ಪರಿಹಾರ ಮಾಡಲು ಸಾಧ್ಯವಾಗುತ್ತದೆ. ಈ ಒಂದು ಇಲಾಖೆಗೆ ಇದು ಸಾಧ್ಯವಿಲ್ಲವಾದರೂ ಕನಿಷ್ಟಪಕ್ಷ ಶಾಸನಸಭೆಯಲ್ಲಿ ಗೌರವದಿಂದ ಇಡೀ ರಾಜ್ಯದ ಜನತೆಯ ಸಮಸ್ಯೆಗಳ ಬಗ್ಗೆ ನಾವು ಚರ್ಚೆಯನ್ನು ಮಾಡುತ್ತಿರುವಾಗ ಆ ಚರ್ಚೆಗೆ ಸರಿಯಾದಂಥ ಉತ್ತರವನ್ನು ಕೊಟ್ಟು ಪರಿಹಾರವನ್ನು ಒದಗಿಸತಕ್ಕಂಥದ್ದು ಮಂತ್ರಿಗಳ ಜವಾಬ್ದಾರಿಯಾಗಿರುತ್ತದೆ. ನಮ್ಮ ಕಾರ್ಮಿಕ ನಾಯಕರುಗಳು ಆದ ಮಾನ್ಯ ಸದಸ್ಯರು ಮಾತನಾಡುತ್ತಾ ಹೇಳಿದರು ಈ ಒಂದು ಇಲಾಖೆ ರೋಗಗ್ರಸ್ತ ಇಲಾಖೆಯಾಗಿದೆ ಎಂದು, ಕಳೆದಬಾರಿ ಬಜೆಟ್ ಸೆಷನ್ ಆಗಬೇಕಾದರೆ ಸಂಬಂಧಪಟ್ಟ ಮಂತ್ರಿಗಳು ಹಜ್ ಯಾತ್ರೆಗೆ ಹೋಗಿದ್ದರು. ಅಲ್ಲಿ ಇವರು ಜ್ಞಾನ ಸಂಪಾದನೆ ಮಾಡಿಕೊಂಡು ಬಂದಿರುತ್ತಾರೆ ಮುಂದೆ ಇಲಾಖೆಯ ಕಷ್ಟ ಪರಿಹಾರವಾಗಬಹುದು ಎಂದು ನಾವು ತಿಳಿದುಕೊಂಡಿದ್ದೆವು ಆದರೆ ಈ ಬಾರಿ ನೋಡಿವರೆ ಮೈಗೆ ಆರೋಗ್ಯ ಸರಿಯಾಗಿಲ್ಲ ಎನ್ನುವ ಕಾರಣಕ್ಕಾಗಿ ಅವರು ಸಭೆಗೆ ಗೈರು ಹಾಜರಾಗಿರುತ್ತಾರೆ. ನಾವು ಅವರ ಇಲಾಖೆಯ ನಿರ್ವಹಣೆಯ ಬಗ್ಗೆ ಕೆಲವು ವಿಚಾರಗಳನ್ನು ಹೇಳಲೇಬೇಕು. ಕಾರ್ಮಿಕ ಇಲಾಖೆಯಲ್ಲಿ ವರದಿಗಳನ್ನೇ ಕೊಡುತ್ತಿಲ್ಲ. ಸುಮಾರು ೨೬ ಕಾಯಿದೆಗಳನ್ನು ಜಾರಿಯಲ್ಲಿ ತಂದು ನಿರ್ವಹಣೆ ಮಾಡತಕ್ಕಂಥ ಇಲಾಖೆಯಲ್ಲಿ ಸಾಕಷ್ಟು ತೊಂದರೆಗಳು ಇವೆ. ಬೆಂಗಳೂರಿನಿಂದ ಹಿಡಿದು, ಕೇಂದ್ರ ಕಚೇರಿ ಸಮಾನ್ಯವಾಗಿ ಜಿಲ್ಲಾಮಟ್ಟದಿಂದ ಹಿಡಿದು ತಾಲ್ಲೂಕು ಮಟ್ಟದವರೆಗೂ ಕೂಡ ತಮ್ಮದೇ ಆದಂತಹ ಒಂದು ಸ್ವಂತ ಕಟ್ಟಡ ಈ ಇಲಾಖೆಗೆ ಇಲ್ಲ. ಬೆಂಗಳೂರು ಕೇಂದ್ರ ಕಚೇರಿ, ತಾಲ್ಲೂಕುಮಟ್ಟದಲ್ಲಿ ಅನೇಕ ಸ್ಥಳಗಳಲ್ಲಿ ತನ್ನದೆ ಆದ ಸ್ವಂತ ಕಟ್ಟಡ ಇದಕ್ಕೆ ಇಲ್ಲದೆ ಇರುವ ಕಾರಣದಿಂದ ಸರಿಯಾಗಿ ಕೆಲಸಗಳು ನಡೆಯಲು ಸಾಧ್ಯವಾಗುತ್ತಿಲ್ಲ. ಇವೊತ್ತು ಆಡಳಿತ ಮಾಡುತ್ತಿರತಕ್ಕಂಥ ಸರ್ಕಾರವೇ ಇರಬಹುದು, ಯಾವ ಸರ್ಕಾರ ಬಂದರೂ ಕೂಡ ಇದರ ಬಗ್ಗೆ ಅನಾದರಣೆಯಿಂದ ಮುಂದುವರಿಯುತ್ತ ಇರುವುದನ್ನು ನೋಡಿದರೆ ಬೇಸರವಾಗುತ್ತದೆ. ಆದ್ದರಿಂದ ಇಲಾಖೆಯ ಆಡಳಿತ ನಿರ್ವಹಣೆ ಮಾಡಲು ಅನುಕೂಲವಾಗುವಂತೆ ಕಟ್ಟಡಗಳನ್ನು ಒದಗಿಸಬೇಕೆಂದು ತಮ್ಮ ಮೂಲಕ ಕೇಳಿಕೊಳ್ಳುತ್ತೇನೆ.

೭–೩೦ ಪಿ. ಎಂ.

ಈ ಸಲದ ಬಡ್ಜೆಟ್‌ನಲ್ಲಿ ಈ ವಿಚಾರಕ್ಕಾಗಿ ವಿಶೇಷವಾದಂಥ ಹಣವನ್ನು ತೊಡಗಿಸಿದ್ದು ಕಾಣಿಸುತ್ತಿಲ್ಲ. ಆದ್ದರಿಂದ ಮುಂದಿನ ದಿದಸಗಳಲ್ಲಿಯೂ ಇದು ಆಶಾದಾಯಕವಾಗಿಲ್ಲವೆಂದು ಹೇಳಬೇಕಾಗಿದೆ. ಕಾರ್ಮಿಕರಿಗೆ ನ್ಯಾಯವನ್ನು ಕೊಡುವಂತಹ ಕಾರ್ಮಿಕ ನ್ಯಾಯಾಲಯಗಳಲ್ಲಿ ಕೂಡ ಸ್ಟೆನೋಗ್ರಾಫರ್ ಟೈಪಿಸ್ಟ್ ಮುಂತಾದ ಸಿಬ್ಬಂದಿವರ್ಗ ಸರಿಯಾಗಿ ಇರುವುದಿಲ್ಲ. ಇದರ ಜೊತೆಗೆ ಇಲ್ಲಿ ಕೆಲಸ ಮಾಡುವಂತಹ ಜಡ್ಜ್‌ಗಳನ್ನು ಬೇರೆ ಕಡೆಗೆ ವರ್ಗ ಮಾಡಿದರೆ, ಖಾಲಿ ಬೀಳುವ ಜಾಗಕ್ಕೆ ಜಾಗ್ರತೆ ನೇಮಕ ಮಾಡುತ್ತಿಲ್ಲ. ಇದಕ್ಕೆ ಒಂದು ಉದಾಹರಣೆ ಕೊಡಬೇಕೆಂದರೆ, ನನಗೆ ಚಿಕ್ಕಮಗಳೂರಿನಿಂದ ಒಬ್ಬ ಕಾರ್ಮಿಕ ಪತ್ರ ಬರೆದಿದ್ದಾನೆ. ಈ ಪತ್ರದಲ್ಲಿ ಹೇಳಿರುವ ಪ್ರಕಾರ ಮಂಗಳೂರಿನ ಕಾರ್ಮಿಕ ನ್ಯಾಯಾಲಯದಲ್ಲಿ ಕಳೆದ ೮ ತಿಂಗಳುಗಳಿಂದ ನ್ಯಾಯಾಧೀಶರೇ ಇಲ್ಲ. ಎರಡು ಮೂರು ಜಿಲ್ಲೆಗಳ ವ್ಯಾಪ್ತಿಯಲ್ಲಿ ಈ ಕಾರ್ಮಿಕ ನ್ಯಾಯಾಲಯ ಬರುತ್ತದೆ. ಇಂತಹ ಕಡೆ ನ್ಯಾಯಾಧೀಶರೇ ಇಲ್ಲದಿದ್ದರೆ ಕೆಲಸ ಯಾವ ರೀತಿ ಆಗುತ್ತದೆ ? ಈ ಕಾರ್ಮಿಕ ನ್ಯಾಯಾಲಯಗಳಲ್ಲಿ ಕೆಲವು ಹುದ್ದೆಗಳು ಖಾಲಿ ಇವೆ ಎಂದು ಕಾರ್ಮಿಕ ಇಲಾಖೆಯ ವಾರ್ಷಿಕ ವರದಿಯಲ್ಲಿಯೇ ಹೇಳಿದ್ದಾರೆ. ಇದರ ಜೊತೆಗೆ ಜನರಿಂದಲೂ ಸಹ ದೂರುಗಳು ಬರುತ್ತಿವೆ. ಬೇರೆ ಬೇರೆ ಇಲಾಖೆಗಳಲ್ಲಿಯೂ ಸಹ ಅನೇಕ ಹುದ್ದೆಗಳನ್ನು ಭರ್ತಿ ಮಾಡಿಲ್ಲ. ಆದ್ದರಿಂದ ಈ ಖಾಲಿ ಇರುವ ಜಾಗಗಳಿಗೆ ಬೇಗ ನೇಮಕ ಮಾಡಬೇಕೆಂದು ವಿನಂತಿ ಮಾಡಿಕೊಳ್ಳುತ್ತೇನೆ. ಈ ದಿಸೆಯಲ್ಲಿ ಸರ್ಕಾರದವರು ನೇಮಕಾತಿ ಸಮಿತಿಗಳನ್ನು ಮಾಡಿದ್ದಾರೆ. ಆ ಸಮಿತಿಗಳವರು ಪ್ರಕಟಣೆಗಳನ್ನು ಹೊರಡಿಸಿ ಅರ್ಜಿಗಳನ್ನು ಕರೆದಿದ್ದಾರೆ. ಆದರೆ ಭರ್ತಿ ಮಾಡುವಂತಹ ಕೆಲಸ ಇನ್ನೂ ಆಗಿಲ್ಲ. ಇದು ಜಾಗ್ರತೆ ಆಗಬೇಕು. ಜನರಿಗೆ ಕೆಲಸಗಳನ್ನು ಕೊಡಿಸುವಂತಹ ಒಂದು ಜವಾಬ್ದಾರಿ ಕೂಡ ಈ ಇಲಾಖೆಯ ಮೇಲಿದೆ. ಆದ್ದರಿಂದ ಕೆಲಸ ಕೇಳುವವರಿಗೆಲ್ಲಾ ಕೆಲಸ ಕೊಡಿಸಬೇಕು ಮತ್ತು ಖಾಲಿ

ಇರುವಂತಹ ಜಾಗಗಳನ್ನು ಭರ್ತಿ ಮಾಡಬೇಕು. ಇಲ್ಲದಿದ್ದರೆ ಕಾರ್ಮಿಕರಿಗೆ ನ್ಯಾಯ ಒದಗಿಸುವುದು ನಿಧಾನವಾಗುತ್ತದೆಂದು ಹೇಳುತ್ತೇನೆ. ೨೬ ಪ್ರಮುಖ ಕೈಗಾರಿಕೆಗಳಲ್ಲಿ ದುಡಿಯುತ್ತಿರುವ ಕಾರ್ಮಿಕರಿಗೆ ನಿಗದಿ ಮಾಡಿದ್ದ ಕನಿಷ್ಟ ಕೂಲಿಯ ಬಗ್ಗೆ ಈ ಹಿಂದೆ ರಾದ್ಧಾಂತವಾಯಿತು. ಸಮಿತಿಯನ್ನು ಸರಿಯಾಗಿ ನೇಮಕ ಮಾಡಲಿಲ್ಲ ಮತ್ತು ಅಲ್ಲಿ ಭ್ರಷ್ಟಾಚಾರ ಕೂಡ ನಡೆಯಿತು ಎಂಬ ಕಾರಣಗಳಿಂದ ಉಚ್ಚ-ನ್ಯಾಯಾಲಯವು ಕನಿಷ್ಠ ಕೂಲಿಯ ಬಗ್ಗೆ ಸರ್ಕಾರ ಹೊರಡಿಸಿದ್ದ ಕಾನೂನನ್ನು ರದ್ದು ಮಾಡಿತು. ಈ ಸರ್ಕಾರ ಅಧಿಕಾರಕ್ಕೆ ಬಂದು ಒಂದು ವರ್ಷದ ಮೇಲಾಯಿತು. ಕನಿಷ್ಠ ಕೂಲಿಯನ್ನು ನಿಗದಿ ಮಾಡುವ ಸಲುವಾಗಿ ಈ ಸರ್ಕಾರ ಒಂದು ಸಮಿತಿಯನ್ನು ನೇಮಕ ಮಾಡಿತು. ನಂತರ ಆ ಸಮಿತಿಯು ತನ್ನ ವರದಿಯನ್ನು ಸಲ್ಲಿಸಿದೆ. ಆದರೆ ಇದಕ್ಕೆ ಬೇಕಾದ ಸರ್ಕಾರದ ಆಜ್ಞೆಯನ್ನು ಇನ್ನೂ ಹೊರಡಿಸಿಲ್ಲ. ಇವು ಬೇಸರದ ಸಂಗತಿ ಇದರ ಬಗ್ಗೆಯೂ ಮಾನ್ಯ ಮಂತ್ರಿಗಳು ಕ್ರಮ ಕೈಕೊಳ್ಳಬೇಕು ಮತ್ತು ಕಾರ್ಮಿಕರಿಗೆ ಸರಿಯಾದಂಥ ವೇತನ ಸಿಗುವ ರೀತಿಯಲ್ಲಿ ವ್ಯವಸ್ಥೆ ಮಾಡಬೇಕೆಂದು ಹೇಳುತ್ತೇನೆ.

ಇನ್ನು ಕಾರ್ಮಿಕರು ಮುಷ್ಕರ ಮಾಡುವುದು ಮತ್ತು ಹೆಚ್ಚಿನ ವೇತನಕ್ಕಾಗಿ ಹೋರಾಟ ಮಾಡುವುದು ಸರಿಯಲ್ಲವೆಂದು ಹೇಳುವುದಾದರೆ, ಅವರಿಗೆ ದೊರಕಬೇಕಾದ 'ಎಲ್ಲಾ ಸೌಲಭ್ಯಗಳನ್ನು ಒದಗಿಸಿ ಕೊಡುವ ಕಡೆಗೆ ಸರ್ಕಾರ ಗಮನ ಕೊಡಬೇಕಾಗುತ್ತದೆ. ಕನಿಷ್ಠ ಕೂಲಿ ಸಿಗದಿದ್ದರೆ ಅವರು ಮುಷ್ಕರ ಮಾಡಬೇಕಾಗುತ್ತದೆ. ಈ ಬಗ್ಗೆ ನಾವು ಇಲ್ಲಿ ಅನೇಕ ಸಲ ಪ್ರಸ್ತಾಪ ಮಾಡಿದ್ದೇವೆ. ಆದ್ದರಿಂದ ಅವರು ಮುಷ್ಕರ ಮಾಡುವುದಕ್ಕೆ ಮೊದಲೇ ಅವರಿಗೆ ಸಮಯಕ್ಕೆ ಸರಿಯಾಗಿ ಎಲ್ಲಾ ಸೌಲಭ್ಯಗಳು ಸಿಗುವಂತಹ ವ್ಯವಸ್ಥೆ ಮಾಡಬೇಕು.

ಇನ್ನು ವಿದ್ಯುತ್ ನಿಲುಗಡೆಯಿಂದ ಅನೇಕ ಕಾರ್ಖಾನೆಗಳಲ್ಲಿ ದುಡಿಯುತ್ತಿರುವ ಕಾರ್ಮಿಕರಿಗೆ ಕೆಲಸ ಇಲ್ಲದಂತೆ ಆಗಿದೆ. ಇಂತಹ ಸಂದರ್ಭಗಳಲ್ಲಿ ಮಾಲೀಕರು ಲೇ-ಆಫ್ ಮಾಡಿದರೆ ಶೇಕಡಾ ೫೦ರಷ್ಟು ವೇತನವನ್ನು ಮಾಲೀಕರು ಕೊಡಲು ಬದ್ಧರಾಗಿದ್ದಾರೆ. ಆದರೆ ಇದರಲ್ಲಿ ಕಾರ್ಮಿಕರ ತಪ್ಪೇನೂ ಇಲ್ಲ. ಆದರೆ ಈ ಹಿಂದೆ ಅಧಿಕಾರ ನಡೆಸಿದವರ ಮತ್ತು ಈಗ ಅಧಿಕಾರ ನಡೆಸುತ್ತಿರುವವರ ಒಂದು ತಪ್ಪಿನಿಂದಾಗಿ ಕಾರ್ಮಿಕರು ಇಂತಹ ಸಂದರ್ಭಗಳಲ್ಲಿ ಅರ್ಧ ವೇತನ ಪಡೆಯಬೇಕಾಗಿದೆ. ಇದು ಸರಿಯಾದ ಕ್ರಮವಲ್ಲ. ಇನ್ನು ಮುಂದೆ ಲೇ-ಆಫ್ ಆಗುವ ಸಮಯದಲ್ಲಿ ಶೇಕಡಾ ೫೦ರಷ್ಟು ಸಂಬಳವನ್ನು ಮಾಲೀಕರು ಕೊಟ್ಟರೆ ಇನ್ನುಳಿದ ಶೇಕಡ ೫೦ರಷ್ಟು ಸಂಬಳವನ್ನು ಸರ್ಕಾರದಿಂದಲೇ ಕೊಡಿಸುವಂತಹ ಒಂದು ವ್ಯವಸ್ಥೆಯಾಗಬೇಕೆಂದು ನಾನು ಸರ್ಕಾರಕ್ಕೆ ಒತ್ತಾಯ ಮಾಡುತ್ತೇನೆ.

ಇನ್ನು ಕಾರ್ಮಿಕ ಸಂಘಗಳ ಬಗ್ಗೆ ಹೇಳಬೇಕೆಂದರೆ, ಅನೇಕ ಕಾರ್ಖಾನೆಗಳಲ್ಲಿ ಕಾರ್ಮಿಕ ಸಂಘಗಳಿಗೆ ಸರಿಯಾಗಿ ಚುನಾವಣೆಯೇ ಆಗುವುದಿಲ್ಲ. ಕೆಲವು ಕೈಗಾರಿಕೆಗಳಲ್ಲಿ ಮೂರು ನಾಲ್ಕು ಕಾರ್ಮಿಕ ಸಂಘಗಳು ಕೆಲಸ ಮಾಡುತ್ತಿವೆ. ಇದೇ ಕಾರ್ಮಿಕ ಅಶಾಂತಿಗೆ ಕಾರಣವೆಂದು ಹೇಳುತ್ತೇನೆ. ಯಾವ ಕಾರ್ಮಿಕ ಸಂಘಕ್ಕೆ ಎಷ್ಟು ಸದಸ್ಯತ್ವವಿದೆ, ಕಾರ್ಮಿಕರ ಮೇಲೆ ಯಾವ ಸಂಘಕ್ಕೆ ಎಷ್ಟು ಹಿಡಿತವಿದೆ ಎಂಬುದನ್ನೆಲ್ಲಾ ನೋಡತಕ್ಕಂಥ ಜವಾಬ್ದಾರಿ ಟ್ರೇಡ್ ಯೂನಿಯನ್ ಆಕ್ಟ್ ಪ್ರಕಾರ ಈ ಕಾರ್ಮಿಕ ಇಲಾಖೆಗೆ ಸೇರಿದ್ದು. ಆದ್ದರಿಂದ ಇದರ ಕಡೆಗೂ ಸರ್ಕಾರ ಗಮನ ಕೊಡಬೇಕಾಗುತ್ತದೆ. ಮೈಕೋ ಕಾರ್ಖಾನೆಯಲ್ಲಿ ಚುನಾವಣೆ ನಡೆದಿಲ್ಲವೆಂದು ನನ್ನ ಮಿತ್ರರು ಹೇಳಿದ್ದಾರೆ. ಇದರ ಬಗ್ಗೆ ಇಲ್ಲಿ ಈ ಹಿಂದೆ ಕೂಡ ಪ್ರಸ್ತಾಪವಾದಾಗ ಸರ್ಕಾರದಿಂದ ಸರಿಯಾದ ಉತ್ತರ ಬರಲಿಲ್ಲ. ಈಗಲಾದರೂ ಅಲ್ಲಿ ಕೂಡಲೇ ಚುನಾವಣೆ ನಡೆಸಬೇಕೆಂದು ಹೇಳುತ್ತೇನೆ.

ಇನ್ನು ಕಾರ್ಮಿಕರ ಸ್ಟೇಟ್ ಇನ್ಶೂರೆನ್ಸ್ ಸ್ಕೀಮಿನ ಬಗ್ಗೆ ಹೇಳಲು ಹೊರಟರೆ ದೊಡ್ಡ ಪುರಾಣವೇ ಆಗುತ್ತದೆ. ಈ ಯೋಜನೆ ಕೆಳಗೆ ಇರುವಂತಹ ಆಸ್ಪತ್ರೆಗಳಲ್ಲಿ ಸರಿಯಾದ ಔಷಧಿಗಳೇ ಇರುವುದಿಲ್ಲ. ಕಾರ್ಮಿಕರಿಗೆ ಸಮಯಕ್ಕೆ ಸರಿಯಾದ ಔಷಧ ಸಿಗದ ಕಾರಣ ಅನಾರೋಗ್ಯದಿಂದ ಇರುವವರು ಜಾಗ್ರತೆ ಗುಣ ಹೊಂದಲು ಸಾಧ್ಯವಾಗುತ್ತಿಲ್ಲ. ಆದ್ದರಿಂದ ಇದರ ಬಗ್ಗೆಯೂ ಮಾನ್ಯ ಮಂತ್ರಿಗಳು ತುರ್ತು ಗಮನ ಹರಿಸಬೇಕೆಂದು ಹೇಳುತ್ತೇನೆ.

ಇನ್ನು ಬೀಡಿ ಕಾರ್ಮಿಕರಿಗೆ ಕನಿಷ್ಠ ವೇತನ ಇಷ್ಟೇ ಇರಬೇಕೆಂದು ಮಾಲೀಕರು, ಕಾರ್ಮಿಕರು ಮತ್ತು ಸರ್ಕಾರ ಸೇರಿ ಒಂದು ತೀರ್ಮಾನಕ್ಕೆ ಬಂದಿದ್ದರೂ ಸಹ, ಇದಕ್ಕೆ ಕಾನೂನಿನ ಬಲ ಬರಬೇಕಾದರೆ ಕನಿಷ್ಠ ವೇತನದ ಕಾಯಿದೆಗೆ ಸೂಕ್ತವಾದ ಒಂದು ನೋಟಿಫಿಕೇಷನನ್ನು ಮಾಡಬೇಕಾಗಿದೆ ಈ ಕೆಲಸ ಇನ್ನೂ ಆಗಿಲ್ಲ. ಇದರಿಂದ ಯಾರಾದರೂ ಈ ಕನಿಷ್ಠ ವೇತನ ಕೊಡುವುದಿಲ್ಲವೆಂದು ಹೇಳಿದರೆ, ಅಂತಹವರ ಮೇಲೆ ಕಾನೂನು ಪ್ರಕಾರ ಕ್ರಮ ತೆಗೆದುಕೊಳ್ಳಲು ಕಷ್ಟವಾಗುತ್ತದೆ. ಆದ್ದರಿಂದ ಇದರ ಕಡೆಗೂ ಸರ್ಕಾರ ಗಮನ ಹರಿಸಬೇಕೆಂದು ಹೇಳುತ್ತೇನೆ.

ಇನ್ನು ಬೀಡಿ ಕಾರ್ಮಿಕರ ಗೃಹನಿರ್ಮಾಣ ಯೋಜನೆ ಮೊದಲು ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಜಾರಿಗೆ ಬರಬೇಕಾಗಿತ್ತು. ಏಕೆಂದರೆ, ನಮ್ಮ ಜಿಲ್ಲೆಯಲ್ಲಿ ಬೀಡಿ ಕಾರ್ಮಿಕರು ಹೆಚ್ಚಿನ ಸಂಖ್ಯೆಯಲ್ಲಿದ್ದಾರೆ. ಆದರೆ ನಾನು ಮೊನ್ನೆ ಪತ್ರಿಕೆಯಲ್ಲಿ ನೋಡಿದ ಪ್ರಕಾರ ಈ ಯೋಜನೆ ಮೈಸೂರಿನಲ್ಲಿ ಜಾರಿಗೆ ಬರುತ್ತಿದೆ. ದಕ್ಷಿಣಕನ್ನಡ ಜಿಲ್ಲೆಯ ಬಗ್ಗೆ ಈ ಸರ್ಕಾರ ಮಲತಾಯಿ ಧೋರಣೆಯನ್ನು ಅನುಸರಿಸುತ್ತಿದೆ ಎಂದು ನಾನು ತಿಳಿಯುತ್ತೇನೆ. ಇಲ್ಲದಿದ್ದರೆ ನಮ್ಮ ಜಿಲ್ಲೆಯಲ್ಲಿಯೂ ಈ ಯೋಜನೆ ಜಾರಿಯಾಗಬೇಕೆಂದು ಕೇಳಿಕೊಳ್ಳುತ್ತೇನೆ.

ಇನ್ನು ಕಾರ್ಖಾನೆಗಳ ಮತ್ತು ಬಾಯ್ಲರ್‌ಗಳ ಇಲಾಖೆ ಒಂದು ಸಣ್ಣ ಇಲಾಖೆ. ಇದು ಕಾರ್ಮಿಕ ಇಲಾಖೆಯ ವ್ಯಾಪ್ತಿಯಲ್ಲಿ ಬರುತ್ತದೆ. ಕಳೆದ ಒಂದು ವರ್ಷದಿಂದ ಇದಕ್ಕೆ ಸಂಬಂಧಪಟ್ಟ ಮಂತ್ರಿಗಳು ಈ ಇಲಾಖೆಯನ್ನು ಚುರುಕುಗೊಳಿಸಿ ಕೆಲಸ ಮಾಡಿಸುತ್ತಾರೆ, ಕಾರ್ಮಿಕರ ಸಂಕಷ್ಟಗಳನ್ನು ದೂರ ಮಾಡುತ್ತಾರೆಂದು ನಾವು ನಿರೀಕ್ಷೆ ಮಾಡಿದ್ದೆವು. ಆದರೆ ಮಾನ್ಯ ಮಂತ್ರಿಗಳು ತಮ್ಮ ಇಲಾಖೆಯಲ್ಲಿ ಸಾಕಷ್ಟು ಗೊಂದಲ ಉಂಟುಮಾಡತಕ್ಕಂತಹ ರೀತಿಯಲ್ಲಿ ಮತ್ತು ಸಂಶಯ ಬರುವಂತಹ ರೀತಿಯಲ್ಲಿ ಕೆಲಸ ಮಾಡುತ್ತಿರುವುದನ್ನು ನೋಡಿದಾಗ ನಿಜಕ್ಕೂ ಬಹಳ ಬೇಸರವಾಗುತ್ತದೆ. ಈ ಸಣ್ಣ ಇಲಾಖೆಯ ಬಗ್ಗೆ ನಾವು ಒಂದು ಪ್ರಶ್ನೆ ಕೇಳಿದಾಗ ಮಾನ್ಯ ಮಂತ್ರಿಗಳು ಫ್ಯಾಕ್ಟರಿಗಳ ವಿಭಾಗವನ್ನೇ ಬೇರೆ ಮಾಡುತ್ತೇವೆ ಮತ್ತು ಬಾಯ್ಲರ್‌ಗಳ ಇಲಾಖೆಯನ್ನೇ ಬೇರೆ ಮಾಡುತ್ತೇವೆಂದು ಉತ್ತರ ಕೊಟ್ಟಿದ್ದರು. ಆದರೆ ಇದರ ಕಡೆಗೂ ಸಹ ಅವರು ಗಮನ ಕೊಟ್ಟಿಲ್ಲ. ಇದಕ್ಕೆ ಕಾರಣವೇನೆಂದು ಸರ್ಕಾರದಿಂದ ಸರಿಯಾದ ವಿವರಣೆ ಸಹ ಬರುತ್ತಿಲ್ಲ.

ಸ್ವಾಮಿ ಇವತ್ತು ಮಾನ್ಯ ಮಂತ್ರಿಗಳು ಈ ಇಲಾಖೆಯಲ್ಲಿ ಯಾವ ರೀತಿ ಕೆಲಸ ಮಾಡುತ್ತಿದ್ದಾರೆ ಎನ್ನುವ ಬಗ್ಗೆ ನಾನು ಒಂದು ಮಾತನ್ನು ಹೇಳಬೇಕಾಗುತ್ತದೆ.

ಉಪಾಧ್ಯಕ್ಷರು.—ತಾವು ಬೇಗ ಪೂರ್ಣ ಮಾಡಿ.

ಶ್ರೀ ವಿ. ಧನಂಜಯಕುಮಾರ್.—ಸ್ವಾಮಿ ಈ ಇಲಾಖೆಯಲ್ಲಿ ಮಾನ್ಯ ಮಂತ್ರಿಗಳು ಕೆಲಸ ಮಾಡುತ್ತಿರುವುದನ್ನು ನಾವು ನೋಡಿದರೆ ಇದು ಕೇವಲ ಅರಣ್ಯರೋಧನವಾಗಿದೆ. ನಮ್ಮ ಮಂತ್ರಿಗಳ ಬಗ್ಗೆ ಯಾರಿಗೂ ಗೌರವ ಇಲ್ಲ. ಸ್ವಾಮಿ ನಮ್ಮ ಮಾನ್ಯ ಕಾನೂನು ಮಂತ್ರಿಗಳು ನಾನು ಹೇಳುವ ವಿಷಯದ ಬಗ್ಗೆ ಗಮನ ಕೊಟ್ಟಂತೆ ಕಾಣಲಿಲ್ಲ. ನಾನು ಮಾತನಾಡುತ್ತಿರುವುದು ಬರೀ ಅರಣ್ಯರೋಧನ ವಾಗಿದೆ.

ಶ್ರೀ ಎ ಲಕ್ಷ್ಮೀಸಾಗರ್.—ಸ್ವಾಮಿ ಮಾನ್ಯ ಸದಸ್ಯರು ಯಾವ ವಿಚಾರವನ್ನು ಹೇಳುತ್ತಾರೆ ಎಂಬುದು ನನಗೆ ಗೊತ್ತು. ಆ ಬಗ್ಗೆ ನಾನು ಈಗಾಗಲೇ ತಿಳಿದುಕೊಂಡಿದ್ದೇನೆ.

ಶ್ರೀ ವಿ. ಧನಂಜಯಕುಮಾರ್.—ಸ್ವಾಮಿ ನಾನು ಯಾವ ವಿಷಯವನ್ನು ಪ್ರಸ್ತಾಪ ಮಾಡುತ್ತಿದ್ದೇನೆಯೋ ಆ ವಿಷಯವನ್ನು ಕೇಳುವುದಕ್ಕೆ ಮಾನ್ಯ ಮಂತ್ರಿಗಳು ಈ ಸದನದಲ್ಲಿ ಇಲ್ಲ ಆದ್ದರಿಂದ ನಾವು ಪ್ರಸ್ತಾಪ ಮಾಡಿದ ವಿಷಯ ಪರಿಣಾಮಕಾರಿಯಾಗಿ ಕೆಲಸ ನಿರ್ವಹಿಸುವುದಕ್ಕೆ ಆಗುತ್ತದೆಯೋ ಅಥವಾ ಇಲ್ಲವೇ ಎಂಬುದನ್ನು ಕೂಡ ನಾವು ಯೋಚನೆ ಮಾಡಬೇಕಾಗುತ್ತದೆ. ಕಾರ್ಮಿಕ ಇಲಾಖೆಯಲ್ಲಿ ಒಬ್ಬ ಮಹಿಳಾ ಮೇಲಾಧಿಕಾರಿಯನ್ನು ನೇಮಕ ಮಾಡಿದ್ದಾರೆ. ಆದರ ಆಕೆ ಯಾರು ಎಂಬುದು ಮಾನ್ಯ ವಿರೋಧ ಪಕ್ಷದ ನಾಯಕರಿಗೂ ಗೊತ್ತಿದೆ. ಏಕೆಂದರೆ ಅವರ ಕಾಲದಲ್ಲಿ ಕೂಡ ಆಕೆ ಅಲ್ಲಿ ಇದ್ದರು ಅಲ್ಲಿ ಆ ಕೆಲಸವನ್ನು ನಿರ್ವಹಣೆ ಮಾಡುವಂಥ ಅರ್ಹತೆಗಳು ಆಕೆಯಲ್ಲಿ ಯಾವುದೂ ಇಲ್ಲ. ಆದ್ದರಿಂದ ಆಕೆ ಅಲ್ಲಿ ಕೆಲಸ ನಿರ್ವಹಣೆ ಮಾಡುವುದಕ್ಕೆ ಅರ್ಹಳಲ್ಲ. ಆಕೆ ಮೊದಲು ಸಮಾಜ ಕಲ್ಯಾಣ ಇಲಾಖೆಯಲ್ಲಿ ಕೆಲಸ ಮಾಡುತ್ತಿದ್ದರು, ಆದರೆ ಆಕೆಯು ಆ ಸಮಾಜ ಕಲ್ಯಾಣ ಇಲಾಖೆಯಿಂದ ಕಾರ್ಮಿಕ ಇಲಾಖೆಗೆ ವರ್ಗಾವಣೆ ಮಾಡಿಸಿಕೊಂಡರು. ಆದರೆ ಆಕೆ ಅದೇ ಜಾಗದಲ್ಲಿ ಮುಂದುವರಿಸಿಕೊಂಡು ಹೋಗುತ್ತಿದ್ದಾರೆ ನಮ್ಮ ಕಾರ್ಮಿಕ ಮಂತ್ರಿಗಳು ಆಕೆ ಆ ಮೇಲಾಧಿಕಾರಿಯಾಗಿ ಕೆಲಸ ಮಾಡುವುದಕ್ಕೆ ಏನೇನು ಬದಲಾವಣೆಗಳು ಬೇಕೋ ಆ ಎಲ್ಲಾ ಬದಲಾವಣೆಗಳನ್ನು ಸಹ ಸಿ ಅಂಡ್ ಆರ್ ರೂಲ್ಸ್‌ನಲ್ಲಿ ಬದಲಾವಣೆ ಮಾಡಿದ್ದಾರೆ. ಮಾನ್ಯ ಕಾರ್ಮಿಕ ಮಂತ್ರಿಗಳು ಏನಾದರೂ ಮಾಡಿ ಆಕೆಯನ್ನು ಕಾರ್ಮಿಕ ಇಲಾಖೆಯಲ್ಲಿ ಉಳಿಸಿಕೊಳ್ಳಬೇಕೆಂಬ ಪ್ರಯತ್ನವನ್ನು ಮಾಡುತ್ತಿದ್ದಾರೆ. ನಾನು ಈ ವಿಷಯವನ್ನು ಕಳೆದ ಅಧಿವೇಶನದಲ್ಲಿ ಕೂಡ ಪ್ರಸ್ತಾಪ ಮಾಡಿದ್ದೆ. ಆಗ ಮಾನ್ಯ ಕಾರ್ಮಿಕ

ಮಂತ್ರಿಗಳ ಪರವಾಗಿ ಮಾನ್ಯ ವಾರ್ತಾ ಮಂತ್ರಿಗಳಾದಂಥ ಶ್ರೀಮಾನ್ ರಘುಪತಿಯವರು ಉತ್ತರ ಕೊಡುತ್ತಾ ಹೇಳಿದರು ನಾನು ಮಾನ್ಯ ಕಾರ್ಮಿಕ ಮಂತ್ರಿಗಳ ಗಮನಕ್ಕೆ ಈ ವಿಷಯವನ್ನು ತರುತ್ತೇನೆ ಎಂದು. ಆದರೆ ಇದುವರೆಗೆ ಯಾವ ಕ್ರಮವನ್ನು ಸಹ ಅವರು ತೆಗೆದುಕೊಂಡಿಲ್ಲ. ಮತ್ತೆ ಈ ವಿಚಾರದಲ್ಲಿ ಒಬ್ಬರು ರಾಜ್ಯದ ಹೈಕೋರ್ಟಿನಲ್ಲಿ ರಿಟ್ ಅಪ್ಲಿಕೇಷನ್ ಸಹ ಫೈಲ್ ಮಾಡಿದ್ದಾರೆ ಆಕೆ ಆ ಭಾಗದಲ್ಲಿ ಕೆಲಸ ಮಾಡುವುದಕ್ಕೆ ಸರಿಯಾದಂಥ ಅರ್ಹತೆಗಳು ಇಲ್ಲ. ಆದ್ದರಿಂದ ಆಕೆ ಅಲ್ಲಿ ಕೆಲಸ ಮಾಡುವುದು ಸರಿಯಲ್ಲವೆಂದು ಹೈಕೋರ್ಟಿನಲ್ಲಿ ಕೂಡ ತೀರ್ಮಾನ ಕೊಟ್ಟಿದ್ದಾರೆ. ಆದರೂ ಕೂಡ ನಮ್ಮ ಮಾನ್ಯ ಕಾರ್ಮಿಕ ಮಂತ್ರಿಗಳು ಅಧಿಕಾರ ತಮ್ಮ ಕೈಯಲ್ಲಿ ಇದೆ ಎಂದು ತಿಳಿದುಕೊಂಡು ಆಕೆಯನ್ನು ಅಲ್ಲಿಯೇ ಮುಂದುವರಿಸುತ್ತಿದ್ದಾರೆ. ಈ ರೀತಿ ಒಬ್ಬ ಮಂತ್ರಿಗಳು ವರ್ತನೆ ಮಾಡಿದರೆ ನಾವು ನೇರವಾಗಿ ಆಪಾದನೆ ಮಾಡಬೇಕಾಗುತ್ತದೆ. ಸ್ವಾಮಿ ಮಾನ್ಯ ಮಂತ್ರಿಗಳು ಕಳೆದ ಎರಡು ಮೂರು ದಿವಸಗಳ ಹಿಂದೆ ಕೇಸ ಮಾಡಿರುವ ದಾಖಲೆ ನನ್ನ ಹತ್ತಿರ ಇದೆ. ಅವರು ಈ ಸದನಕ್ಕೆ ಬಂದರೆ ನಾವು ಅವರ ಮೇಲೆ ಆಪಾದನೆಗಳನ್ನು ಮಾಡಿದಾಗ ಆ ಆಪಾದನೆಗಳನ್ನು ಎದುರಿಸುವುದಕ್ಕೆ ಅವರಿಗೆ ಧೈರ್ಯ ಇಲ್ಲ. ನಾವು ಮಾಡಿದ ಆಪಾದನೆಗಳಿಗೆ ಅವರು ಉತ್ತರ ಕೊಡುವುದಕ್ಕೆ ಆಗದೆ ಇರುವುದರಿಂದ ಅವರು ಈ ಸದನಕ್ಕೆ ಬರದೆ ತಪ್ಪಿಸಿಕೊಳ್ಳುತ್ತಿದ್ದಾರೆ. ಸ್ವಾಮಿ ಇದೇ ಸಂದರ್ಭದಲ್ಲಿ ನಾನು ಮಾನ್ಯ ಕಾರ್ಮಿಕ ಮಂತ್ರಿಗಳಾದಂಥ ಅಜೀಜ್ ಸೇಠ್‌ರವರ ಮೇಲೆ ಮತ್ತೊಂದು ಆಪಾದನೆಯನ್ನು ಮಾಡಬೇಕಾಗುತ್ತದೆ. ಆ ಆಪಾದನೆಯಾದರೂ ಏನೆಂದರೆ ನಮ್ಮ ರಾಜ್ಯದ ಹೈಕೋರ್ಟಿನಲ್ಲಿ ತೀರ್ಮಾನವಾದ ರಿಟ್ ಅರ್ಜಿಯ ಮೇಲೆ ಸುಪ್ರೀಂ ಕೋರ್ಟಿಗೆ ರಾಜ್ಯ ಸರ್ಕಾರದ ಪತಿಯಿಂದ ಅಪೀಲು ಹೋಗಿದ್ದರು ಸರ್ಕಾರದವರು ಅಪೀಲು ಹೋಗಿ ಸುಮಾರು ೧೦–೧೨ ವರ್ಷಗಳಾಗಿತ್ತು. ಆದರೆ ಈ ಜನತಾ ಸರ್ಕಾರ ಬಂದ ಮೇಲೆ ಸುಪ್ರೀಂ ಕೋರ್ಟಿನಲ್ಲಿದ್ದ ಕೇಸನ್ನು ವಾಪಸ್ಸು ತೆಗೆದುಕೊಂಡಿದ್ದಾರೆ. ಕಳೆದ ೧೦–೧೨ ವರ್ಷಗಳಿಂದ ನಡೆಯುತ್ತಿದ್ದ ಕೇಸನ್ನು ಒಂದೇ ಸಾರಿ ವಾಪಸ್ಸು ತೆಗೆದುಕೊಳ್ಳುವುದಕ್ಕೆ ಹೇಗೆ ಸಾಧ್ಯವಾಗುತ್ತದೆ ? ಬಹುಶಃ ನನಗೆ ತಿಳಿದ ಮಟ್ಟಿಗೆ ಒಂದೇ ಸಾರಿ ವಾಪಸ್ಸು ತೆಗೆದುಕೊಳ್ಳುವುದಕ್ಕೆ ಆಗುವುದಿಲ್ಲ ಇದರಲ್ಲಿ ಏನೋ ಮೋಸ ನಡೆದಿದೆ. ರಾಜ್ಯದ ಹೈಕೋರ್ಟಿನಲ್ಲಿ ರಿಟ್ ಅರ್ಜಿಯನ್ನು ಸಲ್ಲಿಸಿದ್ದವರು ರಾಮದಾಸ್ ಎಂಬುವರು. ಆತನ ಮೇಲೆ ಇಲಾಖೆಯಲ್ಲಿ ಆರೋಪಗಳು ಇದ್ದು ಆ ಬಗ್ಗೆ ಆತ ಕೋರ್ಟಿಗೆ ಹೋಗಿದ್ದ ಕೋರ್ಟಿನಲ್ಲಿ ಕೇಸು ಆತನಂತೆ ಆಗಿತ್ತು. ಅದರ ವಿರುದ್ಧ ರಾಜ್ಯ ಸರ್ಕಾರ ಸುಪ್ರೀ ಕೋರ್ಟಿಗೆ ಅರ್ಜಿಯನ್ನು ಸಲ್ಲಿಸಿ ಅದನ್ನು ಸುಮಾರು ೧೦–೧೨ ವರ್ಷಗಳಿಂದ ನಡೆಸಿಕೊಂಡು ಬರುತ್ತಿದ್ದರು. ಆದರೆ ಒಂದೆ ಬಾರಿಗೆ ಈಗ ವಾಪಸ್ಸು ತೆಗೆದುಕೊಂಡಿದ್ದಾರೆ ಇದರಿಂದ ನನಗೆ ಅನ್ನಿಸುತ್ತದೆ ಇದರಲ್ಲಿ ಮಂತ್ರಿಗಳು ಹಣವನ್ನು ಪಡೆದುಕೊಂಡು ಕೇಸನ್ನು ವಾಪಸ್ಸು ತೆಗೆದುಕೊಂಡಿದ್ದಾರೆ ಎಂದು.

ಉಪಾಧ್ಯಕ್ಷರು.—ಸ್ವಾಮಿ ತಾವು ಬೇಗ ಮುಗಿಸಿ,

ಶ್ರೀ ವಿ. ಧನಂಜಯಕುಮಾರ್.—ಸ್ವಾಮಿ ಮಾನ್ಯ ಕಾನೂನು ಮಂತ್ರಿಗಳಿಗೆ ಇದು ಹೊಸ ಇಲಾಖೆ ನಾವು ಏನು ವಿಷಯ ಪ್ರಸ್ತಾಪ ಮಾಡುತ್ತೇವೆಯೋ ಆ ವಿಷಯ ಮಾನ್ಯ ಮಂತ್ರಿಗಳಿಗೆ ಅರ್ಥವಾಗುವಂತೆ ಹೇಳಬೇಕಾಗುತ್ತದೆ. ಆದ್ದರಿಂದ ನಾನು ನಿಧಾನವಾಗಿ ವಿವರವಾಗಿ ಹೇಳುತ್ತಿದ್ದೇನೆ,

ಶ್ರೀ ಎ. ಲಕ್ಷ್ಮೀಸಾಗರ್.—ಸ್ವಾಮಿ ಮಾನ್ಯ ಸದಸ್ಯರು ಎಷ್ಟು ವೇಗವಾಗಿ ಹೇಳುತ್ತಾರೊ ಅಷ್ಟೇ ವೇಗವಾಗಿ ನಾನು ಅರ್ಥಮಾಡಿಕೊಳ್ಳುತ್ತೇನೆ.

ಶ್ರೀ ವಿ. ಧನಂಜಯಕುಮಾರ್.—ಸ್ವಾಮಿ ನಾನು ಮಾನ್ಯ ಕಾರ್ಮಿಕ ಮಂತ್ರಿಗಳ ಮೇಲೆ ನೇರವಾಗಿ ಆರೋಪ ಮಾಡುತ್ತಿದ್ದೇನೆ. ಅವರು ಲಂಚವನ್ನು ತೆಗೆದುಕೊಂಡು ಸುಪ್ರೀಂ ಕೋರ್ಟಿನಲ್ಲಿದ್ದ ಕೇಸನ್ನು ವಾಪಸ್ಸು ಪಡೆದುಕೊಂಡಿದ್ದಾರೆಂದು. ಆದ್ದರಿಂದ ಸರ್ಕಾರದವರು ಇದರ ಬಗ್ಗೆ ತನಿಖೆ ಮಾಡಬೇಕೆಂದು ನಾನು ಕೇಳಿಕೊಳ್ಳುತ್ತೇನೆ. ಸ್ವಾಮಿ ಈಗಾಗಲೇ ರಾಜ್ಯದಲ್ಲಿ ಲೋಕಾಯುಕ್ತ ಬಿಲ್ಲು ಪಾಸಾಗಿದೆ. ಅಲ್ಲಿ ಕೂಡ ನಾನೇ ಸ್ವತಃ ಅರ್ಜಿಯನ್ನು ಸಲ್ಲಿಸುತ್ತೇನೆ. ಅಲ್ಲಿ ನಾನು ತಪ್ಪಿತಸ್ಥನಾದರೆ ನನಗೆ ಶಿಕ್ಷೆಯನ್ನು ಕೊಡಲಿ...............

ಶ್ರೀ ಪಿ. ರಾಮ್‌ದೇವ್.—ಸ್ವಾಮಿ ಮಾನ್ಯ ಸದಸ್ಯರು ಯಾರಾದರೂ ಒಬ್ಬ ಮಂತ್ರಿಗಳ ಮೇಲೆ ಆರೋಪವನ್ನು ಮಾಡಬೇಕಾದರೆ ೧೫ ದಿವಸಗಳಿಂದ ಮುಂಚಿತವಾಗಿ ಅಧ್ಯಕ್ಷರಿಗೆ ನೋಟೀಸ್ ಕೊಡಬೇಕೆಂದು ಇದೆ. ನಿಯಮ ೩೧೧ ರ ಪ್ರಕಾರ ನೋಟೀಸ್ ಕೊಡಬೇಕಾಗುತ್ತದೆ. ಆದರೆ ಮಾನ್ಯ ಸದಸ್ಯರು ನೋಟೀಸ್ ಕೊಡದೆ ಈ ವಿಷಯವನ್ನು ಪ್ರಸ್ತಾಪ ಮಾಡುವುದು ಸರಿಯಲ್ಲ.

ಶ್ರೀ ವೈ. ರಾಮಕೃಷ್ಣ.--ಸ್ವಾಮಿ ಬೇಡಿಕೆಯ ಮೇಲೆ ಚರ್ಚೆ ಮಾಡುವಾಗ ಮಾತನಾಡಬಹುದು ಈಗ ಮಾನ್ಯ ಸದಸ್ಯರು ಸಂಬಂಧಪಟ್ಟ ಇಲಾಖೆಯ ಬೇಡಿಕೆಯ ಮೇಲೆ ಚರ್ಚೆ ಮಾಡುತ್ತಿದ್ದಾರೆ.

ಶ್ರೀ ಪಿ. ರಾಮ್‌ದೇವ್.--ಸ್ವಾಮಿ ನಿಯಮ ೩೧೨ ರಲ್ಲಿ ಸ್ಪಷ್ಟವಾಗಿ ಕೊಟ್ಟಿದ್ದಾರೆ.

ಶ್ರೀ ಆರ್. ಎಲ್. ಜಾಲಪ್ಪ.--ಸ್ವಾಮಿ ಮಾನ್ಯ ಸದಸ್ಯರು ಮಾತನಾಡುತ್ತಿರುವ ರೀತಿ ನೋಡಿದರೆ ಸೌಜನ್ಯರಹಿತವಾದುದು. ಮಾನ್ಯ ಮಂತ್ರಿಗಳಿಗೆ ಆಪರೇಷನ್ ಆಗಿ ಅವರು ವಿಶ್ರಾಂತಿ ತೆಗೆದು ಕೊಳ್ಳುತ್ತಿದ್ದಾರೆ. ಅವರು ಈ ಸದನಕ್ಕೆ ಬಂದಾಗ ತಾವು ಬೇಕಾದರೆ ನೇರವಾಗಿ ಆಪಾದನೆ ಮಾಡಿ ಬೇಡವೆಂದು ನಾವು ಯಾರೂ ಹೇಳುವುದಿಲ್ಲ.

ಶ್ರೀ ಧನಂಜಯ ಕುಮಾರ್.--ಸ್ವಾಮಿ ನನ್ನ ಬಳಿ ದಾಖಲೆಗಳು ಇವೆ. ದಾಖಲೆಗಳ ಸಮೇತವಾಗಿ ನಾನು ಆಪಾದನೆಯನ್ನು ಮಾಡುತ್ತಿದ್ದೇನೆ.

ಶ್ರೀ ಆರ್. ಎಲ್. ಜಾಲಪ್ಪ.--ಸ್ವಾಮಿ ಯಾರೋ ಏನೋ ಬರೆದರೆ ಅದು ನಿಜವೆಂದು ನಾವು ನಂಬುವುದಕ್ಕೆ ಆಗುತ್ತದೆಯೇ ? ತಮ್ಮ ಮೇಲೆ ಯಾರಾದರೂ ಒಂದು ದೂರು ಬರೆದು ಪತ್ರಿಕೆಯಲ್ಲಿ ಕೊಟ್ಟರೆ ಅದು ಪತ್ರಿಕೆಯಲ್ಲಿ ಬಂದ ಮಾತ್ರಕ್ಕೆ ಸತ್ಯವೆಂದು ನಂಬುವುದಕ್ಕೆ ಆಗುತ್ತದೆಯೇ ?

ಉಪಾಧ್ಯಕ್ಷರು.--ಮಾನ್ಯ ಧನಂಜಯಕುಮಾರ್‌ರವರೇ ತಾವು ಬೇಗ ಮುಗಿಸಿ.

ಶ್ರೀ ಧನಂಜಯ ಕುಮಾರ್.--ಸ್ವಾಮಿ ಇದರ ಬಗ್ಗೆ ಸರ್ಕಾರದವರು ತೀವ್ರವಾಗಿ ಗಮನಹರಿಸಬೇಕು. ಇವೊತ್ತು ಈ ಸದನದಲ್ಲಿ ನಾವೆಲ್ಲಾ ಲೋಕಾಯುಕ್ತ ಮಸೂದೆಯನ್ನು ಪಾಸು ಮಾಡಿಕೊಟ್ಟಿದ್ದೇವೆ. ಅದು ಜಾರಿಗೆ ಬಂದರೆ ನಾನು ಅಲ್ಲಿ ಕೂಡ ಈ ವಿಷಯವನ್ನು ಪ್ರಸ್ತಾಪ ಮಾಡುತ್ತೇನೆ ಅಲ್ಲಿಯೂ ಕೂಡ ನಾನು ಈ ಆರೋಪವನ್ನು ಮಾಡುವುದಕ್ಕೆ ಸಿದ್ಧನಿದ್ದೇನೆ. ನಾನು ಬರೀ ಮಾತಿನ ಚಪಲವನ್ನು ತೀರಿಸಿಕೊಳ್ಳುವುದಕ್ಕೆ ಈ ಮಾತನ್ನು ಹೇಳುತ್ತಿಲ್ಲ.

ಶ್ರೀ ಪಿ ರಾಂದೇವ್.--ಸ್ವಾಮಿ ಮಾನ್ಯ ಸದಸ್ಯರು ಮಾನ್ಯ ಮಂತ್ರಿಗಳ ಮೇಲೆ ನೇರವಾಗಿ ಆರೋಪವನ್ನು ಮಾಡಿದ್ದಾರೆ. ಆದ್ದರಿಂದ ಅದು ಕಡತದಲ್ಲಿ ಹೋಗಿದೆ. ತಾವು ಕಡತದಿಂದ ತೆಗೆದು ಹಾಕಬೇಕೆಂದು ನಾನು ಕೇಳಿಕೊಳ್ಳುತ್ತೇನೆ.

ಉಪಾಧ್ಯಕ್ಷರು.--ಧನಂಜಯಕುಮಾರ್‌ರವರೇ ತಾವು ಬೇಗ ಮುಗಿಸಿ.

ಶ್ರೀ ವಿ. ಧನಂಜಯಕುಮಾರ್.--ಸ್ವಾಮಿ ಈ ಸರ್ಕಾರ ಎಲ್ಲಿಯವರೆಗೂ ಇರುತ್ತದೆಯೋ ಅಲ್ಲಿಯವರೆಗೆ ಅವರು ಒಳ್ಳೆಯ ಕೆಲಸವನ್ನು ಮಾಡಬೇಕಾಗುತ್ತದೆ ಆದರೆ ನಾನು ಅಧಿಕಾರದಲ್ಲಿ ಇರುವ ತನಕ ಶಾಶ್ವತವಾಗಿ ಒಂದೇ ಒಂದು ಕೆಲಸವನ್ನು ಮಾಡುವುದು ಸರಿಯಲ್ಲ. ಅಧಿಕಾರ ಯಾರಿಗೂ ಶಾಶ್ವತವಲ್ಲ. ಸ್ವಾಮಿ ಮಾನ್ಯ ಕಾರ್ಮಿಕ ಮಂತ್ರಿಗಳು ಶಾಶ್ವತವಾಗಿ ರಾಜ್ಯ ಸರಕಾರದಲ್ಲಿ ಮಂತ್ರಿಗಳಾಗಿರುತ್ತೇನೆಂದು ತಿಳಿದುಕೊಂಡಿದ್ದರೆ ಅದು ಅವರ ಭ್ರಮೆಯಾಗುತ್ತದೆ. ಆದ್ದರಿಂದ ಮಾನ್ಯ ಕಾರ್ಮಿಕ ಮಂತ್ರಿಗಳು ಇಂಥ ಅನ್ಯಾಯದ ಕೆಲಸಗಳನ್ನು ಮಾಡದಂತೆ ಇರುವುದು ಸೂಕ್ತ.

ಉಪಾಧ್ಯಕ್ಷರು.--ಸ್ವಾಮಿ ತಾವು ಬೇಗ ಮುಗಿಸಿ.

ಶ್ರೀ ವಿ. ಧನಂಜಯಕುಮಾರ್.--ತಾವು ಎಲ್ಲಾ ವಿಷಯಗಳನ್ನು ಗಮನದಲ್ಲಿಟ್ಟುಕೊಂಡು ಕಾರ್ಮಿಕ ಇಲಾಖೆಯಲ್ಲಿ ಸುಧಾರಣೆಯನ್ನು ಮಾಡುವುದಕ್ಕೆ ಅವಕಾಶ ಮಾಡಿ ಕೊಡಿ.

ಉಪಾಧ್ಯಕ್ಷರು.—ಸ್ವಾಮಿ ತಾವು ಮುಗಿಸುವುದಿಲ್ಲ. ನಾನು ಮಾನ್ಯ ವಿರೋಧ ಪಕ್ಷದ ನಾಯಕರು ಮಾತನಾಡುವಂತೆ ಸೂಚಿಸುತ್ತೇನೆ.

ಉಪಾಧ್ಯಕ್ಷರು.—ಮಾನ್ಯ ಸದಸ್ಯರಾದ ಧನಂಜಯಕುಮಾರ್ ತಾವು ಕನ್‌ಕ್ಲೂಡ್ ಮಾಡಿ.

ಶ್ರೀ ವಿ. ಧನಂಜಯ ಕುಮಾರ್.—ನಾನು ತಮಗೆ ವಂದನೆ ಸಲ್ಲಿಸಲಿಕ್ಕೆ ಅವಕಾಶ ಮಾಡಿ ಕೊಡಿ.

ಉಪಾಧ್ಯಕ್ಷರು.—ಈಗಾಗಲೇ ೮ ಗಂಟೆಯಾಗಿದೆ ಈಗ ವಂದನೆ ಸಲ್ಲಿಸುವುದು ಬೇಡ. ತಾವು ಕುಳಿತುಕೊಳ್ಳಿ.

ಶ್ರೀ ಎಂ. ವೀರಪ್ಪ ಮೊಯಿಲಿ.—ಮಾನ್ಯ ಉಪಾಧ್ಯಕ್ಷರೆ, ನಾನು ಮೂರು ನಿಮಿಷಗಳ ಕಾಲ ವಕ್ಫ್ ಇಲಾಖೆಯ ಬಗ್ಗೆ ಮಾತನಾಡುತ್ತೇನೆ. ವಕ್ಫ್ ಬೋರ್ಡ್‌ಗೆ ಸಾಕಷ್ಟು ಹಣವನ್ನು ಕೊಟ್ಟಿಲ್ಲ.

ಶ್ರೀ ಪಿ. ರಾಂದೇವ್.—ಮಾನ್ಯ ಉಪಾಧ್ಯಕ್ಷರೆ, ಆಳುವ ಪಕ್ಷದವರ ಗತಿ ಏನಾಗಿದೆ, ಮಾನ್ಯ ವೈ. ಕೆ. ರಾಮಯ್ಯನವರು ನಮ್ಮ ಕಡೆಯಿಂದ ಕೇವಲ ೧೫ ನಿಮಿಷ ಮಾತನಾಡಿದ್ದಾರೆ. ಕಾರ್ಮಿಕ ಇಲಾಖೆಯ ಬೇಡಿಕೆಗಳ ಮೇಲೆ ಮಾತನಾಡಲಿಕ್ಕೆ ಕಾರ್ಮಿಕ ನಾಯಕರಾದ ಮೈಕೇಲ್ ಫರ್ನಾಂಡೀಸ್‌ರವರು ಇದ್ದಾರೆ. ಡಾ : ತಿಮ್ಮೆಗೌಡರು ಇದ್ದಾರೆ. ಬೆಂಗಳೂರು ನಗರದ ಶಾಸಕರಾದ ನಾವು ಮಾತನಾಡಬೇಕಾಗಿದೆ. ಮಾನ್ಯ ಸದಸ್ಯರಾದ ನಾರಾಯಣರಾವ್ ಅವರು ಮಾತನಾಡಬೇಕಾಗಿದೆ. ಮಾನ್ಯ ಮೊಯಿಲಿಯವರೇ ಮಾತನಾಡಬೇಕೆಂದರೆ ಹೇಗೆ ? ಅವರ ಪಕ್ಷದವರಾದ ಮಾನ್ಯ ರಾಮಕೃಷ್ಣರವರು ಎರಡೂವರೆ ಗಂಟೆಗಳ ಕಾಲ ಮಾತನಾಡಿದ್ದಾರೆ ತಾವು ನಾವು ಮಾತನಾಡಲು ಅವಕಾಶ ಮಾಡಿ ಕೊಡುವುದು ಬೇಡವೆ ?

ಶ್ರೀ ಎಂ. ವೀರಪ್ಪ ಮೊಯಿಲಿ.—ಬೇಕಾದರೆ ಸೋಮವಾರ ಚರ್ಚೆ ಮಾಡೋಣ ಚರ್ಚೆಯನ್ನು ಪೋಸ್ಟ್‌ಪೋನ್ ಮಾಡಿ.

ಉಪಾಧ್ಯಕ್ಷರು.—ಕಾರ್ಯಕ್ರಮದ ಪಟ್ಟಿಯ ಪ್ರಕಾರ ನಿಯಮಗಳ ಪ್ರಕಾರ ನಾವು ಹೋಗಬೇಕಾಗುತ್ತದೆ. ಬಿಸಿನೆಸ್ ಅಡ್ವೈಜರಿ ಕಮಿಟಿಯಲ್ಲಿ ಯಾವ ರೀತಿ ತೀರ್ಮಾನ ಮಾಡಿದ್ದಾರೆ ಆ ರೀತಿ ನಾವು ನಡೆದುಕೊಳ್ಳಬೇಕಾಗುತ್ತದೆ. ಈಗ ಸದಸ್ಯರುಗಳಿಗೆ ಇಷ್ಟ ಬಂದಹಾಗೆ ಮಾಡುವುದಕ್ಕೆ ಆಗುವುದಿಲ್ಲ.

ಶ್ರೀ ಪಿ. ರಾಂದೇವ್.—ಬಿಸಿನೆಸ್ ಅಡ್ವೈಜರಿ ಕಮಿಟಿಯಲ್ಲಿ ಲೇಬರ್ ಲೀಡರ್ಸ್‌ಗಳು ಮಾತನಾಡದಹಾಗೆ ಕಂಟ್ರೋಲ್ ಮಾಡಿಯೆಂದು ಹೇಳುತ್ತಾರೇಯೆ ?

ಉಪಾಧ್ಯಕ್ಷರು.—ಮಾನ್ಯ ಸದಸ್ಯರಾದ ರಾಂದೇವ್‌ರವರು ಕುಳಿತುಕೊಳ್ಳಬೇಕು.

ಶ್ರೀ ಎಂ. ವೀರಪ್ಪ ಮೊಯಿಲಿ.—ವಕ್ಫ್ ಆಸ್ತಿಯನ್ನು ಬೇರೆಯವರು ಉಪಯೋಗ ಮಾಡಿಕೊಂಡಿದ್ದಾರೆ. ವಕ್ಫ್ ಬೋರ್ಡ್‌ನವರು ಅದನ್ನು ಸರಿಯಾಗಿ ಉಪಯೋಗ ಮಾಡಿಕೊಳ್ಳುತ್ತಿಲ್ಲ. ಆದರ ಬಗ್ಗೆ ಮಾನ್ಯ ಮಂತ್ರಿಗಳು ಉತ್ತರ ಕೊಡುವಾಗ ಹೇಳಬೇಕು. ಎರಡನೆಯದಾಗಿ ಸೂಕ್ಷ್ಮವಾಗಿ ಹೇಳುವುದಾದರೆ ಮುಸಲ್ಮಾನ ಅಲ್ಪಸಂಖ್ಯಾತರಲ್ಲಿ ತಿಕ್ಕಾಟವನ್ನು ತಂದಿಟ್ಟಿದ್ದಾರೆ. ಅನೇಕ ವಕ್ಫ್ ಪ್ರಾಪರ್ಟಿಯ ಮೇಲೆ ಸಾರ್ವತ್ರಿಕವಾಗಿ ಥಳಿಯಾಗುತ್ತಿದೆ. ವಕ್ಫ್ ಪ್ರಾಪರ್ಟಿಯನ್ನು ಅಭಿವೃದ್ಧಿ ಮಾಡಬೇಕೆಂದು ರಕ್ಷಣೆ ಮಾಡಬೇಕೆಂದು ಸಂಸ್ಥೆಗಳು ಹೊರಟಾಗ ಅದನ್ನು ತಪ್ಪಿಸಲಿಕ್ಕೆ ರೆವಿನ್ಯೂ ಇಲಾಖೆಯವರು ಪ್ರಯತ್ನ ಮಾಡುತ್ತಾರೆ. ಲಾ ಅಂಡ್ ಆರ್ಡರ್ ಪ್ರಾಬ್ಲಮ್ಸ್ ಬರುತ್ತದೆ. ವಕ್ಫ್ ಪ್ರಾಪರ್ಟಿಗೆ ತೊಂದರೆ ಬಂದಾಗ ಯಾರೂ ಕೂಡ ಆಕ್ಷೇಪಣೆ ಮಾಡುವುದಿಲ್ಲ. ವಕ್ಫ್ ಸಂಸ್ಥೆಗೆ ಲಾ ಅಂಡ್ ಆರ್ಡರ್ ಪ್ರಾಬ್ಲಮ್ಸ್ ನನ್ನ ಕ್ಷೇತ್ರದಲ್ಲೂ ಇದೆ. ವಕ್ಫ್ ಪ್ರಾಪರ್ಟಿಯನ್ನು ರಕ್ಷಣೆ ಮಾಡಲಿಕ್ಕೆ ಅವಕಾಶ ಕಲ್ಪಿಸಿಕೊಡಬೇಕು ವಕ್ಫ್ ಪ್ರಾಪರ್ಟಿಗೆ ತೊಂದರೆಯಾದಾಗ ಅದನ್ನು ರಕ್ಷಣೆ ಮಾಡತಕ್ಕ ಅಧಿಕಾರವನ್ನು ಜಿಲ್ಲಾಧಿಕಾರಿಗಳವರಿಗೆ ಕೊಡಬೇಕು. ಬೆಂಗಳೂರಿನಲ್ಲಿ ವಕ್ಫ್ ಬೋರ್ಡ್ ಇದೆ. ವಕ್ಫ್ ಪ್ರಾಪರ್ಟಿಯನ್ನು ಅಭಿವೃದ್ಧಿ ಮಾಡುವಲ್ಲಿ ಅದಕ್ಕೆ ಪೂರ್ತಿ ರಕ್ಷಣೆ ಕೊಡುವಂತಹ ಯೋಜನೆ ಮಾಡಬೇಕು. ನಮ್ಮ ಕಾಲದಲ್ಲಿ, ಆಶಾಕಿರಣ ಯೋಜನೆಯನ್ನು ಅಸಂಘಟಿತ ಕಾರ್ಮಿಕರಿಗೆ ರಕ್ಷಣೆ ಕೊಡಲಿಕ್ಕೆ ಮಾಡಲಾಗಿತ್ತು. ಆಶಾಕಿರಣ ಯೋಜನೆಯನ್ನು ತಾವು ಮುಂದುವರಿಸಬೇಕಾಗುತ್ತದೆ. ನಾವು ೨ ಸಾವಿರ ಕೊಡುತ್ತಿದ್ದರೆ. ನೀವು ೪ ಸಾವಿರ ಕೊಡುವಹಾಗೆ ಮಾಡಿ. ಅಸಂಘಟಿತ ಕಾರ್ಮಿಕರಿಗೆ ರಕ್ಷಣೆ ಕೊಡತಕ್ಕಂತಹ ಕಾರ್ಯಕ್ರಮವನ್ನು ತಾವು ಮಾಡಬೇಕಾಗುತ್ತದೆ. ಅಂತಹ ಕಾರ್ಯಕ್ರಮಗಳನ್ನು ತಡೆಹಿಡಿಯತಕ್ಕದ್ದು ಸರಿಯಲ್ಲ. ಇದು ಸರ್ವರ ಸಲಹೆ. ಸ್ಟೈಫಂಡರಿ ಗ್ರಾಜುಯೇಟ್ಸ್‌ಗಳ ಪ್ರಾಬ್ಲಮ್ಸ್ ಕೂಡ ಕಾರ್ಮಿಕ ಇಲಾಖೆಗೆ ಬರುತ್ತದೆ ಇದು ಸಾಕಷ್ಟು ಕುತೂಹಲವನ್ನು ಕೆರಳಿಸತಕ್ಕ ವಿಚಾರ. ನಿಮ್ಮ ಕಾಲದಲ್ಲಿ ಅವರನ್ನು ರಿಕ್ರೂಟ್ ಮಾಡಿಕೊಳ್ಳುತ್ತೀವೆಂದು ಹೇಳಿದ್ದೀರಿ. ತಾವು ತಮ್ಮ ನೀತಿಯನ್ನು ಸ್ಪಷ್ಟವಾಗಿ ತಿಳಿಸಬೇಕು ಸ್ಟೈಫಂಡರಿ ಪದವೀಧರರಿಗೆ ೫೦ ರೂಪಾಯಿಗಳವರೆಗೆ ಏರಿಸಿ ಅವರನ್ನು ತೂಗು

ಉಯ್ಯಾಲೆಯಲ್ಲಿ ಇಡತಕ್ಕದ್ದು ಸರಿಯಲ್ಲ. ಸ್ಟೈಫಂಡರಿ ಪದವೀಧರರ ಬಗ್ಗೆ ನಿಮ್ಮ ಚುನಾವಣಾ ಪ್ರಣಾಳಿಕೆಯಲ್ಲಿ ಏನು ಹೇಳಿದ್ದೀರಿ ? ಅವರು ಕೂಡ ಮಾನವರಾಗಿ ಬಾಳಲಿಕ್ಕೆ ಅವಕಾಶ ಮಾಡಿಕೊಡಿ. ಅವರನ್ನು ಸರಿಯಾಗಿ ನೋಡಿಕೊಳ್ಳತಕ್ಕ ಜವಾಬ್ದಾರಿ ಅಧಿಕಾರದಲ್ಲಿರತಕ್ಕವರ ಸರ್ಕಾರದ ಜವಾಬ್ದಾರಿ ಇದೆ. ಇಷ್ಟು ಹೇಳಿ ನಾನು ಮಾತನಾಡಲು ಅವಕಾಶ ಮಾಡಿ ಕೊಟ್ಟ ತಮಗೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

MR. DEPUTY SPEAKER.—Discussion on Demand N s. 29· 34, 35 52 and 59 is concluded and the reply by the Hon' ble Minister will be on Monday. Now the House stands adjourned to meet on Monday at 9-00 A.M.

*The House adjourned at Fiftyfive Minutes past Eight of the Cloek to meet again on Monday, the 5th March, 1984 at Nine of the Clock.*